# ದೆಹಲಿಯ ಸುಲ್ತಾನರು

**ಮೊದಲ ಮುಸ್ಲಿಂ ಆಕ್ರಮಣಗಳು:**

- ಸಿಂಧ್ ರಾಜ್ಯವು ಬ್ರಾಹ್ಮಣ ರಾಜ ದಾಹಿರನ ಆಡಳಿತದಲ್ಲಿತ್ತು. ಇವನು ಚಾಚನ ಮಗ.
- ದೇಬಲನ ಸರಕು ಕಳ್ಳರಿಂದ ಕುಪಿತವಾದ, ಇರಾಕ್‌ನ ಆಡಳಿತಾಧಿಕಾರಿ ಅಲ್-ಹಜ್ಜಾಜನು ಈ ಭಾರತೀಯ ದೊರೆಗೆ ಬುದ್ಧಿ ಕಲಿಸಿ ಶಿಕ್ಷೆ ಮಾಡಲು ಮಹಮದ್-ಬಿನ್ ಕಾಸಿಮ್‌ನನ್ನು ಕಳಿಸಿದ ಕ್ರಿ.ಶ. 712ರಲ್ಲಿ ರಾವೋರ ಬಳಿ ರಾಜಾ ದಾಹಿರನು ಸೋತು ಕೊಲ್ಲಲ್ಪಟ್ಟನು.
- ಘಜ್ನಿಯ ರಾಜನಾದ ಸಬಕ್ತಗೀಸನು, ಓಹಿಂದದ ಷಾಹೀ ರಾಜನಾಗಿದ್ದ ಜಯಪಾಲನ ಮೇಲೆ ಆಕ್ರಮಣ ನಡೆಸಿದ. ಜಯಪಾಲನು ಅವಮಾನಕರ ಸಂಧಿಗೆ ಒಪ್ಪುವಂತೆ ಮಾಡಿದ.
- ಸಬಕ್ತಗೀನನ ನಂತರ ಮಹಮದ ಘಜ್ನಿಯು ರಾಜನಾದ. ಕ್ರಿ ಶ. 1001ರಲ್ಲಿ ಮಹಮ್ಮದ್ ಘಜ್ನಿಯು ಜಯಪಾಲನನ್ನು ಸೋಲಿಸಿದ, ಅವಮಾನ ತಾಳಲಾರದೆ ಜಯಪಾಲನು ಅಗ್ನಿಗೆ ಅರ್ಪಣೆ ಮಾಡಿಕೊಂಡು ಮರಣ ಹೊಂದಿದನು.
- ಆನಂದಪಾಲನು ಜಯಪಾಲನ ಉತ್ತರಾಧಿಕಾರಿಯಾಗಿ ಬಂದ. ಕ್ರಿ.ಶ. 1008ರಲ್ಲಿ ಪ್ರಸಿದ್ಧ ವೈಹಿಂದ ಯುದ್ಧದಲ್ಲಿ ಅವನು ಮಹಮದನಿಗೆ ಸೋತ.
- ಕ್ರಿ.ಶ. 1014ರಲ್ಲಿ ಮಹಮದನು ಥಾಣೇಶ್ವರವನ್ನು ಆಕ್ರಮಿಸಿಕೊಂಡು ಮಥುರಾದ ದೇವಸ್ಥಾನವನ್ನು ಸುಟ್ಟುಹಾಕಿದ. ಕ್ರಿ.ಶ. 1018ರಲ್ಲಿ ಅವನು ಕನೌಜನ್ನು ವಶಪಡಿಸಿಕೊಂಡ.
- ಕ್ರಿ.ಶ. 1022–23ರಲ್ಲಿ ಗ್ವಾಲಿಯರ್ ಮತ್ತು ಕಾಲಿಂಜರ್‌ಗಳು ಅವನ ವಶವಾದವು. ಕ್ರಿ.ಶ. 1025ರಲ್ಲಿ ಕಾಕಿವಾಡದಲ್ಲಿದ್ದ ಸೋಮನಾಥ ದೇವಾಲಯವನ್ನು ನಾಶಪಡಿಸಿದ, ಕ್ರಿ.ಶ. 1000ದಿಂದ 1026ರ ವರೆಗೆ ಅವನು ಭಾರತದ ಮೇಲೆ 17 ಬಾರಿ ದಂಡಯಾತ್ರೆ ನಡೆಸಿದ.
- ಅಲ್ಬುರೂನಿಯ ಮಹಮದ ಘಜ್ನಿಯ ಆಸ್ಥಾನದಲ್ಲಿದ್ದ. ಅವನು ಪ್ರಸಿದ್ಧ ಗ್ರಂಥ, ಕಿತಾಬ್-ಉಲ್-ಹಿಂದ, ಅನ್ನು ಬರೆದ ಷಹನಾಮದ ಕರ್ತೃ. ಫಿರ್‌ದೌಸಿ ಮತ್ತು ಉತ್‌ಬಿಸಹ ಘಜ್ನಿ ಮಹಮ್ಮದ್ ಆಸ್ಥಾನದಲ್ಲಿದ್ದರು.
- ಕ್ರಿ.ಶ. 1191ರಲ್ಲಿ ಪೃಥ್ವಿರಾಜ್ ಚೌಹಾನನು ಮೊದಲನೆಯ ತರೈನ್ ಯುದ್ಧದಲ್ಲಿ ಮಹಮದ ಘೋರಿಯನ್ನು ಸೋಲಿಸಿದ ಕ್ರಿ.ಶ. 1192ರಲ್ಲಿ ಎರಡನೆಯ ತರೈನ ಯುದ್ಧದಲ್ಲಿ ಮಹಮದ ಘೋರಿಯು ಪೃಥ್ವಿರಾಜ ಚೌಹಾನ್‌ನನ್ನು ಸೋಲಿಸಿ ಕೊಂದನು. ಪೃಥ್ವಿರಾಜ ಚೌಹಾನ್‌ನನ್ನು ಮೂರನೆಯ ಪೃಥ್ವಿರಾಜ ಎಂದು ಕರೆಯುತ್ತಿದ್ದರು.
- ಅವನ ಸೇನಾಪತಿ ಭಕ್ತಿಯಾರ ಖಿಲ್ಜಿ ಬಿಹಾರದ ಮೇಲೆ ದಾಳಿ ಮಾಡಿ ನಲಂದ ಮತ್ತು ವಿಕ್ರಮಶಿಲಾ ವಿಶ್ವವಿದ್ಯಾನಿಲಯಗಳನ್ನು ನಾಶಗೊಳಿಸಿದನು.
- ಕ್ರಿ.ಶ. 1204ರಲ್ಲಿ ಅವನು ಸೇನರ ರಾಜಧಾನಿ ನಾಡಿಯಾದ ಮೇಲೆ ಧಾಳಿ ಮಾಡಿದನು ರಾಜಾ ಲಕ್ಷ್ಮಣ ಸೇನನು ಓಡಿಹೋಗಬೇಕಾಯಿತು.

**ಗುಲಾಮಿ ವಂಶ:**

- ಈ ರಾಜವಂಶಕ್ಕೆ ಯಾಮಿನಿ ಅಥವಾ ಇಲ್ಬರಿತುರ್ಕ್ ವಂಶ ಎಂದು ಹೆಸರು.
- ಮಹಮದ ಘೋರಿಯ ಮರಣಾನಂತರ ತಾಜುದ್ದೀನ್ ಯಿಲ್ಡಿಜ್ ನಜೀರುದ್ದಿನ್ ಕೈಬಾಚಾ ಮತ್ತು ಕುತುಬುದ್ಧಿನ್ ಐಬಕ್‌ರ ನಡುವೆ ರಾಜ್ಯಕ್ಕಾಗಿ ಪೈಪೋಟಿ ನಡೆಯಿತು.
- ಈ ಸ್ಪರ್ಧೆಯಲ್ಲಿ ಕುತುಬುದ್ದೀನನು ಜಯಶಾಲಿಯಾಗಿ 25–6–1206ರಂದು ಅಧಿಕೃತವಾಗಿ ಸಿಂಹಾಸನವನ್ನೇರಿದನು. ಮೂರು ವರ್ಷದ ನಂತರ ಅವನನ್ನು ಅಧಿಕೃತವಾಗಿ ರಾಜನೆಂದು ಅಂಗೀಕರಿಸಲಾಯಿತು. ಅವನು ನಾಣ್ಯಗಳನ್ನೇನೂ ಹೊರಡಿಸಲಿಲ್ಲ.
- ಅವನ ರಾಜಧಾನಿ ಲಾಹೋರ್ ಆಗಿತ್ತು, ಅವನ ಔದಾರ್ಯದಿಂದ ಅವನಿಗೆ ಲಾಖ್ ಭಕ್ಷ್ ಎಂಬ ಹೆಸರು ಬಂದಿತ್ತು. ಪ್ರಸಿದ್ಧ ಚರಿತ್ರಕಾರ ಹಸನ್ ನಿಜಾಮಿ ಅವನ ಆಸ್ಥಾನದಲ್ಲಿದ್ದನು. ಅವನು ಕುವಾತ-ಉಲ್-ಇಸ್ಲಾಂ ಮಸೀದಿಯನ್ನು ದೆಹಲಿಯಲ್ಲಿ ಅರ್‌ಹಾಯ್-ದಿನ್-ಕಾ ಜೊನ್‌ಪ್ರಾ ಮತ್ತು ಅಜಮೇರ್‌ಗಳನ್ನು ಕಟ್ಟಿಸಿದನು. ಮೊದಲಿನದು ಭಾರತದಲ್ಲಿ ಕಟ್ಟಲಾದ ಮೊದಲ ಮಸೀದಿಯೆಂದು ಹೇಳಲಾಗಿದೆ.

**downloaded from: www.kpscvaani.com**
PDF processed with CutePDF evaluation edition www.CutePDF.com

- ಕುತುಬುದ್ದೀನನ ಮರಣಾನಂತರ ಆರಾಂಷಹಾನು ಸಿಂಹಾಸನವನ್ನೇರಿದನು. ಆದರೆ, ಅವನನ್ನು ಸಿಂಹಾಸನದಿಂದ ಓಡಿಸಿ ಇಲ್‌ತುತ್‌ಮಿಷ್‌ನು ಸಿಂಹಾಸನವನ್ನೇರಿ ಹೊಸ ಸುಲ್ತಾನನಾದನು.
- ಚೆಂಗೇಜ್‌ಖಾನನಿಂದ ಓಡಿಸಲ್ಪಟ್ಟು ಓಡಿಬಂದ ಜಲಾಲುದ್ದೀನ್ ಮಂಗಬರ್ನಿಗೆ ಆಶ್ರಯಕೊಡಲು ಇವನು ಒಪ್ಪಲಿಲ್ಲ. ಆ ರೀತಿ ಮಾಡಿ ಇಲ್ತ್‌ಮಿಷನು ದೊಡ್ಡ ಗಂಡಾಂತರದಿಂದ ಪಾರಾದನು.
- ಕ್ರಿ.ಶ. 1228ರಲ್ಲಿ ಇಲ್ತುತ್ಮಿಷನು ಬಾಗ್ದಾದಿನ ಖಲೀಸಾನಿಂದ ಅಂಗೀಕಾರ ಮುದ್ರೆ ಪಡೆದುಕೊಂಡನು.
- ಕ್ರಿ.ಶ. 1226ರಲ್ಲಿ ಅವನು ರಣಥಂಬೋರನ್ನು, ಮಾಂಡೋರನ್ನೂ ವಶಪಡಿಸಿಕೊಂಡನು. ಕ್ರಿ.ಶ. 1233ರಲ್ಲಿ ಮಾಳ್ವದ ಮೇಲೆ ದಾಳಿ ಮಾಡಿ ಭಿಲ್ಸಾವನ್ನು ವಶಪಡಿಸಿಕೊಂಡನು. ಬಳಿಕ ಗ್ವಾಲಿಯರ್ ಮತ್ತು ಜಾಲೋರ್‌ಗಳನ್ನು ಗೆದ್ದುಕೊಂಡನು.
- ಇವನು ಸಂಪೂರ್ಣವಾಗಿ ಶುದ್ಧ ಅರೇಬಿಕ್‌ನಲ್ಲಿ ಬರೆಯಲಾಗಿದ್ದ ಬೆಳ್ಳಿಯ ನಾಣ್ಯವನ್ನು ಹೊರಡಿಸಿದನು. ಆ ರೀತಿ ಮಾಡಿದವರಲ್ಲಿ ಅವನೇ ಮೊದಲಿಗ.
- ಅವನು ತುರ್ಕಾನ್–ಇ–ಚಹಲ್‌ಗಾನಿಯನ್ನು ವ್ಯವಸ್ಥೆ ಮಾಡಿದನು.
- ಅವನ ಸಮಕಾಲೀನವಾದ ಚರಿತ್ರಕಾರ ಮಿನ್ಹಾಸ–ಉಸ್–ಸಿರಾಜನು ಅವನನ್ನು ಹೊಗಳಿದ್ದಾನೆ.
- ಇಲ್ತತ್ಮಿಷನು ರಜಿಯಾಳನ್ನು ತನ್ನ ಉತ್ತರಾಧಿಕಾರಿಯೆಂದು ಘೋಷಿಸಿದನು. ಆದರೆ ಅಮೀರರು ಅವನ ಘೋಷಣೆಯನ್ನು ಒಪ್ಪದೆ ರುಕ್ಮುದ್ದೀನ್ ಫಿರೋಜ್‌ಷಾನನ್ನು ಸಿಂಹಾಸನ ಮೇಲೆ ಕೂರಿಸಿದನು, ನಂತರ ಅವನನ್ನು ಕೊಲ್ಲಿಸಿ ರಜಿಯಾ ಸುಲ್ತಾನಳಾದಳು.
- ರಜಿಯಾ ಅಬಿಸ್ಸೇನಿಯದ ಗುಲಾಮ ಜಮಾಲುದ್ದೀನ್ ಆಬುರ್‌ನನ್ನು ಅಮೀರ್ ಆಬುರ್ ಅಂದರೆ ಕುದುರೆಗಳ ಮುಖ್ಯಸ್ಥನನ್ನಾಗಿ ಮಾಡಿದಳು.
- ರಜಿಯಾ (ಕ್ರಿ.ಶ. 1236–40)ಳ ನಂತರ ಮುಯಿಸುದ್ದೀನ್ ಬಹ್ರಾಂ ಷಾ (1240–42) ಅವನ ನಂತರ ಅಲಾಉದ್ದೀನ್ ಮಸೂದ್ ಷಾ (1242–46) ಸಿಂಹಾಸನವನ್ನೇರಿದರು.
- 1246ರಲ್ಲಿ ನಜೀರುದ್ದೀನ್ ಮಹಮ್ಮದನು ಪಟ್ಟಕ್ಕೆ ಬಂದರೂ ನಿಜವಾದ ಅಧಿಕಾರ ಬಲ್ಬನ್ನ ಕೈಯಲ್ಲಿತ್ತು.
- ಮಂಗೋಲರ ಧಾಳಿಯನ್ನು ತಡೆಯಲು ದಿವಾನ್–ಇ–ಅರ್ಜ್ ಅಂದರೆ ಸೈನ್ಯ ಇಲಾಖೆಯನ್ನು ಸ್ಥಾಪಿಸಿದನು.
- ಅವನು ಇರಾನ್‌ನಲ್ಲಿದ್ದ ವ್ಯವಸ್ಥೆ ಸಜ್ದಾ ಮತ್ತು ಸೈಬೋಸ್ ಅನ್ನು ಪ್ರಾರಂಭಿಸಿದನು. ತನ್ನ ವಂಶಾವಳಿಯ ಮೂಲವನ್ನು ಅಫ್ರಿಸಿಯಾಬ್‌ನವರೆಗೆ ತೆಗೆದುಕೊಂಡು ಹೋದನು. ಅವನು ರಕ್ತ ಮತ್ತು ಕಬ್ಬಿಣದ ನೀತಿಯನ್ನು ಅನುಸರಿಸಿದನು. ಮೇವಾಡ ರಾಜಪೂತ ದಾಂಧಲೆಕೋರರನ್ನು ನಾಶಗೊಳಿಸಿದನು.
- ಅವನು ತನ್ನನ್ನು ತಾನೇ ಜಿಲ್–ಇ–ಇಲಾಹಿ ಎಂದು ಅಂದರೆ ಭೂಮಿಯಲ್ಲಿ ದೇವರ ನೆರಳು ಎಂದು ಕರೆದುಕೊಂಡನು. ನಫೀರ–ಅಮೀರ್–ಉಲ್–ವೇಮಿನ ಎಂದರೆ ಕಲೀಫರ ಬಲಗೈ ಎಂದು ಕೂಡ ಕರೆದುಕೊಂಡನು.
- ಅವನು ತುಗ್ಗಿಸ ದಂಗೆಯನ್ನು ಅಡಗಿಸಿ ಬುಗ್ರಾಖಾನನ್ನು ಬಂಗಾಳದ ಹೊಸ ಆಡಳಿತಾಧಿಕಾರಿಯಾಗಿ ನೇಮಿಸಿದನು.
- ಪರ್ಶಿಯಾದ ನೌರೇಜ ಸಂಪ್ರದಾಯವನ್ನು ಆಸ್ಥಾನದಲ್ಲಿ ಪ್ರಾರಂಭಿಸಿದನು.
- ಅವನು ವಿದ್ವಾಂಸರಿಗೆ ಆಶ್ರಯದಾತನಾಗಿದ್ದು, ಅಮೀರ್ ಖುಸ್ರುವಿಗೆ ಹೆಚ್ಚು ಆಶ್ರಯ ಕೊಟ್ಟು ಅವನನ್ನು ಹೆಚ್ಚಾಗಿ ಗೌರವಿಸುತ್ತಿದ್ದನು.
- 1286ರಲ್ಲಿ ಬಲ್ಬನ್ನನ ನಿಧನದ ನಂತರ ಕೈಕುಬಾದ್ (1287–90) ಮತ್ತು ಕಾಯುಮಾರರು ಅಲ್ಪ ಅಲ್ಪ ಕಾಲಕ್ಕೆ ಸುಲ್ತಾನರಾದರು. ಮೂರು ತಿಂಗಳ ನಂತರ ಕಾಯುಮಾರ್ಸನನ್ನು ಕೊಲ್ಲಲ್ಪಟ್ಟು ಕೊನೆಯ ಇಬ್ಬ ಕೊಲೆಯಾಯಿತು. ನಂತರ ಜಲಾಲುದ್ದೀನ್ ಸಿಂಹಾಸನವನ್ನೇರಿದನು.

**ಖಿಲ್ಜಿ ವಂಶ :**

- ದರ್ವೇಶನಾದ ಸಿದಿಮೌಲಾನನ್ನು ಸುಲ್ತಾನನ ಆಜ್ಞೆಯ ಪ್ರಕಾರ ಆನೆಯ ಕಾಲಿಗೆ ಸಿಕ್ಕಿಸಿ ಕೊಲ್ಲಲಾಯಿತು. ಕಾರಾದ ಬಳಿ ಅವನನ್ನು ಆಲುಗುರುಷಸ್ಸನು (ಅಲ್ಲಾವುದ್ದೀನ್ ಖಿಲ್ಜಿ) ಕೊಲೆ ಮಾಡಿದನು.

**downloaded from: www.kpscvaani.com**

- ರಾಯಕರಣ್ ಆಳ್ವಿಕೆಯಲ್ಲಿದ್ದ ಗುಜರಾತನ್ನು ಕ್ರಿ.ಶ. 1297ರಲ್ಲಿ ಅಲ್ಲಾಉದ್ದೀನನು ವಶಪಡಿಸಿಕೊಂಡನು. ಅವನು ಅನ್ಹಿಲ್‌ಪಾರಾ ಮತ್ತು ಸೋಮನಾಥನನ್ನು ವಜಾ ಮಾಡಿ ರಾಯ್‌ಕರಣಿನ ಪತ್ನಿ ಕಮಲಾದೇವಿಯನ್ನು ಮದುವೆಯಾದನು. ಅವನು ಮಲ್ಲಿಕ್ ಕಾಪುರ್‌ನನ್ನು ಸೆರೆಹಿಡಿದು ಆಸ್ಥಾನಕ್ಕೆ ಕರೆದುಕೊಂಡು ಬಂದನು.
- ಕ್ರಿ.ಶ. 1300ರಲ್ಲಿ ಅವನು ರಣಥಂಬೋರನ್ನು ವಶಪಡಿಸಿಕೊಂಡನು. ಆಗ ಹಮೀರ ದೇವನು ರಣಥಂಬೋರಿನ ರಾಜನಾಗಿದ್ದನು. ರಾಣಿ ವಾಸದವರೆಲ್ಲಾ ಜೋಹರ್ ಪದ್ಧತಿಯ ಪ್ರಕಾರ ಪ್ರಾಣತ್ಯಾಗ ಮಾಡಿದರು. ಇದನ್ನು ಅಮೀರ ಖುಸ್ರು ವರ್ಣಿಸಿದ್ದಾನೆ. ಅದೇ ಮೊದಲ ಬಾರಿ ಪರ್ಶಿಯನ್ ಭಾಷೆಯಲ್ಲಿ ಜಾಹರ್ ವರ್ಣಿತವಾಯಿತು.
- ಕ್ರಿ.ಶ. 1303ರಲ್ಲಿ ರತನ್ ಸಿಂಗನ ದೊರೆತನದಲ್ಲಿದ್ದ ಚಿತ್ತೂರು ವಶವಾಯಿತು. ಕೆಲವು ಚರಿತ್ರಕಾರರು, ರತನಸಿಂಹನ ರಾಣಿ ಪದ್ಮಿನಿಯ ಮೇಲೆ ಸುಲ್ತಾನನಿಗಿದ್ದ ವ್ಯಾಮೋಹವೇ ಅವನ ಆಕ್ರಮಣಕ್ಕೆ ಕಾರಣವೆಂದು ಹೇಳಿದ್ದರಾದರೂ, ಅಲ್ಲಾವುದ್ದೀನನ ಸೈನ್ಯ ಚಿತ್ತೂರಿನ ಮೂಲಕ ಹಾದು ಹೋಗಲು ಅವಕಾಶ ಕೊಡದಿದ್ದುದೇ ಸುಲ್ತಾನನ ಕೋಪಕ್ಕೆ ಕಾರಣವಾಯಿತು. ಬಿಸರ್‌ಖಾನನು ಚಿತ್ತೂರಿನ ಆಡಳಿತಾಧಿಕಾರಿಯಾಗಿ ನೇಮಿಸಲ್ಪಟ್ಟನು. ಚಿತ್ತೂರಿಗೆ ಖಿಸ್ರಾಬಾದ್ ಎಂದು ಹೆಸರೂ ಇಟ್ಟಿದ್ದಾಯಿತು. ಮಾರ್ನಾರ್ ಮತ್ತು ಜಾಲೋರ್‌ಗಳೂ ಸುಲ್ತಾನನ ವಶವಾದವು.
- ದಖ್ಖನ್ನಿನಲ್ಲಿ ಮಲ್ಲಿಕ್ ಕಾಪುರನು ದೇವಗಿರಿಯ ಮೇಲೆ (ಕ್ರಿ.ಶ. 1306–1307), ಹೊಯ್ಸಳವೀರ ಬಲ್ಲಾಳನ ಮೇಲೆ (ಕ್ರಿ.ಶ. 1310) ಮತ್ತು ಪಾಂಡ್ಯರ ವೀರಪಾಂಡ್ಯನ ಮೇಲೆ (ಕ್ರಿ.ಶ. 1311) ದಾಳಿ ಮಾಡಿದನು. ಕ್ರಿ.ಶ. 1313ರಲ್ಲಿ ದೇವಗಿರಿಯು ಎರಡನೆಯ ಬಾರಿ, ಶಂಕರ ದೇವನ ಆಡಳಿತದಲ್ಲಿದ್ದಾಗ ಆಕ್ರಮಣಕ್ಕೆ ಒಳಗಾಯಿತು. ರಾಜಾ ಶಂಕರ ದೇವನು ಕೊಲೆಯಾದನು. ಅಮೀರ್ ಖುಸ್ರುವಿನ ಪ್ರಕಾರ ಮಲ್ಲಿಕ್ ಕಾಪುರನಿಗೆ ಮಲಿಕ್ ನಾಯಿಬ್ ಎಂಬ ಬಿರುದು ದೊರೆಯಿತು.
- ಅಲ್ಲಾಉದ್ದೀನನು ತನ್ನ ಆಡಳಿತವನ್ನು ಕೇಂದ್ರೀಕರಿಸಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದನು. ಇನಾಮತಿಯ ಮತ್ತು ವಕ್ಫ್‌ಗಳಿಗಾಗಿ ಕೊಟ್ಟಿದ್ದ ಭೂಮಿಯನ್ನು ಸ್ವಾಧೀನಪಡಿಸಿಕೊಂಡನು. ಬರೀದರನ್ನು (ಹೊಸ ವರದಿಗಾರರನ್ನು) ಮತ್ತು ಮುನ್ಹಿ (ಗೂಢಚಾರರನ್ನು ಗೂಢಚಾರ ವ್ಯವಸ್ಥೆಯನ್ನು ಬಲಪಡಿಸಲು ನಿಯಮಿಸಿಕೊಂಡನು. ಶ್ರೀಮಂತರು ಸಾಮಾಜಿಕವಾಗಿ ಭೇಟಿಯಾಗುವುದು ಮತ್ತು ಅವರವರಲ್ಲಿ ವಿವಾಹ ಸಂಬಂಧಗಳನ್ನೇ ರ್ಪಡಿಸಿಕೊಳ್ಳುವುದನ್ನು ನಿರ್ಬಂಧಿಸಲಾಯಿತು. ಕುಡಿತ ಮತ್ತು ಜೂಜುಗಳೂ ನಿರ್ಬಂಧಿತವಾದವು. ಅವನು ಟರ್ಕಿಯವರಲ್ಲದವರನ್ನು ಸೇನೆಯಲ್ಲಿ ಸೇರಿಸಿಕೊಂಡನು.
- ಖಾಲ್ಸಾ ಭೂಮಿಯಲ್ಲಿ ಜಮೀನ್ದಾರಿ ಪದ್ಧತಿಯನ್ನು ರದ್ದುಗೊಳಿಸಿದನು, ದೋಖ್ ಪ್ರದೇಶದಲ್ಲಿ ಯಾರಿಗೂ ಇಕ್ತಾ ಭೂಮಿಯನ್ನು ಕೊಡಲಿಲ್ಲ. ಭೂಕಂದಾಯವನ್ನು, ಭೂಮಿಯ ವಿಸ್ತಾರದ ಮೇಲೆ ನಿಗದಿಪಡಿಸಲಾಯಿತು. ಕಂದಾಯವನ್ನು ಉತ್ಪನ್ನದ ಐದನೇ ಒಂದು ಭಾಗವಾಗಿ ನಿಗದಿಪಡಿಸಲಾಯಿತು. ಕಿಸ್ಮತ್–ಇ–ಖುಲಿ(ಮುಖ್ಯಸ್ಥನ ಮೇಲೆ ತೆರಿಗೆ)ಯನ್ನು ತೆಗೆದುಹಾಕಿ ಘರಿ (ಮನೆಯ ಮೇಲೆ ತೆರಿಗೆ) ಮತ್ತು ಮೇನಿನ ಮೇಲೆ ತೆರಿಗೆಯನ್ನು ವಿಧಿಸಲಾಯಿತು.
- ಸೈನ್ಯ ವ್ಯವಸ್ಥೆಯಲ್ಲಿದ್ದಾಗ ಮತ್ತು ಚೆಹ್ರಾ ಪದ್ಧತಿಯನ್ನು ಅಳವಡಿಸಲಾಯಿತು. ಸೈನ್ಯಕ್ಕೆ ವರ್ಷಕ್ಕೆ 238 ಟಂಕಗಳನ್ನು ನೀಡಲಾಗುತ್ತಿತ್ತು. ಅರಿಜ್–ಇ–ಮಮ್ಮಾಲಿಕ್‌ನನ್ನು ದಿವಾನ್–ಇ–ಅರ್ಸ್ ಎಂದು ನೇಮಿಸಲಾಯಿತು.
- ಅವನು ಮಾರುಕಟ್ಟೆಯ ಸುಧಾರಣೆಗಳನ್ನು ಜಾರಿಗೆ ತಂದನು. ಪದಾರ್ಥಗಳ ಬೆಲೆಗಳನ್ನು ನಿಗದಿಪಡಿಸಿದನು. ಉದಾಹರಣೆಗೆ, ಗೋಧಿ ಒಂದು ಮಣಕ್ಕೆ 7.5 ಜಿಟಾಟ್, ಬಾರ್ಲಿ ಮಣಕ್ಕೆ 4 ಜಿಟಾಲ್ ಅಕ್ಕಿ ಮಣಕ್ಕೆ 5 ಜಿಟಾಟ್ ಮುಂತಾಗಿ.
- ದಿವಾನ್–ಇ–ರಿಯಾಸತ್ ಮೂರು ತರಹದ ಮಾರುಕಟ್ಟೆಗಳನ್ನು ಏರ್ಪಡಿಸಿತು. 1) ಷಹಾನಾ–ಇ–ಮಂಡಿ (ಕಾಳುಗಳು ಮಾರುಕಟ್ಟೆ) 2) ಸರಾಯ್–ಇ–ಅದಲ್ (ದಿನಸಿಗಳ ಮತ್ತು ಬಟ್ಟೆಗಳ ಮಾರುಕಟ್ಟೆ) ಮತ್ತು ದನಕರುಗಳ, ಕುದುರೆಗಳ, ಪ್ರಾಣಿಗಳ ಮತ್ತು ಗುಲಾಮರ ಮಾರುಕಟ್ಟೆ ಪದಾರ್ಥಗಳ ಸಂಗ್ರಹಣೆಯನ್ನು ನಿಷೇಧಿಸಲಾಗಿತ್ತು.
- ಅಲ್ಲಾವುದ್ದೀನ್ ಖಿಲ್ಜಿಯು ಅಲೈಮೀನಾರ್, ಅಲೈದರ್ವಾಜಾ, ಸಿರಿ ಪಟ್ಟಣ, ಮಹಲ್ ಹಜಾರ್ ಸತೂನ್ ಮತ್ತು ಜಮೈಯತ್ ಖಾನಾ ಮಸೀದಿಗಳನ್ನು ಕಟ್ಟಿಸಿದನು.
- ಭೂಕಂದಾಯವನ್ನು ನಿಗದಿತ ರೂಪದಲ್ಲಿ ನಿಗದಿಪಡಿಸಿದ ಮೊದಲನೆಯ ದೆಹಲಿ ಸುಲ್ತಾನನಾದನು.
- ಬಾಕಿ ವಸೂಲಿಗಾಗಿ ದಿವಾನ್–ಇ–ಮುಸ್ತಕರಾಜವನ್ನು ವ್ಯವಸ್ಥೆ ಮಾಡಿದನು.

**downloaded from: www.kpscvaani.com**

- ಅವನ ನಂತರ, ಅವನ ಮಗ ಮುಬಾರಕ್ ಖಿಲ್ಜಿ ಸಿಂಹಾಸನವನ್ನೇರಿದನು. ತನ್ನನ್ನು ಖಲೀಫ್ ಎಂದು ಘೋಷಿಸಿಕೊಂಡು, ಆತ್‌ವಸಿಕ್ ಬಿಲ್ಲಾ ಎಂಬ ಬಿರುದನ್ನು ಕೊಟ್ಟುಕೊಂಡನು. ಇವನು ಕೊಲೆಯಾಗಿ ನಸೀರುದ್ದೀನ್ ಖುಸ್ರು ಷಾ ಸಿಂಹಾಸನವನ್ನೇರಿದನು. ದೆಹಲಿಯ ಸಿಂಹಾಸನದ ಮೇಲೆ ಕುಳಿತ ಒಬ್ಬನೇ ಮತಾಂತರಗೊಂಡ ಹಿಂದೂ ಇವನಾಗಿದ್ದನು.

**ತುಘಲಕ್ ವಂಶ**

- ನಜ್ಜೀರುದ್ದೀನ್ ಷಾಹನನ್ನು ಕೊಂದು ಘಾಸಿಯಾಲಿಕ್ ಅಥವಾ ಘಿಯಾಸುದ್ದೀನ್ ತುಗ್ಲಕ್ ಸಿಂಹಾಸನವನ್ನೇರಿದನು. ಇವನ ರಾಜ್ಯಭಾರ ಕ್ರಿ.ಶ. 1320–1325ರವರೆಗೆ ನಡೆಯಿತು.
- ಇವನು ತನ್ನ ಮಗ ಜಾನಾಖಾನನನ್ನು (ಮಹಮದ ಬಿನ್–ತುಗಲಕ್) ವಾರಂಗಲ್ಲಿಗೆ ಕಳಿಸಿದನು. ಜಾನಾಖಾನ್‌ನು ಒರಿಸ್ಸಾದ ಜಾಜ್ ನಗರಕ್ಕೆ ದಂಡೆತ್ತಿಹೋದನು.
- ನೀರಾವರಿ ಕೆಲಸಗಳನ್ನು ಪ್ರಾರಂಭಿಸಿದ ಮೊದಲ ಸುಲ್ತಾನ್ ಘಿಯಾಸುದ್ದೀನ್.
- ದೆಹಲಿಯ ಹತ್ತಿರ ತುಘಲಖಾಬಾದ್ ಎಂಬ ಬಲವಾದ ಕೋಟೆಯನ್ನು ಕಟ್ಟಿದನು.
- ಒಂದು ಮರದ ಕಟ್ಟಡ ಕುಸಿದು ಬಿದ್ದು ಘಿಯಾಸುದ್ದೀನನು ಮರಣ ಹೊಂದಿದಾಗ ಮಹಮದ–ಬಿನ್–ತುಘಲಕ್‌ನು ಪಟ್ಟಕ್ಕೆ ಬಂದನು.
- ಇವನ ಆಡಳಿತದ ಕಾಲದಲ್ಲಿ ದೆಹಲಿ ಸಲ್ತನತ್‌ನಲ್ಲಿ ಹದಿಮೂರು ಪ್ರಾಂತ್ಯಗಳಿದ್ದವು. ಅವು ಯಾವುವೆಂದರೆ ದೆಹಲಿ, ದೇವಗಿರಿ, ಮುಲ್ತಾನ್, ಲಾಹೋರ್, ಸಿರ್ಸಾ, ಗುಜರಾತ್, ಅವಧ್ ಕನೌಜ್, ಲಕ್ನೋಟಿ, ಬಿಹಾರ್, ಮಾಳ್ವ, ಜಾಜ್ ನಗರ, ದ್ವಾರಸಮುದ್ರ ಅವುಗಳನ್ನು ಮುಕ್ತಾ ಎಂದು ಕರೆಯುತ್ತಿದ್ದರು.
- ಜಿಯಾವುದ್ದೀನ್ ಬರ್ನಿಯು ಅವನ ಐದು ಪ್ರಯೋಗಗಳನ್ನು ಅಥವಾ ಚಳುವಳಿಗಳನ್ನು ವಿವರಿಸಿದ್ದಾನೆ.
- ಅವನು ತನ್ನ ರಾಜಧಾನಿಯನ್ನು ದೆಹಲಿಯಿಂದ ದೇವಗಿರಿಗೆ (ದೌಲತಾಬಾದ್‌ಗೆ) ವರ್ಗಾಯಿಸಿದನು. ಕ್ರಿ.ಶ. 1330 ರಲ್ಲಿ ಕಂಚಿನ ಸಾಂಕೇತಿಕ ನಾಣ್ಯವನ್ನು ಚಲಾವಣೆಯಲ್ಲಿ ತಂದನು.
- ಮಂಗೋಲರ ದಾಳಿಯನ್ನು ಹೊಡೆದೊಡಿಸಿದ ಮೇಲೆ ಖುರಾಸಾನ್ ಮತ್ತು ಇರಾಕ್‌ಗಳನ್ನು ವಶಪಡಿಸಿಕೊಳ್ಳಬೇಕೆಂದು ಯೋಚಿಸಿದ್ದನು. ಅದಕ್ಕಾಗಿ ಒಂದು ದೊಡ್ಡ ಸೈನ್ಯವನ್ನು ಜಮಾವಣೆ ಮಾಡಿದನು. ನಂತರ ಅದನ್ನು ಕೈಬಿಟ್ಟನು, ನಂತರ ಆ ಸೈನ್ಯವನ್ನು ಕೈಬಿಟ್ಟನು.
- ಚೀನಿಯರ ಒತ್ತುವರಿಗಳನ್ನು ತಡೆಗಟ್ಟಲು ಕುಮಾಂಗ್ ಬೆಟ್ಟಗಳಲ್ಲಿ ತನ್ನ ಕರಾಚಿಲ್ ದಂಡಯಾತ್ರೆಯನ್ನು ಪ್ರಾರಂಭಿಸಿದನು. ಅವನ ಸೈನ್ಯಕ್ಕೆ ತುಂಬಾ ಏಟು ಬಿತ್ತು.
- ಕಾಂಗ್ರಾ ಮೇಲಿನ ಧಾಳಿಯನ್ನು ಪ್ರಾರಂಭಿಸಿದನು.
- ಅವನು ಕೃಷಿಯಲ್ಲೂ ಸುಧಾರಣೆಗಳನ್ನು ತಂದನು. ಅವನು ಭೂಕಂದಾಯವನ್ನು ಉತ್ಪನ್ನದಲ್ಲಿ ಅರ್ಧದಷ್ಟು ಎಂದು ನಿಗದಿ ಮಾಡಿದ್ದನು. ಆದರೆ ಉತ್ಪನ್ನ ಆಗಲಿ, ಆಗದಿರಲಿ, ಕೊಡಬೇಕಾಗಿತ್ತು. ದೋಆಬ್ ಪ್ರದೇಶದಲ್ಲಿ ಒಂದು ಸಲ ಕ್ಷಾಮ ಬಂದಿತ್ತು. ಆದರೆ ಅದಕ್ಕೆ ಸರ್ಕಾರದ ಸಹಾಯ ಬಂದುದು ತುಂಬಾ ತಡವಾಗಿ.
- ಅವನು ದಿವಾನ್–ಇ–ಅಮಿರ್‌ಕೋಹಿ ಎಂಬ ಹೊಸ ಇಲಾಖೆಯನ್ನು ಹುಟ್ಟುಹಾಕಿದನು. ಕೃಷಿಕರು ಉತ್ತಮ ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹಿಸಿದನು. ರೈತರಿಗೆ ಸೊಂಧಾರ ಸಾಲಗಳನ್ನು ಕೊಟ್ಟನು.
- ಭಾರತದ ಬಹುಭಾಗ ಕ್ಷಾಮ ಮತ್ತು ಪ್ಲೇಗಿನಿಂದ ಜರ್ಜರಿತವಾಗಿದ್ದಾಗ ದೆಹಲಿಗೆ 100 ಕಿ. ಮೀ. ಪೂರ್ವದಲ್ಲಿರುವ ಸ್ವರ್ಗದಾರಿಗೆ ಬದಲಾಯಿಸಿದ.
- ಕ್ರಿ.ಶ. 1336ರಲ್ಲಿ ಹರಿಹರ ಮತ್ತು ಬುಕ್ಕರು ವಿಜಯನಗರ ರಾಜ್ಯವನ್ನು ಸ್ಥಾಪಿಸಿದರು.
- ಕ್ರಿ.ಶ. 1347ರಲ್ಲಿ ಹಸನನು ದಕ್ಷಿಣದಲ್ಲಿ ಬಹುಮನಿ ರಾಜ್ಯವನ್ನು ಸ್ಥಾಪಿಸಿದರು.
- ಅವನ ರಾಜ್ಯಭಾರದ ಅವಧಿಯಲ್ಲಿ ನಡೆದ ಅನೇಕ ದಂಗೆಗಳಲ್ಲಿ ಒಂದಾದ ಥಟ್ಟದಲ್ಲಿ ನಡೆದ ದಂಗೆಯನ್ನು ಅಡಗಿಸಲು ಹೋದಾಗ ಅವನು ಮೃತನಾದನು.
- ಮಹಮದ್–ಬಿನ್–ತುಘ್ಲಕ್‌ನ ನಂತರ ಫಿರೋಜಷಾ ತುಘ್ಲಕ್ ಸಿಂಹಾಸನಕ್ಕೆ ಬಂದನು. (1351–1388)

**downloaded from: www.kpscvaani.com**

- ಇವನು ಬಂಗಾಳದ ಮೇಲೆ ಎರಡು ಅಯಶಸ್ವಿ ಆಕ್ರಮಣಗಳನ್ನು ನಡೆಸಿದನು. ಅವನು ಜಾಜ್ ನಗರದ ಮೇಲೆ ದಾಳಿ ಮಾಡಿದನು. ನಾಗರಕೋಟೆಯ ಮೇಲೆ ನಡೆದ ಧಾಳಿಯಲ್ಲಿ ಜ್ವಾಲಾಮುಖಿ ದೇವಸ್ಥಾನವನ್ನು ಅಪವಿತ್ರಗೊಳಿಸಿದನು. ಅದಕ್ಕೆ ಮುಂಚೆ ಅವನು ಪುರಿಯ ಜಗನ್ನಾಥ ದೇವಾಲಯವನ್ನು ನಾಶಪಡಿಸಿದ್ದನು. ಜ್ವಾಲಾಮುಖಿ ದೇವಸ್ಥಾನದಲ್ಲಿದ್ದ 1300 ಕೈಬರಹದ ಕೃತಿಗಳನ್ನು ಸಂಸ್ಕೃತದಿಂದ ಪರ್ಶಿಯನ್‌ಗೆ ಅರಿಜುದ್ದೀನ್ ಖಾನ್‌ನು ದಲೈಲ್-ಇ-ಫಿರೂಜ್ ಷಾಹಿ ಎಂಬ ಹೆಸರಿನಲ್ಲಿ ಭಾಷಾಂತರಗೊಳಿಸಿದನು.
- ಇವನು ಬ್ರಾಹ್ಮಣರನ್ನು ಜೆಜಿಯಾ ಕಂದಾಯದಿಂದ ವಿನಾಯಿತಿಗೊಳಿಸಲು ನಿರಾಕರಿಸಿದನು. ಇವನು ಅನೇಕ ಮುಸ್ಲಿಂ ಕಟ್ಟಾ ಪಂಥಗಳನ್ನು ನಿರ್ಬಂಧದಲ್ಲಿಟ್ಟನು, ಅಮಾನುಷ ಶಿಕ್ಷೆಗಳನ್ನು ಇವನು ನಿಷೇಧಿಸಿದನು. ಮುಸ್ಲಿಂ ಸ್ತ್ರೀಯರು ಸಂತರ ಗೋರಿಗಳಿಗೆ ಹೋಗಿ ಪ್ರಾರ್ಥಿಸುವುದನ್ನು ನಿಷೇಧಿಸಿದನು. ಕುರಾನನ್ನು ಪ್ರಶ್ನಿಸಿದ್ದಕ್ಕೆ ಬ್ರಾಹ್ಮಣನೊಬ್ಬನನ್ನು ಸಾರ್ವಜನಿಕವಾಗಿ ಸಾಯಿಸಿದನು.
- ಅವನ ಕಾರ್ಖಾನೆಗಳಲ್ಲಿ ಬಹುಸಂಖ್ಯೆಯಲ್ಲಿ ಗುಲಾಮರನ್ನು ನೇಮಿಸಿಕೊಂಡನು. ಅವನು ದಿವಾನ್-ಇ-ಬಂದಗಾನ್ (ಗುಲಾಮರ ಇಲಾಖೆ) ಇಲಾಖೆಯನ್ನು ಆಡಳಿತದಲ್ಲಿ ಸೃಷ್ಟಿಸಿದನು.
- ಅವನು ಹಿಸ್ಸಾರ್, ಫಿರೋಜ್, ಫಿರೋಜಾಬಾದ್ ಮತ್ತು ಜಾನ್‌ಪುರಗಳಂತಹ ನಗರಗಳನ್ನು ಕಟ್ಟಿದನು. ತೋಪರಾ ಮತ್ತು ಮೀರತ್‌ನಲ್ಲಿದ್ದ ಅಶೋಕನ ಶಿಲಾಸ್ಥಂಭಗಳನ್ನು ದೆಹಲಿಗೆ ತರಿಸಿದನು.
- ಇವನು ಅನೇಕ ಕಾಲುವೆಗಳನ್ನು ನಿರ್ಮಿಸಿದನು. 1) ಸಿರ್ಸಾದಿಂದ ಹಾನ್ಸಿವರೆಗೆ 2) ಸಟ್ಲೇಜ್‌ನಿಂದ ದಿಪಾಲ್‌ಪುರ ವರೆಗೆ 3) ಯಮುನಾದಿಂದ ಸಿರ್‌ಮೂರವರೆಗೆ.
- ಇವನ ಆಡಳಿತ ಕಾಲದಲ್ಲಿ ಖರಜ್ ಎಂದರೆ ಉತ್ಪನ್ನಗಳ ಮೇಲೆ ಶೇಕಡಾ 10ರ ಶುಲ್ಕ, ಜಕಾತ (ಮುಸಲ್ಮಾನರಿಗಾಗಿ ಭಿಕ್ಷೆ) ಜೆಸ್ಮಿಯಾ ಖಾಮ್ರ (ಯುದ್ಧದಲ್ಲಿ ಸಿಕ್ಕಿದ ಸಂಪತ್ತಿನ ಶೇಕಡಾ 20ಭಾಗ ಮತ್ತು ಷರ್ಟ್ (ನೀರಾವರಿಯ ಮೇಲಿನ ತೆರಿಗೆ) ವಿಧಿಸಲ್ಪಟ್ಟಿತ್ತು.
- ಇವನು ದಿವಾನ್-ಇ-ಖೈರತ್ ಮತ್ತು ದಾರ್-ಉಲ್-ಷಫಾ ಅಂದರೆ ಉಚಿತ ಆಸ್ಪತ್ರೆಯನ್ನು ಕಟ್ಟಿಸಿದನು.
- ಇವನು ಎರಡು ಹೊಸ ನಾಣ್ಯಗಳನ್ನು ಚಲಾವಣೆಗೆ ತಂದನು, ಆಧಾ (ಜಿಟಾಟ್‌ದ ಅರ್ಧ ಭಾಗ) ಮತ್ತು ಭಿಖ್ (ಜಿಟಾಟ್‌ದ ಕಾಲುಭಾಗ) ಆ ಕಾಲದಲ್ಲಿ ಜಾರಿಯಲ್ಲಿದ್ದ ಇತರ ನಾಣ್ಯಗಳೆಂದರೆ ಸಷ್ಣನಿ (ಆರು ಜಿಟಾಟ್‌ಗಳು) ಹಸ್ತಹನಿ (48 ಜಿಟಾಟ್‌ಗಳು)
- ಫಿರೋಜ್‌ನ ಮುಖ್ಯ ಪದ್ಧತಿ ಷಹ್ನ.
- ಇವನು ಫಾತುಹತ್-ಇ-ಫಿರೋಜ್ ಷಾಹಿ ಎಂಬ ಗ್ರಂಥವನ್ನು ರಚಿಸಿದನು.
- ಇವನು ಈಜಿಪ್ಟಿನ ಖಲೀಫನ ವಿಷಯದಲ್ಲಿ ಅಪಾರ ಗೌರವ ಹೊಂದಿದ್ದನು. ತನ್ನನ್ನು ಖಲೀಫನ ನಂತರದ ಅಧಿಕಾರಿ ಎಂದು ಭಾವಿಸಿದ್ದನು. ಎರಡು ಬಾರಿ ಖಲೀಫ್‌ನಿಂದ ಗೌರವ ವಸ್ತ್ರಗಳನ್ನು ಪಡೆದಿದ್ದನು.
- ಅಲ್ಲಾಉದ್ದೀನನಿಂದ ನಿಲ್ಲಿಸಲ್ಪಟ್ಟಿದ್ದ ಜಾಗೀರ ಪದ್ಧತಿಯನ್ನು ಪುನ: ಪ್ರಾರಂಭಿಸಿದನು.
- ಇವನ ನಂತರ ಕ್ರಮವಾಗಿ ಮಹಮದ್‌ಖಾನ್ ಎರಡನೆಯ ಘಿಯಾಸುದ್ದೀನ್ ತುಘ್ಲಕ್‌ಷಾ, ಅಬುಬಕ್ರ್, ನಸೀರುದ್ದೀನ್ ಮಹಮ್ಮದ್ ಹುಮಾಯೂನ್ ಮತ್ತು ಕೊನೆಗೆ ನಸೀರುದ್ದೀನ್ ಮಹಮ್ಮದ್ ಸಿಂಹಾಸನವನ್ನೇರಿದನು.
- ನಸೀರುದ್ದೀನ್ ಮಹಮದನು ಮಲ್ಲಿಕ್ ಪರ್ವರ್ ಎಂಬುವವನಿಗೆ ಮಲಿಕ್ ಉಸ್ ಷಾರ್ಕ್ ಎಂಬ ಬಿರುದನ್ನು ಕೊಟ್ಟನು. ಮಲಿಕ್ ಪರ್ವರ್, ಜಾನ್‌ಪುರದಲ್ಲಿ ಷರ್ಕಿ ರಾಜ ವಂಶವನ್ನು ಸ್ಥಾಪಿಸಿದನು.
- ನಜೀರುದ್ದೀನ್ ಮಹಮ್ಮದ್ ಆಡಳಿತ ಕಾಲದಲ್ಲಿ ಕ್ರಿ.ಶ. 1398ರಲ್ಲಿ ತೈಮೂರನು ಭಾರತದ ಮೇಲೆ ಆಕ್ರಮಣ ಮಾಡಿದನು.
- ಮಹಮದನ ಸಾವಿನ ನಂತರ ದೌಲತ್ ಖಾನ್ ಲೋಧಿಯು ಸುಲ್ತಾನನಾದನು. ಆದರೆ ಅವನು ಖಿಸ್ರ್‌ಖಾನ್‌ನಿಂದ ಸೋಲಿಸಲ್ಪಟ್ಟನು. ಖಿಸ್ರ್‌ಖಾನನು ಸೈಯ್ಯದ ವಂಶವನ್ನು ಸ್ಥಾಪಿಸಿದನು.
- ಇವನ ಉತ್ತರಾಧಿಕಾರಿ ಮೂಬಾರಕ್ ಷಹನು ಯಹ್ಯಾಬಿನ್ ಅಹ್ಮದ್ ಸಿರ್ ಹಿಂದಿಸ್ ತಾರೀಖ್-ಇ-ಮುಬಾರಕ್ ಷಾಹಿಯ ಪ್ರತಿಪಾದಕನಾಗಿದ್ದನು.
- ಕೊನೆಯ ಸೈಯದ್ ವಂಶದ ಅಲಾಉದ್ದೀನ್ ಆಲಂಷಹನು ಬಹ್ಲೋತ್ ಲೋಧಿಯಿಂದ ಸೋಲಿಸಲ್ಪಟ್ಟನು. ಬಹ್ಲೋತ್ ಲೋಧಿಯು ಲೋಧಿಯಿಂದ ಸೋಲಿಸಲ್ಪಟ್ಟನು. ಬಹ್ಲೋತ್ ಲೋಧಿಯು ಲೋಧಿ ರಾಜ ವಂಶವನ್ನು ಸ್ಥಾಪಿಸಿದನು.

downloaded from: www.kpscvaani.com

***ಲೋಧಿಗಳು:***

- ಇವರು ಭಾರತವನ್ನಾಳಿದ ಪ್ರಥಮ ಆಫ್ಘನ್ನರು ಬಹ್ಲೋಲ್ ಲೋಧಿಯು ಷರ್ಕಿ ಸಾಮ್ರಾಜ್ಯವನ್ನು ತನ್ನ ವಶಕ್ಕೆ ತೆಗೆದುಕೊಂಡನು. ಬಹೋಲಿ ತಾಮ್ರದ ನಾಣ್ಯವನ್ನು ಚಲಾವಣೆಗೆ ತಂದನು. ಇವನು 1451ರಿಂದ 1489ರ ವರೆಗೆ ಆಳಿದನು.
- ಇವನ ಉತ್ತರಾಧಿಕಾರಿ ಸಿಕಂದರ್ ಲೋಧಿ (1489-1517). ಇವನ ತಾಯಿ ಹಿಂದೂ ಆಗಿದ್ದಳು.
- ಇವನು ಹೊಸ ಅಳತೆಯ ಗಜವನ್ನು ಚಲಾಯ್ತಿಯಲ್ಲಿ ತಂದನು. ಇದಕ್ಕೆ ಛಜ್-ಇ-ಸಿಕಂದರಿ ಎಂದು ಹೆಸರಿತ್ತು. ಇವನು 1504ರಲ್ಲಿ ಆಗ್ರಾ ನಗರವನ್ನು ಕಟ್ಟಿದನು. ಇವನು ನ್ಯಾಯಕ್ಕೆ ಪ್ರಾಧಾನ್ಯವನ್ನು ಕೊಟ್ಟಿದ್ದನು. ಇವನು ಗುತರುಬಿ ಎಂಬ ಹೆಸರಿನಲ್ಲಿ ಪರ್ಶಿಯನ್ ಭಾಷೆಯಲ್ಲಿ ಪದ್ಯಗಳನ್ನು ಬರೆದನು. ಇವನ ರಾಜ್ಯಭಾರ ಕಾಲದಲ್ಲಿ ಪದಾರ್ಥಗಳ ಬೆಲೆ ತುಂಬಾ ಅಗ್ಗವಾಗಿತ್ತು.
- ಇವನ ನಂತರ ಪಟ್ಟಕ್ಕೆ ಬಂದವನು ಇಬ್ರಾಹಿಂ ಲೋಧಿ (ಕ್ರಿ.ಶ. 1517-26). ಇವನನ್ನು ಮೋನಾರದ ರಾಣಾಸಿಂಗನು ಸೋಲಿಸಿದನು. ಇವನು ಪಾಣಿಪತ್ ಯುದ್ಧದಲ್ಲಿ ಬಾಬರ್‌ನ ಕೈಲೂ ಕ್ರಿ.ಶ. 1526ರಲ್ಲಿ ಸೋತನು. ಪಂಜಾಬಿನ ರಾಜಪ್ರತಿನಿಧಿ ದೌಲತ್‌ಖಾನ್ ಲೋಧಿಯು ಬಾಬರ್‌ನನ್ನು ಆಹ್ವಾನಿಸಿದ್ದನು.

**ಆಡಳಿತ :**

- ಸುಲ್ತಾನ್ ಎಂಬ ಬಿರುದು ಟರ್ಕಿಯ ಅರಸರಿಂದ ಪ್ರಾರಂಭಿಸಲ್ಪಟ್ಟಿತ್ತು. ಈ ಬಿರುದನ್ನು ಉಪಯೋಗಿಸಿದವರಲ್ಲಿ ಮೊದಲನೆಯವನು ಮಹಮ್ಮದ್ ಘಜ್ನಿ ಎಲ್ಲಾ ಅಧಿಕಾರವೂ ಸುಲ್ತಾನನ ಕೈಯಲ್ಲಿದ್ದಿತ್ತು. ಇವರು ಖಲೀಫ್‌ನ ಹೆಸರಿನಲ್ಲಿ ಆಡಳಿತ ನಡೆಸುತ್ತಿದ್ದರು. ಅಮೀರ ಖುಸ್ರುವು ಅಲ್ಲಾಉದ್ದೀನನನ್ನು ಖಲೀಫಾ ಎಂದು ಕರೆಯುತ್ತಿದ್ದನು. ಮುಬಾರಕ್‌ಷಾನು ತನ್ನನ್ನು ಆಲ್-ವಾಸಿಕ್-ಬಿಲ್ಲಾ ಎಂದು ಕರೆದುಕೊಂಡನು. ಹಾಜಿ ಸರಾರಿಯು ಮಹಮ್ಮದ್ ಬಿನ್ ತುಘಲಕ್‌ನಿಗೆ ಅಧಿಕಾರ ಪತ್ರವನ್ನು ನೀಡಿದ್ದನು. ಫಿರೋಜ್ ತುಘಲಕ್‌ನಿಗೂ ಈ ಅಧಿಕಾರರೂಢ ಪತ್ರ ದೊರೆತಿತ್ತು.

**ವಾಸ್ತುಶಿಲ್ಪ :**

- ಕುವಾತ್-ಉಲ್-ಇಸ್ಲಾಂ ಈ ಕಟ್ಟಡವನ್ನು ಒಂದು ಹಿಂದೂ ದೇವಸ್ಥಾನದ ಪಾಯದ ಮೇಲೆ ಕಟ್ಟಲಾಗಿತ್ತು. ಕುತುಬುದ್ದೀನ್ ಐಬಕ್‌ನು ಇದನ್ನು ಕಟ್ಟಿಸಿದನು. ಇಂಡೋ-ಇಸ್ಲಾಮಿಕ್ ಶೈಲಿಯಲ್ಲಿ ಭಾರತದಲ್ಲಿ ಕಟ್ಟಿದ ಪ್ರಥಮ ಮಸೀದಿ ಇದು.
- ಅರಾಯಿ ದಿನಕಾ ಜೋಪ್ರಾ ಇದನ್ನು ಕುತುಬುದ್ದೀನ್ ಐಬಕ್‌ನು ಅಜ್ಮೀರದಲ್ಲಿ ಕಟ್ಟಿಸಿದನು. ಪ್ರಾರಂಭದಲ್ಲಿ ಇದು ಸಂಸ್ಕೃತ ಪ್ರೌಢ ವಿದ್ಯಾಲಯವಾಗಿತ್ತು.
- ಕುತುಬ್ ಮಿನಾರ್ ಇದು ಷೇರ್ ಕುತುಬುದ್ದೀನ್ ಭಕ್ತಿಯಾರ ಕಾಶಿಯ ಸ್ಮರಣಾರ್ಥವಾಗಿ ಕುತುಬುದ್ದೀನ್ ಐಬಕ್‌ನಿಂದ ಕಟ್ಟಿಸಲ್ಪಟ್ಟಿತ್ತು. ಐಬಕ್‌ನು ಒಂದು ಅಂತಸ್ತನ್ನು ಮಾತ್ರ ಕಟ್ಟಿಸಿದನು. ಇದನ್ನು ಪೂರ್ಣಗೊಳಿಸಿದವನು ಇಲ್ತಮಷ್, ಇದಕ್ಕೆ ಸಿಡಿಲು ಬಡಿದಾಗ ಫಿರೋಜ್ ತುಘಲಕ್‌ನು ಇದನ್ನು ದುರಸ್ತಿ ಮಾಡಿಸಿದನು. ಸಿಕಂದರ್ ಲೋಧಿ ಸಹ ಇದನ್ನು ದುರಸ್ತು ಮಾಡಿಸಿದ್ದನು. ಇದು ನಾಲ್ಕು ಅಂತಸ್ತುಗಳನ್ನೊಳಗೊಂಡಿತ್ತು. ಫಿರೋಜನು ನಾಲ್ಕನೆಯ ಅಂತಸ್ತಿನ ಬದಲು ಎರಡು ಸಣ್ಣ ಅಂತಸ್ತುಗಳನ್ನು ಕಟ್ಟಿಸಿದನು.
- ಇಲ್ತುಮಷ್‌ನ ಗೋರಿ ಇದು ಕುಹಾತುಲ್ ಇಸ್ಲಾಂ ಮಸೀದಿಯ ಬಳಿ ಇದೆ.
- ಸುಲ್ತಾನ್ ಗರ್ಹಿ ಇಲ್ತುಮಷ್‌ನಿಂದ ಅವನ ಮಗ ನಸಿರುದ್ದೀನ್ ಮಹಮದ್‌ನ ಸಮಾಧಿಯ ಮೇಲೆ ಇದನ್ನು ಕಟ್ಟಲಾಯಿತು. ಇದು ಕುತುಬ್ ಮೀನಾರ್‌ದಿಂದ ಮೂರು ಮೈಲಿಗಳ ದುರದಲ್ಲಿದೆ. ಇಲ್ತುತ್ಮಿಷ್‌ನಿಗೆ ಗೋರಿ ನಿರ್ಮಾಣದ ಪಿತಾಮಹ ಎಂಬ ಬಿರುದು ಬಂದಿರುವುದು ಸರಿಯಾಗಿಯೇ ಇದೆ.
- **ಅಲೈದರ್ವಾಜಾ:** ಇದನ್ನು ಅಲ್ಲಾಉದ್ದೀನ್ ಖಿಲ್ಜಿ ಕಟ್ಟಿಸಿದನು.
- **ಸಿರಿ:** ಇದನ್ನು ಅಲ್ಲಾವುದ್ದೀನ್ ಖಿಲ್ಜಿ ಕಟ್ಟಿಸಿದನು.
- **ಹೌಸಖಾಸ್:** ಇದನ್ನು ಅಲ್ಲಾವುದ್ದೀನ್ ಖಿಲ್ಜಿ ನಿರ್ಮಿಸಿದನು.
- **ಮಹಲ್ ಹಜಾರ್ ಸತೂನ್:** ಇದನ್ನು ಅಲ್ಲಾವುದ್ದೀನ್ ಖಿಲ್ಜಿ ಕಟ್ಟಿಸಿದನು.

**downloaded from: www.kpscvaani.com**

- **ಜಮೈತ್ ಖಾನಾ ಮಸೀದಿ:** ಕಟ್ಟಿಸಿದವನು ಅಲ್ಲಾವುದ್ದೀನ್ ಖಿಲ್ಜಿ.
- **ತುಘಲಕಾಬಾದ್:** ದೆಹಲಿಯ ಮೂರನೆಯ ನಗರ ಘಿಯಾಸುದ್ದೀನ್ ತುಘಲಕ್ ಕಟ್ಟಿಸಿದನು.
- **ಜಹಾನ್‌ಪನಾಹ:** ದೆಹಲಿಯ ನಾಲ್ಕನೆ ನಗರ ಮಹಮದ ಬಿನ್ ತುಘಲಕ್ ಕಟ್ಟಿಸಿದನು.
- **ಫಿರೋಜಾಬಾದ್:** ದೆಹಲಿಯ ಐದನೆಯ ನಗರ ಫಿರೋಜ ಷಹಾ ತುಘಲಕ್ ಕಟ್ಟಿಸಿದ್ದು.
- **ಖಾನ್–ಇ–ಜಹಾನ್ ಮಕಬೂತ್‌ನ ಗೋರಿ:** ಇದು ಕ್ರಿ.ಶ. 1368ರಲ್ಲಿ ಜಾನಾಷಹಾನಿಂದ ಕಟ್ಟಿಸಲ್ಪಟ್ಟ ಅಷ್ಟಭುಜಾಕೃತಿಯ ಗೋರಿ.
- **ಸಿಕಂದರ ಲೋಧಿಯ ಗೋರಿ:** ಇದಕ್ಕೆ ಎರಡು ಗುಮ್ಮಟಗಳಿವೆ.

**ಪ್ರಾದೇಶಿಕ ರಾಜ್ಯಗಳು:**

***ಮಾಳ್ವ:***

- ಕ್ರಿ.ಶ. 1400ರಲ್ಲಿ ಅಲ್ಪ್‌ಖಾನನು ಮಾಳ್ವದ ಸಿಂಹಾಸನವನ್ನು ಹುಷಾಂಗ ಷಹ ಎಂಬ ಬಿರುದಿನೊಡನೆ ಏರಿದನು. ಅವನು ಮಾಂಡುವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಇವನು ಕ್ರಿ.ಶ. 1435ರಲ್ಲಿ ವಿದಿವಶವಾದನು. ಇವನನ್ನು ಮಾಂಡುವಿನಲ್ಲಿ ಒಂದು ಅಮೃತಶಿಲೆಯ ಗೋರಿಯಲ್ಲಿ ಹೂಳಲಾಯಿತು.
- ಎರಡನೆಯ ಮಹಮದ್ ಖಿಲ್ಜಿಯು ಮೇದಿನಿರಾಯನನ್ನು ತನ್ನ ವಜೀರನನ್ನಾಗಿ ಮಾಡಿಕೊಂಡನು, ಇವನು ಗುಜರಾತಿನ ಬಹದೂರ್ ಷಾಹನಿಂದ ಕೊಲ್ಲಲ್ಪಟ್ಟನು.
- ಖಾನ್ ಬಹಾದ್ದೂರನು ರೂಪಮತಿಯನ್ನು ಪ್ರೀತಿಸಿದನು. ಅವನು ಸಂಗೀತ ಜ್ಞಾನ ಮತ್ತು ಪದ್ಯಗಳಿಗೆ ಹೆಸರಾಗಿದ್ದನು.
- ಕ್ರಿ.ಶ. 1562ರಲ್ಲಿ ಅಕ್ಬರನು ಮಾಳ್ವವನ್ನು ಮೊಗಲ್ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು.

***ಜಾನ್‌ಪುರ:***

- ಜಾನ್‌ಪುರ ಪಟ್ಟಣ ಫಿರೋಜ್ ತುಘ್ಲಕ್‌ನಿಂದ ಕಟ್ಟಲ್ಪಟ್ಟಿತ್ತು.
- ಕೊನೆಯ ತುಘ್ಲಕ್ ದೊರೆ ಸುಲ್ತಾನ್ ಮಹಮದ್ ಮಲಿಕ್ ಸರ್ದಾರ್ ಎಂಬುವನಿಗೆ ಮಲ್ಲಿಕ್–ಉಸ್–ಷರ್ಕ್ (ಪೂರ್ವದ ಮುಖ್ಯಸ್ಥ) ಎಂಬ ಬಿರುದು ಕೊಟ್ಟನು ಮತ್ತು ಪೂರ್ವದ ಪ್ರಾಂತ್ಯಕ್ಕೆ ರಾಜ ಪ್ರತಿನಿಧಿಯಾಗಿ ನೇಮಿಸಿದನು.
- ವಿದ್ಯೆಗೆ ಮತ್ತು ಸಂಸ್ಕೃತಿಗೆ ಕೊಡುತ್ತಿದ್ದ ಪ್ರೋತ್ಸಾಹದಿಂದ ಸಿರಾಜ್ ಆಫ್ ಇಂಡಿಯಾ ಅಥವಾ ಪೂರ್ವದ ಸಿರಾಜ್ ಎಂದು ಹೆಸರು ಬಂದಿತು.

***ಗುಜರಾತ:***

- ಕ್ರಿ.ಶ. 1297ರಲ್ಲಿ ಅಲ್ಲಾಉದ್ದೀನನು ದೆಹಲಿ ವ್ಯಾಪ್ತಿಗೆ ಗುಜರಾತನ್ನು ಸೇರಿಸಿಕೊಂಡನು.
- ಗುಜರಾತಿನಲ್ಲಿ ಮುಜಫರಷಹಾನು ಮುಜಾಪುರಿ ರಾಜ ವಂಶವನ್ನು ಸ್ಥಾಪಿಸಿದನು.
- ಅಹ್ಮದಷಹನು ಅಹ್ಮದಾಬಾದ್ ನಗರವನ್ನು ಕಟ್ಟಿದನು. ರಾಜಧಾನಿಯನ್ನು ಪಾಟ್ನಾದಿಂದ ಅಹಮದಾಬಾದಿಗೆ ಬದಲಾಯಿಸಿದನು.
- ಮಹಮದ ಬೆಗ್ರಾ (1449–1511) ಅಹಮದ್ ಷಹನ ಮೊಮ್ಮಗ. ಅವನು ಗಿರ್ವಾರ ಮತ್ತು ಚಂಪಾಸೇರ್‌ಗಳನ್ನು ವಶಪಡಿಸಿಕೊಂಡಿದ್ದ.
- ಅವನು ಈಜಿಪ್ತಿನವರೊಡನೆ ಸ್ನೇಹ ಮಾಡಿಕೊಂಡು ಪೋರ್ಚುಗೀಸ್‌ರನ್ನು ಎದುರಿಸಿದನು. ಅವನು ಪೋರ್ಚುಗೀಸ್‌ರಿಂದ ಸೋಲಿಸಲ್ಪಟ್ಟನು.
- ಬಹದೂರ ಷಹನ ಬಳಿ ಇದ್ದ ಅತ್ಯಂತ ಚತುರ ತುಪಾಕಿ ಹಾರಿಸುವವನಾಗಿದ್ದ ರೂಮಿಯ ಸಹಾಯದಿಂದ ಚಿತ್ತೋರ್‌ನ್ನು ಗೆದ್ದನು. ಪೋರ್ಚುಗೀಸರು ಬಹದೂರಷಹನನ್ನು ನೀರಿನಲ್ಲಿ ಮುಳುಗಿಸಿ ಕೊಂದರು.
- ಮೂರನೆಯ ಮುಜಫರ್‌ನ ಆಡಳಿತ ಕಾಲದಲ್ಲಿ ಅಕ್ಬರನು ಗುಜರಾತನ್ನು ತನ್ನ ವಶಕ್ಕೆ ತೆಗೆದುಕೊಂಡನು.

**downloaded from: www.kpscvaani.com**

**ಬಂಗಾಳ :**

- ಘಿಯಾಸುದ್ದೀನ್ ಅಜಿಂಷಹನು ಚೀನಾದೊಡನೆ ರಾಯಭಾರ ಸಂಬಂಧ ಹೊಂದಿದ್ದನು. ಅವನು ನ್ಯಾಯ ದೊರಕಿಸಿಕೊಡುವುದರಲ್ಲಿ ತುಂಬಾ ಒಳ್ಳೆಯ ಹೆಸರನ್ನು ಪಡೆದಿದ್ದನು.
- ರಾಜಾ ಗಣೇಶ (ಅಥವಾ ಕಂಸ) ಸಿಂಹಾಸನವನ್ನು ಹಲವು ಕಾಲ ಆಕ್ರಮಿಸಿಕೊಂಡನು. ಅವನು ಇಬ್ರಾಹಿಂ ಷಾ ಷರ್ಕಿಯಿಂದ ಓಡಿಸಲ್ಪಟ್ಟನು.
- ಅಲ್ಲಾಉದ್ದೀನ್ ಹುಸೇನ್ ಷಹನು ಸತ್ಯಪೀರ್ ಚಳುವಳಿಯನ್ನು ಪ್ರಾರಂಭಿಸಿದನು. ಇವನು ಆಸ್ಥಾನವನ್ನು ಅಲಂಕರಿಸಿದ್ದವರಲ್ಲಿ ರೂಪ ಮತ್ತು ಸನಾತನ ಅವರೂ ಸೇರಿದ್ದರು. ಶ್ರೀಕೃಷ್ಣ ವಿಜಯ ಗ್ರಂಥವನ್ನು ರಚಿಸಿದ ಮೂಲಾಧರ ಪ್ರಭುವಿಗೆ ಗುಣರಾಜಖಾನ ಎಂಬ ಬಿರುದು ದೊರೆಯಿತು.
- ಕ್ರಿ.ಶ. 1575ರಲ್ಲಿ ಅಕ್ಬರನು ಬಂಗಾಳವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು.

**ಕಾಶ್ಮೀರ :**

- ಸಿಕಂದರ್‌ನು ಕಟ್ಟುನಿಟ್ಟಾಗಿ ರಾಜ್ಯವಾಳುತ್ತಿದ್ದ ದೊರೆ. ಇವನನ್ನು ಬುಟ್ಲಿಖಾನ್ ಎಂದು ಕರೆಯುತ್ತಿದ್ದರು. ಇವನು ಧಾರ್ಮಿಕ ಮತಾಂತರವನ್ನು ಬಲವಂತನಾಗಿ ಮಾಡಿಸುತ್ತಿದ್ದನು. ಇವನ ಆಡಳಿತ ಕಾಲದಲ್ಲಿ ಅನೇಕ ದೇವಾಲಯಗಳು ಅಪವಿತ್ರಗೊಳಿಸಲ್ಲಪಟ್ಟವು. ಇವನು ಕ್ರೂರ ಸತಿ ಪದ್ಧತಿಯನ್ನು ನಿಷೇಧಿಸಿದನು.
- ಮುಸಲ್ಮಾನೇತರರ ಮೇಲೆ ಹೇರುತ್ತಿದ್ದ ಜೆಸಿಯಾ ತಲೆಗಂದಾಯವನ್ನು ತೆಗೆದುಹಾಕಿದ ಸುಲ್ತಾನರಲ್ಲಿ ಇವನು ಮೊದಲಿಗನು.
- ಇವನನ್ನು ಕಾಶ್ಮೀರದ ಅಕ್ಬರ್ ಎಂದು ಕರೆಯುತ್ತಿದ್ದರು. ಇವನು ಜೈನಾ ಸರೋವರವನ್ನು ಕಟ್ಟಿಸಿದನು.

**ಅಸ್ಸಾಂ:**

- ಶಂಕರದೇವನು ರಾಜಾ ಶೃಂಗನನ್ನು ವೈಷ್ಣವನನ್ನಾಗಿ ಪರಿವರ್ತಿಸಿದನು.

**ಮೇವಾಡ್:**

- ರಾಣಾಕುಂಭನು ಮಾಳ್ವದ ಮಹಮದ ಖಿಲ್ಜಿಯ ಎದುರು ತಾನು ಗೆದ್ದುದರ ಸ್ಮರಣಾರ್ಥವಾಗಿ ವಿಜಯಸ್ತಂಭ ನಿರ್ಮಿಸಿದನು. ಅವನ ಆಸ್ಥಾನದಲ್ಲಿ ಮಂಡನನಿದ್ದುದು ಅವನು ವಾಸ್ತುವಿನ ಬಗ್ಗೆ ಪ್ರಸಾದ ಮಂಡನ ರೂಪಮಂಡನ ಮುಂತಾದ ಅನೇಕ ಪುಸ್ತಕಗಳನ್ನು ಬರೆದನು. ರಾಣಾ ಸಂಗನು ಮಾಳ್ವದ ಎರಡನೆಯ ಮಹಮದ್‌ನನ್ನು ಸೋಲಿಸಿದನು. ಅವನು ಘಟೋಲಿಯ ಇಬ್ರಾಹಿಂ ಲೋಧಿಯನ್ನು ಸೋಲಿಸಿದನು. ಅವನು 1527ರಲ್ಲಿ ಕಣ್ವಾಹದಲ್ಲಿ ಬಾಬರ್‌ನ ಕೈಯಲ್ಲಿ ಸೋತನು.

***ಖಾನದೇಶ:***

- ಮಾಲಿಕ ರಾಜನು ಫರೂಕಿ ರಾಜವಂಶವನ್ನು ಸ್ಥಾಪಿಸಿದನು. ನಾಸಿರ ಖಾನನು ಬರ್ಹಾನ್‌ಪುರವನ್ನು ಕಟ್ಟಿದನು.

**ವಿಜಯನಗರ ಸಾಮ್ರಾಜ್ಯ :**

- ಕ್ರಿ.ಶ. 1336ರಲ್ಲಿ ಹರಿಹರ ಮತ್ತು ಬುಕ್ಕರಿಂದ ಸ್ಥಾಪಿಸಲ್ಪಟ್ಟಿತ್ತು. ಅವರು ಈ ಮೊದಲು ವಾರಂಗಲ್ಲಿನ ಕಾಕತೀಯ ದೊರೆ. ಪ್ರತಾಪರುದ್ರನ ಕೆಳಗೆ ಕಾರ್ಯನಿರ್ವಹಿಸುತ್ತಿದ್ದರು. ಒಂದು ಸಲ ಕಾಕತೀಯ ಸಾಮ್ರಾಜ್ಯವನ್ನು ದೆಹಲಿ ಸುಲ್ತಾನರು ವಶಪಡಿಸಿಕೊಂಡಾಗ ಹಕ್ ಬಂದು ವಿಜಯವಿರುಪಾಕ್ಷಪುರಕ್ಕೆ ಬಂದ ವಿಜಯನಗರವನ್ನು ಸ್ಥಾಪನೆ ಮಾಡುತ್ತಾರೆ. ಹಕ್‌ಬುಕ್ಕರ ಗುರು ವಿದ್ಯಾರಣ್ಯ. ಫಾದರ್ ಹೆರಾಸ್‌ರ ಪ್ರಕಾರ, ಅವರು ಹೊಯ್ಸಳರ ಮೂರನೆಯ ವೀರ ಬಲ್ಲಾಳನ ಬಳಿ ಸೇವೆ ಸಲ್ಲಿಸಿದ್ದರು.

- ಮೊದಲನೆಯ ಹರಿಹರನು ಸಂಗಂ ರಾಜವಂಶವನ್ನು ಪ್ರಾರಂಭಿಸಿದನು. ಅವನು ಹೊಯ್ಸಳ ಮತ್ತು ಕದಂಬ ರಾಜ್ಯಗಳನ್ನು ಸೋಲಿಸಿದನು. ಕುಮಾರ ಕಂಪನ ಕೈಕೆಳಗೆ ಅವನು ಕಳಿಸಿದ ಸೈನ್ಯ ಮದುರೆಯನ್ನು ಗೆದ್ದುಕೊಂಡಿತು. ಅವನ ಹೆಂಡತಿ ಗಂಗಾದೇವಿ ಮಧುರಾ ವಿಜಯಂ ಕೃತಿಯನ್ನು ರಚಿಸಿದಳು.

**downloaded from: www.kpscvaani.com**

- ಒಂದನೇ ದೇವರಾಯನು ತನ್ನ ಸೈನ್ಯದಲ್ಲಿ 10,000 ಮುಸ್ಲಿಮರನ್ನು ಸೇರಿಸಿಕೊಂಡಿದ್ದನು. ಈ ರೀತಿ ಮಾಡಿದ ಮೊದಲ ವಿಜಯನಗರದ ದೊರೆ ಅವನಾಗಿದ್ದನು. ಅವನು ಫಿರೋಜ್‌ಷಾನು ಮಾಡಿದ ಧಾಳಿಯನ್ನು ಎದುರಿಸಿದನು. ತುಂಗಾಭದ್ರಾ ನದಿಗೆ ಒಂದು ಅಣೆಕಟ್ಟನ್ನು, ಹರಿಹರ ನದಿಗೆ ಒಂದು ಅಣೆಕಟ್ಟೆಯನ್ನು ಅವನು ಕಟ್ಟಿದನು.
- ಎರಡನೆಯ ದೇವರಾಯನು ಗಜ ಬೇಟೆಕಾರ ಪ್ರೌಢ ದೇವರಾಯ ಮುಂತಾದ ಹೆಸರುಗಳನ್ನು ಹೊಂದಿದ್ದನು. ಅವನು ಬ್ರಹ್ಮಸೂತ್ರ ಮೇಲೆ ಒಂದು ವ್ಯಾಖ್ಯಾನ ಬರೆದನು.
- ಅಬ್ದುಲ್ ರಜಾಕನು ಅವನ ಆಸ್ಥಾನಕ್ಕೆ ಭೇಟಿ ನೀಡಿದನು.
- ತುಳುವ ವಂಶವು ವೀರನರಸಿಂಹನಿಂದ ಪ್ರಾರಂಭವಾಯಿತು. ಅವನು ಮಹಾನಾಟಕ ಸುಧಾನಿಧಿಯನ್ನು ಬರೆಯುತ್ತಾನೆ. ಗುಲ್ಬರ್ಗಾ ಮತ್ತು ಬೀದರಗಳ ಮೇಲೆ ಆಕ್ರಮಣ ಮಾಡಿ ಬಹುಮನಿ ಸುಲ್ತಾನನಿಗೆ ಸಿಂಹಾಸನವನ್ನು ಪುನ: ಕೃಷ್ಣದೇವರಾಯ ದೊರಕಿಸಿಕೊಟ್ಟು ಯವನರಾಜ್ಯ ಸ್ಥಾಪನಾಚಾರ್ಯ ಎಂಬ ಬಿರುದನ್ನು ಪಡೆದನು.
- ಅವನು ಅಭಿನವ ಭೋಜ, ಆಂದ್ರ ಪಿತಾಮಹ, ಆಂದ್ರ ಭೋಜ ಎಂಬ ಹೆಸರುಗಳನ್ನು ಪಡೆದಿದ್ದನು. ಅವನು ತೆಲುಗಿನಲ್ಲಿ ಅಮುಕ್ತ ಮಾಲ್ಯದ ಎಂಬ ಗ್ರಂಥವನ್ನು, ಸಂಸ್ಕೃತದಲ್ಲಿ ಜಾಂಬವತಿ ಕಲ್ಯಾಣಂ ಎಂಬ ಗ್ರಂಥವನ್ನು ರಚಿಸಿದನು.
- ಅವನ ಆಸ್ಥಾನವು ಅಷ್ಟದಿಗ್ಗಜರಿಂದ ಅಲಂಕೃತವಾಗಿತ್ತು. ಪೆದ್ದಣ್ಣನು ಮನು ಚರಿತಂ ಗ್ರಂಥವನ್ನು ತೆನಾಲಿರಾಮನು ಪಾಂಡುರಂಗ ಮಹಾತ್ಮನ್ನು ಬರೆದನು.
- ಅವನು ಹೊಸದಾದ ಪಟ್ಟಣ ನಾಗಲಾಪುರಂ ಕಟ್ಟಿದನು. ಹಜಾರ ರಾಮಸ್ವಾಮಿ ದೇವಸ್ಥಾನ ಮತ್ತು ವಿಠಲ ಸ್ವಾಮಿ ದೇವಸ್ಥಾನಗಳನ್ನು ಕಟ್ಟಿಸಿದನು.
- ಸದಾಶಿವರಾಯನ ರಾಜ್ಯಭಾರ ಕಾಲದಲ್ಲಿ ನಿಜವಾದ ಅಧಿಕಾರ ರಾಮರಾಯನ ಕೈಯಲ್ಲಿತ್ತು. ಕ್ರಿ.ಶ. 1565ರಲ್ಲಿ ಬೀರಾರನ್ನು ಬಿಟ್ಟು ಉಳಿದೆಲ್ಲ ದಖ್ಖನ್ ಸುಲ್ತಾನರು ಒಟ್ಟುಗೂಡಿ, ಪ್ರಸಿದ್ಧವಾದ ತಾಳಿಕೋಟೆ ಅಥವಾ ರಕ್ಕಸ ತಂಗಡಿ ಯುದ್ಧದಲ್ಲಿ ವಿಜಯನಗರವನ್ನು ಸೋಲಿಸಿದರು. ಆನಂತರ ವಿಜಯನಗರ ರಾಜಧಾನಿ ಪೆನುಗೊಂಡೆಗೆ ಬಂದಿತು. ಆನಂತರ ಎರಡನೆಯ ವೆಂಕಟನು ಚಂದ್ರಗಿರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು.

**ವಿಜಯನಗರ ಆಸ್ಥಾನಕ್ಕೆ ಬಂದ ರಾಯಭಾರಿಗಳು**

| **ಯಾತ್ರಿಕರು** | **ದೇಶ** | **ರಾಜ** |
|---|---|---|
| ಅಬ್ದುರ್ ರಜಾಕ್ | ಪರ್ಶಿಯಾ | ದೇವರಾಯ–1 |
| ನಿಕೆತಿನ್ | ಬಹುಮನಿ ಮತ್ತು ವಿಜಯನಗರ | ಮಹಮ್ಮದ ಷಾ–3 |
| ಬರ್ಬೋಸ್ | ಪೋರ್ಚುಗಲ್ | ಕೃಷ್ಣದೇವರಾಯ |
| ಪಾಯಸ್ | ಪೋರ್ಚುಗಲ್ | ಕೃಷ್ಣದೇವರಾಯ |
| ನ್ಯೂನಿಸ್ | ಪೋರ್ಚುಗಲ್ | ಅಚ್ಯುತರಾಯ |
| ವರ್ತೆಮಾ | ಇಟಲಿ | ಕೃಷ್ಣದೇವರಾಯ |

**ಮುಹತ್ ಆಸ್ಥಾನಕ್ಕೆ ಭೇಟಿ ನೀಡಿದ ಯೂರೋಪಿಯನ್ನರು**

| | | |
|---|---|---|
| ರಾಲ್ಫ್ ಎಚ್ | 1588 | ಅಕ್ಬರ್ |
| ವಿಲಿಯಂ ಹಾಕಿನ್ಸ್ | 1608 | ಜಹಾಂಗೀರ್ |
| ವಿಲಿಯಂ ಎಚ್ | 1608 | ಜಹಾಂಗೀರ್ |
| ಜಾನ್ ಜೋರ್ಡಿಯನ್ | 1608 | ಜಹಾಂಗೀರ್ |
| ವಾಷಿಂಶಟನ್ | 1612 | ಜಹಾಂಗೀರ್ |
| ಥಾಮಸ್‌ರೋ | 1615 | ಜಹಾಂಗೀರ್ |
| ಟ್ರಾವೆನಿಯರ್ | 1640 | ಶಾಹಜಹಾನ್ |
| ಬರ್ನಿಯರ್ | 1657 | ಔರಂಗಜೇಬ್ |
| ಪೀಟರ್ ಮಂಡಿ | – | ಶಾಹಜಹಾನ |

**downloaded from: www.kpscvaani.com**

**ಪ್ರವಾಸಿಗಳು :**

- **ನಿಕೋಲೋಕೋಟಿ:** ಒಂದನೆಯ ದೇವರಾಯನ ಕಾಲದಲ್ಲಿ ಇಟಲಿಯಿಂದ ಬಂದ ಪ್ರವಾಸಿ, ಅವನು ವಿಜಯನಗರದ ಪಟ್ಟಣವನ್ನು ವರ್ಣಿಸಿದ್ದಾನೆ. ಅವನು ಸತಿ ಪದ್ಧತಿಯ ಬಗ್ಗೆ ಬರೆದಿದ್ದಾನೆ.
- **ಅಬ್ದುಲ್ ರಜಾಕ್:** ಖುರಾಖಾನಿನ ಸುಲ್ತಾನ್ ಷಾರುಕ್‌ನ ರಾಯಭಾರಿಯಾಗಿ ಎರಡನೆಯ ದೇವರಾಯನ ಆಸ್ಥಾನದಲ್ಲಿದ್ದನು. ವಿಜಯನಗರದ ಪಟ್ಟಣವನ್ನು ಆಸ್ಥಾನವನ್ನು ಅವನು ವರ್ಣಿಸಿದ್ದಾನೆ. ಅವನು ಬರೆದ ಗ್ರಂಥ ಮಜ್ಮಹುತ್ ಬಹರೈನ.
- **ಡೋಮಿಂಗೋಸ್ ವಾಯಸ್:** ಅವನು ಕೃಷ್ಣದೇವರಾಯನ ಆಸ್ಥಾನಕ್ಕೆ ಭೇಟಿಕೊಟ್ಟಿದ್ದನು. ಅದು ವಜ್ರಗಳಿಗೆ ಹೆಸರಾಗಿತ್ತು ಎಂದು ಹೇಳಿದ್ದಾನೆ.
- **ನ್ಯೂನಿಜ್:** ಪೋರ್ಚುಗೀಸನಾದ ಈತ ಅಚ್ಯುತರಾಯನ ರಾಜ್ಯಭಾರ ಕಾಲದಲ್ಲಿ ಬಂದಿದ್ದನು. ಅವನು ವಿಜಯನಗರದ ಅರಸರು ಇಲಿಗಳು ಮತ್ತು ಹಲ್ಲಿಗಳನ್ನು ತಿನ್ನುತ್ತಿದ್ದರು ಎಂದು ಬರೆದಿದ್ದಾನೆ.
- **ಬರ್ಬೋಸಾ:** ಪೋರ್ಚುಗೀಸಿನವನಾದ ಇವನು ಕೃಷ್ಣ ದೇವರಾಯನ ಆಸ್ಥಾನಕ್ಕೆ ಭೇಟಿ ನೀಡಿದ್ದನು.
- **ನಿಕಿಟನ್:** (ಕ್ರಿ.ಶ. 1415) ಒಂದನೇ ದೇವರಾಯನ ಕಾಲದಲ್ಲಿ ಭೇಟಿ ಮಾಡಿದ್ದ ರಷ್ಯದ ಯಾತ್ರಿಕ ಅವನು ಭಾರತಕ್ಕೆ ಪಯಣ ಎಂಬ ಗ್ರಂಥವನ್ನು ಬರೆದಿದ್ದಾನೆ.
- **ಬಹುಮನಿ ರಾಜ್ಯ:** ಬಹುಮನಿ ರಾಜ್ಯವನ್ನು ಪ್ರಾರಂಭಿಸಿದವನು ಜಫರ್‌ಖಾನ. ಅವನು ಅಲಾಉದ್ದೀನ್ ಹಸನ್‌ಗೆಂಗು ಬಹುಮನ್‌ಷಾ ಎಂಬ ಬಿರುದನ್ನು ತೆಗೆದುಕೊಂಡನು. ಅವನು ಗುಲ್ಬರ್ಗಾವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅದಕ್ಕೆ ಅಹಸನಾಬಾದ್ ಎಂದು ಹೆಸರಿಟ್ಟನು.
- **ಅಹಮದ್‌ಷಾ ನಾಲಿ:** ಇವನು ರಾಜಧಾನಿಯನ್ನು ಬೀದರ್‌ಗೆ ವರ್ಗಾಯಿಸಿದನು. ಅವನು ವಿಜಯನಗರದ ಮೇಲೆ ಯಶಸ್ವಿ ಯುದ್ಧವನ್ನು ಮಾಡಿದನು. ಮಾಳ್ವದಿಂದ ನಡೆದ ಆಕ್ರಮಣವನ್ನು ಹಿಮ್ಮೆಟ್ಟಿಸಿದನು.
- **ಹುಮಯೂನ್‌ಷಾ:** ಇವನು ಮಹಮದ್ ಗವಾನ್‌ನನ್ನು ತನ್ನ ಪ್ರಧಾನ ಮಂತ್ರಿಯನ್ನಾಗಿ ನೇಮಿಸಿದನು. ಇವನು ಅನೇಕ ಸುಧಾರಣೆಗಳನ್ನು ಜಾರಿಗೆ ತಂದನು.
- **ಸುಲ್ತಾನ್ ಷಂಷುದ್ದೀನ್ ಮಹಮದ್:** ಇವನು ಮಹಮದ್ ಗವಾನ್‌ನನ್ನು ಗಲ್ಲಿಗೇರಿಸಿದನು.
- ಕೊನೆಯ ದೊರೆ ಕಲೀಮುಲ್ಲಾನ ಸಾವಿನ ನಂತರ ಈ ವಂಶ ಕೊನೆಗೊಂಡಿತು.
- ಬಿಜಾಪುರದ ಇಬ್ರಾಹಿಂ ಆದಿಲ್‌ಷಹಾನನ್ನು ಜಗದ್ಗುರು ಎಂದು ಕರೆಯುತ್ತಿದ್ದರು.

**ಪ್ರಾದೇಶಿಕ ವಾಸ್ತು ಕಲೆ:**

- **ಅತರಾಂದೇವಿ ಮಸೀದಿ:** ಇದನ್ನು ಜಾನ್‌ಪುರದಲ್ಲಿ ಇಬ್ರಾಹಿಂಷಾ ಷರ್ಕಿಯು ಕಟ್ಟಿಸಿದನು. ಇದರ ವಿಶೇಷತೆ ಏನೆಂದರೆ ಇದರಲ್ಲಿ ಮಸೀದಿಗಳಲ್ಲಿ ಸುಧಾರಣೆಯಾಗಿರುವ ಗುಮ್ಮಟಗಳಿಲ್ಲ.
- **ಮಾಂಡು:** ಇಲ್ಲಿ ಹುಷಾಂಗಷಹನ ಗೋರಿ ಜಾಮಿ ಮಸೀದಿ, ಹಿಂದೋಳ ಮಹಲ ಮತ್ತು ಜಹಾಜ್ ಮಹಲ್‌ಗಳಿವೆ.
- **ಅದೀನಾ ಮಸೀದಿ:** ಇದನ್ನು ಪಾಂಡುವಾದಲ್ಲಿ ಸಿಕಂದರ ಷಹ ಕಟ್ಟಿಸಿದ.
- **ಛೋಟಾ ಸೋನಾ ಮಸೀದಿ:** ಹುಸೇನ್‌ಷಹನ ಆಡಳಿತದ ಕಾಲದಲ್ಲಿ ಗೌರ್‌ನಲ್ಲಿ ವಾಲಿ ಮಹಮದನು ಕಟ್ಟಿಸಿದನು.
- **ಬಾರಾಸೋನಾ ಮಸೀದಿ:** ಗೌರ್‌ನಲ್ಲಿ ಮಸ್ರತ್‌ಷಹ ಕಟ್ಟಿಸಿದನು.
- **ಜಾಮೀ ಮಸೀದಿ:** ಗುಲ್ಬರ್ಗಾದಲ್ಲಿದೆ.
- **ಮಹಮದ ಗವಾನನ ಕಾಲೇಜು:** ಬೀದರನಲ್ಲಿದೆ.
- **ಗೋಲ್‌ಗುಂಬಜ್:** ಬಿಜಾಪುರದಲ್ಲಿರುವ ಮಹಮದ್ ಆದಿಲ್‌ಷಹನ ಗೋರಿ.
- **ಇಬ್ರಾಹಿಂ ರೋಜಾ:** ಎರಡನೆಯ ಇಬ್ರಾಹಿಂನ ಗೋರಿ. ಇದನ್ನು ದಕ್ಷಿಣ ಭಾರತದ ತಾಜ್‌ಮಹಲ್ ಎಂದು ಕರೆಯಲಾಗುವುದು.

**downloaded from: www.kpscvaani.com**

## ಆರ್ಥಿಕ ಪದ ಪುಂಜಗಳು:

- ಖರಾಜ : ಹಿಂದೂ ಸಾಮಂತರಿಂದ ಮತ್ತು ಭೂಮಾಲೀಕರಿಂದ ವಸೂಲಾಗುತ್ತಿದ್ದ ಭೂಕಂದಾಯ
- ಖಾಲ್ಸಾ : ರಾಜನಿಗೆ ಸೇರಿದ ಭೂಮಿ
- ಇಕ್ತಾಸ್ : ಅನುಯಾಯಿಗಳಿಗೆ ಅದರಲ್ಲೂ ವೈದ್ಯಾಧಿಕಾರಿಗಳಿಗೆ ಬಿಟ್ಟುಕೊಟ್ಟಿರುವ ಭೂಮಿ
- ಖಾಸ್ : ಯುದ್ಧದ ನಂತರ ಲೂಟಿಗಳಿಂದ ಬಂದ ದ್ರವ್ಯ
- ಘರಿ : ಮನೆಗಂದಾಯ
- ಚರೈ : ಗೋಮಾಳದ ಮೇಲಿನ ತೆರಿಗೆ/ಮೇಯಿಸುತ್ತಿದ್ದುದಕ್ಕೆ
- ಕಿಸ್ಮತ್ ಇಖೋಟಿ : ತಮಗಾಗಿಯೇ ವಸೂಲು ಮಾಡಿಕೊಳ್ಳುತ್ತಿದ್ದ ಮುಖ್ಯಸ್ಥರು ಪ್ರಜೆಗಳ ಮೇಲೆ ವಿಧಿಸುತ್ತಿದ್ದ ತೆರಿಗೆ
- ಆಕತ್ತ : ಭಿಕ್ಷೆಗಾಗಿ ಮುಸಲ್ಮಾನರ ಮೇಲೆ ಹಾಕುತ್ತಿದ್ದ ತೆರಿಗೆ
- ಘನಿಮಾ : ಯುದ್ಧದ ಲೂಟಿಯಲ್ಲಿನ ಪಾಲು ಐದರಲ್ಲಿ ನಾಲ್ಕು ಭಾಗ
- ಮುಜಾರಿ : ರೈತ
- ಬಾಲಹಾರ : ಹಳ್ಳಿಯ ಕೀಳು ಕೆಲಸ ಮಾಡುವವ
- ಖುತ್ ಮತ್ತು ಮುಕದ್ದಂ : ಹಳ್ಳಿಯ ಮುಖ್ಯಸ್ಥ
- ಸೋನಧಾರ : ಮಹಮದ್ ಬಿನ್ ತುಘಲಕ್‌ನು ಕೊಟ್ಟ ಸಾಲ
- ವಾಕ್ಸಾ : ಧಾರ್ಮಿಕ ಸಂಸ್ಥೆಗಳಿಗೆ ನೀಡಿದ ಭೂಮಿಯ ಉಂಬಳಿ
- ಮಿಲ್ಕ್ ಅಥವಾ ಇನಾಂ : ನಿರಂತರ ಅನುಭೋಗಕ್ಕಾಗಿ ಕೊಟ್ಟ ಜಮೀನು
- ಖೆತ್ ಬಲ್ಯಾ : ನಿಂತಿರುವ ಬೆಳೆಯ ಮೇಲೆ ನಿಗದಿಪಡಿಸಲಾದ ತೆರಿಗೆ
- ರಾಸ್ ಬಟಾತ : ಹೊಟ್ಟು ತೆಗೆದಿರುವ ಕಾಳು ಅಥವಾ ಧಾನ್ಯ
- ಮಸಾಹತ್ : ಭೂಮಿಯ ಅಳತೆಯ ಮೇಲೆ ಆಧಾರವಾದದ್ದು
- ನಸ್ಕ್ : ಅಂದಾಜಿನ ಮೇಲೆ ನಿಗದಿಯಾದದ್ದು
- ಮುಕ್ತಾಲ್ : ಮಿಶ್ರ ಪದ್ಧತಿ

## *ಸುಲ್ತಾನರು ಉಪಯೋಗಿಸುತ್ತಿದ್ದ ಆಡಳಿತ ಪದ-ಪುಂಜಗಳು*

- ಅಮೀರ್ : ನಲವತ್ತು ಅಮೀರರ ಗುಂಪು ಚಹತ್‌ಗಿನ್ ಎಂದು ಹೆಸರಿತ್ತು. ಇಲ್ತಮಿಷನ ರಾಜ್ಯದಲ್ಲಿ ಅವರು ತುಂಬಾ ಪ್ರಬಲರಾಗಿದ್ದರು. ಬಲ್ಬನ್ನನು ಅವರ ಅಧಿಕಾರವನ್ನು ರದ್ದುಪಡಿಸಿದನು.
- ಮಜ್ಲಿಸ-ಇ-ಖಲ್ವತ್ : ನೆಚ್ಚಿನ ಸ್ನೇಹಿತರ ಮತ್ತು ನಂಬಿಕಸ್ಥ ಅಧಿಕಾರಿಗಳ ಸಮಿತಿ ಈ ಸಮಿತಿ ಸುಲ್ತಾನನಿಗೆ ಸಲಹೆ ಮಾಡುತ್ತಿತ್ತು. ಅದನ್ನು ಒಪ್ಪಲೇಬೇಕೆಂಬ ನಿಯಮವೇನೂ ಇರಲಿಲ್ಲ.
- ವಜೀರ್ : ಅವನು ಪ್ರಧಾನಮಂತ್ರಿ, ಪ್ರಧಾನ ಮಂತ್ರಿ ಕಚೇರಿಯ ಮುಖ್ಯಸ್ಥ ಮುಖ್ಯವಾಗಿ ಖರ್ಚು, ವೆಚ್ಚ, ಆದಾಯಗಳನ್ನು ನೋಡಿಕೊಳ್ಳುತ್ತಿದ್ದರು. ದಿವಾನ-ಇ-ವಿಜಾರತ್ ಎಂಬ ಪ್ರಧಾನ ಮಂತ್ರಿ ಕಚೇರಿ ತುಘ್ಲಕ್‌ರ ಆಡಳಿತದಲ್ಲಿ ತುಂಬಾ ಪ್ರಭಾವ ಶಾಲಿಯಾಗಿತ್ತು.

**downloaded from: www.kpscvaani.com**

- ಮುಸ್ತಾಫಿ–ಇ–ಮಮ್ಮಾಲಿಕ : ಲೆಖ್ಖ ಪತ್ರಗಳ ಮತ್ತು ಖರ್ಚಿನ ವಿಭಾಗದ ಮುಖ್ಯಸ್ಥನಾಗಿದ್ದನು (ಆಡಳಿತ)
- ಮುಫ್ರಿನ್–ಇ–ಮಮ್ಮಾಲಿಕ : ಲೆಖ್ಖ ಪತ್ರಗಳ ಮತ್ತು ಆದಾಯದ ವಿಭಾಗದ ಮುಖ್ಯಸ್ಥ
- ಖಾಸಿನ್ : ಕೋಶಾಧ್ಯಕ್ಷ
- ಮಜಂದಾರ : ಅವನು ಸಾಲಗಳನ್ನು ಕೊಟ್ಟು ಆದಾಯ ವೆಚ್ಚಗಳನ್ನು ಸರಿದೂಗಿಸುತ್ತಿದ್ದನು
- ದಿವಾನ್–ಇ–ವಾಕುಫ್ : ಜಲಾಲುದ್ದೀನ್ ಖಿಲ್ಜೀಯ ಈ ವಿಭಾಗವನ್ನು ಪ್ರಾರಂಭಿಸಿದನು ಆದಾಯ–ಖರ್ಚುಗಳ ಸಂಬಂಧದ ಲೆಖ್ಖಪತ್ರಗಳ ವಿಭಾಗ
- ದಿವಾನ್–ಇ–ಮುಸ್ತಖರಾಜ್ : ಇದನ್ನು ಅಲ್ಲಾಉದ್ದೀನ್ ಖಿಲ್ಜೀಯ ಪ್ರಾರಂಭಿಸಿದನು ಆದಾಯದ ಸಂಗ್ರಹದ ಸಂಬಂಧದ ಇಲಾಖೆ ವಸೂಲಾತಿ ಇಲಾಖೆ
- ಬಾರ್–ಇ–ಖಾಸ್ : ಆಸ್ಥಾನಿಕರನ್ನು ಖಾನ್, ಮಲ್ಲಿಕ್ ಮುಂತಾದವರನ್ನು ಸುಲ್ತಾನನು ಇಲ್ಲಿ ಭೇಟಿ ಮಾಡುತ್ತಿದ್ದನು.
- ಬಾರ್–ಇ–ಆಮ್ : ಸುಲ್ತಾನನು ವಿಚಾರಗಳನ್ನು ನಡೆಸುತ್ತಿದ್ದ ಜಾಗ ಇಲ್ಲಿ ಪ್ರಜೆಗಳಿಂದ ಅಹವಾಲುಗಳನ್ನು ಸ್ವೀಕರಿಸುತ್ತಿದ್ದನು.
- ದಿವಾನ್–ಇ–ರಸಲತ್ : ಮೇಲ್ಮನವಿಗಳ ವಿಭಾಗ
- ದಿವಾನ್–ಇ–ಅರ್ಜ್ : ಸೈನ್ಯದ ಇಲಾಖೆ ಇದರ ಮುಖ್ಯಸ್ಥ ಅರಿಜ್–ಇ–ಮಮ್ಮಾಲಿಕ್
- ದಿವಾನ್–ಇ–ಇನ್ಷಾ : ಪತ್ರ ವ್ಯವಹಾರದ ಇಲಾಖೆ
- ದಿವಾನ್–ಇ–ಬಂದಗನ್ : ಗುಲಾಮರ ಇಲಾಖೆ (ಫಿರೋಜ್ ಷಾ ತುಘಲಕ್)
- ದಿವಾನ್–ಇ–ಅಮೀರಕೋಹಿ : ವ್ಯವಸಾಯದ ಇಲಾಖೆ (ಮಹಮದ ಬಿನ್ ತುಘಲಕ್)
- ದಿವಾನ್–ಇ–ಖೈರತ್ : ಧಾರ್ಮಿಕ ದತ್ತಿ ಇಲಾಖೆ (ಫಿರೋಜ ಷಾ ತುಘಲಕ್)
- ದಿವಾನ್–ಇ–ವಾಜಿರ–ಇ–ಮಮ್ಮಾಲಿಕ್ : ಉಪಪ್ರಧಾನಿ
- ದಿವಾನ್–ಇ–ಇಸ್ತಿಹಿಕಾರ : ದತ್ತಿಗಳು–ದಾನಗಳು ಮತ್ತು ಟಂಕಸಾಲೆಯ ಇಲಾಖೆ
- ಅಮೀರ್–ಇ–ಬೆಹ್ರ್ : ದೋಣಿಗಳ ಇಲಾಖೆ
- ಭಕ್ತಿ–ಇ–ಫಾಜ್ : ಸೇನೆಗಳಿಗೆ ಸಂಬಳ ಕೊಡುವ ಅಧಿಕಾರಿ
- ಖಾಸಿ–ಉಲ್–ಹಜರ್ : ಉಚ್ಚನ್ಯಾಯಾಧೀಶ
- ಮುಫ್ತಿ : ಕಾನೂನು ವಿವರಣೆ ಮಾಡುವವರು– ನ್ಯಾಯವಾದಿಗಳು
- ಕೋಟೆನಾಲ್ : ಶಾಂತಿ ಮತ್ತು ಕಾನೂನು ಸಂರಕ್ಷಕರು
- ಮುಹ್ರಾಸಿಬ್ : ಜನರ ನಡವಳಿಕೆಯ ಮೇಲೆ ನಿಗಾ ಇಟ್ಟಿರುವವರು
- ಬರೀದ್ : ಗುಪ್ತಚರರು
- ವಾಕಿಯಾ–ನಾವಿಸ್ : ಸುದ್ದಿಯ ವರದಿಗಾರರು
- ಅಮಿರ್ : ಜಿಲ್ಲಾ ಆಡಳಿತದ ನಿರ್ವಹಣಾಧಿಕಾರಿ

## ವಿಜಯನಗರದ ಆಡಳಿತ

- ಪ್ರಧಾನಿ : ಪ್ರಧಾನ ಮಂತ್ರಿ
- ದಂಡನಾಯಕ : ತುಂಬಾ ಉನ್ನತ ಅಧಿಕಾರಿಗಳು
- ಮುದ್ರಕರ್ತ : ರಾಜ್ಯದ ನಾಣ್ಯ ಚಲಾವಣೆಯ ಅಧಿಕಾರಿ
- ಕಡಮ್ಮೆ:ಇರ್ಮೈ:ವಾದಿ : ತೆರಿಗೆಯ ವಿವಿಧ ರೂಪಗಳು

**downloaded from: www.kpscvaani.com**

- ಅಠವಣೆ : ಭೂಕಂದಾಯ ಇಲಾಖೆ
- ಖಾಂದಚಾರ : ದಂಡನಾಯಕನ ಅಧೀನದಲ್ಲಿದ್ದ ಸೈನ್ಯ ಇಲಾಖೆ
- ಸೇನಾತೀನ್ಯ : ಗ್ರಾಮಲೆಕ್ಕಿಗ
- ತಳರ : ರಕ್ಷಣಾ ಸಿಬ್ಬಂದಿ ಕಾವಲುಗಾರ
- ಆಯಗರ ವ್ಯವಸ್ಥೆ : ಗ್ರಾಮಗಳ ಆಡಳಿತವನ್ನು ಹನ್ನೆರಡು ಜನ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರು. ಅವರಿಗೆ ಆ ಕೆಲಸಕ್ಕಾಗಿ ಕಂದಾಯವಿಲ್ಲದ ಭೂಮಿ ಅನುಭೋಗಕ್ಕೆ ದೊರೆಯುತ್ತಿತ್ತು.
- ನಾಯಕರ ವ್ಯವಸ್ಥೆ : ರಾಜನು ತನ್ನ ಮೇಲೆ ಅವಲಂಬಿತರಾಗಿದ್ದವರಿಗೆ ಭೂಮಿ ಹಂಚುತ್ತಿದ್ದನು. ಅವರಿಗೆ ಅದನ್ನು ಹೇಗೆ ಬೇಕಾದರೂ ಅನುಭವಿಸುವ ಸ್ವಾತಂತ್ರ್ಯ ಇರುತ್ತಿತ್ತು.
- ಅಮರಂ : ಸೈನ್ಯಕ್ಕೆ ಸೇವೆ ಸಲ್ಲಿಸಬೇಕೆಂದು ಅಥವಾ ಸೈನ್ಯಕ್ಕೆ ಜನರನ್ನು ಒದಗಿಸಬೇಕೆಂದು ಬದ್ಧರಾಗಿದ್ದವರು ಅಮರನಾಯಕರು, ಅವರಿಗೆ ಭೂಮಿಯನ್ನು ಮಾನ್ಯವಾಗಿ ಕೊಡಲಾಗುತ್ತಿತ್ತು. ಅವರಿಗೆ ಅಮರ ನಾಯಕರೆಂದು ಹೆಸರು.
- ಸಾಮ್ರಾಜ್ಯವನ್ನು ವಿವಿಧ ಪ್ರಾಂತ್ಯಗಳಾಗಿ ವಿಂಗಡಿಸಲಾಗಿತ್ತು : ರಾಜ್ಯ, ಮಂಡಲ, ಚಾವಡಿ, ಮುಂತಾಗಿ ಅವುಗಳನ್ನು ಮತ್ತೆ ಉಪವಿಭಾಗಗಳಾಗಿ ವಿಂಗಡಿಸಲಾಗಿತ್ತು. ನಾಡು, ಸೀಮೆ, ಹಳ್ಳಿ, ಸ್ಥಳ ಎಂದ ಕರ್ನಾಟಕದಲ್ಲೂ ತಮಿಳು ಪ್ರದೇಶದಲ್ಲಿ ಕೊಟ್ಟಂ, ಪಾರ್ರು, ನಾಡು, ಪಳ್ಳಿ ಎಂದು ವಿಂಗಡಿಸಲಾಗಿತ್ತು.

## ಸಾಮಾಜಿಕ ಜೀವನ (ವಿಜಯನಗರ ಸಾಮ್ರಾಜ್ಯ)

- ವಿಪುಲು : ಬ್ರಾಹ್ಮಣರು, ಉಪಾಧ್ಯಾಯರು, ಪುರೋಹಿತರು
- ರಾಜಲು : ಕ್ಷತ್ರೀಯರು (ವರ್ತಕರೂ ಸಹ)
- ನಾಲವಜಾತಿಯವರು : ಶೂದ್ರರು
- ವಿಸ್ರವಿನೋದಿನ : ಕುಶಲ ಕರ್ಮಿಗಳು
- ವೇದಂಗೈ : ಬಲಗೈಯವರು
- ಇಡಂಗಲ್ : ಎಡಗೈಯವರು
- ಬೆಸಭಾಗ : ಬಲಾತ್ಕಾರದಿಂದ ಕೂಲಿ ಮಾಡುವವರು–ಉಚಿತವಾಗಿ ಕೆಲಸ ಮಾಡುವವರ ಮೇಲಿನ ಉಸ್ತುವಾರಿ ಅಧಿಕಾರಿ
- ವರಹ : ವಿಜಯನಗರ ಸಾಮ್ರಾಜ್ಯದ ನಾಣ್ಯಗಳು

## *:ಮೊಘಲರು:*

***ಬಾಬರ್:***

- ಕ್ರಿ.ಶ. 1527ರಲ್ಲಿ ಬಾಬರನು ರಾಣಾಸಂಗನನ್ನು ಕನ್ವ ಯುದ್ಧದಲ್ಲಿ ಸೋಲಿಸಿದನು. ಬಾಬರನು ಜೆಹಾದ್ ಘೋಷಿಸಿ ಘಾಸಿ ಎಂಬ ಬಿರುದನ್ನು ಇಟ್ಟುಕೊಂಡನು.
- ಕ್ರಿ.ಶ. 1528ರಲ್ಲಿ ಚಾಂದೋರಿಯ ಮೊದಿನಿ ರಾಯ್‌ನನ್ನು ಸೋಲಿಸಿದನು.
- ಕ್ರಿ.ಶ. 1529ರಲ್ಲಿ ಘಾಘ್ರಾ ಯುದ್ಧದಲ್ಲಿ ಅಫಘನ್‌ರನ್ನು ಸೋಲಿಸಿದನು.

**downloaded from: www.kpscvaani.com**

- ಇವನ ಮರಣಾನಂತರ ಇವನನ್ನು ಆಗ್ರಾದ ಆರಾಂಬಾಗ್‌ನಲ್ಲಿ ಹೂಳಲಾಯಿತು. ನಂತರ ಇವನ ಶವವನ್ನು ಕಾಬೂಲಿಗೆ ಸಾಗಿಸಲಾಯಿತು.
- ಇವನು ತನ್ನ ನೆನಪುಗಳನ್ನು ತುರ್ಕಿಯಲ್ಲಿ ತುಜುಕ್-ಇ-ಬಾಬ್ರಿ ಅಥವಾ ಬಾಬರ್‌ನಾಮಾ ಎಂಬ ಗ್ರಂಥದಲ್ಲಿ ಬರೆದನು.
- ತುಜಕ್-ಇ-ಬಾಬ್ರಿಯನ್ನು ಅಬ್ದುರ್ ರಹೇಂಖಾನ್-ಇ-ಖಾನನು ಪರ್ಶಿಯನ್ ಭಾಷೆಗೆ ಭಾಷಾಂತರಿಸಿದನು.

**ಹುಮಾಯೂನ್:**

- (ಕ್ರಿ.ಶ. 1530-1556) ಹುಮಾಯೂನನು ಬಾಬರ್‌ನ ಉತ್ತರಾಧಿಕಾರಿಯಾಗಿ ಸಿಂಹಾಸನವನ್ನೇರಿದನು. ಇವನ ಸೋದರ ಕುಮಾನನು ಕಾಬುಲ್, ಕಂದಹಾರ್ ಮತ್ತು ಪಂಜಾಬ್‌ಗಳಿಗೆ ಗವರ್ನರ್ ಆಗಿ ನೇಮಿಸಲ್ಪಟ್ಟನು.
- ಇವನು ದಿವಾಪನಾಹ ಹೊಸ ನಗರವನ್ನು ನಿರ್ಮಿಸಿದನು.
- ಕ್ರಿ.ಶ. 1539ರಲ್ಲಿ ಚೌಸನಲ್ಲಿ ಷೇರ್‌ಷಾಹನಿಂದ ಹುಮಾಯೂನನು ಸೋತನು.
- ಇವನು ಮತ್ತೇ ಷೇರ್‌ಷಾಹನಿಗೆ ಕನೌಜ್ ಅಥವಾ ಬಿಲ್‌ಗ್ರಾಮ ಯುದ್ಧದಲ್ಲಿ ಸೋತು ದೆಹಲಿಯನ್ನು ಬಿಟ್ಟು ಓಡಿ ಹೋಗಬೇಕಾಯಿತು.
- ಇವನು ಮತ್ತೇ ಬಂದು 1555ರಲ್ಲಿ ಲಾಹೋರ್‌ನ್ನು ವಶಪಡಿಸಿಕೊಂಡನು. ಕ್ರಿ.ಶ. 1555ರಲ್ಲಿ ಸಿರಹಿಂದ್ ಬಳಿ ಆಫ್ಘನ್‌ರನ್ನು ಸೋಲಿಸಿದನು. 1555ರಲ್ಲಿ ಜುಲೈ 25ರಂದು ತನ್ನ ಕಿರೀಟವನ್ನು ಪುನ: ಧರಿಸಲು ಇವನಿಗೆ ಸಾಧ್ಯವಾಯಿತು. ಕ್ರಿ.ಶ. 1556ರಲ್ಲಿ ಅವನ ಗ್ರಂಥಾಲಯದ ಮೆಟ್ಟಲುಗಳಿಂದ ಬಿದ್ದು ಸಾವನ್ನಪ್ಪಿದನು.

**ಅಕ್ಬರ್ :**

- ಇವನು ಅಮರಕೋಟ್‌ನಲ್ಲಿ ವಿರಾಸಾಲ್ ಅರಮನೆಯಲ್ಲಿ ಹುಟ್ಟಿದನು.
- ಕಲನಗರದಲ್ಲಿ ಹದಿಮೂರು ವರ್ಷದವನಾಗಿದ್ದಾಗ ಇವನು ಪಟ್ಟಾಭಿಷೇಕ ನಡೆಯಿತು. ಬೈರಾಂಖಾನನು ಇವನ ರಾಜಪ್ರತಿನಿಧಿ ಅಂದರೆ ಇವನ ಪರವಾಗಿ ರಾಜ್ಯವನ್ನು ನಡೆಸುತ್ತಿದ್ದನು.
- ಬೈರಾಂಖಾನನ ರಾಜ್ಯಭಾರ 1556ರಿಂದ 1560ರವರೆಗೆ ನಡೆಯಿತು. ಪಾಟನ್‌ನಲ್ಲಿ ಮೂಬಾರಿಕ್‌ಖಾನನು ಅವನನ್ನು ಕೊಂದನು.
- ಅವನ ವಿಧವೆ ಅಕ್ಬರನನ್ನು ಮದುವೆಯಾದಳು. ಬೈರಾಂಖಾನ್ ಅಬ್ದುರ್-ರಹೀಂ-ಖಾನ್-ಇ-ಖಾನಾ.
- ಕ್ರಿ.ಶ. 1581ರಲ್ಲಿ ಮಿರ್ಜಾ ಹಕೀಂನಿಂದ ಕಾಬೂಲನ್ನು ಗೆದ್ದುಕೊಂಡನು. ಕಂದಹಾರನ್ನು 1595ರಲ್ಲಿ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. 1593ರಲ್ಲಿ ಖಾನ್‌ದೇಶ ಅಕ್ಬರನ ವಶವಾಯಿತು. 1600ರಲ್ಲಿ ಚಾಂದ ಬೀಬಿಯ ಪ್ರತಿಭಟನೆ ಇದ್ದರೂ ಅಹಮದ್ ನಗರ ಇವನ ವಶವಾಯಿತು. ಅಕ್ಬರನ ಕೊನೆಯ ಯುದ್ಧ 1601ರಲ್ಲಿ ಅಸಿರ್‌ಘರನ ಮೇಲೆ.
- ಗುಜರಾತಿನ ದಂಗೆಯನ್ನು ಅಡಗಿಸಿದ್ದಕ್ಕಾಗಿ ಅಬ್ದುರ್ ರಹೀಮನಿಗೆ ಖಾನ್-ಇ-ಖಾನಾ ಎಂಬ ಬಿರುದನ್ನು ಕೊಡಲಾಯಿತು.
- ಅಕ್ಬರನು 1563ರಲ್ಲಿ ಯಾತ್ರಿಕರ ಮೇಲಿನ ತೆರಿಗೆಯನ್ನು ತೆಗೆದುಹಾಕಿದನು. 1564ರಲ್ಲಿ ಜೆಸ್ಸಿಯಾ ತಲೆ ಕಂದಾಯವನ್ನು ತೆಗೆದುಹಾಕಿದನು.
- 1575ರಲ್ಲಿ ಧಾರ್ಮಿಕ ಚರ್ಚೆಗಳಿಗಾಗಿ ಇಬಾದತ್-ಖಾನಾವನ್ನು ಕಟ್ಟಿಸಿದನು. ಪುರುಷೋತ್ತಮಹಾಸ (ಹಿಂದು) ಮಹಾರಾಜಿ ರಾನಾ (ಪಾರ್ಸಿ) ಹರಿವಿಜಯ ಸೂರಿ (ಜೈನ) ಮಾನ್ಸರೇಟ್ ಮತ್ತು ಅಕ್ಯಾನಿನಾ (ಕ್ರಿಶ್ಚಿಯನರು) ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದರು.
- ಫೈಜಿಯು ಅಕ್ಬರನ ಹೆಸರಿನಲ್ಲಿ ರಚಿಸಿದ್ದ ಖುತ್ಬಾವನ್ನು 1579ರಲ್ಲಿ ಅಕ್ಬರನು ಓದಿದನು.
- 1579ರಲ್ಲಿ ಮಜಿರ ಘೋಷಣೆ ಆಯಿತು. ಅಕ್ಬರನು ಇಮಾಂ-ಇ-ಆದಿಲ್ ಆದನು. 1582ರಲ್ಲಿ ಧಾರ್ಮಿಕ ಚರ್ಚೆಗಳು ನಿಂತುಹೋದವು. ಇಬಾದತ್ ಖಾನಾ ಮುಚ್ಚಲ್ಪಟ್ಟಿತ್ತು.
- ಕ್ರಿ.ಶ. 1582ರಲ್ಲಿ ತೌಹಿದ್-ಇ-ಇಲಾಹಿ ಪ್ರಾರಂಭವಾಯಿತು.

**downloaded from: www.kpscvaani.com**

- ಅಬುಲ್ ಫಜಲ್‌ನನ್ನು ಬೀರ್‌ಸಿಂಗ ಬುಂಡೆಲಾ ಕೊಲೆ ಮಾಡಿದನು.
- ಆಮಶಂಕೆಯ ಕಾಯಿಲೆಯಿಂದ ಅಕ್ಬರನು ಮರಣ ಹೊಂದಿದನು. ಅವನನ್ನು ಸಿಕಂದಾರಾದಲ್ಲಿ ಹೂಳಲಾಯಿತು.
  - ಅವನ ಆಡಳಿತ ಕಾಲದಲ್ಲಿ ಅವನ ರಾಜ್ಯವನ್ನು 12 ಸುಬೇದಾರ್‌ಗಳಾಗಿ ವಿಂಗಡಿಸಲಾಗಿತ್ತು.

**ಜಹಾಂಗೀರ:**

- ಇವನು ಜೋಧಾ ಬಾಯಿಯ ಮಗ. ಇವನು ಭಗವಾನ್ ದಾಸನ ಮಗಳು ಮಾನಾಬಾಯಿಯನ್ನು ಮದುವೆಯಾದನು. ಅವರ ಮಗ ಖುಸ್ರು.
- ಅವನನ್ನು ಆಗ್ರಾದಲ್ಲಿ 1605ರಲ್ಲಿ ಪಟ್ಟಕ್ಕೆ ಏರಿಸಲಾಯಿತು.
- ಇವನು 1611ರಲ್ಲಿ ಮೆಹರ್ ಉನ್ನಿಸಾಳನ್ನು ಮದುವೆಯಾಗಿ ಅವಳಿಗೆ ನೂರ್‌ಜಹಾನ್ ಎಂದು ಹೆಸರಿಟ್ಟನು. ಅವಳ ತಂದೆ ಗಿಯಾಸ್‌ಸಬೇಗ್‌ನಿಗೆ ಇತ್ಮದುದ್ದೌಲಾ ಎಂಬ ಬಿರುದನ್ನು ಕೊಡಲಾಯಿತು.
- ಕ್ರಿ.ಶ. 1615ರಲ್ಲಿ ಮೇವಾಡದ ಅಮರ ಸಿಂಹನು ವಶವಾದನು. ಮಲಿಕ್ ಅಂಬರನು ಅಹಮದ ನಗರವನ್ನು ವಶಪಡಿಸಿಕೊಳ್ಳಲು ಯಶಸ್ವಿಯಾದನು. 1620 ಜಹಾಂಗೀರ್ ಕಾಂಗ್ರವನ್ನು ವಶಪಡಿಸಿಕೊಂಡನು.
- ಬ್ರಿಟಿಷರು ಅವನ ರಾಜ್ಯಾಡಳಿತ ಕಾಲದಲ್ಲಿ ಮಚಲಿಪಟ್ಟಣಕ್ಕೆ ಭೇಟಿಕೊಟ್ಟರು. ಕ್ಯಾಪ್ಟನ್ ಹಾಕಿನ್ಸ್ ಮತ್ತು ಥಾಮಸ್‌ರೋ ಅವನ ಆಸ್ಥಾನಕ್ಕೆ ಭೇಟಿ ನೀಡಿದರು.
- ಸಿಖ್ಖರ ಐದನೆಯ ಗುರು ಅರ್ಜುನನಿಗೆ ದಂಗೆಯೆದ್ದ ರಾಜಕುಮಾರ ಖುಸ್ರುವಿಗೆ ಬೆಂಬಲ ನೀಡಿದ್ದಕ್ಕಾಗಿ ಮರಣದಂಡನೆ ವಿಧಿಸಿದನು.
- 1622ರಲ್ಲಿ ಕಂದಹಾರವನ್ನು ಪರ್ಶಿಯದ ಷಾ ಅಬ್ಬಾಸನಿಂದ ವಶಮಾಡಿಕೊಳ್ಳಲಾಯಿತು.

**ಷಾಜಹಾನ್ :**

- (1627–58) ಷಹಜಹಾನನು ಜಹಾಂಗೀರನ ಉತ್ತರಾಧಿಕಾರಿಯಾದನು. ಇವನ ತಾಯಿ ಜಗತ್ತ ಗೇಸಾಯ್. ಇವನು ಚಿಕ್ಕವನಾಗಿದ್ದಾಗ ಇವನ ಹೆಸರು ಖುರ್ರಂ.
- ಕ್ರಿ.ಶ. 1607ರಲ್ಲಿ ಜಹಾಂಗೀರನು ಇವನಿಗೆ 8000 ಮನ್‌ಸಭ್ ಕೊಟ್ಟಿದ್ದನು.
- ಕ್ರಿ.ಶ. 1612ರಲ್ಲಿ ಇವನು ಅರ್ಜುಮಾನಂದ್ ಬಾನು ಬೇಗಂಳನ್ನು ಮದುವೆಯಾದನು. ಇವಳು ನಂತರ ಮಮ್ತಾಜ್ ಮಹಲ್ ಎಂದು ಪ್ರಸಿದ್ಧಳಾದಳು.
- 1632ರಲ್ಲಿ ಇವನು ಪೋರ್ಚುಗೀಸರನ್ನು ಹೂಗ್ಲಿ ಬಳಿ ಸೋಲಿಸಿದನು.
- 1636ರಲ್ಲಿ ಇವನು ಅಹಮದ್‌ನಗರವನ್ನು ವಶಪಡಿಸಿಕೊಂಡನು.
- ಷಾಜಹಾನನ ಆಡಳಿತವನ್ನು ಫ್ರೆಂಚ್ ಪ್ರವಾಸಿಗಳಾದ ಬರ್ನಿಯರ್ ಮತ್ತು ಟಾವರ್ನಿಯರ್ ಮತ್ತು ಇಟಲಿಯ ಪ್ರವಾಸಿ ಮನುಸಿ ಬಣ್ಣಿಸಿದ್ದಾರೆ. ಷಹಜಹಾನನ ಕಾಲದಲ್ಲಿ ಬಂದಿದ್ದ ಕ್ಷಾಮದ ಬಗ್ಗೆ ಮುಂಡಿಯು ವರ್ಣಿಸಿದ್ದಾನೆ.
- ಕ್ರಿ.ಶ. 1638ರಲ್ಲಿ ಕಂದಾಹಾರ್‌ನಲ್ಲಿದ್ದ ಪರ್ಶಿಯದ ಗವರ್ನರ್ ಆಲಿಮರ್ದನ್‌ಖಾನ್ ಕೋಟೆಯನ್ನು ಮೊಘಲರಿಗೆ ಒಪ್ಪಿಸಿ ಮತ್ತೇ 1649ರಲ್ಲಿ ಇದನ್ನು ಪರ್ಶಿಯನರು ಪಡೆದುಕೊಂಡರು.

**ಔರಂಗಜೇಬ್:**

- ಷಹಜಹಾನನ ಮರಣದ ನಂತರ ಶೂಜಾ ತಾನೇ ಚಕ್ರವರ್ತಿ ಎಂದು ರಾಜಮಹಲ್‌ನಲ್ಲಿ ಘೋಷಿಸಿಕೊಂಡನು. ಅವನನ್ನು ದಾರಾನ ಮಗನಾದ ಸುಲೇಮಾನ್‌ಸಿಕೋ ಸೋಲಿಸಿದನು.
- ಮುರಾದನು ಅಹ್ಮದಾಬಾದಿನಲ್ಲಿ ಕಿರೀಟ ಧಾರಣೆ ಮಾಡಿದನು. ಮುರಾದ ಮತ್ತು ಔರಂಗಜೇಬರು ರಾಜ್ಯವನ್ನು ಹಂಚಿಕೊಳ್ಳಲು ಒಪ್ಪಂದ ಮಾಡಿಕೊಂಡರು.
- ಔರಂಗಜೇಬ್ ಮತ್ತು ಮುರಾದರು 1658ರಲ್ಲಿ ಧಾರಾಮತ್‌ನಲ್ಲಿ ಜಸವಂತ್‌ಸಿಂಗ್ ಮತ್ತು ಕಾಸಿಂಖಾನರನ್ನು ಸೋಲಿಸಿದರು. ಅವರು ಮತ್ತೆ ದಾರಾನನ್ನು ಸಾಮುಘರ್‌ನಲ್ಲಿ ಸೋಲಿಸಿದರು. ಈ ಯುದ್ಧ ಉತ್ತರಾಧಿಕಾರದ ಪ್ರಶ್ನೆಯನ್ನು ಹೆಚ್ಚು ಕಡಿಮೆ ಬಿಡಿಸಿದಂತೆಯೇ ಆಯಿತು.
- ಕ್ರಿ.ಶ. 1659ರಲ್ಲಿ ಔರಂಗಜೇಬನು ಶೂಜಾನನ್ನು ಖಜನಾಹ್‌ನಲ್ಲಿ ಸೋಲಿಸಿದನು.

**downloaded from: www.kpscvaani.com**

- ಕ್ರಿ.ಶ. 1659ರಲ್ಲಿ ದೇವ್‌ರಾಯದೌರನಲ್ಲಿ ದಾರಾನನ್ನು ಔರಂಗಾಬಾದನಲ್ಲಿ ಔರಂಗಜೇಬನು ಸೋಲಿಸಿದನು. ದಾರಾನನ್ನು ಹುಮಾಯೂನನ ಗೋರಿಯ ಬಳಿ ಹೂಳಲಾಯಿತು.
- ದೌರ ಯುದ್ಧದ ನಂತರ ಔರಂಗಜೇಬನ ಎರಡನೇ ಪಟ್ಟಾಭಿಷೇಕ ನಡೆಯಿತು. ಷಹಜಹಾನನು 1666ರಲ್ಲಿ ಮರಣ ಹೊಂದಿದ್ದನು. ಔರಂಗಜೇಬನು 1659ರಲ್ಲಿ ಮರಣ ಹೊಂದಿದನು. ಔರಂಗಜೇಬನು 1659ರಲ್ಲಿ ಅಲಂಗೀರ್ ಎಂಬ ಬಿರುದನ್ನು ಧರಿಸಿದನು.
- ಕ್ರಿ.ಶ. 1662ರಲ್ಲಿ ಔರಂಗಜೇಬನ ಸೇನಾಧಿಪತಿಗಳಲ್ಲಿ ಅತ್ಯಂತ ಸಮರ್ಥವಾದ ಮೀರ್‌ಜುಮ್ಲಾ ಮೇಲೆ ಧಾಳಿ ನಡೆಸಿದನು. ಅನುಕೂಲಕರ ಶಾಂತಿ ಒಪ್ಪಂದ ಆಗಿದ್ದರೂ ಈ ಯುದ್ಧದಲ್ಲಿ ಮೊಘಲರಿಗೆ ತುಂಬಾ ನಷ್ಟವಾಗಿತ್ತು. 1663ರಲ್ಲಿ ಡಾಕ್ಕಾಕ್ಕೆ ಹಿಂದಿರುಗುತ್ತಿದ್ದಾಗ ಮೀರ್‌ಜುಮ್ಲಾ ಸತ್ತುಹೋದನು. ಕೇವಲ ಸ್ವಲ್ಪ ಸಮಯದ ನಂತರ ಅಹೋಮರು ನಾಮರೂಪವನ್ನು ಪುನ: ಆಕ್ರಮಿಸಿಕೊಂಡರು.
- ಷಯಿಸ್ತಖಾನನು ಪೋರ್ಚುಗೀಸ್ ಹಡಗು ಕಳ್ಳರನ್ನು ಅಡಗಿಸಿ ಸೋನಾದೀಪ್ ಮತ್ತು ಚಿತ್ತಗಾಂಗ್ ದ್ವೀಪಗಳನ್ನು ವಶಕ್ಕೆ ತೆಗೆದುಕೊಂಡನು.
- ಕ್ರಿ.ಶ. 1667ರಲ್ಲಿ ಅಕ್ಮಲ್‌ಖಾನ್‌ನ ನಾಯಕತ್ವದಲ್ಲಿ ಆಫ್ರಿದಿಗಳು ದಂಗೆಯೆದ್ದರು.
- ಖುಷ್-ಹಲ್‌ಖಾನನ ನೇತೃತ್ವದಲ್ಲಿ ಖಟ್ಟಕರು ಶಸ್ತ್ರಸಜ್ಜಿತರಾಗಿ ದಂಗೆಯೆದ್ದರು.
- ಹನ್ನೊಂದನೆಯ ವರ್ಷದಲ್ಲಿ ಝುರೋಕಾ ದರ್ಶನ ಪದ್ಧತಿಯನ್ನು ರದ್ದುಗೊಳಿಸಿದನು. ಹನ್ನೆರಡನೆಯ ವರ್ಷದಲ್ಲಿ ಚಕ್ರವರ್ತಿಯನ್ನು ಬಂಗಾರದಲ್ಲಿ ತೂಗುವ ಪದ್ಧತಿಯನ್ನು ನಿಲ್ಲಿಸಿದನು. ಜ್ಯೋತಿರ್ವಿಜ್ಞಾನಿಗಳನ್ನು ಜ್ಯೋತಿಷಿಗಳನ್ನು ರದ್ದು ಮಾಡಿದನು. ತನ್ನ ನಾಣ್ಯಗಳಲ್ಲಿ ಕಲಿಮಾ ಉಪಯೋಗಿಸುವುದನ್ನು ನಿಷೇಧಿಸಿದನು. ನಾರೋಜ್ ಅನ್ನು ನಿರ್ಬಂಧಿಸಿದನು.
- ಔರಂಗಜೇಬನನ್ನು ದರ್ವೇಶ್ ಎಂದು ಜಿಂದಾಪೀರ್ ಎಂದು ಕರೆಯುತ್ತಿದ್ದರು. ಅವನು ಸತಿ ಪದ್ಧತಿಯನ್ನು ನಿಷೇಧಿಸುತ್ತಿದ್ದನು.
- 1679ರಲ್ಲಿ ಜೆಸಿಯಾ ತಲೆ ಕಂದಾಯವನ್ನು ಪುನ: ಹಾಕಿದನು.
- ಸಾಮ್ರಾಜ್ಯದ ವಿರುದ್ಧ ಮೊದಲ ಪ್ರತಿಕ್ರಿಯೆ 1679ರಲ್ಲಿ ಗೋಕಲ ಎನ್ನುವವನ ನಾಯಕತ್ವದಲ್ಲಿ ಜಾಲರ ದಂಗೆ ನಡೆಯಿತು. 1685ರಲ್ಲಿ ಅವರು ಮತ್ತು ರಾಜಾರಾಮನ ನಾಯಕತ್ವದಲ್ಲಿ ದಂಗೆಯೆದ್ದರು. ರಾಜಾರಾಮನು ಸಿಕಂದರಾದಲ್ಲಿ ಅಕ್ಬರನ ಗೋರಿಯನ್ನು ಲೂಟಿ ಮಾಡಿದನು. ನಂತರ ಚುರಾಮನ್ ಸಹ ದಂಗೆ ಎದ್ದನು.
- 1672ರಲ್ಲಿ ಸತ್ನಾಮಿಗಳು ಮತ್ತೆ ದಂಗೆ ಎದ್ದರು. ಅವರು ಮೊದಲು ಮೆವಾತ್ ಮತ್ತು ನರ್ನೌತ್‌ನಲ್ಲಿದ್ದ ಹಿಂದೂ ಭಕ್ತರಾಗಿದ್ದರು ತುಂಬ ಸಾಧು ಸ್ವಭಾವದವರಾಗಿದ್ದರು. ಅವರು ವ್ಯವಸಾಯ ಮತ್ತು ವ್ಯಾಪಾರಗಳಲ್ಲಿ ತೊಡಗಿದ್ದವರು. ಈ ದಂಗೆಗೆ ಪ್ರಚೋದನೆಯಾದುದು ಮುಘಲ್ ಕಾಲಾಳು ಒಬ್ಬನಿಂದ ಸತ್ನಾಮಿಯೊಬ್ಬನಿಂದ ಕೊಲೆಯಾದುದು.
- ಸಿಖ್ಖರು ಗುರುನಾನಕನಿಂದ ಸ್ಥಾಪಿತವಾದ ಒಂದು ಧಾರ್ಮಿಕ ಪಂಥ ಅವನ ನಂತರ ಗುರು ಅಂಗದ್ ಮತ್ತು ಗುರು ಅಮರಸರು ಬಂದರು. ಅನಂತರ ಬಂದ ಸಿಖ್ಖರ ಗುರು ರಾಮದಾಸ್. ಅಕ್ಬರನು ಈ ಗುರುವಿನ ಬಗ್ಗೆ ತುಂಬಾ ಗೌರವವನ್ನಿಟ್ಟುಕೊಂಡಿದ್ದನು. ಅಕ್ಬರನು ಅಮೃತಸರದಲ್ಲಿ ಒಂದಷ್ಟು ಭೂಮಿಯನ್ನು ಕೊಟ್ಟನು. ಅದರಲ್ಲಿಯೇ ನಂತರದಲ್ಲಿ ಪ್ರಸಿದ್ಧ ಸಿಖ್ಖರ ದೇವಾಲಯ ಬಂಗಾರದ ದೇವಸ್ಥಾನ ನಿರ್ಮಿವಾಯಿತು.
- ಗುರು ಅರ್ಜುನದೇವ (1581–1606) ಆದಿ ಗ್ರಂಥವನ್ನು ಸಂಗ್ರಹಿಸಿದವರು. ಅವರು ರಾಜಕುಮಾರ ಖುಸ್ರುವಿಗೆ ಬೆಂಬಲ ಕೊಟ್ಟಿದ್ದರಿಂದ ಕುಪಿತನಾದ ಜಹಾಂಗೀರನು 1606ರಲ್ಲಿ ಗುರುವನ್ನು ಕೊಲ್ಲಿಸಿದನು.
- ಗುರು ಹರಗೋವಿಂದ (1606–45) ಒಂದು ಸಣ್ಣ ಸೈನ್ಯವನ್ನು ತನ್ನ ಸುತ್ತ ಕಟ್ಟಿಕೊಂಡನು. ಅವನು ಅಮೃತಸರದ ಬಳಿ ಸಂಗಮದಲ್ಲಿ ಒಂದು ಮೊಗಲ್ ಸೈನ್ಯವನ್ನು ಸೋಲಿಸಿದನು. 1634ರಲ್ಲಿ ತನ್ನ ಕೇಂದ್ರವನ್ನು ಕಿರಾತಪುರಕ್ಕೆ ಬದಲಾಯಿಸಿದನು.
- ಅವರ ನಂತರ ಹರ್‌ರಾಯ್ ಮತ್ತು ಹರ್‌ಕಿಷನ್ ಸಿಖ್ಖರ ಗುರುಗಳಾದರು. ಇವರ ನಂತರ ತೇಗ ಬಹದ್ದೂರ ಸಿಖ್ಖರ ಗುರು ಆದರು. ಅವರನ್ನು 1675ರಲ್ಲಿ ಔರಂಗಜೇಬನು ಮರಣದಂಡನೆಗೆ ಈಡುಮಾಡಿದನು.

**downloaded from: www.kpscvaani.com**

- ಗುರುಗೋವಿಂದಸಿಂಗನು ಶುದ್ಧೀಕರಣ ಅಥವಾ ಜ್ಞಾನ ಸ್ನಾನದ (ಸಹುತ) ಪದ್ಧತಿಯನ್ನು ಜಾರಿಗೆ ತಂದನು. ಅದನ್ನು ಮಾಡಿಸಿಕೊಂಡವರನ್ನು ಖಾಲ್ಸಾ ಎಂದು ಕರೆಯಲಾಗುತ್ತಿತ್ತು. ಕ್ರಿ.ಶ. 1708ರಲ್ಲಿ ನಂದೂರ್‌ನಲ್ಲಿ ಅಫ್ಘನ್‌ನೊಬ್ಬನು ಅವರನ್ನು ಇರಿದುಕೊಂದನು.
- ಕಪೂರ್‌ಸಿಂಗ್ ದಲ್ ಖಾಲ್ಸಾವನ್ನು ಪ್ರಾರಂಭಿಸಿದನು.
- ಔರಂಗಜೇಬನ ರಜಪುತ್ ನೀತಿಯಿಂದ ರಜಪೂತರು ದೂರವಾದರು, ಜಸವಂತಸಿಂಗನ ಮರಣದ ನಂತರ, ಔರಂಗಜೇಬನು ಜೋಧಪುರದ ಟಿಕಾವನ್ನು ಜಸವಂತಸಿಂಗನ ಸೋದರಳಿಯ ಇಂದರ ಸಿಂಗ್‌ನಿಗೆ ಕೊಟ್ಟನು. 1698ರಲ್ಲಿ ಅಜಿತ್‌ಸಿಂಗನನ್ನು ಮೇವಾಡದ ಅರಸನನ್ನಾಗಿ ಅಂಗೀಕರಿಸಲಾಯಿತು.
- ಔರಂಗಜೇಬನ ದಖ್ಖನ್ನಿನ ನೀತಿಯನ್ನು ನಾಲ್ಕು ಭಾಗಗಳಲ್ಲಿ ವಿಂಗಡಿಸಬಹುದು. ಮೊದಲನೆಯ ಭಾಗ (1658ರಿಂದ 1668)ವನ್ನು ಜೈಸಿಂಗನು ರೂಪಿಸಿದನು. ಮೊಗಲರು 1665ರಲ್ಲಿ ಬಿಜಾಪುರಕ್ಕೆ ಮುತ್ತಿಗೆ ಹಾಕುವುದರಲ್ಲಿ ಯಶಸ್ವಿಯಾಗಲಿಲ್ಲ. ಜೈಸಿಂಗನು 1667ರಲ್ಲಿ ಮರಣ ಹೊಂದಿದನು. ಆದರೆ ಷೋಲಾಪುರವನ್ನು ಲಂಚಕೊಟ್ಟು ವಶಪಡಿಸಿಕೊಂಡ.
- ಎರಡನೆಯ ಭಾಗ 1668ರಿಂದ 1684ರವರೆಗಿನದು. ಇದು ಗೋಲ್ಕೊಂಡ, ಶಿವಾಜಿ ಮತ್ತು ಬಿಜಾಪುರಗಳು ಮಾಡಿಕೊಂಡ ತ್ರಿಪಕ್ಷ ಒಪ್ಪಂದದಿಂದ ಅಯಶಸ್ವಿಯಾಯಿತು. ಈ ತ್ರಿಪಕ್ಷ ಒಪ್ಪಂದದಲ್ಲಿ ಮಾದಣ್ಣ ಮತ್ತು ಅಕ್ಕಣ್ಣರು ತುಂಬಾ ಪ್ರಮುಖ ಪಾತ್ರವಹಿಸಿದರು.
- ಮೂರನೆಯ ಭಾಗದಲ್ಲಿ ಬಿಜಾಪುರ 1686ರಲ್ಲಿ ಮತ್ತು ಗೋಲ್ಕೊಂಡ 1687ರಲ್ಲಿ ಕೈವಶವಾಯಿತು.
- ನಾಲ್ಕನೆಯ ಭಾಗದಲ್ಲಿ ಸಂಗಮೇಶ್ವರದಲ್ಲಿ ಸಂಬಾಜಿಯನ್ನು ಹಿಡಿದದ್ದು ಮತ್ತು ಅಲ್ಲಿಯೇ ಅವನ ಕೊಲೆ ಮಾಡಿದ್ದು ಸೇರಿವೆ.

**ಮೊಘಲರ ಆಡಳಿತ :**

- 1570ರಲ್ಲಿ ಪ್ರಾರಂಭವಾದ ಮನಸಬ್ದಾರಿ ವ್ಯವಸ್ಥೆ ಸೈನ್ಯವನ್ನು ಮತ್ತು ಭೂಮಾಲೀಕ ವರ್ಗವನ್ನು ಸಂಘಟಿಸುವುದಕ್ಕೆ ಮಾಡಿದ್ದಾಗಿತ್ತು. ಮನಸಬ್ದಾರರಲ್ಲಿ ಒಟ್ಟು 66 ದರ್ಜೆಗಳಲ್ಲಿರಬೇಕೆಂದಿದ್ದರೂ ವಾಸ್ತವವಾಗಿ ಇದ್ದುದು 33 ಮಾತ್ರ.
- ಮನಸಬ್ದಾರ ಎಂದರೆ ಒಂದು ಅಂತಸ್ತನ್ನು ಹೊಂದಿರುವವರು ಎಂದರ್ಥ. ಇದರಲ್ಲಿ ಎರಡು ಬಗೆಯದು. ಅವುಗಳಿಂದ ಅವರ ದರ್ಜೆ ನಿಗದಿಯಾಗುತ್ತಿತ್ತು. ಜಾಟನಿಂದ ಮನಸಬ್ದಾರರಲ್ಲಿ ಅವರ ಅಂತಸ್ತು ಮತ್ತು ಆಡಳಿತದ ಮೆಟ್ಟಿಲು ಮೆಲ್ಮಟ್ಟದ ವ್ಯವಸ್ಥೆಯಲ್ಲಿ ಅವರ ಸ್ಥಾನ ನಿಗದಿತವಾಗುತ್ತಿತ್ತು. ಪವಾರ ಎಂಬುದು ಮನಸುಬ್ದಾರರು ಹೊಂದಿದ್ದ ಸೈನ್ಯದ ಸಂಖ್ಯೆಯನ್ನು ಅವಲಂಬಿಸಿತ್ತು.
- ಇನ್ನೊಂದು ವಿಂಗಡಣೆಯಲ್ಲಿ 500 ಅಥವಾ ಅದಕ್ಕೂ ಕಡಿಮೆ ಜಾಟಗಳ ಸ್ತರವನ್ನು ಹೊಂದಿದ್ದವರು ಮನಸಬ್ದಾರ ಎಂದು ಕರೆಯಲ್ಪಡುತ್ತಿದ್ದರು. ಜಾಟಸ್ತರ 500ರಿಂದ 2500ರವರೆಗೂ ಇದ್ದವರು ಅಮೀರ್ ಎಂದು ಕರೆಸಿಕೊಳ್ಳುತ್ತಿದ್ದರು ಅಮಿರ್–ಇ–ಉಮ್ದಾ ಎಂದು ಕರೆಯಲ್ಪಡುತ್ತಿದ್ದರು.
- ಪ್ರತಿಯೊಬ್ಬ ಸವಾರನಿಗೂ ಮನಸಬ್ದಾರನು ಎರಡು ಕುದುರೆಗಳನ್ನು ಸಾಕಬೇಕಾಗುತ್ತಿತ್ತು. ಕುದುರೆಗಳ ಆರು ವಿಂಗಡಣೆ ಮತ್ತು ಹೊಸತರ ಕತ್ತೆಗಳ ಐದು ವಿಂಗಡಣೆ ಇದ್ದಿತ್ತು.
- ಅಹಾದಿಗಳು ಎಂದರೂ ಸಾರ್ವಜನಿಕರಾಗಿದ್ದು ಗೌರವಸ್ಥರಾಗಿದ್ದು ಸೈನಿಕರಾಗಿದ್ದವರು. ಜಹಾಂಗೀರನು ದೌಸ್ಸಾ ಸಿಹ್‌ಅಸ್ಪಾ ವ್ಯವಸ್ಥೆಯನ್ನು ಜಾರಿಗೆ ತಂದನು. ಪವಾರರ ಸರಾಸರಿ ವೇತನವನ್ನು ಅವನು ಕಡಿಮೆ ಮಾಡಿದನು.
- ಷಹಜಹಾನನು ತಿಂಗಳ ಸಂಬಳದ ವೇತನಪಟ್ಟಿಯನ್ನು ಜಾರಿಗೆ ತಂದನು.

**ಭೂಕಂದಾಯ:**

- ಅಕ್ಬರನ ಕಾಲದಲ್ಲಿ ದೇಶದಲ್ಲಿ ಮೂರು ತರಹದ ಭೂಮಿ ಇದ್ದಿತ್ತು. 1) ಖಾಲ್ಸಾ ಅಥವಾ ರಾಜನಿಗೆ ಸೇರಿದ ಭೂಮಿ 2) ಜಾಗೀರ ಭೂಮಿ, ಶ್ರೀಮಂತರು, ಆಢ್ಯರು ಮುಂತಾದವರಿಗೆ ಸೇರಿದ್ದ, ಭೂಕಂದಾಯವನ್ನು ಅವರು ವಸೂಲಿ ಮಾಡಿ ಅದರಲ್ಲಿನ ಒಂದು ಭಾಗವನ್ನು ಕೇಂದ್ರ ಸರ್ಕಾರಕ್ಕೆ ಕಳಿಸುತ್ತಿದ್ದರು. 3) ಸಯೂತ್‌ಘಲ್ ಭೂಮಿ ಇದನ್ನು ಉಚಿತವಾಗಿ ಕೊಡಲಾಗುತ್ತಿತ್ತು.

**downloaded from: www.kpscvaani.com**

- ಮೊಘಲರ ಭೂಕಂದಾಯವೆಂದರೆ ಬೆಳೆಯ ಮೇಲಿನ ತೆರಿಗೆಯ ಹೊರತು ಭೂಮಿಯ ಮೇಲಿನ ತೆರಿಗೆಯಾಗಲಿ, ಅದಕ್ಕೆ ಬಾಡಿಗೆಯಾಗಲಿ ಆಗಿರಲಿಲ್ಲ.
- ನಸ್ಕ್ ಅಥವಾ ಕಂಕಟ ಎಂದರೆ, ಭೂಕಂದಾಯವನ್ನು ವಸೂಲು ಮಾಡುವ ಪದ್ಧತಿಯಾಗಿತ್ತು. ಇದರಲ್ಲಿ ಸರ್ಕಾರಿ ಅಧಿಕಾರಿಗಳು ಬೆಳೆಯನ್ನು ಅಂದಾಜು ಮಾಡುತ್ತಿದ್ದರು. ಆ ಅಂದಾಜಿನ ಮೇಲೆ ತೆರಿಗೆ ನಿರ್ಧಾರವಾಗುತ್ತಿತ್ತು.
- ಮುಕ್ತ ಪದ್ಧತಿ ಇದು ನಿರ್ಧರಿತವಾದ ನಿಖರ ತೆರಿಗೆ ಇದನ್ನು ನಗದಿನ ರೂಪದಲ್ಲೇ ಕೊಡಲಾಗುತ್ತಿತ್ತು.
- ತೋದರಮಲ್ ಮತ್ತು ಮುಜಫರಖಾನ್ ತುರ್ಬಾತಿ ಇಬ್ಬರೂ ಪ್ರಮುಖ ಕಂದಾಯದ ಅಧಿಕಾರಿಗಳಾಗಿದ್ದರು.
- ದಹಪಾಲಾ ಪದ್ಧತಿ: ಇದಕ್ಕೆ ಜಬ್ತಿ ಪದ್ಧತಿ ಎಂದು ಹೆಸರಾಗಿತ್ತು. ಇದೇ ಪದ್ಧತಿಯನ್ನು ಈಸ್ಟ್ ಇಂಡಿಯಾ ಕಂಪೆನಿಯವರು ರೈತವಾರಿ ಪದ್ಧತಿಯಲ್ಲೂ ಅನುಸರಿಸಿದರು. ಈ ಪದ್ಧತಿಯಲ್ಲಿ ಪ್ರತಿಯೊಂದು ವರ್ಗದ ಜಮೀನಿನಲ್ಲೂ ಸರಾಸರಿ ಬೆಳೆಯನ್ನು ಒಂದು ಭಾಗಕ್ಕೆ ಇಷ್ಟು ಎಂದು ನಿಗದಿಪಡಿಸಲಾಗಿತ್ತು. ಈ ಸರಾಸರಿಯನ್ನು ಹತ್ತು ವರ್ಷದ ಬೆಳೆಯ ಆಧಾರದ ಮೇಲೆ ನಿರ್ಧಾರಪಡಿಸಲಾಗುತ್ತಿತ್ತು. ಪ್ರತಿಯೊಂದು ಬೆಳೆಗೂ ಈ ರೀತಿ ನಿರ್ಧರಿತವಾದ ಭಾಗಕ್ಕೆ ಇಷ್ಟು ಸರಾಸರಿ ಎಂಬ ಆಧಾರದ ಮೇಲೆ ಉತ್ಪನ್ನವನ್ನು ನಿರ್ಧರಿಸಿ ಅದರ ಮೂರನೆಯ ಒಂದು ಭಾಗವನ್ನು ಸರ್ಕಾರದ ತೆರಿಗೆ ಎಂದು ನಿಗದಿಯಾಗುತ್ತಿತ್ತು. ಕಂದಾಯವನ್ನು ಬೆಳೆಯ ರೂಪದಲ್ಲಿ ನಿರ್ಧರಿಸಲಾಗಿದ್ದರೂ, ಅದರ ಸರ್ಕಾರ ನಿಗದಿಪಡಿಸಿದ್ದ ಬೆಲೆಯ ಆಧಾರದ ಮೇಲೆ ನಗದನ್ನು ಕೊಡಬಹುದಾಗಿತ್ತು.
- ಭೂಮಿಯ ಅಳತೆಯನ್ನು ಮೊದಲು ಮಾಡುತ್ತಿದ್ದ ಜರಿಬ್ ಪದ್ಧತಿಯ ಹಗ್ಗದಿಂದ ಅಳೆಯುವ ಪದ್ಧತಿಯನ್ನು ಬದಲಾಯಿಸಿ, ಕಬ್ಬಿಣದ ಉಂಗುರಗಳಿಂದ ಹಿಡಿಯಲ್ಪಟ್ಟ ಬೊಂಬುಗಳಿಂದ ಅಳೆಯುವ ಪದ್ಧತಿ ಶುರುವಾಯಿತು. ಅಳತೆಯ ಪ್ರಮಾಣ ಇಲ್ಲಾಹಿ ಗಜದಲ್ಲಿತ್ತು.
- ಪೋಲಜ್ ಭೂಮಿ ಎಂದರೆ ವರ್ಷಕ್ಕೆ ಎರಡು ಬೆಳೆಗಳನ್ನು ತೆಗೆಯುತ್ತಿದ್ದಂತಹ ಭೂಮಿ.
- ಸರೋತಿ ಭೂಮಿಯನ್ನು ಬೆಳೆಯ ನಂತರ ಒಂದು ವರ್ಷ ಏನು ಬೆಳೆಯದೆ ಬಿಡಬೇಕಾಗುತ್ತಿತು.
- ಚಚಾರ್ ಭೂಮಿಯನ್ನು ಮೂರು ಅಥವಾ ನಾಲ್ಕು ವರ್ಷಕ್ಕೊಮ್ಮೆ ಫಸಲು ತೆಗೆಯಲಾಗುತ್ತಿತ್ತು.
- ಬಂಜರು ಭೂಮಿ ಎಂದರೆ ವ್ಯವಸಾಯಕ್ಕೆ ಯೋಗ್ಯವಲ್ಲದ್ದು.
- ನಾನಕರ: ಫಸಲಿನ ಹತ್ತನೆಯ ಒಂದು ಭಾಗವನ್ನು ಜಮೀನ್ದಾರನಿಗೆ ಕೊಡಬೇಕಾಗಿತ್ತು. ಇದಕ್ಕೆ ನಾನಕರ ಎಂದು ಹೆಸರಿತ್ತು.
- ಮಲಿಕಾನಾ: ಇದು ತೆರಿಗೆಗಳಿಗೆ ಮತ್ತು ಕಳೆದುಕೊಂಡ ಸವಲತ್ತುಗಳಿಗೆ ಬೇರೆ ಇಡುತ್ತಿದ್ದ ಶೇಕಡಾ 25 ಭಾಗ.
- ಮುಜೇರಿಯನ್: ಕೆಳಜಾತಿ ವರ್ಗಗಳಿಗೆ ಸೇರಿದ ಭೂಮಿರಹಿತ ಕೂಲಿಗಾರರು ಮತ್ತು ಬೆಳೆಯಲ್ಲಿನ ಪಾಲುದಾರರು.
- ಖುದ್‌ಕಾಪ್ತಾ: ಭೂಮಿಯಲ್ಲೇ ನೆಲೆಸಿ ವ್ಯವಸಾಯ ಮಾಡುತ್ತಿದ್ದವರು.
- ಸಹಿರಾಸ್ತಾ: ಭೂಮಿಯಲ್ಲಿ ನೆಲೆಸದೆ ವ್ಯವಸಾಯ ಮಾಡುತ್ತಿದ್ದವರು.
- ಬಾಲಹಾರರು: ಕಡಿಮೆ ದರ್ಜೆಯ ಕೆಲಸಗಳನ್ನು ಮಾಡುತ್ತಿದ್ದವರು.
- ಬೇಗಾರ: ಬಲವಂತದ ಕೂಲಿ ಕೆಲಸ.
- ಧೆನ್‌ಕಾಲಿ, ಚರಸ್, ಸಕಿಯು: ನೀರಾವರಿಗೆ ಉಪಯೋಗವಾಗತಕ್ಕವು.

**ಷೇರ್‌ಷಹ:**

- ಷೇರ್‌ಷಹನ ಚಿಕ್ಕಂದಿನ ಹೆಸರು ಫರಿದ್
- ಅವನು ದಕ್ಷಿಣ ಬಿಹಾರದಲ್ಲಿ ಗವರ್ನರನಾಗಿದ್ದ ಆಫ್ಘನ್ ಬಹಾರ್ ಖಾನ್ ಲೋಹಾನಿಯ ಹತ್ತಿರ ಸೇವೆಗೆ ಸೇರಿದನು. ಅವನು ಫರೀದನಿಗಿತ್ತ ಬಿರುದು ಷೇರ್‌ಖಾನ್.
- ಷೇರ್‌ಷಹನ ಕೊನೆಯ ಯುದ್ಧ ಕಾಲಿಂಜರ ಮೇಲೆ ಅವನು ಯುದ್ಧದಲ್ಲಿ ಯಶಸ್ವಿಯಾದನು. ಆದರೆ 1545ರಲ್ಲಿ ಸಿಡಿಮದ್ದು ಸ್ಫೋಟವಾಗಿ ವಿಧಿವಶನಾಗುತ್ತಾನೆ.
- ಇವನ ಉತ್ತರಾಧಿಕಾರಿಯಾಗಿ ಬಂದವನು ಇವನ ಮಗ ಇಸ್ಲಾಂ ಷಹ.
- ಹುಮಾಯೂನನು ಸಿಕಂದರ್ ಸೂರಿಯನ್ನು ಸೋಲಿಸಿ 1555ರಲ್ಲಿ ದೆಹಲಿಯನ್ನು ಆಕ್ರಮಿಸಿಕೊಂಡನು.

**downloaded from: www.kpscvaani.com**

- ಷೇರ್‌ಷಹನು ಬಿಗಿಯಾಗಿ ಕೇಂದ್ರಿಕೃತವಾಗಿದ್ದ ಆಡಳಿತವನ್ನು ಸ್ಥಾಪಿಸಿದನು.
- ಅವನು ತನ್ನ ಸಾಮ್ರಾಜ್ಯವನ್ನು 47 ಸರ್ಕಾರ (ಜಿಲ್ಲೆ)ಗಳಾಗಿ ವಿಂಗಡಿಸಿದ್ದನು. ಒಂದೊಂದು ಸರ್ಕಾರವು ಪರಗಣ (ಉಪಜಿಲ್ಲಾ ವಿಭಾಗ)ಗಳಾಗಿ ವಿಂಗಡಿಸಲ್ಪಟ್ಟಿದ್ದವು. ಹಳ್ಳಿ ಅಥವಾ ಗ್ರಾಮ ಆಡಳಿತದ ಕನಿಷ್ಠಮಯ ಘಟಕವಾಗಿತ್ತು. ಅವನು ಸ್ಥಳೀಯ ಅಪರಾಧಗಳಿಗೆ ಸ್ಥಳೀಯ ಗ್ರಾಮದ ಮುಖ್ಯಸ್ಥ ಮತ್ತು ಸ್ಥಳಿಯ ಜಮೀನ್ದಾರರನ್ನು ಜವಾಬುದಾರರನ್ನಾಗಿ ಮಾಡಿದನು.
- ಇವನು ಅನೇಕ ಸರಾಯಗಳನ್ನು ನಿರ್ಮಿಸಿದನು. ಸರಾಯಿಗಳೆಂದರೆ ಪ್ರಯಾಣಿಕರ ತಂಗುದಾಣ.
- ಇವನು ಸೋನರ್‌ಗಾಂವನಿಂದ ಅಟಕ್‌ಗೆ ರಾಜ ಮಾರ್ಗವನ್ನು ನಿರ್ಮಿಸಿದನು.
- ಇವನು ಭೂಕಂದಾಯದ ವ್ಯವಸ್ಥೆಯನ್ನು ಜಬ್ತಿ–ಇ–ಹರ್‌ಸಾಲ್ (ಪ್ರತಿವರ್ಷ ಕಂದಾಯ ನಿರ್ಧಾರ) ಆಧಾರದ ಮೇಲೆ ಮಾಡಿ ಉತ್ತಮಪಡಿಸಿದನು. ಭೂಮಿಯನ್ನು ಅಳೆಯುವುದಕ್ಕೆ ಜರಿಬ್ ಎಂಬ ಮಾಪನವನ್ನು ಬಳಸಲಾಗುತ್ತಿತ್ತು.
- ಇವನು ಭೂಕಂದಾಯಕ್ಕೆ ಎರಡು ದಾಖಲೆಗಳನ್ನು ಪ್ರಾರಂಭಿಸಿದನು. ಪ್ರತಿ ರೈತನು ಕೊಡಬೇಕಾದ ಕಂದಾಯಕ್ಕೆ ಪಟ್ಟಾ ಮತ್ತು ಕಬೂಲಿಯಾತ್ ಒಪ್ಪಂದ.
- ಬೆಳ್ಳಿ ರೂಪಾಯಿಯನ್ನು ಪ್ರಾರಂಭಿಸಿದವರಲ್ಲಿ ಇವನು ಮೊದಲಿಗನು (ಒಂದು ರೂಪಾಯಿಗೆ 64 ಡಾಂಗಳಿದ್ದವು.) ಬಂಗಾರದ ನಾಣ್ಯ ಅಶ್ರಫಿಯನ್ನು ಚಲಾವಣೆಗೆ ತಂದನು.
- ಇವನು ಪುರಾನಾ ಕ್ವಿಲಾವನ್ನು ಮತ್ತು ಸಸರಾಂನಲ್ಲಿ ತನ್ನ ಸಮಾಧಿಯನ್ನು ಕಟ್ಟಿಸಿದನು.
- ಮಲಿಕ್ ಮಹಮದ ಜಯಾಸಿಯು ತನ್ನ ಪದ್ಮಾವತ ಗ್ರಂಥವನ್ನು ಇವನ ರಾಜ್ಯಭಾರ ಕಾಲದಲ್ಲಿ ಮುಗಿಸಿದನು.

**ಮೊಘಲ್ ವಾಸ್ತು:**

- ಬಾಬರನಿಗೆ ಕಟ್ಟಡಗಳನ್ನು ಕಟ್ಟಲು ಸಮಯವಿರಲಿಲ್ಲ, ಆದರೂ ಇವನು ಎರಡು ಮಸೀದಿಗಳನ್ನು ಕಟ್ಟಿಸಿದನು. ರೋಹಿಲ್‌ಖಂಡದ ಸಂಭಾತ್‌ನಲ್ಲಿ ಒಂದು ಮತ್ತು ಪಾಣಿಪತ್ತದ ಕಾಬೂಲಿನಲ್ಲಿ ಇನ್ನೊಂದು ಆಗ್ರಾದ ಹಳೆಯ ಲೋಧಿ ಕೋಟೆಯಲ್ಲಿ ಇವನು ಕಟ್ಟಿದ ಇನ್ನೊಂದು ಮಸೀದಿ ಉಳಿದಿದೆ.
- ಹುಮಾಯೂನನು ತನ್ನ ಅರಮನೆ ದಿನಸನಾಹವನ್ನು ಜಾಮಿಲಿ ಮಸೀದಿಯನ್ನು ಕಟ್ಟಿಸಿದನು.
- ಹುಮಾಯೂನನ ಗೋರಿಯನ್ನು ಅವನ ಪತ್ನಿ ಹಾಜಿ ಬೇಗಂ ಕಟ್ಟಿಸಿದಳು. ಇದು ತಾಜಮಹಲಿನ ಮೊದಲ ರೂಪದಂತಿದೆ. ದುಂಡನೆಯ ಆಕಾರದ ಎರಡು ಗುಮ್ಮಟಗಳನ್ನು ಹೊಂದಿದೆ.
- ಇವನು ಆಗ್ರಾ ಕೋಟೆಯಲ್ಲಿ ಮನಮಂದಿರದ ತರಹ ಹಿಂದೂ ವಿನ್ಯಾಸದ ಆಧಾರದ ಮೇಲೆ ಜಹಾಂಗೀರ್ ಮಹಲನ್ನು ಕಟ್ಟಿಸಿದನು.
- ಪಂಚಮಹಲ್ ಬೌದ್ಧವಿಹಾರದ ವಿನ್ಯಾಸವನ್ನು ಹೊಂದಿದೆ.
- ಇವನು ಮರಿಯಂ ಅರಮನೆಯನ್ನು ಶೇಖ್ ಸಲೀಂ ಚಿಸ್ತಿಯ ಗೋರಿಯನ್ನು ಕಟ್ಟಿಸಿದನು. ಸಿಕಾಂದ್ರಾದಲ್ಲಿ ತನ್ನ ಗೋರಿಯನ್ನು ಕಟ್ಟಲು ಪ್ರಾರಂಭಿಸಿದ್ದನು. ಅದನು ಜಹಾಂಗೀರನು ಪೂರೈಸಿದನು.
- ಜಹಾಂಗೀರನ ಆಡಳಿತ ಕಾಲದಲ್ಲಿ ಅವನ ಪತ್ನಿ ನೂರ್‌ಜಹಾನಳು ತನ್ನ ತಂದೆ ಇತ್ಮದುದ್ದೌಲನ ಗೋರಿಯನ್ನು ಆಗ್ರಾದಲ್ಲಿ ಕಟ್ಟಿಸಿದಳು. ಉದಯಪುರದ ಗೋಲಮಂಡಲ್ ದೇವಸ್ಥಾನದ ತಂತ್ರಜ್ಞಾನವನ್ನು ಆಧರಿಸಿ, ಪಿತ್ರದುರಾವನ್ನು ಉಪಯೋಗಿಸಿ ಈ ಗೋರಿಯನ್ನು ಕಟ್ಟಲಾಯಿತು.
- ಜಹಾಂಗೀರನು ಲಾಹೋರ್‌ನಲ್ಲಿ ಮೋತಿ ಮಸೀದಿಯನ್ನು ಲಾಹೋರ್‌ನ ಬಳಿ ಷಹದಾರಾದ ಬಳಿ ತನ್ನ ಗೋರಿಯನ್ನು ಕಟ್ಟಿಸಿದನು.
- ಷಹಾಜನನು ಪ್ರಸಿದ್ಧ ತಾಜಮಹಲನ್ನು ತನ್ನ ಹೆಂಡತಿ ಮಮ್ತಾಜ್ ಮಹಲಳ ಸ್ಮೃತಿಯಲ್ಲಿ ಕಟ್ಟಿಸಿದನು. ಇದರ ಮುಖ್ಯ ಶಿಲ್ಪಿಗಳೆಂದರೆ, ಉಸ್ತಾದ್ ಅಹ್ಮದ್ ಲಾಹೋರಿ, (ಇವನು ನಾದಿರ್–ಉಲ್–ಅಸಾರ್ ಎಂಬ ಬಿರುದನ್ನು ಪಡೆದನು. ಮೀರ್ ಅಬ್ದುಲ್ ಕರೀಂ ಇಸಾಖಾನ್ ಮತ್ತು ಮಕ್ಕರಾಮತ್‌ಖಾನ್.

**downloaded from: www.kpscvaani.com**

- ಇವನು ಕೆಂಪುಕೋಟೆಯನ್ನು ಅದರದೇ ಆದ ದಿವಾನ್-ಇ-ಖಾಸ್ ಮತ್ತು ದಿವಾನ್-ಇ-ಆಮ್ ಗಳೊಂದಿಗೆ ಕಟ್ಟಿಸಿದನು.
- ಅವನು ಮಯೂರ ಸಿಂಹಾಸನವನ್ನು ಬೇಬದತ್ ಖಾನನ ಮೂಲಕ ರಚಿಸಿದನು. ಇದರ ಮೇಲೆ ಭೂಮಿಯಲ್ಲಿ ಸ್ವರ್ಗ ಎಂಬುದಿದ್ದರೆ ಅದು ಇಲ್ಲಿದೆ ಎಂಬ ಅಮೀರ್ ಖುಸ್ರುವಿನ ಪದ್ಯವನ್ನು ಕೆತ್ತಿಸಿದನು.
- ಔರಂಗಜೇಬನು ದೆಹಲಿಯ ಕೆಂಪುಕೋಟೆಯಲ್ಲಿ ಮೊತಿ ಮಸೀದಿಯನ್ನು ಲಾಹೋರಿನಲ್ಲಿ ಬಾದಷಾಹೀ ಮಸೀದಿಯನ್ನು ಔರಂಗಾಬಾದಿನಲ್ಲಿ ತನ್ನದೇ ಗೋರಿಯನ್ನು ಕಟ್ಟಿಸಿದನು.

**ಮೊಘಲ್ ಚಿತ್ರಕಲೆ :**

- ಹೆರಾತ್‌ನ ಬಿಹ್ಜಾದ್‌ನ ಶಿಷ್ಯ ಮೀರ್ ಸಯ್ಯಿದ್ ಅಲಿ ಇವನನ್ನು ಪೂರ್ವದ ರಾಫೇಲ್ ಎಂದು ಕರೆಯುತ್ತಾರೆ. ಮತ್ತು ಖ್ವಾಜಾ ಅಬ್ದುಸ್ ಸಮದ್ ಇಬ್ಬರೂ ಹುಮಾಯೂನನ ಆಸ್ಥಾನದಲ್ಲಿದ್ದರು. ದಾಸಾನ-ಇ-ಅಮೀರ್ ಹಂಜಾದಲ್ಲಿನ ಚಿತ್ರಗಳನ್ನು ಬಿಡಿಸಲು ಇವರ ನಿರ್ದೇಶನ ಪ್ರೋತ್ಸಾಹ, ಸಲಹೆಗಳಿದ್ದವು.
- ಅಕ್ಬರನ ರಾಜ್ಯಭಾರ ಕಾಲದಲ್ಲಿ ಅಬ್ದುರ್ ಸಮದ್ ಫರೂಕ್ ಬೇಗಂ, ಖುಸ್ರು ಖುಲಿ, ಜಂಷೆಡ್, ಬಾಸವಾನ್, ಲಾವಕೇಸು ಮುಕುಂದ, ಹರಿವಂಶ ಮತ್ತು ದಶ್ಯಂತ ಪ್ರಮುಖ ಚಿತ್ರಕಲೆಗಾರರಾಗಿದ್ದರು.
- ದಶ್ಯಂತನು ರಜ್ಮೆನಾಮಾ (ಪರ್ಶಿಯನ್ ಮಹಾಭಾರತ)ವನ್ನು ಚಿತ್ರಿಸಿದನು.
- ಅಬ್ದುಸ್ ಸಮದನಿಗೆ ಶ್ರೀಂಕಲಾಂ ಎಂಬ ಬಿರುದು ದೊರೆತಿತ್ತು.
- ಒಂದು ಸಮಗ್ರ ಚಿತ್ರದಲ್ಲಿ, ಯಾರು ಯಾರು ಯಾವುದನ್ನು ಬರೆದಿದ್ದಾರೆ ಎಂದು ಹೇಳುವಷ್ಟು ಚಿತ್ರಕಲೆಯ ಜ್ಞಾನ, ಸೂಕ್ಷ್ಮಗ್ರಾಹಿ ಜಹಾಂಗೀರನಿಗೆ ಇದ್ದಿತ್ತು. ಚಿತ್ರಕಾರರ ಹೆಸರನ್ನು ಅವನು ಸಲೀಸಾಗಿ ಹೇಳಬಲ್ಲವನಾಗಿದ್ದನು.
- ಅವನ ಆಸ್ಥಾನದಲ್ಲಿ ಅಗಾರೆಜಾ, ಹೆರಾತನ ಅಬುಲ್ ಹಸನ್, ಮಹಮದ್ ನಾದಿರ್, ಮಹಮದ್ ಮುರಾದ್, ಉಸ್ತಾದ್ ಮನ್ಸೂರ್, ಬಿಷನ್ದಾಸ್, ಮನೋಹರ್, ಗೋವರ್ಧನ್ ಮುಂತಾದವರು ಪ್ರೋತ್ಸಾಹ ಪಡೆಯುತ್ತಿದ್ದರು.
- ಅವನ ಕಾಲದಲ್ಲಿ ಮೀನಿಯೇಚರ್ ಪೈಂಟಿಂಗ್ ಸಣ್ಣ ಪ್ರಮಾಣದ ಸೂಕ್ಷ್ಮ ಚಿತ್ರಕಲೆ ಅಭಿವೃದ್ಧಿಗೊಂಡಿತ್ತು. ಆ ಕಾಲದಲ್ಲಿ ಚಿತ್ರಕಲೆಯ ಮೇಲೆ ಐರೋಪ್ಯರ ಪ್ರಭಾವವೂ ಬೀಳತೊಡಗಿತು.
- ಉಸ್ತಾದ್ ಮನ್ಸೂರನು ಪ್ರಾಣಿಗಳ ಚಿತ್ರ ಬರೆಯುವುದರಲ್ಲಿ ನಿಪುಣತೆ ಪಡೆದಿದ್ದರೆ, ಬಿಷನ್ದಾಸ್ ವ್ಯಕ್ತಿ ಚಿತ್ರಣದಲ್ಲಿ ಅತ್ಯಂತ ಕುಶಲಿಯಾಗಿದ್ದನು.
- ಜಹಾಂಗೀರನ ಕಾಲದಲ್ಲಿ ಸುತ್ತಲಿನ ಪ್ರಭಾವಶಾಲಿ ಅಥವಾ ದೈವೀಸಭೆಯು ಚಿತ್ರಣ ಪ್ರಾರಂಭವಾಯಿತು.
- ದಾರಾಶಿಕೋನನು ಕಲೆಗಳ ಪ್ರೋತ್ಸಾಹಕನಾಗಿದ್ದನು ಇದು ಲಂಡನ್ನಿನ ಇಂಡಿಯಾ ಆಫೀಸಿನಲ್ಲಿ ಸುರಕ್ಷಿತನಾಗಿ ಇಡಲಾಗಿರುವ ಅವನ ಆಲಂ ಚಿತ್ರಕಲೆಗಳ ಸಂಗ್ರಹದಿಂದ ದೃಢಪಟ್ಟಿದೆ.

**ರಾಜಾಸ್ತಾನಿ ಚಿತ್ರಕಲೆ :**

- ಕಿಷನ್‌ಘಡ್ ಶೈಲಿಯ ಚಿತ್ರಕಲೆ ರಾಜಾ ಸಾವಂತ್‌ನ ಆಶ್ರಯದಲ್ಲಿ ಚೆನ್ನಾಗಿ ಬೆಳೆಯಿತು. ಇವನನ್ನು ಕವಿ ನಾಗರಿದಾಸ ಎಂದು ಕರೆಯುತ್ತಿದ್ದರು. ಪ್ರಸಿದ್ಧವಾದ ಬಾನಿಥಾನಿಯನ್ನು ನಿಹಾಲ್ ಚಂದ್ರನು ಚಿತ್ರಕಲೆಯಲ್ಲಿ ಬಿಡಿಸಿದನು. ಇದಕ್ಕೆ ಭಾರತದ ಮೋನಾಲಿಸಾ ಎಂಬ ಬಿರುದಿದೆ. ಚಿತ್ರಕಲೆಯ ವಿಷಯಗಳಲ್ಲಿ ಆರಿಸಿಕೊಂಡ ಪ್ರಕಾರಗಳೆಂದರೆ ರಾಗ-ರಾಗಿಣಿ ರಾಧಾ ಕೃಷ್ಣ ಮುಂತಾದವು. ಈ ಪ್ರಕಾರದ ಇತರ ಪ್ರಸಿದ್ಧ ಚಿತ್ರಕಾರರೆಂದರೆ ಸುರಧ್ವಜ ಅಮೀರಚಂದ್, ಚೋಟು, ಧನ್ನಾ ಮುಂತಾದವರಿದ್ದಾರೆ.
- ಚಿತ್ರಕಲೆಯಲ್ಲಿನ ಜೈಪುರ ಪ್ರಕಾರವು ರಾಜಾ ಜಯಸಿಂಹನ ಆಶ್ರಯದಲ್ಲಿ ಬೆಳೆಯಿತು. ಲೆಡ್‌ನಿಂದ ಚಿತ್ರ ಬಿಡಿಸುವುದು ಈ ಪ್ರಕಾರದ ವೈಶಿಷ್ಟ್ಯವಾಗಿತ್ತು. ಸಾಹಿಬೆರಾಂ ಮೊಹಮದ ಸೂರ್, ಚಿತ್ತಾಲಾಲ ಮುಂತಾದವರು ಈ ಪ್ರಕಾರಕ್ಕೆ ಸೇರಿದವರು, ಜೈಪುರಿ, ಭಿತ್ತಿವರ್ಣಚಿತ್ರಗಳ (ಮೂರಾತ್ಸ) ಆರಾಯೇಷ್ ಎಂದು ಕರೆಯಲ್ಪಡುತ್ತಿತ್ತು.
- ಜೋಧಪುರದಲ್ಲಿ ಮಾರವಾಡ್ ಪ್ರಕಾರವು ಅಭಿವೃದ್ಧಿ ಹೊಂದಿತ್ತು. ಈ ಪ್ರಕಾರದ ಪ್ರಸಿದ್ಧ ಚಿತ್ರಶಿಲ್ಪಿಗಳೆಂದರೆ ಶಿವದಾಸ್ ಭಟ್ಟಿ ಕಿಷನ್‌ದಾಸ್ ಭಟ್ಟಿ ದೇವದಾಸ್ ಭಟ್ಟಿ ಮುಂತಾದವರು.
- ಬುಂಡಿ ಪ್ರಕಾರದಲ್ಲಿ ಪ್ರಾಣಿಗಳ ಚಿತ್ರೀಕರಣಕ್ಕೆ ಪ್ರಾಧ್ಯಾನ್ಯವಿದ್ದಿತ್ತು.

**downloaded from: www.kpscvaani.com**

- 1680ರ ಹೊತ್ತಿಗೆ ಬಿಕಾನೇರ ಪ್ರಕಾರವು ಚೆನ್ನಾಗಿ ಅಭಿವೃದ್ಧಿ ಹೊಂದಿತ್ತು. ಇದು ಉಸ್ತಾಕಲಾ ಅಂದರೆ ಒಂಟೆಯ ಚರ್ಮದ ಮೇಲೆ ಮಾಡಿದ್ದ ವರ್ಣಶಿಲ್ಪಕ್ಕೆ ಹೆಸರಾಗಿತ್ತು. ಈ ವಿಧಾನವನ್ನು ಪ್ರಾರಂಭ ಮಾಡಿದವನು ಹಮೀದುದ್ದೀನ್ ಉಸ್ತಾ, ಈ ಪ್ರಕಾರದ ಅತ್ಯಂತ ಪ್ರಸಿದ್ಧ ಕಲಾವಿದನೆಂದರೆ ರುಕ್ಮುದ್ದೀನ್, ಇದು ಮೊಘಲ್ ಶೈಲಿಯ ಚಿತ್ರಕಲೆಯಿಂದ ಪ್ರಭಾವಿತವಾಗಿತ್ತು.
- ಮೇವಾಡ್ ಪ್ರಕಾರವು ಜೈನ ಮತ್ತು ಗುಜರಾತಿ ಶೈಲಿಗಳ ಮಿಶ್ರಣ. ಈ ಪ್ರಕಾರದಲ್ಲಿ ಪ್ರಸಿದ್ಧರಾದ ವರ್ಣಚಿತ್ರಕಾರರೆಂದರೆ ನಿಧುರುದ್ಧಿನ ಮತ್ತು ಮನೋಹರ್.
- ಕೋಟಾ ಪ್ರಕಾರದ ವರ್ಣಚಿತ್ರ ಶೈಲಿಯು ರಾಂಸಿಂಗನ ಆಶ್ರಯದಲ್ಲಿ ಬೆಳೆಯಿತು. ರಾಜರುಗಳ ವ್ಯಕ್ತಿ ಚಿತ್ರಣ ಮತ್ತು ಧಾರ್ಮಿಕ ಚಿತ್ರಣಗಳಿಗೆ ಈ ಪ್ರಕಾರ ಹೆಸರಾಗಿದೆ.
- ಜೈಸಲ್ಮೇರ್ ಶೈಲಿಯಲ್ಲಿ ಆತ ಮೊಘಲ್ ಶೈಲಿಯ ಪ್ರಭಾವ ಅತ್ಯಂತ ಕಡಿಮೆ ಪ್ರಮಾಣದ್ದಾಗಿದೆ. ಇದು ಕಾಲಗ್ರಾ ಶೈಲಿಯಿಂದ ಪ್ರಭಾವಿತವಾಯಿತು. ಇದರಲ್ಲಿ ಬಂಗಾರದ ವರ್ಣದ ಉಪಯೋಗ ಎದ್ದು ಕಾಣುವಂತಹುದು.
- ಆಳ್ವಾರ ಶೈಲಿಯ ಚಿತ್ರಕಲೆಯಲ್ಲಿ ದಂತದ ಮೇಲಿನ ಚಿತ್ರರಚನೆ ತುಂಬಾ ವಿಶಿಷ್ಟವಾದದ್ದು ದಾಲ್‌ಚಂದ್, ಬಲದೇವ್, ರಾಂಸಹಾಯ ಈ ಶೈಲಿಯ ಚಿತ್ರಕಾರರಲ್ಲಿ ದೊಡ್ಡ ಹೆಸರಿನವರು.

**ಸಂಗೀತ :**

- ಸಂಗೀತ ರತ್ನಾಕರ ಗ್ರಂಥವನ್ನು ರಚಿಸಿದವನು ಶಾಙ್ಗದೇವ.
- ರಾಣಾಸಿಂಗನು ಸಂಗೀತರಾಜ್ ಮತ್ತು ಸಂಗೀತ ಮೀಮಾಂಸ ಗ್ರಂಥಗಳನ್ನು ರಚಿಸಿದ್ದಲ್ಲದೆ ಸಂಗೀತ ರತ್ನಾಕರದ ಮೇಲೆ ವ್ಯಾಖ್ಯಾನ ಬರೆದನು.
- ತುರ್ಕರು ರಬಾಬ್ ಮತ್ತು ಸಾರಂಗಿಗಳನ್ನು ಭಾರತಕ್ಕೆ ತಂದರು.
- ಅಮೀರ ಖುಸ್ರು ಸಿತಾರ ವಾದ್ಯವನ್ನು ಕಂಡುಹಿಡಿದನು. ಅಮೀರ ಖುಸ್ರು ಘೋರಾ, ಐಮನ್ ಮತ್ತು ಸನಂ ರಾಗಗಳನ್ನು ಸೃಜಿಸಿದನು. ಖಯಾಲ್, ತರಾನಾ ಮತ್ತು ಕವಾಲ್‌ಗಳನ್ನು ಸೃಜಿಸಿದವನೂ ಅವನೇ ಎಂದು ಹೇಳಲಾಗುತ್ತದೆ.
- ಹುಸೇನ್ ಮತ್ತು ಜಾನ್‌ಪುರಿ ರಾಗಗಳನ್ನು ನಿರ್ಮಾಣ ಮಾಡಿದವನು ಹುಸೇನಷಾ ಶಿರ್ಕಿ.
- ರಾಜಮಾನಸಿಂಗ ತೋಮರನ್ನು ದ್ರುವದ್ ಅನುನ್ನು ನಿರ್ಮಿಸಿದನು ಮತ್ತು ಮನ್ ಕಾತುಹಾಲ್ ಅನ್ನು ಸಂಗ್ರಹಿಸಿದನು.
- ಬೈಜುಬಾನ್ರಾ, ಗುಜರಾತಿಗೆ ಬಹದೂರ್ ಷಾಹನ ಆಸ್ಥಾನಕ್ಕೆ ಹೋದನು.
- ಗ್ವಾಲಿಯರ್‌ನ ತಾನ್‌ಸೇನನು ದೀಪಕ ಮತ್ತು ಮಲ್ಹಾರ್ ರಾಗಗಳನ್ನು ಸೃಜಿಸಿದನು.
- ಅಕ್ಬರ್ ನಗಾರಿ ಬಾರಿಸುತ್ತಿದ್ದನು. ಔರಂಗಜೇಬನು ನಿಷ್ಣಾತ ವೀಣಾವಾದಕನಾಗಿದ್ದನು.
- ಮಹಮದ ಶಾ ರಂಗೀಲ ಉತ್ತಮ ಹಾಡುಗಾರನೂ ನರ್ತಕನೂ ಆಗಿದ್ದನು.

**ಭಕ್ತಿ ಚಳುವಳಿಗಳು :**

- ದಕ್ಷಿಣ ಭಾರತದಲ್ಲಿ ಆಳ್ವಾರರು–ವೈಷ್ಣವ ಸಂತರು ಮತ್ತು ನಾಯನಾರಗಳು–ಶೈವ ಸಂತರು ಭಕ್ತಿ ಚಳುವಳಿಯನ್ನು ಜನಪ್ರಿಯಗೊಳಿಸಿದರು.
- ಶಂಕರಾಚಾರ್ಯರು ಕ್ರಿ.ಶ. 788ರಲ್ಲಿ ಕೇರಳದ ಕಾಲಡಿಯಲ್ಲಿ ಜನಿಸಿದರು. ಅವರು ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ಅವರು ಬ್ರಹ್ಮಸೂತ್ರ ಮತ್ತು ಉಪನಿಷತ್ತುಗಳ ಮೇಲೆ ವ್ಯಾಖ್ಯಾನ ಬರೆದರು. ಅವರು ತುಂಬಾ ಉಧೃತ ವಾಕ್ಯ ಎಂದರೆ ಬ್ರಹ್ಮ ಸತ್ಯಂ ಜಗನ್ಮಿಥಾ ಜೀವೋ ಬ್ರಹ್ಮೆವ ನಾಸರ ಅಂದರೆ ಪರಮಾತ್ಮನೇ ನಿಜವಾದ ಸತ್ಯವೆಂದು ದೃಶ್ಯ ಪ್ರಪಂಚವು ಮಾಯೆಯೆಂದೂ ವೈಯುಕ್ತಕ ಜೀವಾತ್ಮನು ಪರಮಾತ್ಮನೇ ಅಲ್ಲದೆ ಬೇರೆ ಏನೂ ಅಲ್ಲವೆಂದು, ಅವರ ಪ್ರಕಾರ ಜ್ಞಾನದಿಂದಲೇ ಮೋಕ್ಷ. ಅವರು ಭಗವದ್ಗೀತೆಯ ಮೇಲೂ ಭಾಷ್ಯವನ್ನು ಬರೆದರಲ್ಲದೆ ಉಪದೇಶ ಸಾಹಸ್ರಿ, ವಿವೇಕ ಚೂಡಾಮಣಿ ಮತ್ತು ಭಜ ಗೋವಿಂದಂ ಸ್ತೋತ್ರ ಮುಂದಾವನ್ನು ಬರೆದರು.
- ಅವರು ಶೃಂಗೇರಿ, ದ್ವಾರಕಾ, ಪುರಿ, ಬದ್ರೀನಾಥಗಳಲ್ಲಿ ಮಠಗಳನ್ನು ಸ್ಥಾಪಿಸಿದರು. ಕಂಚಿಮಠವನ್ನು ಅವರೇ ಸ್ಥಾಪಿಸಿದರೆನ್ನುವುದರ ವಿಷಯದಲ್ಲಿ ವಿವಾದವಿದೆ.

**downloaded from: www.kpscvaani.com**

- ಶ್ರೀ ರಾಮಾನುಜಾಚಾರ್ಯರು ಶ್ರೀಪೆರಂಬದೂರಿನಲ್ಲಿ ಜನಿಸಿದರು. ಅವರು ಶಂಕರಾಚಾರ್ಯರ ಮಾಯಾವಾದವನ್ನು ಒಪ್ಪಲಿಲ್ಲ. ಅವರು ವಿಶಿಷ್ಟ ದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ಅವರು ಶ್ರೀ ವೈಷ್ಣವ ಪಂಥವನ್ನು ಸ್ಥಾಪಿಸಿದರು. ಅವರು ಶ್ರೀ ಭಾಷ, ವೇದಾರ್ಥ ಸಂಗ್ರಹ, ವೇದಾಂತ ಸಾರ, ವೇದಾಂತ ದೀಪ ಮತ್ತು ಗೀತ ಭಾಷ್ಯ ಇವುಗಳನ್ನು ರಚಿಸಿದರು. ಅವರು ಭಕ್ತಿಯಿಂದಲೇ ಮೋಕ್ಷ ಎಂದು ಸಾರಿದರು. ಯಾದವ ಪ್ರಕಾಶರು ಅವರ ಗುರುಗಳಾಗಿದ್ದರು. ಅವರು ಪ್ರಪತಿ ಮಾರ್ಗವನ್ನು (ದೇವರಿಗೆ ಸಂಪೂರ್ಣವಾಗಿ ಶರಣಾಗುವುದು) ಪ್ರತಿಪಾದಿಸಿದರು.
- ಶ್ರೀ ಕಂಠಾಚಾರ್ಯರು ಶಿವಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ಮಧ್ವಾಚಾರ್ಯರು ದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ಅವರು ದಕ್ಷಿಣ ಕನ್ನಡ ಜಿಲ್ಲೆಯ ಕಲ್ಯಾಣಪುರದಲ್ಲಿ ಜನಿಸಿದರು.
- ನಿಂಬಾರರಾಚಾರ್ಯರು ತಮ್ಮ ಆಶ್ರಮವನ್ನು ವ್ರಜ (ಮಧುರಾ)ದಲ್ಲಿ ಸ್ಥಾಪಿಸಿದರು. ಅವರು ದ್ವೈತಾ ದ್ವೈತಾ ಸಿದ್ಧಾಂತವನ್ನು ಪ್ರತಿಪಾದಿಸಿದರು. ಅವರು ಭೇದಾಭೇದ ತತ್ವವನ್ನು ಪುಷ್ಟೀಕರಿಸಿದರು. ಅವರು ಸನಕ್ ಸಂಪ್ರದಾಯವನ್ನು ಸ್ಥಾಪಿಸಿದರು.
- ವಲ್ಲಭಾಚಾರ್ಯರು ಕ್ರಿ.ಶ. 1479ರಲ್ಲಿ ವಾರಣಾಸಿಯಲ್ಲಿ ಜನಸಿದರು. ಅವರು ಕೃಷ್ಣದೇವರಾಯನ ಆಸ್ಥಾನದಲ್ಲಿ ಇದ್ದರು, ಅವರು ಶುದ್ಧಾದ್ವೈತವಾದವನ್ನು ಪ್ರತಿಪಾದಿಸಿದರು. ಅವರ ತತ್ವಕ್ಕೆ ಪುಷ್ಟಿಮಾರ್ಗ ಎಂದು ಹೆಸರು. ರುದ್ರ ಸಂಪ್ರದಾಯವನ್ನು ಪ್ರಾರಂಭಿಸಿದರು.
- ಹರಿದಾಸ ಪುರಂದರದಾಸ ಚಳುವಳಿಯನ್ನು ಸ್ಥಾಪಿಸಿದರು.
- ಲಿಂಗಾಯತ್ ಪಂಥವನ್ನು ಬಸವಣ್ಣನವರು ಪ್ರಾರಂಭಿಸಿದರು. ಈ ಪಂಥಕ್ಕೆ 'ವೀರಶೈವರು' ಎಂಬ ಹೆಸರು ಇದೆ
- ಜ್ಞಾನೇಶ್ವರನು ಭಾವಾರ್ಥ ದೇಸಿಕವನ್ನು ರಚಿಸಿದನು. ಇದನ್ನು ಜ್ಞಾನೇಶ್ವರಿ ಎಂದೂ ಕರೆಯುತ್ತಾರೆ. ಈತನ ಇನ್ನೊಂದು ರಚನೆ ಅಮೃತಾನುಭವ. ಅವನು ವಾರ್ಕರಿ ಪಂಥಕ್ಕೆ ಸೇರಿದವನು. ಈ ಪಂಥದವರು ವರ್ಷಕ್ಕೆ ಎರಡು ಬಾರಿ ಪಂಢರಪುರಕ್ಕೆ ಹೋಗಿ ವಿಠೋಬನ ದರ್ಶನ ಮಾಡುತ್ತಾರೆ.
- ನಾಮದೇವನು ಕುಂಬಾರನಾದ ಷೇರಾ ಕ್ಷೌರಿಕವಾದ ಸೇನ ಅಸ್ಪೃಶ್ಯನಾದ ಚೋರಾ ಕೆಲಸಗಿತ್ತಿ ಜನಾಬಾಯಿ ಮುಂತಾದ ಶಿಷ್ಯರನ್ನು ಹೊಂದಿದ್ದನು. ನಾಮದೇವನ ಅಭಂಗಗಳನ್ನು ಗುರುಗ್ರಂಥ ಸಾಹಿಬ್‌ನಲ್ಲೂ ಸೇರಿಸಿಕೊಳ್ಳಲಾಗಿದೆ.
- ತುಕಾರಾಮನು ಜನ್ಮತ: ಶೂದ್ರನಾಗಿದ್ದನು. ಅವನು ಶಿವಾಜಿಯ ಕೃತಜ್ಞತೆಯನ್ನು ಸಂಪಾದಿಸಿದನು. ವಾರ್ಕರಿ ಪಂಥದ ಸ್ಥಾಪಕನು ಇವನು. ಈತ ಹಿಂದೂ ಮುಸ್ಲಿಂ ಐಕ್ಯತೆಗೆ ಶ್ರಮಿಸಿದನು.
- ದಾಸ ಭೋಧವನ್ನು ರಚಿಸಿದವರು ಸಮರ್ಥರಾಯ ದಾಸರು. ಇವರು ಶಿವಾಜಿಯ ಗುರುಗಳಾಗಿದ್ದರು. ಪರಮಾರ್ಥ ಪಂಥವನ್ನು ಇವರು ಪ್ರಾರಂಭಿಸಿದರು.
- ಚೈತನ್ಯ ಅಥವಾ ವಿಶ್ವಂಭರ ಮಿಶ್ರ ದಾಸಮನಿ ಪಂಥಕ್ಕೆ ಸೇರಿದವರು. ಅವರು ಅಭೆಂತ್ರಭೇದ ಭೇದವಾದವನ್ನು ಪ್ರತಿಪಾದಿಸಿದರು. ಅವರು ಹೆಚ್ಚಿನ ಜೀವಮಾನದ ಕಾಲವನ್ನು ಒರಿಸ್ಸಾದಲ್ಲಿ ಶೋದನೆಯಲ್ಲಿ ಕಳೆದರು. ಕೃಷ್ಣದಾಸ ಕವಿರಾಜ ಎಂಬುವನು ಚೈತನ್ಯ ಚರಿತಾಮೃತ ಎಂಬ ತನ್ನ ಗ್ರಂಥದಲ್ಲಿ ಚೈತನ್ಯರ ಜೀವನಚರಿತ್ರೆಯನ್ನು ಬರೆದಿದ್ದಾನೆ. ಇವರು ಯಾವಾಗಲೂ ಸಂಕೀರ್ತನ ಎಂದರೆ ಸಮುದಾಯ ಭಜನೆಯನ್ನು ಪ್ರೋತ್ಸಾಹಿಸುತ್ತಿದ್ದರು. ವಿದ್ಯಾಭೂಷಣವನ್ನು ಗೋವಿಂದ ಭಾಷ್ಯವನ್ನು ಬರೆದನು. ಅವನ ಅನುಯಾಯಿಗಳು ಗೌಡಿಯ ವೈಷ್ಣವ ಪಂಥ ಎಂಬ ಪಂಥವನ್ನು ಪ್ರಾರಂಭಿಸಿದರು. ಅವರು ಪುರಿಯಲ್ಲಿ ನಿಧನ ಹೊಂದಿದರು.
- ರಾಮಾನಂದರು ಹುಟ್ಟಿದ್ದು ಅಲಹಾಬಾದಿನಲ್ಲಿ ನೆಲೆಸಿದ್ದು ವಾರಣಾಸಿಯಲ್ಲಿ ಅವರು ರಾಮಾನಂದ ಪಂಥವನ್ನು ಸ್ಥಾಪಿಸಿದರು. ಅವರ ಹನ್ನೆರಡು ಜನ ಶಿಷ್ಯರೆಂದರೆ, ಅನಂತಾನಂದ, ಕಬೀರ, ಪೀಪಾ, ಭಾವಾನಂದ, ಸೂಬಾ, ಸುರ್ಸುರ, ಪದ್ಮವಲಸ, ವರಹರಿ, ರಾಯಿದಾಸ್, ಧನ್ನಾ, ಸೇನಾ ಮತ್ತು ಸುರ್ಸುರನ ಪತ್ನಿ.
- ರಾಮನಂದರ ಭೋಧನೆಗಳು ಎರಡು ಶಾಖೆಗಳಿಗೆ ಅವಕಾಶ ಮಾಡಿಕೊಟ್ಟಿತ್ತು. ಮಡಿವಂತಿಕೆಯದು ಮತ್ತು ಉದಾರವಾದಿಯಾದದ್ದು, ಮಡಿವಂತಿಕೆಯ ಶಾಖೆಯನ್ನು ಭಾಟಮಾಲದ ಕರ್ತೃ ನಾಭಾದಾಸ ಮತ್ತು ರಾಮಚರಿತ ಮಾನಸದ ಕರ್ತೃ ತುಳಸಿದಾಸರು ಪ್ರತಿನಿಧಿಸಿದರೆ ಕಬೀರ ಮತ್ತು ನಾನಕರು ಉದಾರವಾದಿ ಪಂಥವನ್ನು ಪ್ರತಿನಿಧಿಸಿದರು.
- ದಾದು ದಯಾಳ್, ಅಹಮದಾಬಾದಿಗೆ ಸೇರಿದವರಾಗಿದ್ದರೂ ಅವರು ನೆಲೆಸಿದ್ದು ರಾಜಸ್ಥಾನದ ನರೈನಾದಲ್ಲಿ ಅವರ ಶಿಷ್ಯರು ಸುಂದರದಾಸ್, ರಜ್ಜಬ್, ದಖನ್ ಮತ್ತು ನದೀದಿ.

**downloaded from: www.kpscvaani.com**

- ಸತ್ನಾಮಿ ಪಂಥವನ್ನು ಸ್ಥಾಪಿಸಿದವರು ಜಗಜೀವನದಾಸ.
- ಮೀರಾಬಾಯಿಯು ಮೇವಾಡದ ರಜಪೂತ್ ರಾಜಕುಮಾರಿ. ಅವಳು ಮದುವೆಯಾದದ್ದು ರಾಣಾಸಿಂಗನ ಜೇಷ್ಠಪುತ್ರ ಭೋಜರಾಜನನ್ನು ಆಕೆ ಕೃಷ್ಣ ಭಕ್ತಿಗಾಗಿ ಪ್ರಸಿದ್ಧಳಾಗಿದ್ದಳು.

**ಸೂಫಿ ಚಳುವಳಿ:**

- 'ಸೂಫಿ' ಎಂಬ ಪದ ಬಂದಿರುವುದು ಸೂಫ ಅಂದರೆ ಉಣ್ಣೆ ಎಂಬ ಪದದಿಂದ, ಇವರ ಪೀರ್ ಅಥವಾ ಉಪದೇಶಕ ಇದ್ದುದ್ದು ಮರಣಶಯ್ಯೆಯಲ್ಲಿರುವ ರೋಗಿಗಳ ವೈದ್ಯಾಲಯದಲ್ಲಿ ಆ ವೈದ್ಯಾಲಯಕ್ಕೆ ಕನ್‌ಕ್ಯಾಹ್ ಎಂಬ ಹೆಸರಿತ್ತು. ಅವರು ಧಾರ್ಮಿಕ ಸಂಗೀತದಲ್ಲಿ ಆಸಕ್ತಿ ಹೊಂದಿ ಸಾಮ ಎಂಬ ಆ ಸಂಗೀತದಲ್ಲಿ ತಲ್ಲೀನರಾಗಿ ಭಾವಾವೇಶವನ್ನು ಹೊಂದುತ್ತಿದ್ದರು.
- ಪಿತೌಬಾ ಎಂದರೆ ದುಷ್ಕೃತ್ಯಗಳಿಗಾಗಿ ಪಶ್ಚಾತ್ತಾಪ ಪಡುವುದು.
- ತವಖ್ಖುಲ್ ಎಂಬುದರಿಂದ ಅವರಿಗೆ ತೃಪ್ತರಾಗಿರುವುದಕ್ಕೆ ಸಹಾಯಕವಾಗಿತ್ತು.
- ಅವರು ಎರಡು ಶಾಖೆಗಳಲ್ಲಿ ಕವಲಾದರು. ಬಾಷರಾ ಎಂದರೆ ಇಸ್ಲಾಂನ ನಿಯಮಗಳನ್ನು ಅನುಸರಿಸುವವರು, ಬೇಷರಾ ಎಂದರೆ ಷರಾದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದೆ ಇದ್ದವರು.
- ಇವರಲ್ಲಿ ಗುಹ್ರವರ್ದಿ ಶಾಖೆಯ ಷೇರ್ ಷಹಾಬುದ್ದೀನ್ ಷುಹ್ರವರ್ದಿಯಿಂದ ಪ್ರಾರಂಭವಾಯಿತು. ಭಾರತದಲ್ಲಿ ಇದರ ಸ್ಥಾಪನೆಯನ್ನು ಮುಲ್ತಾನಿನ ಷೇ ಬಹಾವುದ್ದೀನ ಜಕಾರಿಯಾ ಮಾಡಿದರು.
- ಚಿಸ್ತಿ ಪಂತರಿಗೆ ವ್ಯತಿರಿಕ್ತವಾಗಿ ಷಹ್ರವರ್ದಿ ಪಂಥದವರು ತುಂಬಾ ಹೆಚ್ಚಿನ ಉಪವಾಸ ವ್ರತಾದಿಗಳಲ್ಲಿ ಅಥವಾ ದೇಹದಂಡನೆಯಲ್ಲಿ ನಂಬಿಕೆ ಇಲ್ಲದವರು-ಅವರು ಮುಸ್ಲಿಂ ಶ್ರೀಮಂತರೊಡನೆ ಸಲೀಸಾಗಿ ಬೆರೆಯುತ್ತಿದ್ದರು ಮತ್ತು ರಾಜಕೀಯದಲ್ಲೂ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.
- ಇಲ್ತಮಷ್‌ನು ಷೇರ್ ಬಹ್ರಾವುದ್ದೀನನಿಗೆ ಷೇರ್-ಉಲ್-ಇಸ್ಲಾಂ ಎಂಬ ಬಿರುದನ್ನು ಕೊಟ್ಟನು.
- ಫಿರ್ದಸಿ ಶಾಖೆಯನ್ನು ದೆಹಲಿಯಲ್ಲಿ ಬದ್ರುದ್ದೀನ್ ಸಮರ್‌ಕಂಡಿ ಸ್ಥಾಪಿಸಿದನು. ಈ ಶಾಖೆಯ ತುಂಬಾ ಹೆಸರುವಾಸಿಯಾದ ಸೂಫಿ ಸಂತ ಎಂದರೆ ಪಾಟ್ನಾದ ಷರ್ಫುದ್ದೀನ್ ಅಹ್ಮದ್ ಯಾಹ್ಯಮಸೀರಿ.
- ಆತ ಮಹಮದ್ ಬಿನ್-ತುಘಲಕ್ ಮತ್ತು ಫೆರೋಜ್ ಷಾತುಘ್ಲಕ್‌ರ ರಾಜ್ಯಭಾರ ಕಾಲದಲ್ಲಿ ಇದ್ದನು. ಆತ ನಂಬಿದ್ದುದು ಸರ್ವಬ್ರಹ್ಮ ವಾದಾತ್ಮಕವಾದ ಅದ್ವೈತ ಸಿದ್ಧಾಂತದಲ್ಲಿ.
- ಚಿಸ್ತಿ ಶಾಖೆಯನ್ನು ಭಾರತದಲ್ಲಿ ಪ್ರಾರಂಭಿಸಿದವರು ಮೊಯಿನುದ್ದೀನ್ ಚಿಸ್ತಿ. ಅವರು ನೆಲೆಸಿದ್ದು ಅಜಮೇರದಲ್ಲಿ, ಅವರ ಶಿಷ್ಯರು ಹಮೀದುದ್ದೀನ ನಾಗೌರಿ ಅವರ ಉತ್ತರಾಧಿಕಾರಿ ಫರೀದ್ದುದ್ದೀನ್ ಮಹಮದ್ ಅವರ ಶಿಷ್ಯ ಜಿಯಾ ನಕ್ಷರಿ.
- ಕುತುಬ್ ಮೀನಾರ್‌ನ್ನು ಚಿಸ್ತಿ ಶಾಖೆಯ ಸೂಫಿ ಸಂತ ಕುತುಬುದ್ದೀನ ಭಕ್ತಿಯಾರ ಕಾಕಿ ಅವರಿಗೆ ಅರ್ಪಿಸಲಾಗಿದೆ.

- ಮೀರ ಅತಿಷ್ : ಫಿರಂಗಿಗಳ ಮುಖ್ಯಸ್ಥ
- ದರೋಗ-ಇ-ಡಾಕ್‌ಚೌಕಿ : ಪತ್ರ ವ್ಯವಹಾರ-ಅಂಚೆ ಇಲಾಖೆಯ ಮುಖ್ಯಸ್ಥ.
- ಮುಸ್ತಾಫಿ : ಲೆಕ್ಕ ಪತ್ರಗಳ ತನಿಖಾಧಿಕಾರಿ
- ನಸೀರ್-ಇ-ಖಯತುಬ : ಸಾರ್ವಭೌಮರ ಕಾರ್ಖಾನೆಗಳ ಮುಖ್ಯಸ್ಥ
- ಮುಸ್ರೀಫ್ : ಕಂದಾಯದ ಕಾರ್ಯದರ್ಶಿ
- ಮೀರಬಹ್ರಿ : ನೌಕಾಸೈನ್ಯದ ಮುಖ್ಯಸ್ಥ
- ಮೀರ್‌ಬಾರ : ಅರಣ್ಯಗಳ ಮುಖ್ಯಾಧಿಕಾರಿ
- ವಕಾ-ಇ-ನವೀಸ್ : ವರದಿಗಾರರು
- ಮೀರ್ ಅರ್ಜಿ : ಅರ್ಜಿಗಳ ಮೇಲ್ವಿಚಾರಕ
- ಮೀರ್ ಮುನ್ಸಿಲ್ : ಮಾಸ್ಟರ್ ಜನರಲ್
- ಮೀರ್ ತೋಜಕ್ : ಸಮಾರಂಭಗಳ ಮುಖ್ಯಸ್ಥ

**downloaded from: www.kpscvaani.com**

- ಕೊತ್ವಾಟ್ : ಶಾಂತಿಶಿಸ್ತು, ಪಾಲನೆ ನಗರಗಳಲ್ಲಿ ಸಂಯಮದ ವರ್ತನೆಯ ಮೇಲ್ವಿಚಾರಣೆ
- ಫೌಜದಾರ್ : ಜಿಲ್ಲೆಗಳಲ್ಲಿ ಶಾಂತಿ ಶಿಸ್ತು ವ್ಯವಸ್ಥೆ ಪಾಲನೆ.
- ಮುಫ್ತಿ : ಮಹಮದೀಯ ಕಾನೂನಿನ ಪಾಲಕ ಮತ್ತು ವ್ಯಾಖ್ಯಾನಕಾರ
- ಮೀರ್‌ಅದ್ಲ್ : ನ್ಯಾಯ ತೀರ್ಮಾನಗಳ ಕರಡು ಪ್ರತಿಯ ನಿರ್ವಹಣೆಗೆ ಮತ್ತು ನ್ಯಾಯ ತೀರ್ಮಾನಗಳ ಪ್ರಕಟಣೆ
- ಅಮಲ್‌ಗುಜಾರ್ : ಪರದಣ ಜಿಲ್ಲೆಗಳಲ್ಲಿ ಶಾಂತಿ ವ್ಯವಸ್ಥೆ ಶಿಸ್ತಿನ ಪಾಲನೆ
- ಅಮಿತ್ : ವಿವಾದಗಳಲ್ಲಿ (ಸಿವಿಲ್) ಮತ್ತು ಕಂದಾಯದ ವಿವಾದಗಳಲ್ಲಿ ನ್ಯಾಯಾಂಗಾಧಿಕಾರಿ

## ಮಧ್ಯಕಾಲೀನ ಭಾರತದ ಗ್ರಂಥಗಳು

- ಕಿತಾಬ್–ಉಲ್–ಹಿಂದ್ : ಅಲ್‌ಬೇರುನಿ
- ತಾರೀಖ್–ಇ–ಯಾಮಿನ : ಉತ್‌ಬಿ
- ತಾಜ್–ಉಲ್–ಮಸಿರ್ : ಹಸನ್ ನಿಜಾಮಿ
- ತಬಾಕತ್–ಇ–ನಾಸಿರಿ : ಮಿನ್ಹಾಸ್–ಉಲ–ಸಿರಾಜ
- ತುಘ್ಲಕಸಾಮಾ : ಅಮೀರ ಖುಸ್ರು
- ತಾರೀಖ್–ಇ–ಅಲೈ : ಅಮೀರ ಖುಸ್ರು
- ಮಿಲಾಹ್–ಉಲ್–ಫುತು : ಅಮೀರ ಖುಸ್ರು
- ತಾರೀಖ್–ಇ–ಫಿರೋಜಷಾಹಿ : ಬರಾನಿ
- ಫತ್ವಾ–ಇ–ಜಿಹಂದಾರಿ : ಬರಾನಿ
- ಫೌತುಹಟ್–ಇ–ಫಿರೋಜ್ ಷಾಹಿ : ಫಿರೋಜ್ ಷಾಹ್ ತುಘಲಕ್
- ತಾರಿಖ–ಇ–ಫಿರೋಜ್ ಷಾಹಿ : ಷಾನ್ಸ–ಇ–ಸಿರಾಜ್–ಅತಿಫ್
- ತಾರೀಖ–ಇ–ಮುಬಾರಷಾ : ಅಹ್ಮದಸಿರ್‌ಹಿಂದಿ
- ಫುತು–ಉಸ–ಸಲಾಟಿನ : ಇಸಾಮಿ
- ರೆಹಾಲಾ : ಇಟ್ನಬತೂತಾ
- ಬಾಬರ್ ನಾಮಾ : ಬಾಬರ್
- ತಾರಿಖ್–ಇ–ರಷೀದಿ : ಮಿರ್ಜಾ ಹೈದರ್
- ಹುಮಾಯೂನ ನಾಮಾ : ಗುಲ್‌ಬಂದನ್ ಬೇಗಂ
- ತಾರೀಖ್–ಇ–ಹುಮಾಯೂನ್ : ಜಾಹರ್ ಅಫ್ತಬ್ಚಿ
- ತಾರೀಖ–ಇ–ಷೇರಷಾಹಿ : ಅಬ್ಬಾಸಖಾನ್ ಸೆರ್ವಾನಿ
- ಅಕ್ಬರನಾಮಾ : ಅಬುಲ್ ಫಜಲ್
- ಮುಂಪಖುತ್ : ಬದೌನಿ
- ತಬಕತ–ಇ–ಅಕ್ಬರಿ : ನಿಜಾಮುದ್ದಿನ ಅಹ್ಮದ್
- ಬಾದಷಾಹನಾಮ್ : ಅಬ್ದುಲ ಹಮೀದ ಲಾಹೋರಿ
- ಅಲಾಂಗಿರನಾಮ್ : ಮಿರ್ಜಾ ಮಹಮದ ಕಾಸಿಂ
- ಮಷ್ಕಾ–ದಿಲ್‌ಖುಷ್ : ಭೀಮಸೇನ್
- ಫೌತುಹತ್ ಅಲಂಗಿರಿ : ಈಶ್ವರದಾಸ
- ಖುಲಾಸಾತ್–ಇ–ತವಾರಿಕ್ : ಸುಜನ–ರಾಯ–ಖತ್ರಿ

**downloaded from: www.kpscvaani.com**

# ಮರಾಠರ ಏಳಿಗೆ ಮತ್ತು ಭಾರತದ ವಿಚ್ಛೇದ್ರೀಕರಣ

ಶಿವಾಜಿ ಮರಾಠರಲ್ಲಿ ಭೋನ್ಸ್ಲೆ ವಂಶಕ್ಕೆ ಸೇರಿದವನು ಆತನ ತಂದೆ ಷಹಾಜಿ ಭೋನ್ಸ್ಲೆ ಅಹಮದ್ ನಗರದ ನಿಜಾಂಶಾಹಿ ಆಡಳಿತಗಾರರ ಕೈಕೆಳಗೆ ಸೈನ್ಯಾಧಿಕಾರಿಯಾಗಿದ್ದ. ಅಹಮದ ನಗರದ ಪತನದ ಷಹಜಿ ಬಿಜಾಪುರದ ಸೇವೆಗೆ ಸೇರಿದ. ಅವನಿಗೆ ಇಬ್ಬರು ಹೆಂಡತಿಯರಿದ್ದರು. ಶಿವಾಜಿ ಮೊದಲು ತೋರಣವನ್ನು ಗೆದ್ದನು. 1646ರಲ್ಲಿ ಅದರಲ್ಲಿ ಸಿಕ್ಕಿದ ಭಂಡಾರದಿಂದ ರಾಯಗಢದ ಕೋಟೆಯನ್ನು ಕಟ್ಟಿದ.

ಮುಂದಿನ ಎರಡು ವರ್ಷಗಳಲ್ಲಿ ಚಾಕನ್ ಕೊಂಡಣ ಮತ್ತು ಪುರಂದರಗಳನ್ನು ವಶಪಡಿಸಿಕೊಂಡ. ನಂತರ 1656ರಲ್ಲಿ ಚಂದ್ರರಾವ್ ಮೋರೆಯಿಂದ ಜನ್ನಿಯನ್ನು ವಶಪಡಿಸಿಕೊಂಡ. ನಂತರ ಬಂದರುಗಳಾದ ಕಲ್ಯಾಣ ಮತ್ತು ಭಿವಂಡಿಗಳನ್ನು ಗೆದ್ದುಕೊಂಡ. ದಾಮನ್‌ನಲ್ಲಿದ್ದ ಪೋರ್ಚುಗೀಸ್ ವಸತಿಯ ಮೇಲೆ ಧಾಳಿ ಮಾಡಿ ಅವರು ಕಪ್ಪವನ್ನು ಕೊಡುವಂತೆ ಮಾಡಿದ. 1659ರಲ್ಲಿ ಬಿಜಾಪುರದ ಆಲಿಅದಿಲ್‌ಷಹನು ಶಿವಾಜಿಗೆ ಬುದ್ಧಿ ಕಲಿಸಲು ಅಫ್ಜಲ್ ಖಾನನನ್ನು ಕಳಿಸಿದ ಶಿವಾಜಿಯು ಅಫ್ಜಲ್‌ಖಾನನನ್ನು ತನ್ನ ವ್ಯಾಘ್ರ ನಖದಿಂದ ಕೊಂದನು.

ದಖ್ಖನ್ನಿನಲ್ಲಿ ಮೊಗಲ್‌ರ ರಾಜಪ್ರತಿನಿಧಿಯಾಗಿದ್ದ ಶೈಸ್ತಾಖಾನನನ್ನು ಮರಾಠರ ಅಧಿಕಾರ ವ್ಯಾಪ್ತಿಯ ಪ್ರದೇಶಗಳ ಮೇಲೆ ಧಾಳಿ ಮಾಡಲು ಔರಂಗಜೇಬನು ಕಳಿಸಿದನು. ಇವರ ಯುದ್ಧ 1663ರವರೆಗೂ ಮುಂದುವರಿಯಿತು. 1663ರ ಏಪ್ರಿಲ್ 14ರಂದು ಶೈಸ್ತಾಖಾನನ ಶಿಬಿರದ ಮೇಲೆ ಶಿವಾಜಿಯು ಮಿಂಚಿನ ಧಾಳಿಯನ್ನು ಮಾಡಿದನು. ಶೈಸ್ತಾಖಾನನು ಗಾಯಗೊಂಡು ಹೆದರಿದನು. ಔರಂಗಜೇಬನು ಅವನಿಗೆ ಶಿಕ್ಷೆಯೆಂದು ಬಂಗಾಳಕ್ಕೆ ವರ್ಗಾಯಿಸಿದನು.

ಮರಾಠರ ಅಧಿಕಾರವನ್ನು ವಿನಾಶಗೊಳಿಸಲು ಔರಂಗಜೇಬನು ಮಿರ್ಜಾರಾಜಾ ಜೈಸಿಂಗನನ್ನು ಕಳಿಸಿದನು. ಎರಡು ತಿಂಗಳ ಯುದ್ಧದ ನಂತರ ಶಿವಾಜಿ ಶಾಂತಿ ಪ್ರಸ್ತಾಪ ಮಾಡಿದನು. 1665ರ ಜೂನ್ 24ರಂದು ಪುರಂಧರ ಒಪ್ಪಂದಕ್ಕೆ ಸಹಿಯಾಯಿತು. ಈ ಒಪ್ಪಂದದಿಂದ ಶಿವಾಜಿ ತನ್ನ ವಶದಲ್ಲಿದ್ದ 35 ಕೋಟೆಗಳ ಪೈಕಿ 23ನ್ನು ಬಿಟ್ಟುಕೊಟ್ಟನು. ಶಿವಾಜಿಯ ಮಗ ಸಂಭಾಜಿಗೆ 5000 ಜನರ ಮನಸಬದಾರಿಕೆ ದೊರೆಯಿತು.

ಶಿವಾಜಿಯ ಪಟ್ಟಾಭಿಷೇಕ 1674ರ ಜೂನ್ 16ರಂದು ರಾಯಘಡದಲ್ಲಿ ಅದ್ದೂರಿಯಾಗಿ ನಡೆಯಿತು. ಅವನ ಮಹಾರಾಜ ಛತ್ರಪತಿ ಎಂಬುದಾಗಿ ತನ್ನನ್ನು ಕರೆದುಕೊಂಡನು.

ಸಂಭಾಜಿಯು ಶಿವಾಜಿಯ ಉತ್ತರಾಧಿಕಾರಿಯಾದನು (1680–89). ಅವನು ಸಡಿಲ ನಡವಳಿಕೆಯವನಾಗಿದ್ದನು. ಜನಪ್ರಿಯನಾಗೂ ಇರಲಿಲ್ಲ. ಅವನು ಕವಿಕಲಶ ಎಂಬ ಬ್ರಾಹ್ಮಣನನ್ನು ತನ್ನ ಆಪ್ತ ಸಲಹೆಗಾರನನ್ನಾಗಿ ನಿಯಮಿಸಿಕೊಂಡನು.

ಔರಂಗಜೇಬನ ದಂಗೆಯೆದ್ದ ಮಗ ರಾಜಕುಮಾರ ಅಕ್ಬರನು ಇವರಲ್ಲಿ ಆಶ್ರಯ ಪಡೆದಿದ್ದನು. 1689ರಲ್ಲಿ ಮೊಘಲ್ ಸೇನಾಪತಿ ಮುಖರ್ರಬ್ ಖಾನನು ಸಂಭಾಜಿಯನ್ನು ಸೋಲಿಸಿದನು. ಅವನೂ ಅವನ ಮಂತ್ರಿ ಕವಿಕಲಶನು ಮೃತರಾದರು. ಸಂಭಾಜಿಯ ಪತ್ನಿ ಯೇಸುಬಾಯಿ ರಾಯಗಢ್ ಕೋಟೆಯನ್ನು ರಕ್ಷಿಸಲು ಅಸಮರ್ಥಳಾದಳು. ಆಕೆಯ ಮಗ ಶಾಹುವೂ ಬಂಧಿಗಳಾದರು.

ಸಂಬಾಜಿಯ ನಂತರ ರಾಜಾರಾಮನು ಉತ್ತರಾಧಿಕಾರಿಯಾದನು. ಅವನು ತನ್ನ ಕೇಂದ್ರವನ್ನು ಜಿಂಜಿ ಕೋಟೆಗೆ ವರ್ಗಾಯಿಸಿದನು. ನಿಷ್ಠಾವಂತ ಮರಾಠ ನಾಯಕರಾದ ರಾಮಚಂದ್ರ ಪಂತ್, ಪ್ರಹ್ಲಾದ್ ನೀರಾಜಿ, ಪರಶುರಾಮ್ ತ್ರಿಯಂಬರ್ಕ್, ಸಂಕರ್ಜಿ ನಾರಾಯಣ, ಸಂತಾಜಿ, ಘೋರ್ಪಡೆ, ಧನಾಜಿ ಜಾಧವ ಮುಂತಾದವರು ಮುಘಲರಿಗೆ ವಿಪರೀತ ಕಿರುಕುಳ ಕೊಟ್ಟರು.

ರಾಜಾರಾಮನ ಮರಣಾನಂತರ ಅವನ ಪತ್ನಿ ಧೈರ್ಯಶಾಲಿಯೂ, ಧೀಮಂತೆಯೂ ಆದ ತಾರಾಬಾಯಿ, ಅವನ ಅಪ್ರಾಪ್ತ ವಯಸ್ಸುಳ್ಳ ಮಗ ಎರಡನೆಯ ಶಿವಾಜಿಗೆ ರಕ್ಷಕಳಾದಳು.

ಔರಂಗಜೇಬನ ಮಗ ಅಜಂಷಹಾನು ಶಾಹುವನ್ನು 1707ರಲ್ಲಿ ಬಿಡುಗಡೆ ಮಾಡಿ ಅವರ ಸಲಹೆಗಾರ ಜುಲ್ಫಿಕಾರಖಾನ್ ಮರಾಠರಲ್ಲಿ ಅಂತರ್ಯುದ್ಧ ತೊಡಗುವುದೆಂದು ಆಶಿಸಿದರು. 1707ರಲ್ಲಿ ಖೇಡ್ ಎಂಬ ಸ್ಥಳದಲ್ಲಿ ತಾರಾಬಾಯಿ ಸೋಲಿಸಲ್ಪಟ್ಟಳು. 1708ನೇ ಇಸವಿ ಜನವರಿ 12ರಂದು ಸಾತಾರಾದಲ್ಲಿ ಶಾಹು ಪಟ್ಟಾಭಿಷಿಕ್ತನಾದನು.

**downloaded from: www.kpscvaani.com**

1714ರಲ್ಲಿ ರಾಜಾರಾಮನ ಎರಡನೆಯ ಹೆಂಡತಿ ರಾಜಾಬಾಯಿಯು ತಾರಾಬಾಯಿಯನ್ನು ಅವನ ಮಗನನ್ನು ಬಂಧನದಲ್ಲಿಟ್ಟು ತನ್ನ ಮಗ ಎರಡನೆಯ ಸಂಬಾಜಿಯೊಡನೆ ಕೊಲ್ಹಾಪುರದಲ್ಲಿ ವಾಸ್ತವೂ ಮಾಡಿದಳು. 1731ರ ವರ್ಷಾ ಒಪ್ಪಂದದಿಂದ ಇದು ಸಿದ್ಧವಾಯಿತು. ಕೊಲ್ಹಾಪುರವನ್ನು ದಕ್ಷಿಣ ಮರಾಠ ಒಕ್ಕೂಟ ಎಂದು ಒಪ್ಪಲಾಯಿತು.

***ಮರಾಠರ ಆಡಳಿತ:***

ಮರಾಠರ ಆಡಳಿತ ವ್ಯವಸ್ಥೆಯು ಅಹಮದನಗರದಲ್ಲಿ ಮಲಿಕ್ ಅಂಬರನು ಚಾಲ್ತಿಯಲ್ಲಿಟ್ಟಿದ್ದ ಮತ್ತು ಬಹುಮನಿ ರಾಜ್ಯದಲ್ಲಿ ಮಹಮದ ಗವಾನನು ಅನುಸರಿಸುತ್ತಿದ್ದ ವ್ಯವಸ್ಥೆಯನ್ನು ಅನುಸರಿಸಿತು. ಮರಾಠ ರಾಜ್ಯವನ್ನು ಸ್ವರಾಜ್ಯ ಅಥವಾ ಮುತ್ಕನಿಕಾಡಿಂ ಎನ್ನುತ್ತಿದ್ದರು.

ಪ್ರಾಂತ್ಯಗಳನ್ನು ಮಹಲ್ ಅಥವಾ ಸುಖಾ ಎನ್ನುತ್ತಿದ್ದರು. ಮರಾಠರು ಚೌತಾ ಅಥವಾ ನಾಲ್ಕನೆಯ ಒಂದು ಭಾಗದ ಬೆಳೆಯನ್ನು ಭೂಕಂದಾಯವಾಗಿ ಪಡೆಯುತ್ತಿದ್ದರು. ಪರದೇಶಮುಖಿ ಅಥವಾ ನಿಗದಿತ ಭೂಕಂದಾಯದ ಹತ್ತನೆಯ ಒಂದು ಭಾಗವನ್ನು ಒಂದು ನಗರದ ಅಥವಾ ಗ್ರಾಮದ ಪ್ರಜೆಗಳು ಸಾಮೂಹಿಕವಾಗಿ ಕೊಡಬೇಕಾಗಿತ್ತು. ಇದನ್ನು ಕೊಡುತ್ತಿದ್ದುದು ಅವರು ಮರಾಠ ರಾಜ್ಯವನ್ನು ತಮ್ಮ ಪರ ದೇಶಮುಖ ಅಥವಾ ಪಾಲಕ ಎಂದು ಒಪ್ಪಿಕೊಂಡದ್ದಕ್ಕಾಗಿ.

**ಪೇಶ್ವಾ ಅಥವಾ ಮುಖ್ಯಪ್ರಧಾನ:** ಈತ ಪ್ರಧಾನ ಮಂತ್ರಿಯಾಗಿದ್ದ. ರಾಜ್ಯದ ಸಂಪೂರ್ಣ ಆಡಳಿತದ ಜವಾಬ್ದಾರಿ ಈತನ ಮೇಲಿತ್ತು.

**ಅಮಾತ್ರ;** ಈತ ಹಣಕಾಸಿನ ಮಂತ್ರಿಯಾಗಿದ್ದ. ಆದಾಯ ಮತ್ತು ಖರ್ಚು ಎರಡರ ನಿರ್ವಹಣೆ ಈತನ ಜವಾಬ್ದಾರಿಯಾಗಿದ್ದು ಆದಾಯವನ್ನು ಹೆಚ್ಚಿಸುವುದು ಇವನ ಕರ್ತವ್ಯವಾಗಿತ್ತು.

**ಮಂತ್ರಿ ಅಥವಾ ವಾರೆಯನವಿಸ್:** ಆಸ್ಥಾನದ ನಡವಳಿಕೆಗಳನ್ನು ದಾಖಲಿಸುತ್ತಿದ್ದವನು. ಈತ ರಾಜನ ದಿನನಿತ್ಯದ ಚಟುವಟಿಕೆಗಳನ್ನು ದಾಖಲೆ ಮಾಡುತ್ತಿದ್ದ ರಾಜನ ಸಂರಕ್ಷಣೆ ಇವನ ಜವಾಬ್ದಾರಿಯಾಗಿತ್ತು.

**ಸಚಿವ ಅಥವಾ ಸುರ್ನವಿಸ್**: ಈತ ರಾಜನ ಕಚೇರಿಯ ಮುಖ್ಯಸ್ಥನಾಗಿದ್ದು, ರಾಜನ ಪತ್ರವ್ಯವಹಾರ, ರಾಜನ ಆಜ್ಞೆಗಳು, ರಾಜನ ಸೂಚನೆಗಳು ಮುಂತಾದವನ್ನು ಜಾರಿ ಮಾಡುತ್ತಿದ್ದ.

**ಸುಮಂತ ಅಥವಾ ದಬೀರ:** ಇವನು ವಿದೇಶಿ ವ್ಯವಹಾರಗಳ ಮಂತ್ರಿಯಾಗಿದ್ದ. ಇವನು ರಾಜನಿಗೆ ವಿದೇಶಿಗಳೊಡನೆ ವ್ಯವಹಾರ, ಯುದ್ಧ ಮತ್ತು ಶಾಂತಿ ಇವುಗಳ ಬಗ್ಗೆ ಸಲಹೆ ನೀಡುತ್ತಿದ್ದ, ಇವನು ವಿದೇಶಿ ರಾಯಭಾರಿಗಳನ್ನು ಭೇಟಿಮಾಡುತ್ತಿದ್ದ ಮತ್ತು ವಿದೇಶಿಗಳಿಗೆ ರಾಯಭಾರಿಗಳನ್ನು ಕಳಿಸುತ್ತಿದ್ದ. ಸೇನಾಪತಿ ಅಥವಾ ಪಾರ್–ಇ–ನೌಬತ್ ಇವನು ಸೇನೆಯ ಮುಖ್ಯ ದಂಡನಾಯಕನಾಗಿದ್ದ.

**ಪಂಡಿತರಾವ್ ಅಥವಾ ದಾನಾಧ್ಯಕ್ಷ:** ಈತ ಧಾರ್ಮಿಕ ವಿಷಯಗಳು, ದತ್ತಿಗಳು ರಾಜನ ದೇಣಿಗೆಗಳು, ಧಾರ್ಮಿಕ ದತ್ತಿಗಳು ಮುಂತಾದವುಗಳನ್ನು ನೋಡಿಕೊಳ್ಳುತ್ತಿದ್ದ.

**ನ್ಯಾಯಾಧೀಶ:** ಈತ ಪ್ರಧಾನ ನ್ಯಾಯಾಧೀಶನಾಗಿದ್ದ ಎಲ್ಲಾ ವ್ಯವಹಾರ ಸಂಬಂಧವಾದ ಮತ್ತು ಅಪರಾಧಗಳ ಸಂಬಂಧವಾದ ವಿಷಯಗಳಲ್ಲೆಲ್ಲಾ, ರಾಜನನ್ನು ಬಿಟ್ಟರೆ ಇವನದೇ ಅಂತಿಮ ತೀರ್ಮಾನವಾಗಿರುತ್ತಿತ್ತು. ರಾಜಾರಾಮನು ಹೊಸ ಹುದ್ದೆ ಪ್ರತಿನಿಧಿ ಎಂಬುದನ್ನು ಸೃಷ್ಟಿಮಾಡಿದ.

ನ್ಯಾಯಾಧೀಶ ಮತ್ತು ಪಂಡಿತರಾವನನ್ನು ಬಿಟ್ಟು ಉಳಿದೆಲ್ಲಾ ಮಂತ್ರಿಗಳು ಯುದ್ಧದಲ್ಲಿ ಪಾಲ್ಗೊಳ್ಳುತ್ತಿದ್ದರು. ಸಂಗ್ರಹವಾಗುತ್ತಿದ್ದ ಚೌಥಾಯದಲ್ಲಿ ಶೇಕಡಾ 25 ಭಾಗ ಕೇಂದ್ರ ಸರ್ಕಾರಕ್ಕೆ, ಶೇಕಡಾ 66 ಭಾಗ ಮೋಕಾಸಾ ಮತ್ತು ಸರಂಜಾಮುಗಳಿಗೆ ಅಭ್ಯಾಸ ಸಹೋತ್ತಾ ಎಂದು ಸಚಿವರಿಗೆ ಮತ್ತು ಶೇಕಡಾ 3 ಭಾಗ ವಾಡಗೌಡರಿಗೆ ಸಂದಾಯವಾಗುತ್ತಿತ್ತು. ಸರಂಜಾಮಿ ಪದ್ಧತಿ ಎಂದರೆ ಸೈನಿಕರಿಗೆ ಸಂಬಳದ ಬದಲು ಕೊಡುತ್ತಿದ್ದ ಭೂಕಂದಾಯದ ಭಾಗ.

**downloaded from: www.kpscvaani.com**

## ಶಿವಾಜಿಯ ಅಷ್ಟ ಪ್ರಧಾನರು

| | | |
|---|---|---|
| • ಪೇಶ್ವಾ ಅಥವಾ ಮುಖ್ಯ ಪ್ರಧಾನ | : | ಪ್ರಧಾನ ಮಂತ್ರಿ |
| • ಅಮಾತ್ಯ ಅಥವಾ ಮಜುಂದಾರ | : | ಅರ್ಥ ಮಂತ್ರಿ |
| • ಮಂತ್ರಿ ಅಥವಾ ವಾಕಿಯಾನವಿಸ್ | : | ನ್ಯಾಯಾಲಯದ ಕಾರ್ಯಭಾರವನ್ನು ದಾಖಲೆ ಮಾಡುತ್ತಿದ್ದರು. |
| • ಸಚಿವ ಅಥವಾ ಸುರನಾಲಿಸ್ | : | ರಾಜರ ಕಾರ್ಯ ಇಲಾಖೆಯ ಮತ್ತು ಪತ್ರ ವ್ಯವಹಾರದ ಮೇಲುಸ್ತುವಾರಿ |
| • ಸುಮಂತ ಅಥವಾ ದಬೀರ | : | ವಿದೇಶಾಂಗ ಮಂತ್ರಿ |
| • ಸೇನಾಪತಿ ಅಥವಾ ಪಾರ್-ಇ-ನೌಖತ್ | : | ಮುಖ್ಯ ದಂಡನಾಯಕ |
| • ಪಂಡಿತರಾವ ಅಥವಾ ದಂಡಾಧ್ಯಕ್ಷ | : | ರಾಜನಿಗೆ ಧಾರ್ಮಿಕ ಸಲಹೆಗಾರ |
| • ನ್ಯಾಯಾಧೀಶ | : | ಮನವಿಗಳನ್ನು ಪರಿಶೀಲಿಸುವ ಉಚತಮ ನ್ಯಾಯಪೀಠ (ಅದರ ನಂತರ ಮನವಿ ರಾಜನಿಗೆ ಮಾತ್ರ) |

**ಪೇಶ್ವೆಗಳು:**

**ಬಾಲಾಜಿ ವಿಶ್ವನಾಥ:** (1712–20) ಶಾಹು ತನ್ನ ಸ್ಥಾನವನ್ನು ಗಟ್ಟಿ ಮಾಡಿಕೊಳ್ಳಲು ಇವನು ಅವನಿಗೆ ಸಹಾಯ ಮಾಡಿದ. ಇವನು 1719ರಲ್ಲಿ ದೆಹಲಿಯಲ್ಲಿ ಸೈಯದ್ ಹುಸೇನ್ ಆಲಿಯೊಡನೆ ಈ ದೆಹಲಿ ಒಪ್ಪಂದ ಮಾಡಿಕೊಂಡನು.

**ಒಂದನೆಯ ಬಾಜೀರಾವ್:** ಇವನು ಹಿಂದು ಪದಪಾದಶಾಹಿ ಅಥವಾ ಹಿಂದು ಸಾಮ್ರಾಜ್ಯದ ಗುರಿಯನ್ನು ಜನಪ್ರಿಯಗೊಳಿಸಿದನು. ನಿಜಾಮನನ್ನು ಫಾಲಖೇಡದ ಬಳಿ ಸೋಲಿಸಿದನು. ನಿಜಾಮನ ಸೋಲಿನ ನಂತರ ದುರ್ರಾಸರೈ ಒಪ್ಪಂದ ಆಯಿತು.

ಭೋಪಾಲ್ ಯುದ್ಧದಲ್ಲೂ ನಿಜಾಮನನ್ನು ಸೋಲಿಸಿದನು. ಬಾಲಾಜಿ ಬಾಜೀರಾಯನು (1740–61) ಆಲಿವರ್ದಿ ಖಾನನನ್ನು ಸೋಲಿಸಿದನು. ಇವನ ಆಡಳಿತದಲ್ಲಿ ಪರಮಾಧಿಕಾರ ಪೇಶ್ವೆಗಳ ಕೈಗೆ 1750ರ ಸಂಗೋಲಾ ಒಪ್ಪಂದದ ನಂತರ ಬಂದಿತ್ತು. ಮೂರನೆಯ ಪಾಣಿಪತ್ ಯುದ್ಧ 1761ರಲ್ಲಿ ನಡೆಯಿತು.

ಮಾಧವರಾಯನ (1761–62) ಕಾಲದಲ್ಲಿ ಮರಾಠ ರಾಜ್ಯವು ಸ್ವತಂತ್ರ ರಾಜ್ಯಗಳಾಗಿ ಹೋಳಾದವು. ಇಂದೂರಿನಲ್ಲಿ ಹೋಳಾರ್ಕ್ಯ ನಾಗಪುರದಲ್ಲಿ ಭೋಸ್ಲೆ, ಗ್ವಾಲಿಯರ್‌ದಲ್ಲಿ ಸಿಂಧ್ಯ ಮತ್ತು ಬರೋಡಯಲ್ಲಿ ಗಾಯಕವಾಡ್ ಸ್ವತಂತ್ರರಾದರು.

***ಔರಂಗಜೇಬನ ನಂತರದ ಮೊಘಲರು:***

ಇವನು ಹಿಂದೂಗಳ ವಿಷಯದಲ್ಲಿ ಹೆಚ್ಚು ಸಹನೆಯ ಮನೋಭಾವ ಹೊಂದಿದ್ದನು. ಜೆಸಿಯಾವನ್ನು ತೆಗೆದು ಹಾಕಿದನು. ಮೇವಾಡ ಮತ್ತು ಮಾರ್ಗರಗಳ ಸ್ವಾತಂತ್ರ್ಯವನ್ನು ಒಪ್ಪಿಕೊಂಡನು. ಶಾಹುವನ್ನು ಬಿಡುಗಡೆ ಮಾಡಿದನು. ಮೊಘಲ್ ಚರಿತ್ರಕಾರ ಖಾಫಿಖಾನನು ಅವನಗೆ ಷಹಾ-ಇ-ಬೇಖಬರ್ ಎಂದು ಕರೆದನು.

ಜಹಾಂದರ್ ಷಹನ ಪ್ರೀತಿಪಾತ್ರಗಳಾಗಿದ್ದ ಲಾತ್‌ಕನ್ಸಾರ್ ಆಸ್ಥಾನದಲ್ಲಿ ಪ್ರಭಾವಶಾಲಿಯಾಗಿದ್ದಳು. 1713ರಲ್ಲಿ ಫರೂಕ್ಸಿಯರನು ಜಹಾಂದರ ಷಹನನ್ನು ಆಗ್ರಾದಲ್ಲಿ ಸೋಲಿಸಿದನು. ಇವನ ಆಡಳಿತವನ್ನು ಕನ್ಸಾರ ಖಾನನು ಈ ರೀತಿ ಬಣ್ಣಿಸಿದ್ದಾನೆ "ಗೂಬೆಯು ಗುರುಡನ ಗೂಡಿನಲ್ಲಿ ವಾಸ್ತವ್ಯ ಮಾಡಿತ್ತು. ಬುಲ್‌ಬುಲ್ ಪಕ್ಷಿಯ ಭಾಗವನ್ನು ಕಾಗೆಯು ಆಕ್ರಮಿಸಿತ್ತು" ಎಂದು. ಫರೂಕ್ಸಿಯಾರನು ಸೈಯದ್ ಸೋದರರ ಸಹಾಯದಿಂದ ಅಧಿಕಾರಕ್ಕೆ ಬಂದನು. ಅವನು ಸೈಯದ್ ಅಬ್ದುಲ್ಲಾಖಾನನನ್ನು ತಜೀರನನ್ನು ಹುಸೇನ ಆಲಿಖಾನನನ್ನು ಮೀರ ಭಕ್ಷಿಯನ್ನಾಗಿಯೂ ನಿಯಮಿಸಿದನು. ಜುಲ್ಫಿಕಾರ ಖಾನನು ಕೊಲೆಯಾದನು.

downloaded from: www.kpscvaani.com

1717ರಲ್ಲಿ ಸಾರ್ವಭೌಮನು ಯಾವುದೇ ವಿವೇಚನೆಯಿಲ್ಲದೆ ಈಸ್ಟ್ ಇಂಡಿಯಾ ಕಂಪೆನಿಗೆ ಉದಾರವಾದ ಸವಲತ್ತುಗಳನ್ನು ನೀಡಿದನು. ಅವುಗಳಲ್ಲಿ ಅವರು ಬಂಗಾಳದ ಮೂಲಕ ನಡೆಸುತ್ತಿದ್ದ ವ್ಯಾಪಾರಕ್ಕೆ ಕಪ್ಪು ತೆರಿಗೆಯ ವಿನಾಯಿತಿಯೂ ಸೇರಿತ್ತು. ಹುಸೇನ್ ಆಲಿಯು ಬಾಲಾಜಿ ವಿಶ್ವನಾಥನೊಡನೆ ಒಪ್ಪಂದ ಮಾಡಿಕೊಂಡು, ದೆಹಲಿಯಲ್ಲಿ ನಡೆಯುತ್ತಿದ್ದ ಕದನಕ್ಕೆ ಮರಾಠರ ಸಹಾಯಕ್ಕಾಗಿ ಪ್ರತಿಯಾಗಿ ಅವರಿಗೆ ಅನೇಕ ಉದಾರವಾದ ಸವಲತ್ತುಗಳನ್ನು ಕೊಟ್ಟನು.

1719ರಲ್ಲಿ ಸೈಯದ ಸೋದರರು ಮರಾಠಾ ಸೈನ್ಯದ ಸಹಾಯದಿಂದ ಫರೂಕ್ಸಿಯಾರನ್ನು ಕೊಂದುಹಾಕಿದರು. ಸಯ್ಯದ ಸೋದರರು ಜಚ್ಚಿಯಾವನ್ನು ಪ್ರತಿಯಾಗಿ ತೆಗೆದುಹಾಕಿ ತುಂಬಾ ಸ್ಥಳಗಳಿಂದ ಯಾತ್ರಿಕರ ಮೇಲಿನ ಕರವನ್ನು ತೆಗೆದುಹಾಕಿದರು. ಫರೂಕ್ಸಿಯಾರನ ನಂತರ ಸೈಯದ ಸೋದರರು ರಫಿ–ಉದ್–ದಜತ್‌ನನ್ನು ಸಿಂಹಾಸನದ ಮೇಲೆ ಕೂಡಿಸಿದರು. ಆದರೆ ಅವನು ನಾಲ್ಕು ತಿಂಗಳಲ್ಲೇ ಕ್ಷಯರೋಗದಿಂದ ಸತ್ತನು.

1719ರಲ್ಲಿ ರಫಿ–ಉದ್–ದೌಲನು ಸಿಂಹಾಸನವನ್ನೇರಿದನು. ಅವನು ಎರಡನೆಯ ಷಹಜಹಾನನೆಂದು ಕರೆಸಿಕೊಂಡನು. ಸೈಯದ್ ಸೋದರರ ಸಹಾಯದಿಂದ ಮಹಮದ್ ಷಹನು (1719–48) ಸಿಂಹಾಸನವನ್ನು ಏರಿದನು. ಇವನಿಗೆ ಷೋಷನ್ ಅಖ್ತರ್ ಎಂದು ಹೆಸರಿತ್ತು.

1739ರಲ್ಲಿ ನಾದಿರಷಹನು ಭಾರತದ ಮೇಲೆ ಆಕ್ರಮಣ ನಡೆಸಿದನು. ಮುಹಮದ್ ಷಹನು ನರ್ತನದಲ್ಲಿ ಹೆಚ್ಚು ಆಸಕ್ತಿ ಹೊಂದಿದವನಾಗಿದ್ದು ನಿಷ್ಣಾವಂತನಾದ ಕಥಕ ನರ್ತಕನೂ ಆಗಿದ್ದನು. ಸ್ತ್ರೀಯರಲ್ಲಿ ಮತ್ತು ಕುಡಿತದಲ್ಲಿ ಅವನು ಹೆಚ್ಚು ಆಸಕ್ತಿವಾಗಿದ್ದುದರಿಂದ ಅವನಿಗೆ ರಂಗೀಲಾ ಎಂದು ಅಡ್ಡಹೆಸರು ಬಂದಿತ್ತು.

ಮುಹಮದ್ ಷಹನು ಅಹ್ಮದಷಹನಿಗೆ ಉಧಾಭಾಯಿ ಎಂಬ ನರ್ತಕಿಯಲ್ಲಿ ಹುಟ್ಟಿದ ಮಗ. ಅಹಮದಷಾ ಅಬ್ದಾಲಿಯು ದೆಹಲಿಯ ಮೇಲೆ ಅನೇಕ ಬಾರಿ ದಾಳಿ ನಡೆಸಿದನು. ಪಂಜಾಬ ಮತ್ತು ಮುಲ್ತಾನ್‌ಗಳನ್ನು ಅವನಿಗೆ ಬಿಟ್ಟುಕೊಡಲಾಯಿತು. ಮರಾಠರು ಮಾಳ್ವ ಮತ್ತು ಬುಂದೇಲಖಂಡಗಳನ್ನು ಕಸಿದುಕೊಂಡರು. ಅವನ ವಜೀರನಾದ ಇಮಾದ್–ಉಲ್–ಮುಲ್ಕಾನು ಅವನ ಕಣ್ಣು ಕೀಳಿಸಿ ಎರಡನೆಯ ಅಲಂಗೀರನನ್ನು ಸಿಂಹಾಸನದ ಮೇಲೆ ಕೂಡಿಸಿದನು.

ರಾಜಕುಮಾರ ಆಲಿಗೌಹರನು ಎರಡನೆಯ ಷಾಆಲಂ ಎಂಬ ಬಿರುದನ್ನು ಧರಿಸಿದನು. ಅವನು ಬಿಹಾರದ ಗಥೌಲಿಯಲ್ಲಿ ಷಜಾಉದ್ದೀನನ ರಕ್ಷಣೆಯಲ್ಲಿ ಅನಭಿಷಕ್ತನಾದನು. ಇನ್ನೊಬ್ಬ ರಾಜಕುಮಾರ ಮೂರನೆಯ ಷಹಜಾನನು ದೆಹಲಿಯಲ್ಲಿ ಅಭಿಷಕ್ತನಾದನು. ಷಾಆಲಮನು 12 ವರ್ಷ ದೇಶಭ್ರಷ್ಟನಾಗಿರಬೇಕಾಯಿತು. 1764 ಬಕ್ಸಾರ್ ಯುದ್ಧದಲ್ಲಿ ಬ್ರಿಟಿಷರಿಗೆ ಸೋತು ಅಲಹಾಬಾದಿನಲ್ಲಿ ಬ್ರಿಟಿಷರ ಪಂಚಣಿದಾರನಾಗಿ ಹಲವು ವರ್ಷ ಕಳೆದನು. ಅಲಹಾಬಾದ್ ಒಪ್ಪಂದದ ಪ್ರಕಾರ ಚಕ್ರವರ್ತಿ ಷಾಆಲಮನಿಗೆ ಅಲಹಾಬಾದ್ ಮತ್ತು ಕಾರಾಪ್ರದೇಶಗಳಲ್ಲಿ, ಬಂಗಾಳದಿಂದ 26 ಲಕ್ಷ ವಾರ್ಷಿಕ ವರಮಾನವೂ ದೊರೆಯಿತು.

ಒಂದು ಫರ್ಮಾನಿನ ಮೂಲಕ ಬ್ರಿಟಿಷರು ಗಳಿಸಿದ್ದೆಲ್ಲವನ್ನು ಅವರಿಗೆ ಬಿಟ್ಟುಕೊಟ್ಟನು. ಬಂಗಾಳ, ಬಿಹಾರ ಮತ್ತು ಒರಿಸ್ಸಾಗಳ ದಿವಾನಿಯನ್ನು ಅವರಿಗೆ ಕೊಟ್ಟನು. 1803ರಲ್ಲಿ ಇಂಗ್ಲಿಷರು ದೆಹಲಿಯನ್ನು ವಶಪಡಿಸಿಕೊಂಡರು. ಎರಡನೆಯ ಅಕ್ಬರನ ರಾಜ್ಯಭಾರ ಕಾಲದಲ್ಲಿ ರಾಜಾರಾಮಮೋಹನರಾಯ ಇಂಗ್ಲೆಂಡಿಗೆ ಹೊರಟನು.

**ಬಂಗಾಳ**

1700ರಲ್ಲಿ ಔರಂಗಜೇಬನು ಮುರ್ಷಿದ್ ಕುಲಿಖಾನನನ್ನು ಬಂಗಾಳದ ದಿವಾನನ್ನಾಗಿ ನೇಮಿಸಿದನು. ಫರೂಕ್ಸಿಯಾರನ್ನು 1717ರಲ್ಲಿ ಅವನನ್ನು ಸುಬೇದಾರನನ್ನಾಗಿ ನೇಮಕ ಮಾಡಿದನು. ಅವನು ತನ್ನ ರಾಜಧಾನಿಯನ್ನು ಢಾಕಾದಿಂದ ಮುರ್ಷಿದಾಬಾದಿಗೆ ಬದಲಾಯಿಸಿದನು. ಷಜಾಉದ್ದೀನನು ಮುರ್ಷಿದ ಕುಲಿಖಾನನ ಅಳಿಯ. 1737ರಲ್ಲಿ ಬಿಹಾರವನ್ನು ಬಂಗಾಳಕ್ಕೆ ಸೇರಿಸಲಾಯಿತು. ಆಗ ಬಂಗಾಳದ ನವಾಬರು ಬಂಗಾಳ, ಬಿಹಾರ ಮತ್ತು ಒರಿಸ್ಸಾಗಳನ್ನು ಆಳುತ್ತಿದ್ದರು.

**downloaded from: www.kpscvaani.com**

ಷುಜಾನ ಮಗ ಸರಫರಾಜ್‌ಖಾನನನ್ನು ಆಲಿವರ್ದಿಖಾನನು ಕೊಲೆಮಾಡಿದನು. ಆಲಿರ್ದಿಖಾನನು ಬಿಹಾರದ ಉಪ ರಾಜ ಪ್ರತಿನಿಧಿಯಾಗಿದ್ದನು. 1757ರ ಜೂನ 27ರಂದು ಪ್ಲಾಸಿ ಕದನ ನಡೆಯಿತು. ಈ ಯುದ್ಧದಲ್ಲಿ ಮೀರ್ ಜಾಫರ್ ಮತ್ತು ರಾಯದುರ್ಲಭರ ನಂಬಿಕೆದ್ರೋಹ ಬೆಳಕಿಗೆ ಬಂತು. ಮೋಹನ ಲಾಲ್ ಮತ್ತು ಮೀರ್ ಮದನ್ ನಿಷ್ಠರಾಗಿ ಉಳಿದರು. ಮೀರ್ ಜಾಫರ್‌ನ ಮಗನಾದ ಮೀರಾನನು ಸಿರಾಜುದ್ದೌಲನನ್ನು ಸೆರೆ ಹಿಡಿದು ಕೊಂದು ಹಾಕಿದನು.

ಮೀರ್ ಜಾಫರ್‌ನು ಇಂಗ್ಲಿಷರಿಗೆ ಅವರ ಸಹಾಯಕ್ಕಾಗಿ 24 ಪರಗಣಗಳ ಜಮೀನ್ದಾರಿಯನ್ನು ಕೊಟ್ಟನು. ಅದಲ್ಲದೆ ವೈಯಕ್ತಿಕವಾಗಿ ಅನೇಕ ಉಡುಗೊರೆಗಳನ್ನು ಕೊಟ್ಟನು. ಭಾರತದ ಭವಿಷತ್ತಿಗೆ, ಪ್ಲಾಸಿ ಕದನದ ಪರಿಣಾಮ ದೂರಗಾಮಿ ಬದಲಾವಣೆಗಳನ್ನು ತಂದಿತು. ಮೀರ್ ಜಾಫರ್‌ನ ಆಡಳಿತ ಕಾಲದಲ್ಲಿ ಭಾರತದ ಸಂಪತ್ತು ಭಾರತದಿಂದ ಬ್ರಿಟನ್ನಿಗೆ ಹೋಗುವುದಕ್ಕೆ ಪ್ರಾರಂಭವಾಯಿತು. ಅವನು ಬಿಹಾರದ ಡೆಪ್ಯೂಟಿ ಗವರ್ನರ್ ರಾಜಾರಾಮ ನಾರಾಯಣ ಮತ್ತು ದಿವಾನ ರಾಯದುರ್ಲಭನ ವಿರೋಧ ಕಟ್ಟಿಕೊಂಡನು.

ಬ್ರಿಟಿಷರನ್ನು ಬದಲಿಸಿ ಡಚ್ಚರನ್ನು ತರಲು ಅವನು ಅನೇಕ ಪ್ರಯತ್ನಗಳನ್ನು ನಡೆಸಿದನು. ಆದರೆ ಡಚ್ಚರು 1759ರಲ್ಲಿ ಬ್ರಿಟಿಷರಿಗೆ ಸೋತರು. ಮೀರ್ ಜಾಫರನನ್ನು ಮೀರ್ ಕಾಸಿಮನನ್ನು ಕೂಡಿಸಲಾಯಿತು. ಮೀರ್ ಕಾಸಿಮನು ಬ್ರಿಟಿಷರಿಗೆ ಬರ್ದ್ವಾನ್, ಮಿಡ್ನಾಪುರ ಮತ್ತು ಚಿತ್ತಗಾಂಗ್‌ಗಳ ಜಮೀನ್ದಾರಿಯನ್ನು ಕೊಟ್ಟನು. ಅವನು ರಾಜಧಾನಿಯನ್ನು ಮುರ್ಷಿದಾಬಾದನಿಂದ ಮಾಂಘೀರ್‌ಗೆ ಬದಲಾಯಿಸಿದನು. ಅವನು ದಸ್ತಕದ ದುರುಪಯೋಗವನ್ನು ನಿಲ್ಲಿಸಿದನು ಮತ್ತು ಆಂತರಿಕ ವ್ಯಾಪಾರದ ಮೇಲಿದ್ದ ತೆರಿಗೆಗಳನ್ನೆಲ್ಲಾ ತೆಗೆದುಹಾಕಿದನು. ಇದನ್ನು ಬ್ರಿಟಿಷರ ಇಚ್ಛೆಯ ವಿರುದ್ಧ ಮಾಡಿದನು, ಇದನ್ನು ಮಾಡಿದ್ದು ಭಾರತೀಯ ವ್ಯಾಪಾರಿಗಳ ರಕ್ಷಣೆಗಾಗಿ.

ಇವನ ಆಡಳಿತ ಕಾಲದಲ್ಲಿ ಬ್ರಿಟಿಷರಿಗೂ ಮತ್ತು ಮೀರ್ ಕಾಸಿಂ, ಅವಧನ ಸಿರಾಜುದ್ದೌಲ, ಮುಘಲ್ ಚಕ್ರವರ್ತಿ ಎರಡನೆಯ ಷಾಆಲಂಗೂ ಬಕ್ಸಾರ ಯುದ್ಧ ನಡೆಯಿತು. ಹೆಕ್ಟರ ಮನ್ರೋನ ನೇತೃತ್ವದಲ್ಲಿ ಬ್ರಿಟಿಷರು ಈ ಯುದ್ಧವನ್ನು ಮೂವರು ಮಿತ್ರರ ವಿರುದ್ಧ ಗೆದ್ದರು. ಅಲಹಾಬಾದ ಒಪ್ಪಂದಕ್ಕೆ ಸಹಿಯಾಯಿತು. ಸಿರಾಜುದ್ದೌಲ್ ಮತ್ತು ಷಹಾಆಲಾ ಸಹಿ ಹಾಕಿದರು. ಮೀರ್ ಜಾಫರ್‌ನು ಬಂಗಾಳದ ನವಾಬನಾಗಿ ಪುನ: ಅಧಿಕಾರ ಪಡೆದನು. ಮೀರ್ ಜಾಫರ್ 1765ರಲ್ಲಿ ಸತ್ತನು.

ಮೀರ್ ಜಾಫರ್‌ನ ಮರಣದ ನಂತರ ಇಂಗ್ಲಿಷರು ಅವನ ಅಪ್ರಾಪ್ತ ವಯಸ್ಸಿನ ಮಗ ನಜ್ಮ-ಉದ್-ದೌಲ್‌ನನ್ನು ಅವನ ಉತ್ತರಾಧಿಕಾರಿಯನ್ನಾಗಿ ಮಾಡಿದರು. ಅವನು ಬ್ರಿಟಿಷರ ಕೈಗೊಂಬೆಯಾಗಿದ್ದನು, 1772ರಲ್ಲಿ ಅವನಿಗೆ ನಿವೃತ್ತಿ ವೇತನವನ್ನು ಕೊಟ್ಟು ಬ್ರಿಟಿಷರು ನೇರವಾಗಿ ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಂಡರು.

**ಅವಧ್:**

ಚಕ್ರವರ್ತಿ ಮೊಹಮದ್ ಷಾಹನು ಅವಧ್‌ದ ಗವರ್ನರ್ ಆಗಿ ಸಾದತ್‌ಖಾನ ಬುರ್ಹಾನ್ ಉಲ್‌ಮುಲ್ಕನನ್ನು ನೇಮಿಸಿದನು. ನಂತರ 1722ರಲ್ಲಿ ಅವನು ಸ್ವತಂತ್ರನಾದನು. ಸಫ್ದರ್ ಗಂಜನು ಸಾದತ್‌ಖಾನನ ಉತ್ತರಾಧಿಕಾರಿಯಾಗಿ ಬಂದನು. ಅವನು ಅದೇ ಸಮಯದಲ್ಲಿ ಸಾಮ್ರಾಜ್ಯದ ವಜೀರನಾಗಿ 1748ರಲ್ಲಿ ನೇಮಕಗೊಂಡನು. ಅಂದಿನಿಂದ ಅವದ್‌ನ ನವಾಬನು ನವಾಬ್ ವಜೀರ್ ಎಂದು ಹೆಸರಾದನು.

ಅವನ ಸರ್ಕಾರದ ಅತ್ಯುನ್ನತ ಅಧಿಕಾರ ಸ್ಥಾನವನ್ನು ಹಿಂದೂ ಆಗಿದ್ದ ನವಾಚರಾಯ ಹೊಂದಿದ್ದನು. ಸಫ್ಧರ ಗಂಜನ ನಂತರ ಷುಜಾ ಉದ್‌ದೌಲನು ಅವಧನ ನವಾಬ ಮತ್ತು ಸಾಮ್ರಾಜ್ಯದ ವಜೀರನು ಆದನು. ಅವನು ಬಕ್ಸಾರ್ ಯುದ್ಧದಲ್ಲಿ ಪಾಲುಗೊಂಡಿದ್ದನು. ಬ್ರಿಟಿಷರಿಗೆ ಅಲಹಾಬಾದ್ ಮತ್ತು ಜತೆಗೆ ಇನ್ನೂ ಅಧಿಕವಾದ ತಪ್ಪು ದಂಡಗಳನ್ನು ಕೊಡಬೇಕಾಯಿತು. ಬನಾರಸ್ ಒಪ್ಪಂದವನ್ನು ವಾರೆನ್ ಹೇಸ್ಟಿಂಗ್ಸ್‌ನೊಡನೆ ಮಾಡಿಕೊಂಡನು. ಅಲಹಾಬಾದ್ ಮತ್ತು ಕಾರಾಗಳು ನವಾಬನಿಗೆ ಮಾರಾಟವಾಯಿತು. ಅವನು ಬ್ರಿಟಿಷರ ಸಹಾಯದಿಂದ ರೋಹಿಲ್ಲಾರನ್ನು ಸೋಲಿಸಿ 1774ರಲ್ಲಿ ರೋಹಿಲ್ ಖಂಡವನ್ನು ಅವಧಕ್ಕೆ ಸೇರಿಸಿಕೊಂಡನು.

**downloaded from: www.kpscvaani.com**

ಅಸಫುದ್ದೌಲನು ಬ್ರಿಟಿಷರೊಡನೆ ಸೈಜಾಬಾದ್ ಒಪ್ಪಂದವನ್ನು ಮಾಡಿಕೊಂಡನು. ಇದರಿಂದ ಅವನ ಮೇಲಿನ ಹೊರೆ ಜಾಸ್ತಿಯಾಯಿತು. ಇವನು ತನ್ನ ರಾಜಧಾನಿಯನ್ನು ಫೈಜಾಬಾದಿನಿಂದ ಲಕ್ನೋವಿಗೆ ವರ್ಗಾಯಿಸಿದನು. ಅವನ ಆಡಳಿತ ಕಾಲದಲ್ಲಿ ಅವಧದ ಬೇಗಂಗಳ ಜತೆ ನವಾಬ್ ವಜೀರನು ವಾರೆನ್ ಹೇಸ್ಟಿಂಗ್‌ನ ಸಹಾಯದೊಡನೆ ಸರಿಯಾದ ರೀತಿಯಲ್ಲಿ ನಡೆದುಕೊಳ್ಳದೆ ಅವರಿಂದ ದೊಡ್ಡ ಮೊತ್ತದ ಹಣ ವಸೂಲು ಮಾಡಿತೊಡಗಿದನು.

ಸಾದತ್ ಅಲಿಯು ಲಾರ್ಡ್ ವೆಲ್ಲೆಸ್ಲಿಯೊಡನೆ 1801ರಲ್ಲಿ ಸಹಕಾರಿ ವಿಸ್ತರಣಾ ಒಪ್ಪಂದವನ್ನು ಮಾಡಿಕೊಂಡನು. ಇದರಿಂದ ನವಾಬನ ಅರ್ಧ ಆಡಳಿತ ಪ್ರದೇಶ ಕೈತಪ್ಪಿತ್ತು. ಅದರ ಬದಲು ಅವನ ಅಧಿಕ ಸೈನ್ಯವನ್ನು ನಿರ್ವಹಿಸುವುದು ಬ್ರಿಟಿಷರ ಜವಾಬ್ದಾರಿಯಾಯಿತು. ಉತ್ತರ ಭಾರತದಲ್ಲಿ ಇದು ಮೊದಲನೆಯ ವಿಸ್ತರಣಾ ಒಪ್ಪಂದ ಆಗಿತ್ತು. ಅವಧದ ಕೊನೆಯ ನವಾಬ ವಜೀದ್ ಆಲಿಷಾ 1856ರಲ್ಲಿ ಡೌಲ್‌ಹೌಸಿಯು ಅವಧವನ್ನು ಕೈವಶಮಾಡಿಕೊಂಡು, ನವಾಬನಿಗೆ ನಿವೃತ್ತಿವೇತನ ನೀಡಿ ಕಲ್ಕತ್ತಾಕ್ಕೆ ಕಳಿಸಿಬಿಟ್ಟನು. ಅವನು ತನ್ನ ಸುಖಲೋಲುಪ ಜೀವನಕ್ಕೂ, ಸಂಗೀತ ಮತ್ತು ಹಾಡುಗಳ ಆಸಕ್ತಿಗೂ ಹೆಸರಾಗಿದ್ದನು.

**ಹೈದರಾಬಾದ್:**

ನಿಜಾಂ ಉಲ್‌ಮುಲ್ಕ್ ಅಸಫ್‌ಜಾ ಮೊದಲ ಹೆಸರು ಬಿನ್‌ಕ್ವಿಲಿಚ್‌ಖಾನ್. ಅವನು 1724ರಲ್ಲಿ ಹೈದ್ರಾಬಾದ್ ರಾಜ್ಯವನ್ನು ಸ್ಥಾಪನೆ ಮಾಡಿದನು. ಸಾಮ್ರಾಟ ಮೊಹಮದ್ ಷಹನು ಅವನಿಗೆ ಅಸಫ್‌ಝಾ ಎಂಬ ಬಿರುದನ್ನು ಕೊಟ್ಟನು. ಪೂರಕ ಚಂದ ಎಂಬ ಹಿಂದು ಅವನ ದಿವಾನನಾಗಿದ್ದನು. ನಿಜಾಂ ಆಲಿಯು ಲಾರ್ಡ್ ವೆಲ್ಲೆಸ್ಲಿಯೊಡನೆ 1798ರಲ್ಲಿ ಸಬ್ಸಿಡಿಯರಿ (ವಿಸ್ತರಣಾ) ಒಪ್ಪಂದವನ್ನು ಮಾಡಿಕೊಂಡನು. ಇದು ಭಾರತದಲ್ಲಿನ ಮೊದಲನೆಯ ಸಬ್ಸಿಡಿಯಿರಿ ಒಪ್ಪಂದ.

ನಜೀರ್ ಉದ್‌ದೌಲನು 1829ರಿಂದ 59ರವರೆಗೆ ಆಳ್ವಿಕೆ ನಡೆಸಿದನು. 1853ರಲ್ಲಿ ಡಾಲ್ ಹೌಸಿಯು ಬೀರಾರನ್ನು ಸಬ್ಸಿಡಿಯಿರಿ ಮೊತ್ತಕ್ಕೆ ಬದಲಾಗಿ ಬಿಟ್ಟುಕೊಡುವಂತೆ ಒತ್ತಾಯಪಡಿಸಿದನು.

**ಕರ್ನಾಟಕ:**

ಸಾಚತುಲ್ಲಾಖಾನನು ಆರ್ಕಾಟನ್ನು ರಾಜಧಾನಿಯಾಗಿ ಹೊಂದಿ ಕರ್ನಾಟಕವನ್ನು ಸ್ಥಾಪನೆ ಮಾಡಿದನು. ಅವನು ತನ್ನ ಸೋದರಳಿಯ ದೋಸ್ತ್ ಆಲಿಯನ್ನು ತನ್ನ ಪ್ರಭು ನಿಜಾಮನ ಅನುಮತಿ ಇಲ್ಲದೆ ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಿದನು. ದೋಸ್ತ್ ಅಲಿಯಾಸ್ ಮರಾಠರಿಂದ ಕೊಲ್ಲಲ್ಪಟ್ಟನು. ಅವನ ನಂತರ ಸಫ್ದರ್ ಆಲಿಯು ಬಂದನು. 1749ರಲ್ಲಿ ಚಂದಾಸಾಹೇಬನು ಅನುರುದ್ದೀನನು ಫ್ರೆಂಚರ ಸಹಾಯದಿಂದ ಕೊಂದು ಗಾದಿಯನ್ನು ಏರಿದನು. ಬ್ರಿಟಿಷರ ಮಿತ್ರರಿಂದ ಅವನು ಕೊಲೆಗೀಡಾಗಿ, ಬ್ರಿಟಿಷರು 1753ರಲ್ಲಿ ಮಹಮ್ಮದ್ ಆಲಿಯನ್ನು ಗಾದಿಯ ಮೇಲೆ ಕೂಡಿಸಿದರು. ಲಾರ್ಡ್ ವೆಲ್ಲೆಸ್ಲಿಯು 1801ರಲ್ಲಿ ಕೊನೆಯ ನವಾಬನಿಗೆ ನಿವೃತ್ತಿ ವೇತನದ ಏರ್ಪಾಟು ಮಾಡಿ, ರಾಜ್ಯವನ್ನು ಕೈವಶ ಮಾಡಿಕೊಂಡನು.

**ಜಾಟರು:**

ಜಾಟರಾಜ್ಯ, ಭರತಪುರವು ಚುರಾಮನ್ ಮತ್ತು ಬದಾನ್ ಸಿಂಹನಿಂದ ಸ್ಥಾಪಿಸಲ್ಪಟ್ಟಿತ್ತು. ಜಾಟರ ಆಡಳಿತಾಧಿಕಾರ ತನ್ನ ಅತಿ ಉಚ್ಛ್ರಾಯ ಸ್ಥಿತಿಯನ್ನು ತಲುಪಿದ್ದು ಸೂರಜಮಲ್‌ನ ಕಾಲದಲ್ಲಿ, ಅವನು ಜಾಟರ ಪ್ಲೇಟೋ ಎಂದು ಅಸಮುದಾಯದ ಯೂಲಿಸಿಸ್ ಎಂದು ಪರಿಗಣಿಸಲ್ಪಟ್ಟಿದ್ದನು. ಅವನ ರಾಜ್ಯವು ಆಗ್ರಾ ಮಥುರಾ, ದೆಹಲಿ ಮತ್ತು ಆಲಿಘಡ್ ಜಿಲ್ಲೆಗಳನ್ನು ಒಳಗೊಂಡಿತ್ತು. ಅವನ ನಂತರ ಈ ಜಾಟ ರಾಜ್ಯವು ಅವನತಿ ಹೊಂದಿತು.

**ಸಿಖ್ಖರು:**

ಸೂಕರ ಚಿಕಿಯೂ ಮಿಸ್ಲನ ರಣಜೀತ್ ಸಿಂಗನ ಕಾಲದಲ್ಲಿ ಸಿಖ್ ಅಧಿಕಾರಶಾಹಿಯೂ ತನ್ನ ಅತ್ಯುನ್ನತ ಮಟ್ಟ ಮುಟ್ಟಿತ್ತು. 1799ರಲ್ಲಿ ರಣಜೀತ್ ಸಿಂಗನು ತನ್ನದೇ ರಾಜ್ಯವನ್ನು ಸ್ಥಾಪಿಸಿದ ಲಾಹೋರ್ ಅವನ ರಾಜಕೀಯ ರಾಜಧಾನಿಯಾಗಿತ್ತು. ರಣಜೀತಸಿಂಗನು 1808ರಲ್ಲಿ ಸಟ್ಲೇಜ್ ನದಿಯನ್ನು ದಾಟಿದಾಗ ಬ್ರಿಟಿಷರು ಮಧ್ಯಪ್ರವೇಶ ಮಾಡಿದರು. ಲಾರ್ಡ್ ಮಿಂಟೋ ಕಾಲದಲ್ಲಿ 1809ರಲ್ಲಿ ರಣಜೀತ್ ಸಿಂಗನು ಅಮೃತಸರ ಒಪ್ಪಂದ ಮಾಡಿಕೊಳ್ಳಬೇಕಾಯಿತು. 1809ರಲ್ಲಿ ಅಬ್ದಾಲಿಯ ಮೊಮ್ಮಗ ಷಾಷುಜಾನು ಪದಚ್ಯುತಗೊಳಿಸಲ್ಪಟ್ಟಾಗ ರಣಜಿತ ಸಿಂಗನು ಅವನಿಗೆ ಸಿಂಹಾಸನ

**downloaded from: www.kpscvaani.com**

ಪುನ: ಪಡೆಯಲು ಸಹಾಯ ಮಾಡಿದನು. ಅವನಿಂದ ಪ್ರಸಿದ್ಧವಾದ ಕೋಹಿನೂರ ವಜ್ರವನ್ನು ಪಡೆದನು. ಅವನು 1839ರಲ್ಲಿ ನಿಧನ ಹೊಂದಿದನು.

ರಣಜೀತ ಸಿಂಗನ ಮರಣದ ನಂತರ ಬಂದ ಮೂರು ಜನ ಅರಸರು ಖರಕ್‌ಸಿಂಗ್, ಸೋನಿಹಾಲ್‌ಸಿಂಗ್ ಮತ್ತು ಷೇರ್‌ಸಿಂಗರು ಆರು ವರ್ಷದ ಒಳಗೆ ಕೊಲೆಯಾದರು. ಐದು ವರ್ಷ ವಯಸ್ಸಿನ ದಿಲೀಪ್‌ಸಿಂಗ್ ರಾಜ್ಯಕ್ಕೆ ಉತ್ತರಾಧಿಕಾರಿಯಾದನು. ಅವನ ಆಳ್ವಿಕೆಯ ಕಾಲದಲ್ಲಿ ಇಂಗ್ಲಿಷರು ಪಂಜಾಬಿನ ಮೇಲೆ ಆಕ್ರಮಣ ಮಾಡಿದರು. 1846ರ ಲಾಹೋರ್ ಒಪ್ಪಂದಕ್ಕೆ ಸಹಿ ಬಿದ್ದಿತ್ತು. ಸರ್‌ಹೆನ್ರಿ ಲಾರೆನ್ಸ್, ಪಂಜಾಬಿನ ರೆಜಮೆಂಟ್ ಆದನು. 1849ರಲ್ಲಿ ದಿಲೀಪ್ ಸಿಂಗನನ್ನು ಸಿಂಹಾಸನದಿಂದ ಇಳಿಸಿ ಬ್ರಿಟಿಷರು ಪಂಜಾಬನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ದಿಲೀಪ್‌ಸಿಂಗ್ ಮತ್ತು ಅವನ ತಾಯಿ ರಾಶಿ ಚೆಂಡಾಲ್ ಇಂಗ್ಲೆಂಡಿಗೆ ಕಳಿಸಲ್ಪಟ್ಟರು. ಸರ್ ಜಾನ್ ಲಾರೆನ್ಸ್‌ನು ಪಂಜಾಬಿನ ಪ್ರಥಮ ಚೀಫ್ ಕಮೀಷನರ್ ಆದನು.

**ರಜಪೂತರು:**

18ನೆಯ ಶತಮಾನದ ಅತ್ಯಂತ ಪ್ರಸಿದ್ಧ ರಜಪೂತ ದೊರೆಯೆಂದರೆ ಅಂಬರದ ರಾಜಾ ಸವಾಯ ಜಯಸಿಂಹ. ಅವನು ಜಯಪುರ ನಗರವನ್ನು ಕಟ್ಟಿಸಿ ಅದನ್ನು ವಿಜ್ಞಾನ ಮತ್ತು ಕಲೆಗಳ ಕೇಂದ್ರವನ್ನಾಗಿ ಮಾಡಿದ. ಅವನು ದೆಹಲಿ, ಜೈಪುರ, ಉಜ್ಜೈನ್, ವಾರಣಾಸಿ ಮತ್ತು ಮಥುರಾಗಳಲ್ಲಿ ವೇದ ಶಾಲೆಗಳನ್ನು ಕಟ್ಟಿಸಿದ. ಜ್ಯೋತಿ ವಿಜ್ಞಾನದ ವಿಷಯಗಳನ್ನು ತಾನೇ ಗುಣಿಸಲು ಅನುಕೂಲವಾಗುವಂತೆ ಗಣಕ ಪಟ್ಟಿಗಳನ್ನು ಜಿಸ್ ಮೊಹಮದ ಷಾಹಿ ಎಂದು ಅವಕ್ಕೆ ಹೆಸರು ಪ್ರಕಟಿಸಿದ, ಯೂಕೆಡನ ರೇಖಾಗಣಿತದ ಮೂಲ ತತ್ವಗಳು ಎಂಬ ಪುಸ್ತಕವನ್ನು ಸಂಸ್ಕೃತಕ್ಕೆ ಭಾಷಾಂತರ ಮಾಡಿದ. ಅದೇ ರೀತಿ ಸೇಸಿಯರನ ಲಾಗರಿತ್ ನಿರ್ಮಿತಿ ಮತ್ತು ಉಪಯೋಗ ಎಂಬ ಗ್ರಂಥವನ್ನು ಸಂಸ್ಕೃಕ್ಕೆ ಭಾಷಾಂತರ ಮಾಡಿದ. ಅವನು ಸಾಮಾಜಿಕ ಸುಧಾರಕನು ಆಗಿದ್ದ.

**ಪೋರ್ಚುಗೀಸರು:**

ವಾಸ್ಕೋಡಗಾಮನು ಕೇಪ್ ಭೂಶಿರದ ಮಾರ್ಗವನ್ನು ಕಂಡುಹಿಡಿದನು. ಅವನು 1498ರ ಮೇ 17ರಂದು ಕ್ಯಾಲಿಕಟ್ ಬಂದರನ್ನು ತಲುಪಿದನು. 1502ರಲ್ಲಿ ಅವನು ಎರಡನೆಯ ಬಾರಿ ಬಂದಾಗ ಕಲ್ಲಿಕೋಟೆ ಕೊಚ್ಚಿ ಮತ್ತು ಕಣ್ಣಾನೂರುಗಳಲ್ಲಿ ವ್ಯಾಪಾರ ಕೇಂದ್ರಗಳು ಸ್ಥಾಪಿಸಲ್ಪಟ್ಟವು. ಭಾರತದಲ್ಲಿನ ಪ್ರಥಮ ಪೋರ್ಚುಗೀಸ್ ಗವರ್ನರ್ ಎಂದರೆ ಫ್ರಾನ್ಸಿಸ್ಕೊ ಆಲ್‌ಮಿಡಾ, ಎರಡನೆಯ ಪೋರ್ಚುಗೀಸ್ ಗವರ್ನರ್ ಆಲ್ಫೇನೋ–ಡಾ–ಆಬ್ಬುಕರ್ಕ್ ಬಿಜಾಪೂರದ ದೊರೆಯಿಂದ 1510ರಲ್ಲಿ ಗೋವಾವನ್ನು ಗೆದ್ದುಕೊಂಡನು.

ನಿನೋ–ಡ–ಕುನ್ಹನು ಭಾರತದಲ್ಲಿನ ಪೋರ್ಚುಗೀಸ್ ಕೇಂದ್ರವನ್ನು ಕೊಚ್ಚಿಯಿಂದ ಗೋವಾಕ್ಕೆ 1503ರಲ್ಲಿ ಬದಲಾಯಿಸಿದನು. ಗುಜರಾತನ್ ದೊರೆ ಬಹದೂರ್‌ಷಹನಿಂದ ಡಿಯು ಮತು ಬಸ್ಸಿನ್‌ಗಳನ್ನು ಪಡೆದುಕೊಂಡನು. ಷಹಜಹಾನನ ಆಳ್ವಿಕೆಯ ಕಾಲದಲ್ಲಿ 1613ಲ್ಲಿ ಪೋರ್ಚುಗೀಸರು ಹೂಗ್ಲಿಯನ್ನು ಕಳೆದುಕೊಂಡರು. 1661ರಲ್ಲಿ ಪೋರ್ಚುಗೀಸ್ ದೊರೆ, ತನ್ನ ಸೋದರಿಯನ್ನು ಮದುವೆಯಾದುದಕ್ಕೆ ಬಳುವಳಿಯಾಗಿ ಮುಂಬೈಯನ್ನು ಇಂಗ್ಲೆಂಡಿನ ಎರಡನೆಯ ಚಾರ್ಲ್ಸ್‌ನಿಗೆ ಕೊಟ್ಟನು.

ಮರಾಠರು 1739ರಲ್ಲಿ ಸಾಲಪಟ್ಟಿ ಮತ್ತು ಬಸ್ಸೀನ್‌ಗಳನ್ನು ವಶಪಡಿಸಿಕೊಂಡರು. ಗೋವಾ ಮತ್ತು ದಾಮನ್‌ಗಳು 1661ರಲ್ಲಿ ಸ್ವತಂತ್ರಗೊಳಿಸಲ್ಪಟ್ಟವು. ಭಾರತದಲ್ಲಿ ಪೋರ್ಚುಗೀಸರ ಅವನತಿಗೆ ಕಾರಣವೆಂದರೆ ಅವರು ಧಾರ್ಮಿಕ ಅಸಹಿಷ್ಣುತೆ, ಕಳ್ಳತನ, ವ್ಯಾಪಾರದಲ್ಲಿನ ಕುತಂತ್ರಗಳು ಮತ್ತು ಬ್ರೆಜಿಲ್‌ನ ಪತ್ತೆಹಚ್ಚುವಿಕೆ.

**ಡಚ್ಚರು:**

1602ರ ಮಾರ್ಚ್‌ಯಲ್ಲಿ ಡಚ್ ಇಸ್ಟ್ ಇಂಡಿಯಾ ಕಂಪೆನಿಯು ಸ್ಥಾಪಿಸಲ್ಪಟ್ಟಿತ್ತು. ವೆರಿನಿಡ್ಜ್ ಈಸ್ಟ್ ಇಂಡಿಯಾ ಕಂಪೆನಿ (VOC) ಎಂಬುದು ಅದರ ಹೆಸರು. ಡಚ್ಚರು 1605ರಲ್ಲಿ ಮಚಲಿಪಟ್ಟಣಂದಲ್ಲಿ ತಮ್ಮ ಮೊದಲನೆಯ

**downloaded from: www.kpscvaani.com**

ಕಾರ್ಖಾನೆಯನ್ನು ಸ್ಥಾಪಿಸಿದರು. ಭಾರತದಲ್ಲಿನ ಡಚ್ಚರ ಅಂತಿಮ ಸೋಲು, 1759ರಲ್ಲಿ ಬೇದುರಾಂದಲ್ಲಿ ಅವರಿಗೂ ಬ್ರಿಟಿಷರಿಗೂ ನಡೆದ ಯುದ್ಧದಲ್ಲಿ ಆಯಿತು.

**ಇಂಗ್ಲಿಷರು:**

ವರ್ತಕ ಸಾಹಸಿಗಳು ಎಂಬ ವರ್ತಕರ ಗುಂಪೊಂದು 1599ರಲ್ಲಿ ಸೇರಿಕೊಂಡು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯನ್ನು ಪ್ರಾರಂಭಿಸಿದರು. ಜಹಾಂಗೀರನ ಆಸ್ಥಾನದಲ್ಲಿ ಸರ್ ಥಾಮಸ್‌ರೋ ಒಂದನೇ ಜೇಮ್ಸ್‌ನ ರಾಯಭಾರಿಯಾಗಿದ್ದನು. ಅವನು ವ್ಯಾಪಾರ ನಡೆಸಲು ಮತ್ತು ವಿವಿಧ ಭಾಗಗಳಲ್ಲಿ ಕಾರ್ಖಾನೆಗಳನ್ನು ಪ್ರಾರಂಭಿಸಲು ಅಪ್ಪಣೆಯನ್ನು ಫರ್ಮಾನ ಮೂಲಕ ಪಡೆದನು.

ಈಸ್ಟ್ ಇಂಡಿಯಾ ಕಂಪೆನಿಯು ಎರಡನೆಯ ಚಾರ್ಲ್ಸ್‌ನಿಂದ ವಾರ್ಷಿಕ ಬಾಡಿಗೆ10 ಪೌಂಡಗಳ ಮೇಲೆ ಮುಂಬೈಯನ್ನು ಪಡೆದುಕೊಂಡಿತ್ತು. ಇದು ನಡೆದದ್ದು 1668ರಲ್ಲಿ ಪಶ್ಚಿಮ ತೀರದಲ್ಲಿ ಮುಂಬೈ ಕಂಪೆನಿಯ ಕೇಂದ್ರ ಕಚೇರಿಯಾಯಿತು. 1639ರಲ್ಲಿ ಚಂದ್ರಗಿರಿಯ ರಾಜನಿಂದ ಮದ್ರಾಸಿನ ನಿವೇಶನವನ್ನು ಫ್ರಾನ್ಸಿಸ್‌ಡೇ ಪಡೆದರು. ಅದಕ್ಕೆ ಪೋರ್ಟಸೆಂಟ್ ಜಾರ್ಜ್ ಎಂದು ಹೆಸರಿಡಲಾಯಿತು. ಅವನ ಕಾಲದಲ್ಲೇ ಮದ್ರಾಸ್, ಕೋರಮಂಡಲ, ಕಡಲತೀರದಲ್ಲಿ ಮಚಲೀಪಟ್ಟಣಂ ಬದಲು ಮದರಾಸು ಬ್ರಿಟಿಷ್ ಕೇಂದ್ರವಾಯಿತು.

1690ರಲ್ಲಿ ಜಾಚ್ ಚುರ್ನಾಕನು ಸುತನಾತಿಯಲ್ಲಿ ಒಂದು ಕಾರ್ಖಾನೆ ಸ್ಥಾಪಿಸಿ, ಮೂರು ಹಳ್ಳಿಗಳು ಸುತನಾತಿ, ಕಲ್ಲಿಕೋಟೆ ಮತ್ತು ಗೋವಿಂದಪುರಗಳ ಜಮೀನ್ದಾರಿಯನ್ನು ಚಾರ್ನಾಕನು ಪಡೆದನು. ಈ ಹಳ್ಳಿಗಳು ಭವಿಷ್ಯದ ಕಲ್ಕತ್ತಾ ನಗರವಾಗಿ ಬೆಳೆದವು. ಕೋಟೆಯಾಗಿ ಬಲಪಡಿಸಲ್ಪಟ್ಟು ಸುತನಾತಿ, ಫೋರ್ಟ್ ವಿಲಿಯಂಸ್ ಆಯಿತು.

1715ರಲ್ಲಿ ಕಲ್ಕತ್ತಾದ ಗವರ್ನರ್ ಜಾನ್ ಸುರ್ಮನ್ ಮತ್ತು ವಿಲಿಯಂ ಹ್ಯಾಮಿಲ್ಟನ್ ಸೇರಿ ಫರೂಕ್ಸಿಯರನಿಗೆ ಬಂದಿದ್ದ ಕಾಯಿಲೆಯನ್ನು ಗುಣಪಡಿಸಿ 1717ರಲ್ಲಿ ಒಂದು ಫರ್ಮಾನವನ್ನು ಪಡೆದರು. ಇದು ಕಂಪೆನಿಯ ಮ್ಯಾಗ್ನಕಾರ್ಟ ಎಂದು ಕರೆಯಲ್ಪಟ್ಟಿತು.

**ಫ್ರೆಂಚರು:**

14ನೆಯ ಲೂಯಿಯ ಸಚಿವನಾಗಿದ್ದು ನಂತರ ಕೊಲ್ಲಲ್ಪಟ್ಟನು. 1664ರಲ್ಲಿ ಕಂಪೆನಿಲೆ ಡೆಸ್ ಇಂಡೆಸ್ ಒರಿಯಂಟೆಲ್ಸ್ ಅನ್ನು ಪ್ರಾರಂಭಿಸಿದನು. 1668ರಲ್ಲಿ ಫ್ರಾನ್ಸಿನ ಕ್ಯಾರನ್ ಎಂಬುವನು ಸೂರತ್ತಿನಲ್ಲಿ ಮೊದಲ ಫ್ರೆಂಚ ಕಾರ್ಖಾನೆಯನ್ನು ಸ್ಥಾಪಿಸಿದನು. 1669ರಲ್ಲಿ ಮರಾತಾ ಎಂಬುವನು ಮಚಲಿಪಟ್ಟಣಂದಲ್ಲಿ ಎರಡನೆಯ ಫ್ರೆಂಚ್ ಕಾರ್ಖಾನೆಯನ್ನು ಸ್ಥಾಪಿಸಿದನು. ಪ್ರಾಂಕಾರ್ಯ ಮಾಲಿವನನು ಪುದುಚೇರಿಯ ಮೊದಲ ಗವರ್ನರ್ 1690ರಲ್ಲಿ ಬಂಗಾಳದ ಮೊಘಲ ಗವರ್ನರ್ ಶೈಸ್ತಾಖಾನನಿಂದ ಚಂದ್ರನಾಗೋರವನ್ನು ಪಡೆಯಲಾಯಿತು.

1742ರಲ್ಲಿ ಫ್ರೆಂಚ್ ಗವರ್ನರ್ ಆಗಿ ಡೂಪ್ಲೆಯ ಆಗಮನ ಭಾರತದಲ್ಲಿ ಬ್ರಿಟಿಷ್–ಫ್ರೆಂಚ್ ಸಂಘರ್ಷಕ್ಕೆ ನಾಂದಿಯಾಯಿತು. ಇದು ಪ್ರಾರಂಭವಾದದ್ದು ಕರ್ನಾಟಕ ಯುದ್ಧಗಳಿಂದ, ಅಂತಿಮವಾಗಿ ಅವರು ಬ್ರಿಟಿಷರಿಗೆ ಸೋಲಬೇಕಾಯಿತು.

**ಡೇವರು:**

1616ರಲ್ಲಿ ಡೇವರು ತಮ್ಮ ಈಸ್ಟ ಇಂಡಿಯಾ ಕಂಪೆನಿಯನ್ನು ಪ್ರಾರಂಭಿಸಿದರು. ಅವರು ತಮಿಳುನಾಡಿನ ಟ್ಯಾಂಕ್ವಿಬಾರ್ (1620) ಮತ್ತು ಬಂಗಾಳದ ಪೆರಾಂಪುರಗಳಲ್ಲಿ (1676) ತಮ್ಮ ವಸತಿಗಳನ್ನು ಪ್ರಾರಂಭಿಸಿದರು. ಭಾರತದಲ್ಲಿ ಅವರ ಕೇಂದ್ರ ಪೆರಾಂಪುರ್ ಆಗಿದ್ದಿತ್ತು. 1845ರಲ್ಲಿ ಅವರು ತಮ್ಮ ಹಿಡಿತದಲ್ಲಿದ್ದುದನ್ನೆಲ್ಲಾ ಬ್ರಿಟಿಷರಿಗೆ ಕೊಡಬೇಕಾಗಿ ಬಂದಿತು.

**downloaded from: www.kpscvaani.com**

## ಮಧ್ಯಯುಗದ ಭಾರತದ ಪ್ರಮುಖ ವ್ಯಕ್ತಿಗಳು

- ಆಲ್–ಮಸೂದಿ : ಹತ್ತನೆಯ ಶತಮಾನದಲ್ಲಿ ಭಾರತಕ್ಕೆ ಬಂದ ಅರಬ್ ಪ್ರವಾಸಿ, ಇವನು ಭಾರತದ ಬಗ್ಗೆ ಬರೆದಿದ್ದಾನೆ.
- ಆಲ್ಬೆರೂನಿ : ಮಹಮದ್ ಘಜ್ನಿಯ ಜತೆಗೆ ಭಾರತಕ್ಕೆ ಬಂದಿದ್ದನು. ಅವನು ಬರೆದ ಪುಸ್ತಕ ತಫ್ರಿಹಕ್–ಇ–ಹಿಂದ್.
- ಅಬ್ದುಲ್ ರಜಾಕ್ : 15ನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಬಂದಿದ್ದ ಪರ್ಶಿಯನ್ ಪ್ರವಾಸಿ. ಅವನು ವಿಜಯನಗರ ಸಾಮ್ರಾಜ್ಯದ ಬಗ್ಗೆ ಬರೆದಿಟ್ಟಿದ್ದಾನೆ.
- ಅಭಾಸ್ ಖಾನ್‌ಷೆರಾನಿ : ಷೇರ್‌ಷಹನ ಕಾಲದ ಚರಿತ್ರಕಾರ. ಇವನು ಬರೆದ ಗ್ರಂಥ ತಾರಿಕ್–ಇ–ಷೇರ್‌ಷಾಹಿ.
- ಅಬುಲ್ ಫಜಲ್ : ಇವನು ಅಕ್ಬರನ ಆಸ್ಥಾನದಲ್ಲಿದ್ದ ನವರತ್ನಗಳಲ್ಲಿ ಒಬ್ಬನು. ಇವನು ಬಹುದೊಡ್ಡ ವಿದ್ವಾಂಸ, ಕವಿ ಮತ್ತು ಚರಿತ್ರಕಾರ. ಇವನು ಬರೆದ ಗ್ರಂಥಗಳು ಅಕ್ಬರ್‌ನಾಮಾ ಮತ್ತು ಐನ್–ಇ–ಅಕ್ಬರಿ.
- ಅಹ್ಮದ ಷಾ ಅಬ್ದಾಲಿ : ಇವನು ಆಫ್ಘಾನಿಸ್ತಾನದಿಂದ ಬಂದು ಭಾರತದ ಮೇಲೆ ಆಕ್ರಮಣ ಮಾಡಿದನು. 1761ರಲ್ಲಿ ಮರಾಠರನ್ನು ಸೋಲಿಸಿದನು.
- ಭಕ್ತಿಯಾರ್ ಖಿಲ್ಜಿ : ಮಹಮದ್ ಘೋರಿಯ ದಂಡನಾಯಕ ಘೋರಿಗೆ ಬಂಗಾಳವನ್ನು ಗೆದ್ದುಕೊಟ್ಟನು. ಬಂಗಾಳದ ಸೇನ ವಂಶವನ್ನು ನುಚ್ಚುನೂರು ಮಾಡಿದನು.
- ಭಾರ್‌ಮಲ್ : ಅಂಬರ್ ರಾಜ್ಯದ ರಾಜ, ಅವನ ಮಗಳನ್ನು ಅಕ್ಬರನು ಮದುವೆಯಾಗಿದ್ದನು. ಭಗವಾನ್‌ದಾಸ್ ಈತನ ಪುತ್ರ ಮತ್ತು ಮಾನಸಿಂಗ್ ಅವನ ಮೊಮ್ಮಗ.
- ಬಿಷನ್‌ದಾಸ್ : ಜಹಾಂಗೀರನ ಆಸ್ಥಾನದ ಪ್ರಸಿದ್ಧ ಚಿತ್ರಕಾರ.
- ಚೈತನ್ಯ : ಭಕ್ತಿ ಚಳುವಳಿಯನ್ನು ಬಂಗಾಳದಲ್ಲಿ ಜನಪ್ರಿಯ ಮಾಡಿದವನು. ಇವನು ಕೃಷ್ಣನ ಆರಾಧಕ.
- ಚಾಂದ್‌ಬೀಬಿ : ಅಹಮದ್ ನಗರದ ನಿಜಾಂಷಾಹಿ ಅರಸನ ಮಗಳು. ಇವಳನ್ನು ಬಿಜಾಪುರದ ಆದಿಲ್‌ಷಾಹಿ ಅರಸನು ಮದುವೆಯಾಗಿದ್ದನು. ವಿಧವೆಯಾದ ಇವಳೂ ತನ್ನ ಗಂಡನ ಸಾಮ್ರಾಜ್ಯದ ರಕ್ಷಣೆಗಾಗಿ ಮೊಘಲರೊಡನೆ ಹೋರಾಡಿದಳು. ಅವಳ ಆಸ್ಥಾನಿಕರೇ ಅವಳನ್ನು ಕೊಂದು ಹಾಕಿದರು.
- ಛತ್ರಪಾಲ : ಔರಂಗಜೇಬನ ಮರಣಾನಂತರ ಛತ್ರಪಾಲನು ಒಂದು ಸ್ವತಂತ್ರ್ಯ ರಾಜ್ಯವನ್ನು ಸ್ಥಾಪಿಸಿದನು. ಅದಕ್ಕೆ ಮೊದಲು ಅವನು ಮೊಘಲರ ಅಧಿಕಾರದ ವಿರುದ್ಧ ದಂಗೆ ಎದ್ದನು.
- ಬಿನ್–ಕ್ವಿಲಿಚ್‌ಖಾನ್ : ಮುಘಲ್ ಆಸ್ಥಾನದ ತುಂಬಾ ಪ್ರಭಾವಶಾಲಿ ನಜೀರ್. ನಿಜಾಂಉಲ್ ಮುಲ್ಕ ಎಂಬ ಬಿರುದನ್ನು ಪಡೆದಿದ್ದನು. ಕಾಲಾನಂತರದಲ್ಲಿ ಇವನು ಹೈದ್ರಾಬಾದಿನಲ್ಲಿ ಸ್ವತಂತ್ರ ನಿಜಾಂಶಾಹಿ ರಾಜ್ಯವನ್ನು ಸ್ಥಾಪಿಸಿದ.
- ಬೈರಾಂಖಾನ್ : ಹುಮಾಯೂನನ ನಿಷ್ಠಾವಂತ ಸೇವಕ. ಅಕ್ಬರನು ತನ್ನ ಚಿಕ್ಕಂದಿನಲ್ಲಿ ಹೇಮುವನ್ನು ಸೋಲಿಸಲು ಸಹಾಯ ಮಾಡಿದ.

downloaded from: www.kpscvaani.com

- ದಾರಾಸಿಸಿಕೊ : ಇವನು ಷಹಜಾಹನನ ಮೊದಲ ಮಗ. ಅವನು ಉದಾತ್ತಿಯು ಸಹಿಷ್ಣುವೂ ಆಗಿದ್ದನು. ಅವನ ಪ್ರೋತ್ಸಾಹದಿಂದ ಹಿಂದಿ ಮತ್ತು ಸಂಸ್ಕೃತಗಳಿಂದ ಅನೇಕ ಗ್ರಂಥಗಳನ್ನು ಪರ್ಶಿಯನ್ ಭಾಷೆಗೆ ಭಾಷಾಂತರ ಮಾಡಲಾಯಿತು. ಅವನು ಉಪನಿಷತ್ತುಗಳಿಂದ ತುಂಬಾ ಪ್ರಭಾವಿತನಾದ ಅವುಗಳನ್ನು ಓದಲು ಸಂಸ್ಕೃತ ಕಲಿತ. ಉತ್ತರಾಧಿಕಾರದ ಕಲಹದಲ್ಲಿ ಅವನು ಸೋತು ಕೊಲ್ಲಲ್ಪಟ್ಟ.
- ದೇವಪಾಲ (810–850) : ಧರ್ಮಪಾಲನ ಮಗನೂ ಉತ್ತರಾಧಿಕಾರಿಯೂ ಆದನು. ಅವನು ಗುರ್ಜರ ಪ್ರತೇಹಾರರು ಮತ್ತು ರಾಷ್ಟ್ರಕೂಟರೊಡನೆ ಯುದ್ಧ ಮಾಡಬೇಕಾಯಿತು. ಅವನು ಬೌದ್ಧನಾಗಿದ್ದು, ನಲಂದ ಮತ್ತು ವಿಕ್ರಮಶಿಲಾ ವಿಶ್ವವಿದ್ಯಾನಿಲಯಗಳ ಪ್ರಗತಿಗೆ ಶ್ರಮಿಸಿದನು.
- ಧ್ರುವ (780–793) : ರಾಷ್ಟ್ರಕೂಟರ ಧೈರ್ಯಶಾಲಿ ಅರಸ, ಗಂಗ ವಂಶದ ರಾಜರನ್ನು ಪಲ್ಲವ ವಂಶದ ರಾಜರನ್ನು ಸೋಲಿಸಿದ, ದಕ್ಷಿಣದಲ್ಲಿ ರಾಷ್ಟ್ರಕೂಟರ ಔನ್ನತ್ಯವನ್ನು ಸಾಧಿಸಿದ. ಉತ್ತರದ ಧರ್ಮಪಾಲ, ವತುರಾಜ ಮುಂತಾದವರನ್ನು ಸೋಲಿಸಿದ.
- ಫಿರ್‌ದೌಸಿ : ಮಹಮದ ಘಜ್ನಿಯ ಆಸ್ಥಾನದ ಕವಿಯಾಗಿದ್ದ, ಇವನು ಷಹನಾಮಾವನ್ನು ಬರೆದ.
- ಗುರುಗೋವಿಂದ್ ಸಿಂಗ್ : ಸಿಖ್ಖರ ಹತ್ತನೆಯ ಗುರು. ಅವನು ಖಾಲ್ಸಾ ದಳವನ್ನು ಸ್ಥಾಪಿಸಿ ಸಿಖ್ಖರನ್ನು ಶೂರರು ಯುದ್ಧೋತ್ಸಾಹಿಗಳು ಆದ ಸಮುದಾಯವನ್ನಾಗಿ ಮಾಡಿದ.
- ಗೋಕುಲ್ : ಹದಿನೇಳನೆಯ ಶತಮಾನದಲ್ಲಿ ಮಥುರಾದ ಜಾಟರು ಗೋಕುಲನ ನೇತೃತ್ವದಲ್ಲಿ ದಂಗೆಯೆದ್ದರು. ತಿಲ್‌ಪತ್ ಯುದ್ಧದಲ್ಲಿ ಅವನು ಸೋತನು.
- ಮೂರನೆಯ ಗೋವಿಂದ (793–814) : ಇವನು ಧ್ರುವನ ಉತ್ತರಾಧಿಕಾರಿ. ಉತ್ತರದಲ್ಲಿ ನಾಗಭಟ್ಟನನ್ನು ಸೋಲಿಸಿ, ದಕ್ಷಿಣದಲ್ಲಿ ಕೇರಳ, ಪಲ್ಲವ ಗಂಗ ಮತ್ತು ಪಾಂಡ್ಯರ ಸೈನ್ಯಗಳನ್ನು ಸೇರಿಸಿ ಒಂದುಗೂಡಿಸಿ ಲಂಕಾದ ಮೇಲೆ ವಿಜಯ ಸಾಧಿಸಿದನು.
- ಇಲ್ತಮಷ್ : ಇವನು ಗುಲಾಮನಾಗಿದ್ದನು. ಕುತುಬುದ್ದೀನ್ ಐಬಕ್‌ನ ಅಳಿಯನೂ ಆಗಿದ್ದನು. ಭಾರತದಲ್ಲಿ ಹೊಸ ಟರ್ಕಿಯ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಹೊಸ ಜಾಗಗಳನ್ನು, ಪ್ರದೇಶಗಳನ್ನು ಗೆದ್ದನು. ಕುತುಬ್ ಮಿನಾರದ ನಿರ್ಮಾಣವನ್ನು ಪೂರೈಸಿದನು.
- ಇಬ್ನ್ ಬತೂತಾ : ಆಫ್ರಿಕಾದ (ಮೊರಕ್ಕೆ) ಪ್ರವಾಸಿ, ಭಾರತದ ಕುರಿತಾದ ಅನೇಕ ವಿಷಯಗಳನ್ನೊಳಗೊಂಡ ರಿಹಾಲಾ ಗ್ರಂಥವನ್ನು ಬರೆದನು.
- ಒಂದನೆಯ ಹರಿಹರ : ವಾರಂಗಲ್ಲಿನ ಕಾಕತೀಯ ದೊರೆಗಳ ಸಾಮಂತನಾಗಿದ್ದನು. 1336ರಲ್ಲಿ ದಕ್ಷಿಣದಲ್ಲಿ ವಿಜಯನಗರ ರಾಜ್ಯವಂಶವನ್ನು ಸ್ಥಾಪಿಸಿದನು.
- ಹಸನ ಗಂಗು : ಬಹುಮನಿ ರಾಜ್ಯದ ಸ್ಥಾಪಕ, ಇವನ ಹೆಸರು ಅಲ್ಲಾವುದ್ದೀನ್ ಬಹುಮನ್‌ಷಾ ತುಘಲಕ ರಾಜ ವಂಶದೊಡನೆ ತನ್ನ ಸಂಬಂಧವನ್ನು ಕಡಿದುಕೊಂಡನು.

**downloaded from: www.kpscvaani.com**

- ಗುರುನಾನಕದೇವ : 1469ರಲ್ಲಿ ಈಗ ಪಾಕಿಸ್ತಾನದಲ್ಲಿರುವ ತಳವಂಡಿಯಲ್ಲಿ ಹುಟ್ಟಿದವನು. ಸಿಖ್ ಮತದ ಸ್ಥಾಪಕ, ಜಾತಿ ಭೇದವನ್ನು ನಿರಾಕರಿಸಿ ಪರಸ್ಪರ ಪ್ರೀತಿಯ ಮೇಲೆ ಒತ್ತುಕೊಟ್ಟವನು. ಈತನ ಉಪದೇಶಗಳು ಆದಿ ಗ್ರಂಥದಲ್ಲಿ ಅಡಕವಾಗಿವೆ.
- ಜಯಚಂದ್ರ : ಕನೌಜಿನ ದೊರೆ, 1194ರಲ್ಲಿ ಮೊಹಮದ ಘೋರಿಯಿಂದ ಸೋಲಿಸಲ್ಪಟ್ಟನು.
- ಖಾಜಾಮೊಯಿನುದ್ಧೀನ್ ಚಿಸ್ತಿ : 12ನೆಯ ಶತಮಾನದ ಸೂಫಿ ಸಂತ ಅಜ್ಮೀರದಲ್ಲಿ ಚಿಸ್ತಿಯ ಪಂಥವನ್ನು ಸ್ಥಾಪಿಸಿದವನು.
- ಇಸ್ಲಾಂಷಾ : ಕಾನೂನಿನ ನಿಯಮಾವಳಿಗಳನ್ನು ಸಿದ್ಧಪಡಿಸಿದ ನಿಷ್ಪಕ್ಷಪಾತ ನ್ಯಾಯಾಂಗ ಪದ್ಧತಿಯನ್ನು ವ್ಯವಸ್ಥೆ ಮಾಡಿದ.
- ಕರ್ಕೋಟ ವಂಶದ ಲಲಿತಾದಿತ್ಯ : ಇವನು 724ರಿಂದ 760ರ ವರೆಗೆ ಕಾಶ್ಮೀರದ ರಾಜನಾಗಿದ್ದ ಇವನು ತನ್ನ ರಾಜ್ಯದ ಗಡಿಗಳನ್ನು ವಿಸ್ತರಿಸಿ ಅನೇಕ ದೇವಸ್ಥಾನಗಳನ್ನು ಕಟ್ಟಿಸಿದ. ಅವನು ಕಟ್ಟಿಸಿದ್ದರಲ್ಲಿ ಹೆಸರುವಾಸಿಯಾದದ್ದು ಮಾರ್ತಾಂಡ ಮಂದಿರ.
- ಮಲ್ಲಿಕಾಫುರ್ : ಅಲಾಉದ್ದೀನ್ ಖಿಲ್ಜಿಯ ಸೇನೆಯ ದಂಡನಾಯಕ. ದಕ್ಷಿಣ ಭಾರತವನ್ನು ಅಲ್ಲಾಉದ್ದೀನ ಖಿಲ್ಜಿಗೆ ಗೆದ್ದುಕೊಟ್ಟನು. ಅವನು ಮೊದಲು ಹಿಂದು ಆಗಿದ್ದ. ನಂತರ ಮುಸಲ್ಮಾನನಾಗಿ ಪರಿವರ್ತಿತನಾಗಿ ಅಲ್ಲಾಉದ್ಧಿನನ ಗುಜಾತ್ ಆಕ್ರಮಣದಲ್ಲಿ ಗುಲಾಮನಾಗಿ ಸೇರಿಕೊಂಡಿದ್ದ.
- ಮಹಮದ್ ಗವಾನ್ : ಬಹುಮನಿ ರಾಜನಿಗೆ ಮಂತ್ರಿಯಾಗಿದ್ದ. ಅವನು ದಕ್ಷಿಣ ಆಡಳಿತಗಾರನಾಗಿದ್ದನು.
- ಮಲಿಕ್ : ಇವನು ಸಿರಿಯನಿಂದ ಗುಲಾಮನಾಗಿ ಬಂದವನು.ಇವನು ಮೇಲೇರುತ್ತಾ ಬಂದು ಅಹಮದ್ ನಗರ ರಾಜ್ಯದ ಮಂತ್ರಿಪದವಿಗೆ ಏರಿದ. ಇವನು ಬಹಳ ದಕ್ಷನಾಗಿ ರಾಜ್ಯಾಡಳಿತ ನಡೆಸಿದ. ಮರಾಠರು ಮತ್ತು ಮೊಘಲರು ಇಬ್ಬರೊಡನೆಯೂ ಯುದ್ಧಗಳನ್ನು ಮಾಡಿದ.
- ಮಿರ್ಜಾಘಿಯಾಸ್ ಬೇಗ್ : ಇವನು ನೂರ್ ಜಹಾನಳ ತಂದೆ. ಇವನಿಗೆ ಇತ್ಮದುದ್ದೌಲಾ ಎಂಬ ಬಿರುದು ಬಂದಿತು. ನೂರ್‌ಜಹಾನಳು ಇವನ ಸಮಾಧಿಯನ್ನು ಆಗ್ರಾದಲ್ಲಿ ಕಟ್ಟಿಸಿದಳು.
- ಮೊಬತ್‌ಖಾನ್ : ಇವನು ಜಹಾಂಗೀರನ ದಕ್ಷ ಸೇನಾಧಿಕಾರಿಯಾಗಿದ್ದನು. ನೂರ್ ಜಹಾನಳು ತಪ್ಪಿಸಿಕೊಂಡು ಕೊನೆಗೆ ಅವನನ್ನು ಅಡಗಿಸಿದಳು.
- ಮೊಹಮದ್‌ಷಾ ರಂಗೀಲಾ : ಇವನು ಔರಂಗಜೇಬನ ಮೊಮ್ಮಗನು, ಜಹಾಂಗೀರ್ ಷಹನ ಮಗನೂ ಆಗಿದ್ದನು. ಔರಂಗಜೇಬನ ಉತ್ತರಾಧಿಕಾರಿಗಳೆಲ್ಲರು ಅಶಕ್ತರು. ಅಸಮರ್ಥರೂ ಆಗಿದ್ದರು. ಇವನ ರಾಜ್ಯಭಾರ ಕಾಲದಲ್ಲಿ ನಾದಿರ್‌ಷಹನು ದೆಹಲಿಯ ಮೇಲೆ ಆಕ್ರಮಣ ನಡೆಸಿದನು. ಮೊಹಮದ ಷಾ ರಂಗೀಲಾ ಸಂಗೀತದಲ್ಲಿ ತುಂಬಾ ಆಸಕ್ತಿಯನ್ನು ಹೊಂದಿದವನಾಗಿದ್ದನು.

downloaded from: www.kpscvaani.com

- ಮೆಹರುನ್ನಿಸಾ : ಮಿರ್ಜಾ ಘಿಯಾಸ್‌ಬೇಗನ ಮಗಳು ಇವಳು ವಿಧವೆಯಾದ ನಂತರ ಬೇಗಂ ಹಮೀದಾ ಬಾನೋಳ ಸೇವೆಯಲ್ಲಿದ್ದಳು. ಜಹಾಂಗೀರನು ಇವಳನ್ನು ನೋಡಿ 1611ರಲ್ಲಿ ಮದುವೆಯಾದನು. ಇವಳು ರಾಜಕೀಯದಲ್ಲಿ ಆಸಕ್ತಿಯಿಂದ ಪಾತ್ರವಹಿಸುತ್ತಿದ್ದಳು. ಇವಳಿಗೆ ನೂರ್-ಇ-ಜಹಾನ್ ಎಂಬ ಬಿರುದು ದೊರೆಯಿತು.
- ಮುರ್ಷಿದ್ ಕುಲಿಖಾನ್ : ಇವನು ಬಂಗಾಳದ ಸ್ವತಂತ್ರ ರಾಜನಾಗಿದ್ದನು. ನಂತರದ ಕಾಲದಲ್ಲಿ ಇವನು ಬಂಗಾಳದಲ್ಲಿ ಸ್ವತಂತ್ರ ನವಾಬಿಯನ್ನು ಸ್ಥಾಪಿಸಿದನು.
- ಮಾದಣ್ಣ ಮತ್ತು ಅಕ್ಕಣ್ಣ : ಇವರು ಗೋಲ್ಕೊಂಡ ರಾಜ್ಯಕ್ಕೆ ಸೇರಿದವರು. ಇವರು ಬ್ರಾಹ್ಮಣ ಸೋದರರಾಗಿದ್ದರು. ಇವರು ಮೊಘಲರಿಂದ ರಾಜ್ಯವನ್ನು ಕಾಪಾಡಿದರು.
- ನಾಮದೇವ : ಭಕ್ತಿ ಪಂಥವನ್ನು ಜನಪ್ರಿಯಗೊಳಿಸಿ, ಜಾತಿಗಳನ್ನು ನಿರಾಕರಿಸಿದ ಮಹಾರಾಷ್ಟ್ರದ ಸಂತ.
- ಕುತುಬುದ್ದೀನ್ ಭಕ್ತಿಯಾರ್ ಕಾಕಿ : ಹದಿಮೂರನೆಯ ಶತಮಾನದ ಸೂಫಿ ಸಂತ.
- ರಾಣಾ ಕುಂಭ : 15ನೆಯ ಶತಮಾನದ ರಜಪೂತ್ ದೊರೆ, ಚಿತ್ತೋರಿನಲ್ಲಿ ಕೀರ್ತಿ ಸ್ತಂಭವನ್ನು ಕಟ್ಟಿಸಿದನು.
- ನಿಕಾಲೋಕೋಟಿ : 15ನೆಯ ಶತಮಾನದಲ್ಲಿ ವಿಜಯನಗರಕ್ಕೆ ಭೇಟಿ ಕೊಟ್ಟ ಇಟಲಿಯ ಪ್ರವಾಸಿ ಈತ ವಿಜಯನಗರ ಸಾಮ್ರಾಜ್ಯದ ಬಗ್ಗೆ ತನ್ನ ಗ್ರಂಥಗಳಲ್ಲಿ ಬರೆದಿದ್ದಾನೆ.
- ಕುತುಬುದ್ದೀನ್ ಐಬಕ್ : ಮೊಹಮದ ಘೋರಿಯ ಗುಲಾಮ ಇವನನ್ನು ಮೊಹಮ್ಮದ ಘೋರಿಯು ಭಾರತದ ಸುಲ್ತಾನನ್ನಾಗಿ ನಿಯಮಿಸಿದನು.
- ರಾಣಾ ಸಂಗ : ಮೇವಾಡದ ರಜಪುತ ದೊರೆ, ತುಂಬಾ ಶೂರನೂ ಸಾಹಸಿಯೂ ಆಗಿದ್ದನು. ಆದರೆ 1527ರಲ್ಲಿ ಬಾಬರನು ಇವನನ್ನು ಸೋಲಿಸಿದನು.
- ರಾಮಾನಂದ : ವಾರಣಾಸಿಯ ಸಂತ ಜಾತಿಯ ಭೇದವನ್ನು ತಿರಸ್ಕರಿಸಿ ಭಕ್ತಿಯ ಪ್ರಚಾರ ಮಾಡಿದನು. ಇವನ ಶಿಷ್ಯರಲ್ಲಿ ಮುಸ್ಲಿಮನಾದ ಕಬೀರ್, ಹರಿಜನನಾದ ರೈದಾಸ್, ಜಾಲನಾಥ ಧನ್ಯ ಇದ್ದರು.
- ರಾಜಾತೋದರಮಲ್ : ಅಕ್ಬರನ ಕಂದಾಯ ಮಂತ್ರಿಯಾಗಿದ್ದನು. ಇವನು ಹತ್ತು ವರ್ಷದ ಭೂಕಂದಾಯದ ವ್ಯವಸ್ಥೆಯನ್ನು ಮತ್ತು ಜಬ್ತಿ ಪದ್ಧತಿಯನ್ನು ಪ್ರಾರಂಭಿಸಿದನು. ಷೇರ್‌ಷಹಾನಿಗೂ ಇವನು ಕಂದಾಯದ ಅಧಿಕಾರಿಯಾಗಿದ್ದನು.

**downloaded from: www.kpscvaani.com**

- ರಾಜಾರಾಂ : ಜಾಟರ ಪ್ರಭಾವಶಾಲಿ ನಾಯಕನಾಗಿದ್ದನು. 1685ರಲ್ಲಿ ಔರಂಗಜೇಬನ ವಿರುದ್ಧ್ ದಂಗೆಯೆದ್ದನು. 1688ರಲ್ಲಿ ಸಿಂಗಾಂದ್ರಾವನ್ನು ಲೂಟಿ ಮಾಡಿ ನಾಶಮಾಡಿದನು. ಇವನು ಅಂತಿಮವಾಗಿ ಮೊಗಲ್‌ರಿಂದ ಸೋಲಿಸ್ಪಟ್ಟನು
- ರಾವತ್ ಜೇಮ್ಸ್ : ಬಂಗಾಳದಲ್ಲಿ ಭೂಮಿಯನ್ನು ಪರೀಕ್ಷಿಸುತ್ತಿದ್ದ ಅಧಿಕಾರಿ ಬಂಗಾಳದ ಭೂಪಟವನ್ನು ತಯಾರಿಸಿದನು. ಭಾರತದ ಭೂಗೋಳದ ಜನಕ ಎಂದು ಇವನನ್ನು ಕರೆಯುತ್ತಾರೆ.
- ರಾಮಾನುಜಾಚಾರ್ಯ : ಹನ್ನೊಂದನೆಯ ಶತಮಾನದಲ್ಲಿ ತಮಿಳುನಾಡಿನಲ್ಲಿ ಹುಟ್ಟಿದರು. ಇವರು ಭಕ್ತಿಪಂಥದ ಪ್ರಚಾರ ಮಾಡಿದರು. ಇವರು ಪ್ರತಿಪಾದಿಸಿದ್ದು ವಿಶಿಷ್ಟಾದ್ವೈತ ಸಿದ್ಧಾಂತವನ್ನು.
- ತೈಮೂರ್ : ಇವನು 1398ರಲ್ಲಿ ಭಾರತದ ಮೇಲೆ ಆಕ್ರಮಣ ಮಾಡಿದನು. ಇವನು ಮಂಗೋಲಿಯದವನು, ಇವನು ದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಲೂಟಿ ಮಾಡಿದನು, ಕೊಳ್ಳೆ ಹೊಡೆದನು.
- ಷೇರ್‌ಷಹಾ : ಇವನ ಚಿಕ್ಕಂದಿನ ಹೆಸರು ಫರೀದ ಎಂದು. ಇವನು ಆಫ್ಘನ್ ದಂಡನಾಯಕ ಹುಮಾಯೂನನನ್ನು ಸೋಲಿಸಿ ತಾನೇ ರಾಜನಾದನು. ಇವನು ಐದು ವರ್ಷ ರಾಜ್ಯಭಾರ ನಡೆಸಿದನು. ಇವನು ರೈತರನ್ನು ರಕ್ಷಿಸಿ ಒಳ್ಳೆಯ ಆಡಳಿತ ವ್ಯವಸ್ಥೆಯನ್ನು ಏರ್ಪಾಟು ಮಾಡಿದನು.
- ನಾದಿರ್‌ಷಾ : ಇವನು 1739ರಲ್ಲಿ ಭಾರತದ ಮೇಲೆ ಆಕ್ರಮಣ ಮಾಡಿದನು. ಇವನು ದೆಹಲಿಯನ್ನು ಲೂಟಿ ಮಾಡಿ, ಕೊಳ್ಳೆ ಹೊಡೆದು ಕೋಹಿನೂರ ವಜ್ರವನ್ನು ಹೊಂದಿದ್ದ.
- ಷಾ ಅಬ್ದುಲ್ ಲತೀಫ್ : ಪ್ರಸಿದ್ಧ ಸಿಂಧಿ ಕವಿ,
- ಶಂಕರದೇವ : ಅಸ್ಸಾಮಿನ ವೈಷ್ಣವ ಧಾರ್ಮಿಕ ಪಂತ ಮತ್ತು ಸುಧಾರಕ. ಇವನು ಭಕ್ತಿಯನ್ನು ಪ್ರಧಾನವೆಂದು ಉಪದೇಶ ಮಾಡಿ ಹಿಂಸೆಯಿಂದ ಕೂಡಿದ ಯಜ್ಞಗಳನ್ನು, ಉಳಿದ ಮೂಢನಂಬಿಕೆಗಳನ್ನು ತಿರಸ್ಕರಿಸಿದ.
- ವತ್ರರಾಜ : (775–800) ಗುರ್ಜರರ ಪ್ರತೀಹಾರ ವಂಶದ ಉತ್ತಮ ಅರಸು. ಇವನು ಮಧ್ಯ ರಾಜಪುಟಾಣವನ್ನು ಗೆದ್ದು, ಕನೌಜಿನ ಇಂದ್ರಾಯುದ್ಧವನ್ನು ಧರ್ಮಪಾಲವನ್ನು ಸೋಲಿಸಿದನು. ರಾಷ್ಟ್ರಕೂಟ ರಾಜವಂಶದ ಧ್ರುವನಿಂದ ಸೋಲನ್ನು ಅನುಭವಿಸಿದನು.
- ವಾರಿಸ್‌ಷಹಾ : 18ನೆಯ ಶತಮಾನದ ಪ್ರಸಿದ್ಧ ಪಂಜಾಬಿ ಕವಿ, ಹೀರ್–ರಾಂಜಾ ಎಂಬ ಪ್ರಸಿದ್ಧ ಪ್ರೇಮ ಕಾವ್ಯವನ್ನು ರಚಿಸಿದವನು.
- ವಿಜ್ಞಾನೇಶ್ವರ : ಪ್ರಸಿದ್ಧ ಹಿಂದು ಕಾನೂನು ವಿದ್ವಾಂಸ, ಇವನು ಮಿತಾಕ್ಷರ ಪದ್ಧತಿಯ ಧರ್ಮಶಾಸ್ತ್ರವನ್ನು ಪ್ರತಿಪಾದಿಸಿದ.
- ಜಿಯಾಉದ್ದಿನ್ ಬರನಿ : ಇವನು ಚರಿತ್ರಕಾರ ಮತ್ತು ವಿದ್ವಾಂಸ. ಇವನು ತರೀಕ್–ಇ–ಫಿರೋಜ್–ಷಾಹಿ ಕೃತಿಯನ್ನು ರಚಿಸಿದನು.

**downloaded from: www.kpscvaani.com**

# ಭಾರತದ ಪುರಾತನ ಚಾರಿತ್ರಿಕ ಮಾಹಿತಿ

**ಪುರಾತನ ಶಿಲಾಯುಗ (ಕ್ರಿ.ಪೂ.5,00,000 ದಿಂದ 8000)**

ಭಾರತದಲ್ಲಿ ಮಾನವನ ಅಸ್ತಿತ್ವದ ಕುರುಹುಗಳು ಕ್ರಿ.ಪೂ. 5,00,000 (ಐದು ಲಕ್ಷ ವರ್ಷದ) ಹಿಂದಿನವರೆಗೂ ಹೋಗುತ್ತವೆ.

ಪೇಲಿಯೋಲಿಥಿಕ್ ಯುಗದ ಮಾನವರ ಅಸ್ತಿತ್ವದ ಕುರುಹುಗಳು ಗಂಗಾ ಮತ್ತು ಸಿಂಧೂ ನದಿಯ ಮೆಕ್ಕಲುಮಣ್ಣಿನ ಭೂಪ್ರದೇಶವನ್ನು ಬಿಟ್ಟರೆ ಬೇರೆ ಎಲ್ಲಾ ಭಾಗಗಳಲ್ಲೂ ಕಾಣಿಸಿಗುತ್ತವೆ. ಈ ಜನ ಹೆಚ್ಚಾಗಿ ಉಪಯೋಗಿಸುತ್ತಿದ್ದುದು ಕತ್ತರಿಸುವ, ಕೆತ್ತುವ ಕೊಯ್ಯುವ ತರಚಿಹಾಕುವ ಮತ್ತು ಭಾಗ ಮಾಡುವ ಎಲ್ಲಾ ಉಪಕರಣಗಳನ್ನು ಉಪಯೋಗಿಸುತ್ತಿದ್ದರು. ಈ ಉಪಕರಣಗಳನ್ನೆಲ್ಲಾ ಗಟ್ಟಿಯಾದ ಬೆಣಚುಕಲ್ಲುಗಳಿಂದ ಮಾಡುತ್ತಿದ್ದರು. ಅದಕ್ಕೆ ಈ ಜನಕ್ಕೆ ಭಾರತದಲ್ಲಿ 'ಬೆಣಚುಕಲ್ಲಿನ ಮಾನವರು' ಎಂದು ಕರೆಯುತ್ತಾರೆ. ಪೇಲೆಯೋಲಿಥಿಕ್ ವಿಭಾಗದ ಉತ್ತರಾರ್ಧದಲ್ಲಿ ಪಶುಪಾಲನೆಯೂ ಜಾರಿಯಲ್ಲಿತ್ತು.

ಈ ಯುಗದ ಕೊನೆಯ ಭಾಗದಲ್ಲಿ ಮಾನವಕುಲ ಕಾಣಿಸಿಕೊಂಡಿತ್ತು. ಪೇಲಿಯೋಲಿಥಿಕ್ ನೀಗ್ರಿಟೋ ಸಮುದಾಯಕ್ಕೆ ಸೇರಿದವರೆಂದು ಗುರುತಿಸಲಾಗಿದೆ.

ಪೇಲಿಯೋಲಿಥಿಕ್ ಯುಗದ ಆದಿಭಾಗ ಅಥವಾ ಪೂರ್ವಾರ್ಧದಲ್ಲಿ, ಕೈಕೊಡಲಿಗಳೂ ಕತ್ತರಿಸುವುದಕ್ಕಾಗಿ, ಒಡೆಯುವ ಮಚ್ಚುಗಳು ಮುಂತಾದ ಶಿಲಾ ಉಪಕರಣಗಳ ಬಳಕೆ ಕಂಡುಬರುತ್ತದೆ. ಇಂತಹ ಉಪಕರಣಗಳು ಈಗ ಪಾಕಿಸ್ತಾನದಲ್ಲಿರುವ ಸೋಲನ್ ಮತ್ತು ಸೋನ್ ನದಿ ಕಣಿವೆಗಳಲ್ಲಿ ಮತ್ತು ಭಾರತದ ಉತ್ತರ ಪ್ರದೇಶದ ಮಿರ್ಜಾಪುರ ಜಿಲ್ಲೆಯಲ್ಲಿನ ಬೆಲಾನ್ ಕಣಿವೆಯಲ್ಲಿ ಕಂಡು ಬಂದಿದೆ.

ಮಧ್ಯ ಪೇಲಿಯೋಲಿಥಿಕ್ ಪ್ರಮುಖ ಲಕ್ಷಣಗಳೆಂದರೆ ತೆಳುವಾದ ಹಲಗೆಗಳ ರೀತಿಯ ಕೊಚ್ಚುವ ಶಿಲಾಉಪಕರಣಗಳು ಕೊರೆಯುವ ಉಪಕರಣಗಳು ಮೊನಚಾದ ಅಲುಗಿರುವ ಉಪಕರಣಗಳು ಇಂಥ ಉಪಕರಣಗಳು ಕಂಡು ಬರುವ ನವೇಶನಗಳು ಸೋನ್ , ನರ್ಮದಾ ಮತ್ತು ತುಂಗಾಭದ್ರ ನದಿ ಕಣಿವೆಗಳಲ್ಲಿವೆ.

ಪೇಲಿಯೋಲಿಥಿಕ್ ಯುಗದ ಉತ್ತರಾರ್ಧದಲ್ಲಿ ಕತ್ತರಿಸುವ ಮತ್ತು ಕೊಚ್ಚುವ ಶಿಲಾಉಪಕರಣಗಳು ಗಮನಾರ್ಹವಾಗಿ ಕಂಡು ಬರುತ್ತವೆ. ಇಂತಹ ಉಪಕರಣಗಳು ಆಂದ್ರಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ಭೂಪಾಲ್ ಮತ್ತು ಛತ್ತೀಸ್‌ಘಡ್ ಪ್ರಸ್ಥಭೂಮಿ ಪ್ರದೇಶಗಳಲ್ಲಿ ಕಂಡುಬಂದಿವೆ.

***ಪುರಾತನ ಶಿಲಾಯುಗದ ಕೊನೆಯ ಭಾಗ (ಕ್ರಿ.ಶ. 10000 – 6000)***

ಇದನ್ನು ಮೆಸೋಲಿಥಿಕ್ ಯುಗ ಎಂದೂ ಕರೆಯಲಾಗುತ್ತದೆ. ಈ ಯುಗದಲ್ಲಿನ ಗಮನಾರ್ಹ ಉಪಕರಣಗಳೆಂದರೆ, ಸಣ್ಣ ಸಣ್ಣ ಮೊನಚಾದ ತುದಿಗಳುಳ್ಳ ಉಪಕರಣಗಳು ಕೊರೆಯುವ ರೀತಿಯ ಉಪಕರಣಗಳು ಮುಂತಾದ ಶಿಲಾಉಪಕರಣಗಳು ಈ ಯುಗದ ಕೊನೆಯ ಭಾಗದಲ್ಲಿ ಸಸ್ಯಗಳನ್ನು ಬೆಳೆಯುವ ಪದ್ಧತಿ ಬಳಕೆಗೆ ಬಂದಿದೆ.

ಈ ಯುಗದ ಕುರುಹುಗಳು ಕಂಡು ಬರುವ ನಿವೇಶನಗಳೆಂದರೆ ಪಶ್ಚಿಮ ಬಂಗಾಳದ ಬಿರ್‌ಭಾನ್‌ಪುರ, ತಮಿಳುನಾಡಿನ ತಿರುನಲೋಲಿ, ಮಧ್ಯ ಪ್ರದೇಶದ ಬೆಲಾನ್ ಕಣಿವೆ, ಬಾಗೋರ್, ತೆಆರೆ, ಲಂಘ್ನೇಜ್ ಗಂಜ್ ಸರಾಯ ಸಹರ ರಾಯ್ ಮುಂತಾದವು.

**downloaded from: www.kpscvaani.com**

## *ನವಶಿಲಾಯುಗ (ಕ್ರಿ.ಶ. 6000–1000)*

ಭಾರತದಲ್ಲಿ ನವಶಿಲಾಯುಗ ಕ್ರಿ.ಪೂ. 6000ಕ್ಕೆ ಮುಂಚೆ ಕಂಡುಬಂದಿಲ್ಲ. ದಕ್ಷಿಣ ಮತ್ತು ಪೂರ್ವ ಭಾರತಗಳಲ್ಲಿ ಇದು ಸುಮಾರು ಕ್ರಿ.ಪೂ. 1000 ದಷ್ಟು ಇತ್ತೀಚಿನದು.

ಈ ಯುಗದಲ್ಲೂ ಜನರು ಶಿಲೆಯ ಉಪಕರಣಗಳ ಮೇಲೆ ಅವಲಂಬಿತರಾಗಿದ್ದರು. ಆದರೆ ಈ ಸಮಯದಲ್ಲಿ ಬೆಣಚು ಕಲ್ಲಿನ್ನು ಬಿಟ್ಟು ಬೇರೆ ಕಲ್ಲುಗಳನ್ನು ಉಪಯೋಗಿಸಿ ಇನ್ನೂ ಹೆಚ್ಚಿನ ಸಾಮರ್ಥ್ಯವುಳ್ಳ ಹೆಚ್ಚು ಪರಿಷ್ಕೃತವಾದ ಮತ್ತು ಹೆಚ್ಚು ನಯವಾದ ಆಯುಧಗಳನ್ನು ತಯಾರಿಸುತ್ತಿದ್ದರು.

ನವಶಿಲಾಯುಗದ ಜನ ಭೂಮಿಯ ಬೇಸಾಯ ಮಾಡುತಿದ್ದರು. ಹಣ್ಣುಗಳನ್ನು ರಾಗಿ ಹುರುಳಿ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದರು. ಅವರು ದನಗಳು, ಕುರಿಗಳು, ಮೇಕೆ, ಆಡುಗಳನ್ನು ಗೃಹೋಪಯೋಗಿ ಪ್ರಾಣಿಗಳಾಗಿ ಸಾಕಿ ಬೆಳೆಸಿ ಪಾಲನೆ ಮಾಡುತ್ತಿದ್ದರು.

ಅವರಿಗೆ ಬೆಂಕಿನ ಉಪಯೋಗ ಗೊತ್ತಿತ್ತು. ಅದನ್ನು ತಯಾರಿಸುವುದು ಹೇಗೆಂದು ಗೊತ್ತಿತ್ತು. ಅವರಿಗೆ ಮಡಕೆಗಳನ್ನು ಮಾಡುವುದು ಗೊತ್ತಿತ್ತು. ಮೊದಲು ಕೈಯಿಂದಲೇ ಅವುಗಳನ್ನು ತಯಾರಿಸುತ್ತಿದ್ದರು. ನಂತರ ಕುಂಬಾರನ ಚಕ್ರದಿಂದ ಅದನ್ನು ತಯಾರಿಸುತ್ತಿದ್ದರು. ಅವರು ತಾವು ತಯಾರಿಸುತ್ತಿದ್ದ ಮಣ್ಣಿನ ಪಾತ್ರೆಗಳನ್ನು ಅಲಂಕರಿಸುತ್ತಿದ್ದರು. ಬಣ್ಣ ಹಾಕುತಿದ್ದರು.

ಅವರಿಗೆ ಗೊತ್ತಿದ್ದದು ಒಂದೇ ಲೋಹ, ಅದು ಬಂಗಾರ ಅವರು ವಾಸಿಸುತ್ತಿದ್ದುದು ಗುಹೆಗಳಲ್ಲಿ, ಗುಹೆಗಳ ಗೋಡೆಗಳನ್ನು ಬೇಟೆಯ ದೃಶ್ಯಗಳಿಂದ ಮತ್ತು ನೃತ್ಯದ ದೃಶ್ಯಗಳಿಂದ ಅಲಂಕರಣಗೊಳಿಸುತ್ತಿದ್ದರು. ಅವರಿಗೆ ದೋಣಿಗಳನ್ನು ಮಾಡುವ ಕಲೆಯೂ ಗೊತ್ತಿತ್ತು. ಅವರಿಗೆ ನೂಲುವುದು, ನೇಯುವುದು ಗೊತ್ತಿತ್ತು. ಹತ್ತಿ ಮತ್ತು ಉಣ್ಣೆಗಳನ್ನು ನೂಲ್ ಬಟ್ಟೆಗಳನ್ನು ನೇಯುತ್ತಿದ್ದರು. ಈ ನವಶಿಲಾಯುಗದ ಸ್ಪಸ್ಯ ಕುರುಹುಗಳು ಎಂದರೆ ಅವರು ಸತ್ತವರನ್ನು ಹೂಳಲು ಉಪಯೋಗಿಸುತ್ತಿದ್ದ ಗೋರಿಗಳು.

ಈ ನವಶಿಲಾಯುಗದ ಪ್ರಸಿದ್ದ ನವೇಶನಗಳೆಂದರೆ ಜಮ್ಮು ಮತ್ತು ಕಾಶ್ಮೀರದಲ್ಲಿನ ಬುಜುಹೋಂ ಮತ್ತು ಗುಫ್‌ಕ್ರಾಲ್ ಇವುಗಳು, ಹಳ್ಳಿಗಳಲ್ಲಿ ವಸತಿ ಮಾಡುವುದಕ್ಕೆ ಕಲ್ಲಿನ ಉಪಕರಣಗಳಿಗೆ ಮತ್ತು ಮನೆಯಲ್ಲೇ ಇರುವ ಗೋರಿಗಳಿಗೆ ಪ್ರಸಿದ್ದವಾಗಿವೆ ಇವುಗಳಲ್ಲದೆ ಕರ್ನಾಟಕದ ಮಸ್ಕಿ, ತಕ್ಕಲುಕೋಟಾ ಬ್ರಹ್ಮಗಿರಿ, ತಮಿಳುನಾಡಿನ ಪೈಯಾಂಪಲ್ಲಿ ಆಂದ್ರಪ್ರದೇಶದ ಪೆಕ್ಲಿಹಾಲ್ ಮತ್ತು ಉಂಟೇರು ಮೇಘಾಲಯದ ಗ್ಯಾರೋ ಬೆಟ್ಟಗಳು, ಬಿಹಾರದ ಚಿರಾಂದ್, ಆಮ್ರಿ, ಕೊಲಿಡಿಗೆ ಮತ್ತು ಮೆಹರಘರ್‌ಗಳಲ್ಲಿ ಈ ಯುಗದ ನವೇಶನಗಳಾಗಿವೆ.

ಕೋಲ್ಡಿಹ್ಯಾದಲ್ಲೂ ಮೂರು ಯುಗಗಳ, ನವಶಿಲಾಯುಗ ಚಾಲ್ಕೋಲಿಥಿಕ್ ಮತ್ತು ಕಬ್ಬಿಣದ ಯುಗಗಳ ಸಂಸ್ಕೃತಿಗಳು ದೊರೆತಿವೆ. ಮಣ್ಣಿನ ಮಡಕೆ ತಯಾರಿಕೆ ಕುಂಬಾರಿಕೆಯ ಕೌಶಲ್ಯದಲ್ಲಿ ಚೋಪ್ನಿ ಮಾಂಡೋ ವಿಶ್ವದಲ್ಲೇ ಅತ್ಯಂತ ಹಳೆಯ ನವೇಶನಗಳಾಗಿವೆ.

## *ಕಬ್ಬಿಣ ತಾಮ್ರಗಳ ಮಿಶ್ರ ಬಳಕೆಯ ಯುಗ*

ಈ ಯುಗಕ್ಕೆ ಚಾಲ್ಕೋಲಿಥಿಕ್ ಯುಗ ಎಂದು ಕರೆಯುತ್ತಾರೆ ಇದು ಶಿಲಾಯುಗವೂ ಹೌದು, ತಾಮ್ರದ ಯುಗವೂ ಹೌದು. ಶಿಲಾಉಪಕರಣಗಳ ಜತೆ ತಾಮ್ರದಿಂದ ಮಾಡಿದ ಕೈಕೊಡಲಿಗಳು ಇತರ ಉಪಕರಣಗಳು ಬಳಕೆಯಲ್ಲಿದ್ದವು.

downloaded from: www.kpscvaani.com

ಈ ಯುಗದಲ್ಲಿ ಜನರು ವಿವಿಧ ರೀತಿಯ ಮಣ್ಣಿನ ಪಾತ್ರೆಗಳನ್ನು ಉಪಯೋಗಿಸುತ್ತಿದ್ದರು. ಅವುಗಳಲ್ಲಿ ಕಪ್ಪು ಬಣ್ಣದ ಮತ್ತು ಕೆಂಪು ಬಣ್ಣದ ಮಣ್ಣಿನ ಪಾತ್ರೆಗಳು ತುಂಬಾ ಜನಪ್ರಿಯವಾಗಿದ್ದವು. ಇವುಗಳನ್ನು ಕುಂಬಾರರ ಚಕ್ರದ ಮೂಲಕ ತಯಾರಿಸುತ್ತಿದ್ದರು, ಮತ್ತು ಇವುಗಳ ಮೇಲೆ ಬಿಳಿಯ ಬಣ್ಣದ ನಕಾಶೆಗಳನ್ನು ಮಾಡುತ್ತಿದ್ದರು. ಕಾಲುವೆಯಿಂದ ಉದ್ಭವಿಸಿದಂತಹ ಮಡಿಕೆ, ಕುಡಿಕೆಗಳು, ನಿಲುವುಗಳ ಮೇಲೆ ಇಟ್ಟಂತಹ ಆಹಾರ ಪದಾರ್ಥಗಳು ಪೀಠಗಳ ಮೇಲೆ ಇಡಲ್ಪಟ್ಟ ಪಾತ್ರೆಗಳು, ಬೋಗುಣಿಗಳು ಮುಂತಾದವು ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶಗಳಲ್ಲಿ ಕಂಡು ಬಂದಿದೆ.

ಈ ಯುಗದ ಜನರಿಗೆ ಸುಟ್ಟ ಇಟ್ಟಿಗೆಗಳ ಪರಿಚಯ ಇರಲಿಲ್ಲ. ಇವರದು ಗ್ರಾಮೀಣ ಅರ್ಥವ್ಯವಸ್ಥೆ ಆಗಿತ್ತು.

ಈ ಯುಗದ ಪ್ರಾತಿನಿಧಿಕ ಪ್ರಮುಖ ನಿವೇಶನಗಳೆಂದರೆ ರಾಜಸ್ತಾನದ ಆಹಾರ ಮತ್ತು ಗೆಲುಂಡ್, ಮಹಾರಷ್ಟ್ರದ ಜೋರ್ವೆ, ನೆನಾಸಾ, ದೈಮಾಬಾದ್, ಇನಾಂಗಾನ್ ನವದಾತೋಟಿ, ಸೋನ್‌ಗಾಂವ್, ನಾಸಿಕ ಪಶ್ಚಿಮ ಬಂಗಾಳದ ಪಾಂಡುರಾಜಿಕ್ ಥಿಭಿ, ಬಿಹಾರದ ಚಿರಾಂಡ್, ಮತ್ತು ಮಧ್ಯ ಪ್ರದೇಶದ ಕಯಾಥಾ ಮತ್ತು ಎರಾನ್.

### *ಪುರಾತತ್ವ ಶಾಸ್ತ್ರದ ಕೆಲವು ಪದಪುಂಜಗಳು, ಸಹಪ್ರಯೋಗಗಳು*

***ಬೂದಿಗುಡ್ಡಗಳು:*** ಸಗಣಿ ಮುಂತಾದ ಪಶು ತ್ಯಾಜ್ಯಗಳು, ಕೊಟ್ಟಿಗೆಗಳಲ್ಲಿನ ಪಶುಗಳು, ತ್ಯಾಜ್ಯಗಳು ಮುಂತಾದವುಗಳು ಸಂಗ್ರಹಗೊಂಡು ಸುಟ್ಟು ಹೋಗಿರುವ ಗುಡ್ಡಗಳು ಇವು ಹೆಚ್ಚಿನ ಮಟ್ಟಿಗೆ ದಕ್ಷಿಣದ ನವಶಿಲಾಯುಗದ ಸಂಬಂಧ ಹೊಂದಿದೆ.

***ಕಪ್ಪು ಮತ್ತು ಕೆಂಪು ಮಣ್ಣಿನ ಪಾತ್ರೆಗಳು:*** ಪಾತ್ರೆ ಒಳಭಾಗ, ಪಾತ್ರೆಯ ಹೊರಭಾಗದ ಮೇಲ್ಭಾಗವು ಕಪ್ಪಾಗಿದ್ದು ಪಾತ್ರೆಯ ಹೊರಪದರದ ತೆಳಭಾಗ ಕೆಂಪಗಿರುವ ಪಾತ್ರೆಗಳು, ಭಾರತದಲ್ಲಿ ಇಂತಹ ಪಾತ್ರೆಗಳು ಕ್ರಿ.ಪೂ. 2000ದ ಹೊತ್ತಿಗೆ ಕಾಣಿಸಿಕೊಂಡಿದ್ದು ಕ್ರಿಶ್ಚಿಯನ್ ಶಕದ ಆದಿಭಾಗದ ವರೆಗೂ ಕಾಣಸಿಗುತ್ತದೆ.

***ಪ್ಲಿಸೈಸೀನ್:*** ಈಗಿನ (ಅಂದರೆ ಹೊಲೋಸೀನ ಯುಗದ) ಭಾರಚನಾಶಾಸ್ತ್ರದ ಪ್ರಕಾರ ಯುಗದ ಹಿಂದಿನ ಯುಗವಾದ ಪ್ಲಿಸೋಸೀನ್ ಯುಗ ಈ ಯುಗದಲ್ಲಿ ನಿಜವಾದ ಎತ್ತು, ನಜವಾದ ಆನೆ, ನಿಜವಾದ ಕುದುರೆಗಳು ಕಾಣಿಸಿಕೊಂಡವು.

***ಪ್ರೈಟೋ ಹಿಸ್ಟಾರಿಕ್ ಕಾಲ:*** ಭೂಮಿಯ ಆದಿಯಿಂದ ಹಿಡಿದು ಸಮಯ ಪ್ರಾರಂಭವಾದ ಆದಿಕಾಲದ ವರೆಗಿನ ಸಮಯ ಭಾರತದಲ್ಲಿ ನವಶಿಲಾಯುಗದ ಪ್ರಾರಂಭದಿಂದ ಹಿಡಿದು (ಭಾರತದಲ್ಲಿ ಇದರ ಸಮಯ ನಿರ್ದಿಷ್ಟವಾಗಿಲ್ಲ ಸುಮಾರು ಕ್ರಿ.ಪೂ. ಆರನೆಯ ಶತಮಾನದ ಮಹಾಜನಪದಗಳ ಕಾಲದ ಚಾರಿತ್ರಿಕ ಕಾಲದವರೆಗೆ) ಈ ಸಮಯದಲ್ಲಿ ಸಿಂಧೂ ಕಣಿವೆ ಸಂಸ್ಕೃತಿಯ ಕಾಲವೂ ಸೇರಿದೆ ಈ ಕಾಲದಲ್ಲಿ ಬರವಣಿಗೆ ಪ್ರಾರಂಭವಾಗಿದ್ದು ದಾಖಲೆಗಳು ಚಾಲ್ತಿಯಲ್ಲಿತ್ತು. ಈ ಸಮಯದಲ್ಲಿ ಈ ಸಂಸ್ಕೃತಿಗೆ ಹೋಲಿಸಿದರೆ, ಇಷ್ಟು ಮುಂದುವರಿಯದಿದ್ದ ಚಾರಿತ್ರಿಕ ಕಾಲದ ಹಿಂದಿನ ಕಾಲಮಾನವೂ ಸೇರಿದೆ.

***ಹೋಲೋಸಿನ್:*** ಪ್ಲಿಸ್ಟೋಸೀನ್ ಕಾಲಮಾನದ ಮುಂದಿನ ಕಾಲಮಾನ ಇಂದಿನವರೆಗೂ ಇರುವ ಕಾಲಮಾನ ಇದು ಸುಮಾರು 10000 ವರ್ಷಗಳ ಹಿಂದೆ ಪ್ರಾರಂಭವಾಯಿತು.

***ಮೆಗಾಲಿತ್ :*** ಬೃಹತ್ ಶಿಲೆಗಳಿಂದ ನಿರ್ಮಿಸಲ್ಪಟ್ಟು ಸ್ಮಾರಕಗಳು ಅವುಗಳಲ್ಲಿ ಕಂಡು ಬರುತ್ತವೆ. ಡಾಲ್ಮೆನ್‌ಗಳು, ಹಳ್ಳದಲ್ಲಿನ ಗೋರಿಗಳು, ಶಿಲಾಪಾತ್ರೆಗಳಲ್ಲಿನ ಗೋರಿಗಳು ಕೊಡೆಯ ತರಹದ ಕಲ್ಲುಗಳು ಹೆಡೆಯ ತರಹದ ಕಲ್ಲುಗಳು ಮುಂತಾದವು ಕಂಡು ಬರುತ್ತವೆ.

***ಮಧ್ಯಕಾಲಿನ ಶಿಲಾಯುಗ:*** ಆದಿ ಶಿಲಾಯುಗಕ್ಕೂ ಅಂತ್ಯ ಶಿಲಾಯುಗಕ್ಕೂ ಮಧ್ಯ ಭಾಗದ ಕಾಲದ ಗಮನಾರ್ಹ ಅಂಶವೆಂದರೆ, ನುಣುಪಾದ ಕೌಶಲ್ಯ ಪೂರಿತವಾದ ಕಲ್ಲುಗಳಿಂದ ಮಾಡಲ್ಪಟ್ಟಿವೆ.

**downloaded from: www.kpscvaani.com**

# ಸಿಂಧೂ ನದಿಯ ನಾಗರಿಕತೆ (ಕ್ರಿಪೂ. 2350– ಕ್ರಿಪೂ. 1750)

ಪಶ್ಚಿಮ ಪಂಜಾಬಿನಲ್ಲಿ ಮೊಟ್ಟಮೊದಲ ಬಾರಿಗೆ ದಯಾರಾಮ ಸಹನಿ 1921ರಲ್ಲಿ ಹರಪ್ಪವನ್ನು ಉತ್ಕನನ ಮಾಡಿದರು. 1826ರಲ್ಲಿ ಚಾರ್ಲ್ಸ್ ಮೇಸನ್ ಮೊಟ್ಟ ಮೊದಲ ಬಾರಿಗೆ ಕಂಡುಹಿಡಿದರು. ಸಿಂಧೂ ನದಿಯ ನಾಗರಿಕತೆಯ ಭೌಗೋಳಿಕ ಪ್ರದೇಶವು ಉತ್ತರದಲ್ಲಿ ಮಂಡ (ಜಮ್ಮು ಕಾಶ್ವೀರ) ದಕ್ಷಿಣದಲ್ಲಿ ದಹಿಮಾಬಾದ್ (ಮಹಾರಾಷ್ಟ್ರ) ಪೂರ್ವದಲ್ಲಿ ಆಲಂಗಿರ್‌ಪುರ್ (ಉತ್ತರಪ್ರದೇಶ) ಮತ್ತು ಪಶ್ವಿಮದಲ್ಲಿ ಸೂಕ್ತ ಜಂಡರ್ (ಬಲೂಚಿಸ್ತಾನ್) ಪ್ರದೇಶಗಳನ್ನು ಒಳಗೊಂಡಿದೆ. ಸಿಂಧೂ ನದಿಯ ನಾಗರೀಕತೆಯ ಸುಮಾರು 1500 ಪಟ್ಟಣಗಳನ್ನು ಕಂಡುಹಿಡಿಯಲಾಗಿದ್ದು, ಅದರಲ್ಲಿ 971 ಪಟ್ಟಣಗಳು ಭಾರತದಲ್ಲಿದ್ದು, 400 ಪಾಕಿಸ್ತಾನದಲ್ಲಿದ್ದು, 2 ಅಪಘಾನಿಸ್ತಾನದಲ್ಲಿವೆ. ಕೋಟುದಿಜಿ ಕಾಲಿಬಂಗಾನ ಮತ್ತು ಬನವಾಲಿ ಪೂರ್ವ ಹರಪ್ಪನ ಹಂತಕ್ಕೆ ಸೇರಿದೆ, ಲೋತಾಲ್, ಸುರ್‌ಕೊಟಾಡಾ, ಹರಪ್ಪ, ಬನವಾಲಿ ನಂತರದ ಹರಪ್ಪನ ಹಂತಕ್ಕೆ ಸೇರಿವೆ, ಹರಪ್ಪ ನಾಗರೀಕತೆಯು ಕಂಚಿನ ಯುಗಕ್ಕೆ ಸೇರಿದೆ.

**ಸಿಂಧೂ ನದಿಯ ನಾಗರೀಕತೆಯ ಪ್ರಮುಖ ಪಟ್ಟಣಗಳು**

- ಹರಪ್ಪ ಇದು ಪಾಕಿಸ್ತಾನದ ಮಾಂತೆಗಮೆರಿ ಜಿಲ್ಲೆಯಲ್ಲಿದೆ. ಇದು ರಾವಿ ನದಿಯ ದಂಡೆಯ ಮೇಲಿದೆ.
- ಶವ ಪೆಟ್ಟಿಗೆಗಳು ಹರಪ್ಪದಲ್ಲಿ ಕಂಡುಬರುತ್ತವೆ.
- ಕಂಚಿನ ಅಳತೆ ಮಾಡುವ ಸಾಧನವು ಹರಪ್ಪ ನಾಗರೀಕತೆಯಲ್ಲಿದೆ.
- ವಿಶ್ವದಲ್ಲಿ ಮೊದಲ ಬಾರಿಗೆ ಬೆಳ್ಳಿಯನ್ನು ಬಳಕೆ ಮಾಡಿರುವುದು ಹರಪ್ಪದಲ್ಲಿ ಕಂಡುಬಂದಿದೆ.
- ಬೃಹತ್ ಭತ್ತದ ಕಣಜ ಹರಪ್ಪದ ಅತ್ಯಂತ ದೊಡ್ಡ ರಚನಾಕೃತಿಯಾಗಿದೆ.
- ಹರಪ್ಪ ನಾಗರೀಕತೆಯ ಜನರು ಜೈನ ಧರ್ಮವನ್ನು ಅನುಸರಿಸುತ್ತಿರುವುದು ಕಂಡುಬರುತ್ತದೆ. ಕೆಂಪು ಸುಣ್ಣದ ಕಲ್ಲಿನಿಂದ ತಯಾರಿಸಿದ ಪುರುಷ ನಗ್ನ ಚಿತ್ರಗಳು ಹರಪ್ಪದಲ್ಲಿವೆ.

## ಉತ್ಖಲನಗಳು ಮತ್ತು ಅವುಗಳ ನಾಯಕರು

| ಕ್ರ. ಸಂ. | ನಿವೇಶನ | ಉತ್ಖಲನದ ನಾಯಕರು | ಈಗ ನಿವೇಶನ ಎಲ್ಲಿದೆ |
|---|---|---|---|
| 1. | ಹರಪ್ಪ | ದಯಾರಾಂಸಹಾನ (1921) | ಮಾಂಟಿಗಾಮರಿ – ಪಾಕಿಸ್ತಾನ ಪಂಜಾಬ |
| 2. | ಮೊಹೆಂಜೋದಾರೋ | ರಾಖೆಲ್‌ದಾಸ್ ಬ್ಯಾನರ್ಜಿ (1922) | ಸಿಂಧ್ ಪಾಕಿಸ್ತಾನ |
| 3. | ಕಾಲಿಬಂಗಾನ್ | ಅಮಲಾನಂದ ಘೋಷ್ ಬಿ.ಬಿ. ಲಾಲ್ | ಹನುಮಾನಘರ, ರಾಜಸ್ತಾನ |
| 4. | ಲೋಥಾಲ | ಎಸ್. ಆರ್. ರಾವ್. 1957 | ಅಹ್ಮದಾಬಾದ್ (ಗುಜರಾತ್) |
| 5. | ಬನವಾಲಿ | ಆರ್. ಎಸ್. ಬಿಸ್ಟ 1973 | ಹಿಸ್ಸಾರ (ಹರಿಯಾಣ) |
| 6. | ರಂಗಪುರ | ಎಂ. ಎಸ್. ವತ್ಸ 1953 | ಗುಜರಾತ್ (ಮದಾರ ನದಿಯ ಹತ್ತಿರ) |
| 7. | ರೋಪಾರ್ | ವೈ.ಡಿ. ಶರ್ಮ (1955–56) | ಪಂಜಾಬ ಸಟ್ಲೆಜ ನದಿ ದಡ |
| 8. | ಅಲಂಗೀರಪುರ | ವೈ.ಡಿ. ಶರ್ಮ (1955–56) | ಮೀರತ್ (ಹಿಂದೋಣ ನದಿ) |
| 9. | ಕೋಟ್–ದಿಜೆ | ಘುರೆ (1835) | ಸಿಂಧ್ (ಪಾಕಿಸ್ತಾನ್) |
| 10. | ಸುತ್ಕಾಗೆಂಡೋರ್ | ಎಸ್ಟೈನ್ ಮತ್ತು ಜಾರ್ಜ ಡೇಲ್ಸ್ | ಬಲೂಚಿಸ್ತಾನ (ದಶರ್ ನದಿ) |
| 11. | ಸುಕೊಟಾಟಾ | ಜಿ.ಪಿ. ಜೋಷಿ (1964) | ಗುಜರಾತ್ (ಕಥ ಮೈದಾನ) |
| 12. | ಚಾಬಕೋಟ್ | ಮ್ಯಾಕೆ 1935 | ಬಲೂಚಿಸ್ತಾನ |
| 13. | ಚಮ್ದುದಾರೋ | ಎನ್.ಜಿ. ಮ್ಮಜುಂದಾರ್ 1931 | ಸಿಂಧ್ (ಪಾಕಿಸ್ತಾನ್) |
| 14. | ಆಲಿಮುರಾದ | ಕೆ.ಎಂ. ಕಜರ್ | ಸಿಂಧ್ (ಪಾಕಿಸ್ತಾನ್) |

downloaded from: www.kpscvaani.com

| | | | |
|---|---|---|---|
| 15. | ಮಿಟಾಥೈ | ಪಂಜಾಬ್ ವಿಶ್ವವಿದ್ಯಾನಲಯ | ಭಿವಾನ |
| 16. | ರಾಖಿ ಗರ್ಹಿ | ಸೂರಜ್ ಭಾಗ | ಜಿಂದ್ (ಹರಿಯಾಣ) |
| 17. | ಸುಟ್ಕಖೋ | ಡೈಲ್ಸ್ 1962 | ಪೆರಿಸ್‌ನಂದ 8 ಕಿ. ಮೀ. ದೂರ |
| 18. | ಮಂದಾ | ಜನಪತಿ ಜೋಷಿ | ಅಖ್ನೂರ್ |
| 19. | ದೃಷದವತಿ | ಚಿತಾಂಗ್ | |
| 20. | ಸದಾನರಾ | ಗಂಡರ್ | |

**ನದಿ ದಡಗಳ ಹತ್ತಿರದ ಪಟ್ಟಣಗಳು**

| *ಕ್ರ. ಸಂ.* | *ಪಟ್ಟಣಗಳು* | *ನದಿಗಳು* |
|---|---|---|
| 1. | ಮೆಹೊಂಜೋದಾರೊ | ಸಿಂಧೂ |
| 2. | ಹರಪ್ಪ | ರಾವಿ |
| 3. | ಬನವಾಲಿ | ಘಘರ್ |
| 4. | ಕಾಲಿಬಂಗಾ | ಘಘರ್ |
| 5. | ಲೋಥಾತ್ | ಭೋಗವ್ |

**ಮೊಹೆಂಜೊದಾರೊ**

- ಇದು ಸಿಂಧ್ ಪ್ರಾಂತ್ಯದ ಲರ್ಕಾನ್ ಜಿಲ್ಲೆಯಲ್ಲಿದೆ.
- ಇದು ಸಿಂಧೂ ನದಿಯ ದಂಡೆಯ ಮೇಲಿದೆ.
- ಇದು ಸಿಂಧೂ ನದಿಯ ನಾಗರೀಕತೆಯ ಅತಿ ದೊಡ್ಡ ಪಟ್ಟಣವಾಗಿದೆ.
- ಸಿಂಧ್ ಭಾಷೆಯಲ್ಲಿ ಮೊಹೆಂಜೊದಾರೊ ಎಂದರೆ 'ಮಡಿದವರ ದಿಬ್ಬ' ಎಂದರ್ಥ.
- ಬೃಹತ ಸ್ನಾನದ ಕೊಳ ಮೊಹೆಂಜೊದಾರೊದಲ್ಲಿರುವ ಅತ್ಯಂತ ಪ್ರಮುಖ ಸಾರ್ವಜನಿಕ ಸ್ಥಳವಾಗಿದೆ.
- ಬೃಹತ್ ಭತ್ತದ ಕಣಜವು ಮೊಹೆಂಜೊದಾರೊದಲ್ಲಿರುವ ಅತಿ ದೊಡ್ಡ ಕಟ್ಟಡವಾಗಿದೆ.
- ಬಹು ಸ್ತಂಭಗಳುಳ್ಳ ಸಭಾ ಭವನವು ಮೊಹೆಂಜೊದಾರೊದಲ್ಲಿ ಕಂಡುಬರುತ್ತದೆ.
- ಮೃದು ಕಲ್ಲಿನಿಂದ ತಯಾರಿಸಿದ ಗಡ್ಡದಾರಿ ಪುರುಷನ ಚಿತ್ರ, ಹುಡುಗಿ ನೃತ್ಯ ಮಾಡುವ ಕಂಚಿನ ಚಿತ್ರ, ಪಶುಪತಿ ಶಿವನ ಮುದ್ರೆಗಳು ಮೊಹೆಂಜೊದಾರೊದಲ್ಲಿ ಕಂಡುಬರುತ್ತವೆ.
- ಚಿಪ್ಪಿನಿಂದ ತಯಾರಿಸಿದ ಅಳತೆಯ ಸಾಧನಗಳು ಮೊಹೆಂಜೊದಾರೊದಲ್ಲಿವೆ.
- ಸ್ತ್ರೀ ಮತ್ತು ಪುರುಷರ ಅಸ್ತಿಪಂಜರಗಳನ್ನು ಹೂಳುವುದು ಮೊಹೆಂಜೊದಾರೊದಲ್ಲಿ ಕಂಡುಬರುತ್ತದೆ. ಇದರಿಂದ ಸತಿ ಸಹಗಮನ ಪದ್ಧತಿ ಅಸ್ತಿತ್ವದಲ್ಲಿತ್ತು ಎಂಬುದು ತಿಳಿದುಬರುತ್ತದೆ.

**ಚನ್ನುದಾರೊ**

- ಇದು ಸಿಂಧ್ ಪ್ರಾಂತ್ಯದಲ್ಲಿದೆ.
- ಇದು ಸಿಂಧೂ ನದಿಯ ದಂಡೆಯ ಮೇಲಿದ್ದು, 1931ರಲ್ಲಿ ಎನ್.ಜಿ. ಮುಜಿಂದಾರ ಉತ್ಖನನ ಮಾಡಿದರು.
- ಇದು ಗೋಪುರವೇ ಇಲ್ಲದ ಸಿಂಧೂ ನದಿಯ ನಾಗರೀಕತೆಯ ಪಟ್ಟಣವಾಗಿದೆ.
- ಶಾಹಿಯ ಮಡಿಕೆಯು ಚನ್ನುದಾರೊದಲ್ಲಿ ಕಂಡುಬರುತ್ತದೆ.
- ಮುತ್ತುರತ್ನಗಳನ್ನು ತಯಾರಿಸುವ ಕಾರ್ಖಾನೆ ಚನ್ನುದಾರೊದಲ್ಲಿದೆ.

**downloaded from: www.kpscvaani.com**

**ಕಾಳಿಬಂಗಾನ**

- ಇದು ರಾಜಸ್ಥಾನದಲ್ಲಿದ್ದು, ಸರಸ್ವತಿ ನದಿಯ ದಂಡೆಯ ಮೇಲಿದೆ.
- ಗದ್ದೆಗಳನ್ನು ಉಳುಮೆ ಮಾಡುವುದು ಕಾಳಿಬಂಗಾನನಲ್ಲಿ ಕಂಡುಬರುತ್ತದೆ.
- ಅಗ್ನಿ ಕುಂಡಗಳು, ಒಂಟೆಯ ಅವಶೇಷಗಳು, ಮಡಿಕೆಯಲ್ಲಿ ಶವವನ್ನು ಹೂಳುವುದು ಕಾಳಿಬಂಗಾನನಲ್ಲಿದೆ.
- ಕಾಳಿಬಂಗಾನನಲ್ಲಿ ಪ್ರತಿಯೊಂದು ಮನೆಯು ಬಾವಿಯನ್ನು ಹೊಂದಿರುವುದು ಇತಿಹಾಸಕಾರರಿಂದ ತಿಳಿದುಬರುತ್ತದೆ.
- ಜೇಡಿ ಮಣ್ಣಿನಿಂದ ತಯಾರಿಸಿದ ಅಳತೆಯ ಸಾಧನಗಳು ಕಾಳಿಬಂಗಾನನಲ್ಲಿವೆ.

**ಲೋಥಾಲ್**

- ಇದು ಗುಜರಾತ್‌ನಲ್ಲಿದ್ದು, ಭೊಗವ ನದಿಯ ದಂಡೆಯ ಮೇಲಿದೆ.
- ಕೃತಕ ಹಡಗುಕಟ್ಟೆ ಲೋಥಾಲ್‌ನಲ್ಲಿದೆ.
- ಸ್ತ್ರೀ ಪುರುಷರ ಅಸ್ತಿಪಂಜರಗಳನ್ನು ಹೂಳುವ ನಿದರ್ಶನಗಳು ಲೋಥಾಲ್‌ನಲ್ಲಿ ಕಂಡುಬರುತ್ತವೆ.
- ಚೆಸ್ ಬಗ್ಗೆ ಮಾಹಿತಿಗಳು ಸಿಂಧೂ ನದಿಯ ನಾಗರೀಕತೆಯ ಲೋಥಾಲ್‌ನಲ್ಲಿ ಕಂಡುಬರುತ್ತದೆ.
- ಸಿಂಧೂ ನದಿಯ ನಾಗರೀಕತೆಯಲ್ಲಿ ಭತ್ತವನ್ನು ಲೋಥಾಲ್‌ನಲ್ಲಿ ಬೆಳೆಯುತ್ತಿದ್ದರು.
- ದಂತದಿಂದ ತಯಾರಿಸಿದ ಅಳತೆಯ ಸಾಧನಗಳು ಲೋಥಾಲ್‌ನಲ್ಲಿವೆ.
- ಜೇಡಿ ಮಣ್ಣಿನಿಂದ ತಯಾರಿಸಿದ ಕುದುರೆಯ ಅವಶೇಷಗಳು ಲೋಥಾಲ್‌ನಲ್ಲಿ ಕಂಡುಬರುತ್ತವೆ.
- ಭತ್ತದ ತವಡು, ಮುತ್ತುರತ್ನಗಳನ್ನು ತಯಾರಿಸುವ ಕಾರ್ಖಾನೆಗಳು, ಪಂಚತಂತ್ರದ ಕಥೆಯನ್ನು ನೆನಪಿಸುವ ಚಿತ್ರಣಗಳು ಲೋಥಾಲ್‌ನಲ್ಲಿವೆ.

**ದೊಲಾವೀರ**

- ಇದು ಗುಜರಾತಿನ ರನ್ ಆಫ್ ಕಚ್‌ನಲ್ಲಿದೆ.
- ಇದು ಸಿಂಧೂ ನದಿಯ ನಾಗರೀಕತೆಯಲ್ಲಿ ಕಂಡುಹಿಡಿದ ಇತ್ತೀಚಿನ ಪಟ್ಟಣವಾಗಿದೆ.

**ಸುರಕೊಟಾಡಾ**

- ಇದು ಗುಜರಾತ್‌ನ ಕಚ್‌ನಲ್ಲಿದೆ.
- ಕುದುರೆಯ ಅವಶೇಷಗಳು ಸುರಕೊಟಾಡಾದಲ್ಲಿ ಕಂಡುಬರುತ್ತವೆ.
- ಸುರಕೊಟಾಡಾದಲ್ಲಿ ಕೆಳಪಟ್ಟಣವು ಕೋಟೆಯಿಂದ ಆವೃತ್ತವಾಗಿದೆ.

**ಬನವಾಲಿ**

- ಇದು ಹರಿಯಾಣಾದ ಹಿಸ್ಸಾರ್ ಜಿಲ್ಲೆಯಲ್ಲಿದೆ.
- ಇದನ್ನು ಆರ್.ಎಸ್.ಬಿಸ್ಟ್ ಉತ್ಖನನ ಮಾಡಿದರು.
- ಜೇಡಿಮಣ್ಣಿನಿಂದ ತಯಾರಿಸಿದ ನೇಗಿಲು ಬನವಾಲಿಯಲ್ಲಿದೆ.
- ಮಾತೃದೇವತೆಗಳ ಮೂರ್ತಿಯು ಬನವಾಲಿಯಲ್ಲಿ ಕಂಡುಬರುತ್ತದೆ.
- ಬನವಾಲಿಯಲ್ಲಿ ಬಾರ್ಲಿ ಮತ್ತು ಸಾಸಿವೆಯನ್ನು ಬೆಳೆಯುತ್ತಿದ್ದರು.

**ಕೊಟುದಿಜಿ**

- ಇದು ಪಾಕಿಸ್ತಾನದಲ್ಲಿ ಸಿಂಧೂ ನದಿಯ ದಂಡೆಯ ಮೇಲಿದೆ.
- ಅಗ್ನಿ ಅನಾಹುತದಿಂದಾಗಿ ನಾಶವಾದ ಸಿಂಧು ನದಿಯ ನಾಗರೀಕತೆಯ ಪಟ್ಟಣವಾಗಿದೆ.
- ಪಂಚಮಾತ್ರಿಕೆಗಳು ಕೊಟುದಿಜಿಯಲ್ಲಿ ಕಂಡುಬರುತ್ತವೆ.
- ಮಣ್ಣಿನ ಮಹಡಿಯ ಮೇಲೆ ನಿರ್ಮಿಸಿದ ನೀರಿನ ಜಾರುಗಳು ಕೊಟುದಿಜಿಯಲ್ಲಿದೆ.

**downloaded from: www.kpscvaani.com**

**ಸಿಂಧೂ ನದಿಯ ನಾಗರೀಕತೆಯ ಪಟ್ಟಣಗಳ ಸಂಶೋಧನೆಯ ಕಾಲಾನುಕ್ರಮ**

| | | |
|---|---|---|
| ಹರಪ್ಪ | 1921 | ದಯಾರಾಮ ಸಹನಿ |
| ಮೊಹೆಂಜೊದಾರೊ | 1922 | ಆರ್.ಡಿ. ಬ್ಯಾನರ್ಜಿ |
| ಚನ್ನುದಾರೊ | 1927 | ಆರ್.ಎಲ್.ಸ್ಟೀನ್. |
| ಕಾಳಿಬಂಗಾನ | 1953 | ಅಮಲಾನಂದ್ ಘೋಷ್ |
| ಲೋಥಾಲ್ | 1957 | ಎಸ್.ಆರ್. ರಾವ್ |
| ಬನವಾಲಿ | 1973 | ಆರ್.ಎಸ್. ಬಿಸ್ಟ್ |

**ಸಿಂಧೂ ನದಿಯ ನಾಗರೀಕತೆಯ ಪಟ್ಟಣ ವ್ಯವಸ್ಥೆ**

ವ್ಯವಸ್ಥಿತವಾದ ಪಟ್ಟಣ ವ್ಯವಸ್ಥೆಯು ಸಿಂಧೂ ನದಿಯ ನಾಗರೀಕತೆಯ ಪ್ರಮುಖ ಲಕ್ಷಣವಾಗಿದೆ. ಮೇಲ್ಪಟ್ಟಣವು ಕೋಟೆಯಿಂದ ಆವೃತ್ತವಾಗಿದ್ದು, ಪೂರ್ವದಲ್ಲಿದೆ. ಕೆಳಪಟ್ಟಣವು ಪಶ್ಚಿಮಾಭಿಮುಖವಾಗಿದ್ದು, ಯಾವುದೇ ಕೋಟೆಗಳಿರುವುದಿಲ್ಲ. ಸಿಂಧೂ ನದಿಯ ನಾಗರೀಕತೆಯ ಮನೆಗಳಿಗೆ ಪ್ರವೇಶ ದ್ವಾರಗಳು (Side Entrance) ಕಂಡುಬರುತ್ತವೆ. ಕಿಟಕಿಯ ಮುಖವು ಮುಖ್ಯ ರಸ್ತೆಯ ಕಡೆಗೆ ಇರುವುದಿಲ್ಲ. ವ್ಯವಸ್ಥಿತವಾದ ಒಳಚರಂಡಿಯು ಸಿಂಧೂ ನದಿಯ ನಾಗರೀಕತೆಯಲ್ಲಿ ಕಂಡುಬರುತ್ತದೆ. ಗೋಪುರ ಪ್ರದೇಶದಲ್ಲಿ ಪಟ್ಟಣವು ಕೋಟೆಗಳಿಂದ ಆವೃತ್ತವಾಗಿರುತ್ತವೆ. ಒಣ ಶೌಚಾಲಯಗಳು ಮೊಹೆಂಜೊದಾರೊದಲ್ಲಿ ಕಂಡುಬರುತ್ತವೆ.

**ಹರಪ್ಪದ ಜನತೆ**

ಹರಪ್ಪದ ಜನರು ಮೆಡಿಟೇರೆನಿಯನ್ ಮತ್ತು ಪ್ರೋಟೋಆಸ್ಟ್ರೋಲೈಡ್ ಪಂಗಡಕ್ಕೆ ಸೇರಿದ್ದಾರೆ. ಸಾಮಾಜಿಕ ಸ್ತರ ವ್ಯವಸ್ಥೆ, ಶ್ರಮ ವಿಭಜನೆ, ಕಾರ್ಮಿಕ ವೈಶಿಷ್ಟ್ಯತೆಯ ಹರಪ್ಪ ನಾಗರೀಕತೆಯಲ್ಲಿ ಕಂಡುಬರುತ್ತದೆ. ಹರಪ್ಪನ್ನು ಸಾಮಾನ್ಯವಾಗಿ ವ್ಯಾಪಾರಸ್ಥರು ಆಳ್ವಿಕೆ ನಡೆಸುತ್ತಿದ್ದರು. ಹರಪ್ಪ ಜನರು ಹತ್ತಿ ಮತ್ತು ಉಣ್ಣೆ ಬಟ್ಟೆಗಳನ್ನು ಧರಿಸುತ್ತಿದ್ದರು. ಚಿನ್ನ, ಬೆಳ್ಳಿ, ತಾಮ್ರ, ದಂತ, ಚಿಪ್ಪು ಮುಂತಾದವುಗಳಿಂದ ತಯಾರಿಸಿದ ಆಭರಣಗಳನ್ನು ಧರಿಸುತ್ತಿದ್ದರು.

**ಧಾರ್ಮಿಕ ಆಚರಣೆಗಳು**

ಮೂರ್ತಿ ಪೂಜೆಯು ಹರಪ್ಪದಲ್ಲಿ ಕಂಡುಬರುವುದಿಲ್ಲ. ಮಾತೃದೇವತಾ ಆರಾಧನೆ ಹರಪ್ಪದಲ್ಲಿ ಕಂಡುಬರುತ್ತದೆ. ಹರಪ್ಪ ನಾಗರೀಕತೆಯ ಪ್ರಮುಖ ದೇವತೆ ಪಶುಪತಿ ಶಿವವಾಗಿದೆ. ಪಶುಪತಿ ಶಿವದ ಸುತ್ತ ನಾಲ್ಕು ಪ್ರಾಣಿಗಳು ಸುತ್ತುವರೆದಿವೆ, ಅವುಗಳೆಂದರೆ ಆನೆ, ಹುಲಿ, ಘೇಂಡಾಮೃಗ ಮತ್ತು ಎಮ್ಮೆ. ಯೋ ಪೂಜೆಯು ಸಿಂಧೂ ನದಿಯ ನಾಗರೀಕತೆಯಲ್ಲಿ ಕಂಡುಬರುತ್ತದೆ. ಸಿಂಧೂ ನದಿಯ ನಾಗರೀಕತೆಯ ಜನರು ಅರಳಿ ಮರ ಮತ್ತು ಎಮ್ಮೆಗಳನ್ನು ಪೂಜಿಸುತ್ತಿದ್ದರು.

**ಹರಪ್ಪದ ಲಿಪಿ**

ಹರಪ್ಪದ ಲಿಪಿಯು ಚಿತ್ರಲಿಪಿಯಾಗಿದೆ, ಹರಪ್ಪದ ಜನರು ಬಲದಿಂದ ಎಡಕ್ಕೆ ಮತ್ತು ಎಡದಿಂದ ಬಲಕ್ಕೆ ಬರೆಯುತ್ತಿದ್ದರು. ಹರಪ್ಪದ ಜನರು ಮುದ್ರೆಯನ್ನು ಮೃದು ಕಲ್ಲಿನಿಂದ ತಯಾರಿಸುತ್ತಿದ್ದರು. ಸುಮಾರು 2000 ಹರಪ್ಪನ ಮುದ್ರೆಗಳು ಕಂಡುಬಂದಿವೆ. ಮುದ್ರೆಗಳಲ್ಲಿ ಡುಬ್ಬದ ಗೂಳಿಯ ಚಿತ್ರಗಳಿವೆ. ಸಿಂಧೂ ನದಿಯ ನಾಗರೀಕತೆಯ ಜನರಿಗೆ ತಾಮ್ರ, ಕಂಚು, ಚಿನ್ನ ಮತ್ತು ಬೆಳ್ಳಿ ಮುಂತಾದವುಗಳ ಬಳಕೆ ಗೊತ್ತಿದ್ದು ಕಬ್ಬಿಣದ ಬಳಕೆ ಗೊತ್ತಿರಲಿಲ್ಲ.

**ಹರಪ್ಪದ ಆರ್ಥಿಕತೆ**

ಹರಪ್ಪದ ಆರ್ಥಿಕತೆಯು ಮುಖ್ಯವಾಗಿ ಕೃಷಿ ಪ್ರಾಧಾನ್ಯವಾಗಿದ್ದು, ವ್ಯಾಪಾರ ಮತ್ತು ವಾಣಿಜ್ಯಗಳಿಂದ ಬೆಂಬಲಿತವಾಗಿದೆ. ಗೋಧಿ ಮತ್ತು ಬಾರ್ಲಿ ಇಲ್ಲಿನ ಪ್ರಮುಖ ಉತ್ಪನ್ನಗಳಾಗಿದ್ದವು. ಭತ್ತವನ್ನು ಬೆಳೆಯುವುದು ರಂಗಪೂರ ಮತ್ತು ಲೋಥಾಲ್‌ನಲ್ಲಿ ಕಂಡುಬರುತ್ತಿತ್ತು. ವಿಶ್ವದಲ್ಲಿ ಗೋಧಿಯನ್ನು ಹರಪ್ಪದ ಜನರು ಮೊಟ್ಟ ಮೊದಲ ಬಾರಿಗೆ ಬೆಳೆಯುತ್ತಿದ್ದರು.

**downloaded from: www.kpscvaani.com**

ಸಿಂಧೂ ನದಿಯ ನಾಗರೀಕತೆಯ ಕಾಲದಲ್ಲಿ ವಸ್ತು ವಿನಿಮಯ ಪದ್ಧತಿ ಅಸ್ತಿತ್ವದಲ್ಲಿತ್ತು. ಮೆಸಾಪೊಟೆಮಿಯಾ ಮತ್ತು ಮೆಲೂಹಾ ಪ್ರಮುಖ ವ್ಯಾಪಾರ ಕೇಂದ್ರಗಳಾಗಿವೆ.

**ಹರಪ್ಪದ ಪ್ರಮುಖ ಆಮದುಗಳು**

| | |
|---|---|
| ತವರ | ಬಿಹಾರ |
| ಚಿನ್ನ | ಅಪಘಾನಿಸ್ತಾನ, ಪರ್ಶಿಯಾ ಮತ್ತು ಕರ್ನಾಟಕ |
| ಬೆಳ್ಳಿ | ಅಪಘಾನಿಸ್ತಾನ ಮತ್ತು ಪರ್ಶಿಯಾ |

**ಹರಪ್ಪದ ಪ್ರಮುಖ ರಫ್ತುಗಳು**

ಹತ್ತಿ ಬಟ್ಟೆಗಳು, ಕೃಷಿ ಉತ್ಪನ್ನಗಳು, ಮಡಿಕೆಗಳು, ದಂತದ ಸರಕು ಇತ್ಯಾದಿಗಳನ್ನು ಮೆಸಾಪೆಟೊಮಿಯಾ ಮಧ್ಯ ಏಷಿಯಾ ಅಪಘಾನಿಸ್ತಾನ ಮತ್ತು ಬಹರಿನ್‌ಗಳಿಗೆ ರಫ್ತು ಮಾಡಲಾಗುತ್ತಿತ್ತು.

**ಸಿಂಧೂ ನದಿಯ ನಾಗರೀಕತೆಯ ಅವನತಿಗೆ ಕಾರಣಗಳು**

- ಆರ್ಯನ್ನರ ಆಕ್ರಮಣವು ಸಿಂಧೂ ನದಿಯ ನಾಗರೀಕತೆಯ ಅವನತಿಗೆ ಪ್ರಮುಖ ಕಾರಣವಾಯಿತು. ಮೊರ್ಟಿಮರ್ ವೀಲ್‌ರ ಪ್ರಕಾರ, ಆರ್ಯನ್ನರ ಪ್ರಸಿದ್ಧ ದೇವತೆ ಇಂದ್ರ. ಸಿಂಧೂ ನದಿಯ ನಾಗರೀಕತೆಯ ಅವನತಿಗೆ ಪ್ರಮುಖ ಕಾರಣವಾಗುತ್ತದೆ.
- ನೈಸರ್ಗಿಕ ವಿಕೋಪಗಳಾದ ಭೂಕಂಪ, ನೆರೆಹಾವಳಿ, ಬರಗಾಲ ಮುಂತಾದವುಗಳಿಂದ ಸಿಂಧೂ ನದಿಯ ನಾಗರೀಕತೆಯ ಅವನತಿಗೆ ಕಾರಣವಾಗುತ್ತದೆ.
- ಸರಸ್ವತಿ ನದಿಯು ಬತ್ತಿ ಹೋಗುವುದರಿಂದ ಕೃಷಿ ಚಟುವಟಿಕೆಗಳು ನಿಂತುಹೋಗುತ್ತವೆ, ಇದರಿಂದ ಸಿಂಧೂ ನದಿಯ ನಾಗರೀಕತೆಯ ಅವನತಿಗೆ ಕಾರಣವಾಗುತ್ತದೆ.

## ವೇದಗಳ ಕಾಲ (ಕ್ರಿ.ಪೂ.1500 ಕ್ರಿ.ಪೂ.600)

**ಆರ್ಯನ್ನರ ಆಗಮನ**

ಆರ್ಯನ್ನರು ಮೂಲತ: ಮಧ್ಯ ಏಷಿಯಾ ಅಥವಾ ಯೂರೇಷಿಯದವರಾಗಿದ್ದು, ಕಾಲಕ್ರಮೇಣ ಏಷಿಯಾ ಮತ್ತು ಯೂರೋಪ ಖಂಡಗಳಿಗೆ ಬರುತ್ತಾರೆ. ಆರ್ಯನ್ನರು ಮೊದಲಿಗೆ ಇರಾನ್ ಪ್ರವೇಶಿಸಿ, ನಂತರ ಭಾರತಕ್ಕೆ ಬರುತ್ತಾರೆ. ಋಗ್ವೇದವು ಆರ್ಯನ್ನರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡುತ್ತದೆ.

**ಆರ್ಯನ್ನರ ಮೂಲಸ್ಥಾನ**

ಆರ್ಯನ್ನರ ಮೂಲಸ್ಥಾನದ ಬಗ್ಗೆ ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯಗಳಿವೆ:

| | |
|---|---|
| ಜರ್ಮನ್ ಪ್ರಸ್ಥಭೂಮಿ | ಪ್ರೊ: ಪೆಂಕಾ |
| ಟಿಬೇಟ್ | ದಯಾನಂದ ಸರಸ್ವತಿ |
| ಆರ್ಕ್ಟಿಕ್ ಪ್ರದೇಶ | ಬಾಲಗಂಗಾಧರ ತಿಲಕ್ |
| ಮಧ್ಯ ಏಷಿಯಾ | ಮ್ಯಾಕ್ಸ್ ಮುಲರ್ |
| ಸಪ್ತಸಿಂಧೂ ಪ್ರದೇಶ | ಎ.ಸಿ.ದಾಸ್. |
| ಆಸ್ಟ್ರೋ ಅಂಗೇರಿ ಪ್ರದೇಶ | ಮ್ಯಾಕ್ ಡೊನಾಲ್ಡ್ |

ಆರ್ಯನ್ ಅಂದರೆ ಭಾಷೆಗಳ ಗುಂಪನ್ನು ಮಾತನಾಡುವ ಒಂದು ಜನಾಂಗವಾಗಿದೆ. ಆರ್ಯನ್ನರ ಬಗ್ಗೆ ಋಗ್ವೇದವು ಮಾಹಿತಿ ನೀಡುವ ಮೊಟ್ಟ ಮೊದಲ ಸಾಹಿತ್ಯವಾಗಿದೆ. ಋಗ್ವೇದದ ಪ್ರಕಾರ, ಆರ್ಯನ್ನರು ಸಪ್ತಸಿಂಧೂ ಪ್ರದೇಶದಲ್ಲಿ ನೆಲೆಯೂರಿದ್ದಾರೆ. ಪುರಾತನ ಸಾಹಿತ್ಯವು ಭಾರತವನ್ನು 5 ವಿಭಾಗಗಳಾಗಿ ವಿಂಗಡಿಸಿದೆ:

1) ಮಧ್ಯ ದೇಶ — ಸರಸ್ವತಿ ಮತ್ತು ರಾಜಮಹಲ್ ಬೆಟ್ಟಗಳವರೆಗೆ ಹರಡಿತ್ತು.

downloaded from: www.kpscvaani.com

| | |
|---|---|
| 2) ಉತ್ತರ ಪಥ | ವಾಯುವ್ಯ ಭಾರತ |
| 3) ಅಪರಾಂತ | ಪಶ್ಚಿಮ ಭಾರತ |
| 4) ದಕ್ಷಿಣ ಪಥ | ದಕ್ಷಿಣ ಭಾರತ |
| 5) ಪೂರ್ವ ದೇಶ | ಪೂರ್ವ ಭಾರತ |

**ನದಿಗಳು ಮತ್ತು ಅವುಗಳ ಪುರಾತನ ಹೆಸರುಗಳು**

| | |
|---|---|
| 1) ರಾವಿ | ಪರೊಶಿಣಿ |
| 2) ಜೀಲಂ | ವಿಟಾಸ್ಥ |
| 3) ಬಿಯಾಸ್ | ಬಿಪಾಸ್ |
| 4) ಸಟ್ಲೇಜ್ | ಸತುದ್ರಿ |
| 5) ಗಗ್ಗರ | ಸರಸ್ವತಿ |
| 6) ಕಾಬೂಲ್ | ಕುಬ |
| 7) ಸ್ವಾತ್ | ಸುವಾಸ್ತು |
| 8) ಚಿನಾಬ್ | ಅಸಿಕಿನ್ |
| 9) ಗೋಮಾಲ್ | ಗೋಮತಿ |
| 10) ಕುರ್ರಮ್ | ಕುರುಮಿ |

**ಋಗ್ವೇದಗಳ ಕಾಲ 1500–1000 ಕ್ರಿ.ಪೂ.**

ಋಗ್ವೇದವು ಆರ್ಯನ್ನರ ಬಗ್ಗೆ ಮಾಹಿತಿ ನೀಡುವ ಪ್ರಮುಖ ಆಧಾರಗಳಾಗಿವೆ, ಇಂದ್ರ ಋಗ್ವೇದಗಳ ಕಾಲದ ಪ್ರಮುಖ ದೇವತೆಯಾಗಿದ್ದು ಪುರಂದರ ಎಂದು ಕರೆಯುತ್ತಿದ್ದರು. ದಶರಾಜರುಗಳ ಯುದ್ಧವು ದಶರಾಜರುಗಳು ಮತ್ತು ಭರತರ ನಡುವೆ ನಡೆದಿದ್ದು, ದಶರಾಜರುಗಳು ಯಶಸ್ಸನ್ನು ಗಳಿಸುತ್ತಾರೆ. ದಶರಾಜರುಗಳ ಯುದ್ಧವು ರಾವಿ ನದಿಯ ನೀರಿನ ಹಂಚಿಕೆಗಾಗಿ ನಡೆದಿತ್ತು.

**ಋಗ್ವೇದ ಕಾಲದ ರಾಜಕೀಯ**

ಏಕಾದಿಪತ್ಯ ಸರಕಾರ ವ್ಯವಸ್ಥೆ ಅಸ್ತಿತ್ವದಲ್ಲಿತ್ತು ರಾಜನು ಬುಡಕಟ್ಟು ಪಂಗಡದ ಮುಖ್ಯಸ್ಥನಾಗಿದ್ದು ಅವನನ್ನು ರಾಜನ್ ಎಂದು ಕರೆಯುತ್ತಿದ್ದರು. ಅವನ ಹುದ್ದೆಯು ವಂಶಪಾರಂಪರ್ಯವಾಗಿತ್ತು. ರಾಜನು ಬುಡಕಟ್ಟು ಜನಾಂಗದ ರಕ್ಷಕನಾಗಿದ್ದು, ಅವನನ್ನು ಜಾನ ಎಂದು ಕರೆಯುತ್ತಿದ್ದರು. ರಾಜನು ದನಗಳಿಗಾಗಿ ಯುದ್ಧವನ್ನು ಮಾಡುತ್ತಿದ್ದರೆ ಹೊರತು, ಪ್ರದೇಶಗಳನ್ನು ವಶಪಡಿಸಿಕೊಳ್ಳುವ ಉದ್ದೇಶದಿಂದ ಮಾಡುತ್ತಿರಲಿಲ್ಲ. ರಾಜನಿಗೆ ಆಡಳಿತದಲ್ಲಿ ಪ್ರಮುಖ ಸಭೆಗಳು ಸಹಾಯ ಮಾಡುತ್ತಿದ್ದವು. ಅವುಗಳೆಂದರೆ:

| | |
|---|---|
| 1) ಸಭಾ | ಹಿರಿಯರ ಸಭೆ (ಕಾರ್ಯಾಂಗದ ಅಧಿಕಾರಗಳನ್ನು ನಿರ್ವಹಿಸುತ್ತಿತ್ತು) |
| 2) ಸಮಿತಿ | ಸಾಮಾನ್ಯ ಸಭೆ (ಶಾಸಕಾಂಗದ ಅಧಿಕಾರಗಳನ್ನು ನಿರ್ವಹಿಸುತ್ತಿತ್ತು) |
| 3) ವಿದಾತ್ತ | ಅತ್ಯಂತ ಹಳೆಯ ಸಭೆ (ನ್ಯಾಯಾಂಗ ಮತ್ತು ಧಾರ್ಮಿಕ ಅಧಿಕಾರಗಳನ್ನು ನಿರ್ವಹಿಸುತ್ತಿತ್ತು) |

ರಾಜನು ಜನರಿಂದ ಐಚ್ಛಿಕ ಉಡುಗೊರೆಗಳನ್ನು ಪಡೆಯುತ್ತಿದ್ದ. ಅದಕ್ಕೆ ಬಲಿ ಎಂದು ಕರೆಯಲಾಗುತ್ತಿತ್ತು.

**ಪ್ರಮುಖ ಅಧಿಕಾರಗಳು**

| | |
|---|---|
| ಪುರೋಹಿತ | ಪೂಜಾರಿ |
| ಸೇನಾನಿ | ಪ್ರಾಂತ್ಯಗಳ ಗವರ್ನರ್ |
| ಕ್ಷತ್ರಿ | ರಾಜ್ಯಮನೆತನದ ಮುಖ್ಯಸ್ಥ |

downloaded from: www.kpscvaani.com

| | |
|---|---|
| ಸ್ತಪತಿ | ಸೇನಾ ಮುಖ್ಯಸ್ಥ |
| ಸ್ಪಾಸ | ಗೂಢಚಾರಿ |
| ವಜ್ರಪತಿ | ಗೋಮಾಳದ ಮುಖ್ಯಸ್ಥ |
| ಗ್ರಮಾನಿ | ಗ್ರಾಮಗಳ ಮುಖ್ಯಸ್ಥ |

**ಋಗ್ವೇದ ಕಾಲದ ಆರ್ಥಿಕ ವ್ಯವಸ್ಥೆ**

ಋಗ್ವೇದ ಕಾಲದ ಆರ್ಥಿಕ ವ್ಯವಸ್ಥೆ ಸಾಮಾನ್ಯವಾಗಿ ಕೃಷಿ ಪ್ರಾಧಾನ್ಯ ಆರ್ಥಿಕ ವ್ಯವಸ್ಥೆಯಾಗಿದೆ. ಋಗ್ವೇದ ಕಾಲದ ಪ್ರಮುಖ ಆಹಾರ ಯವ (ಬಾರ್ಲಿ). ಪಶುಸಂಗೋಪನೆ ಋಗ್ವೇದಗಳ ಕಾಲದ ಪ್ರಮುಖ ಕಸುಬಾಗಿದೆ. ಭೂಮಿಗಳ ಖಾಸಗಿ ಒಡೆತನ ಕಂಡುಬರುವುದಿಲ್ಲ, ಋಗ್ವೇದ ಕಾಲದ ಜನರಿಗೆ ತಾಮ್ರ ಮತ್ತು ಕಂಚಿನ ಬಳಕೆ ಗೊತ್ತಿತ್ತು. ಋಗ್ವೇದವು ಬಡಗಿಗಳು, ನೇಕಾರರು, ಚಮ್ಮಾರರು ಮುಂತಾದವರ ಬಗ್ಗೆ ಮಾಹಿತಿಯನ್ನು ನೀಡುತ್ತದೆ.

**ಋಗ್ವೇದ ಕಾಲದ ಸಾಮಾಜಿಕ ವ್ಯವಸ್ಥೆ**

ಪಿತೃಪ್ರಧಾನ ಅವಿಭಕ್ತ ಕುಟುಂಬವು ಅಸ್ತಿತ್ವದಲ್ಲಿತ್ತು, ಕುಟುಂಬವು ಮೂಲ ಸಾಮಾಜಿಕ ಮತ್ತು ರಾಜಕೀಯ ಸಂಘಟನೆಯಾಗಿತ್ತು. ಕುಟುಂಬದ ಮುಖ್ಯಸ್ಥನನ್ನು ಕುಲಪತಿ ಎಂದು ಕರೆಯುತ್ತಿದ್ದರು. ಋಗ್ವೇದ ಕಾಲದಲ್ಲಿ ಮಹಿಳೆಯರ ಸ್ಥಾನಮಾನವು ಪುರುಷರ ಸ್ಥಾನಮಾನಕ್ಕೆ ಸಮಾನವಾಗಿತ್ತು. ಮಹಿಳೆಯರು ಸಭಾ ಮತ್ತು ಸಮಿತಿಗಳಲ್ಲಿ ಭಾಗವಹಿಸುತ್ತಿದ್ದರು. ವಿಧವಾ ಪುನರ್ವಿವಾಹದ ಬಗ್ಗೆ ಮಾಹಿತಿಗಳು ಸಿಗುತ್ತವೆ. ಋಗ್ವೇದ ಕಾಲದಲ್ಲಿ ನಿಯೋಗ ಪದ್ದತಿ ಅಸ್ತಿತ್ವದಲ್ಲಿತ್ತು. ಬಹುಪತ್ನಿತ್ವ ಮತ್ತು ಬಹುಪತಿತ್ವ ವ್ಯವಸ್ಥೆ ಋಗ್ವೇದ ಕಾಲದಲ್ಲೂ ಕಂಡುಬರುತ್ತಿತ್ತು. ಮಹಿಳಾ ಗುಲಾಮರನ್ನು ಪುರೋಹಿತರಿಗೆ ಉಡುಗೊರೆಯಾಗಿ ನೀಡುತ್ತಿದ್ದರು.

**ಋಗ್ವೇದ ಕಾಲದ ಧಾರ್ಮಿಕ ವ್ಯವಸ್ಥೆ**

ಏಕದೇವತಾರಾಧನೆ ಋಗ್ವೇದ ಕಾಲದಲ್ಲಿ ಕಂಡುಬರುತ್ತಿತ್ತು. ಋಗ್ವೇದ ಕಾಲದಲ್ಲಿ ಜನರು ಆಹಾರ ಸಂಪತ್ತು ಮತ್ತು ಆರೋಗ್ಯಕ್ಕಾಗಿ ಪೂಜಿಸುತ್ತಿದ್ದರೆ ಹೊರತು ಅಧ್ಯಾತ್ಮಿಕ ಏಳಿಗೆಗಾಗಿ ಪೂಜಿಸುತ್ತಿರಲಿಲ್ಲ.

**ವೇದಗಳ ನಂತರದ ಕಾಲ ಕ್ರಿ.ಪೂ. 1000 – ಕ್ರಿ.ಪೂ. 600**

ವೇದಗಳ ನಂತರದ ಇತಿಹಾಸ ಪ್ರಮುಖ ಸಾಹಿತ್ಯಗಳಾದ ಸಾಮವೇದ, ಯಜುರ್ವೆದ, ಅಥರ್ವಣವೇದ ಬ್ರಾಹ್ಮಣಗಳು, ಅರಣ್ಯಕಗಳು ಮತ್ತು ಉಪನಿಷತ್ತುಗಳನ್ನು ಅವಲಂಬಿಸಿತ್ತು.

**ರಾಜಕೀಯ ವ್ಯವಸ್ಥೆ**

ಪ್ರಮುಖ ವೇದಗಳ ಸಭೆಗಳು ಪ್ರಾಮುಖ್ಯತೆ ಕಳೆದುಕೊಂಡವು. ರಾಜತ್ವವು ವಂಶಪಾರಂಪರ್ಯವಾಗಿತ್ತು. ಸಾಮಾನ್ಯವಾಗಿ ಅದನ್ನು ಹಿರಿಯ ಮಗನಿಗೆ ನೀಡಲಾಗುತ್ತಿತ್ತು. ವೇದಗಳ ನಂತರದ ಕಾಲದಲ್ಲಿ ರಾಜರುಗಳು ಪ್ರದೇಶಗಳನ್ನು ವಶಪಡಿಸಿಕೊಳ್ಳುವ ಮಹತ್ವಕಾಂಕ್ಷೆಯಿಂದ ಯುದ್ಧಗಳನ್ನು ಮಾಡುತ್ತಿದ್ದರೆ ಹೊರತು, ಹಸುಗಳಿಗಾಗಿ ಅಲ್ಲ.

ರಾಜಸುಯ, ವಾಜಪೇಯ, ಅಶ್ವಮೇಧ ಯಾಗಗಳು ವೇದಗಳ ನಂತರದ ಕಾಲದಲ್ಲಿ ಕಂಡುಬರುತ್ತವೆ. ವೇದಗಳ ನಂತರದ ಕಾಲದಲ್ಲಿ ಪೂರ್ವ ದೊರೆಗಳನ್ನು ಸಾಮ್ರಾಟ್, ಪಶ್ಚಿಮದ ದೊರೆಗಳನ್ನು ಸ್ವಾರತ್, ಉತ್ತರದ ದೊರೆಗಳನ್ನು ವಿರಾಟ್ ಮತ್ತು ದಕ್ಷಿಣದ ದೊರೆಗಳನ್ನು ಭೋಜ ಎಂದು ಕರೆಯಲಾಗುತ್ತಿತ್ತು. ವೇದಗಳ ನಂತರದ ಕಾಲದಲ್ಲಿ ತೆರಿಗೆ ಸಂಗ್ರಹಿಸುವವನಿಗೆ ಬಾಗದುಗ ಎಂದು ಕರೆಯಲಾಗುತ್ತಿತ್ತು. ಸಮಗ್ರಹಿತ್ರಿ ಖಜಾನೆ ಅಧಿಕಾರಿಯಾಗಿದ್ದ.

downloaded from: www.kpscvaani.com

**ಆರ್ಥಿಕ ವ್ಯವಸ್ಥೆ**

ಕಬ್ಬಿಣದ ಸಂಶೋಧನೆಯಿಂದ ಕೃಷಿಯು ಜನರ ಮುಖ್ಯ ಕಸುಬಾಗಿತ್ತು. ಭತ್ತ ಮತ್ತು ಗೋಧಿ ವೇದಗಳ ನಂತರದ ಕಾಲದ ಆಹಾರ ಉತ್ಪನ್ನಗಳಾಗಿದ್ದವು. ಕಬ್ಬಿಣವನ್ನು ಕ್ರಿ.ಪೂ. 1000ರಲ್ಲಿ ಸಂಶೋಧಿಸಲಾಗಿದ್ದು, ಇದು ಸಾಮಾನ್ಯವಾಗಿ ಗಾಂಧಾರ, ಧಾರವಾಡ, ಬಲುಚಿಸ್ತಾನ, ಪೂರ್ವ ಪಂಜಾಬ ಮತ್ತು ಉತ್ತರ ಪ್ರದೇಶದ ಪಶ್ಚಿಮ ಭಾಗಗಳಲ್ಲಿ ಕಂಡುಬರುತ್ತಿತ್ತು. ವೇದಗಳ ನಂತರದ ಸಾಹಿತ್ಯವು ಅರಬ್ಬಿ ಸಮುದ್ರ ಮತ್ತು ಹಿಂದೂ ಮಹಾಸಾಗರಗಳ ಬಗ್ಗೆ ಮಾಹಿತಿ ನೀಡುತ್ತದೆ. ಸತ್ಪತ ಬ್ರಾಹ್ಮಣವು ಲೇವಾದೇವಿ ವ್ಯವಸ್ಥೆಯ ಕುರಿತು ಮಾಹಿತಿ ನೀಡುತ್ತದೆ. ನಿಸ್ಕಾ ಶತಮಾನ ಮತ್ತು ಕೃಷ್ಣಾಲಾ ವೇದಗಳ ನಂತರದ ಕಾಲದ ಪ್ರಮುಖ ವಿನಿಮಯ ಮಾಧ್ಯಮಗಳಾಗಿವೆ.

ವೇದಗಳ ನಂತರದ ಕಾಲದಲ್ಲಿ ಸಮಾಜವು 4 ವರ್ಣಗಳಾಗಿ ವಿಂಗಡಿಸಲಾಗಿತ್ತು. ಮಹಿಳೆಯರ ಸ್ಥಿತಿಗತಿ ಶೋಚನಿಯವಾಗಿತ್ತು. ಮಹಿಳೆಯರು ಸಭಾ ಮತ್ತು ಸಮಿತಿಗಳಲ್ಲಿ ಭಾಗವಹಿಸುತ್ತಿರಲಿಲ್ಲ.

**ವೇದಗಳ ನಂತರದ ಕಾಲದ ವಿವಾಹ ವ್ಯವಸ್ಥೆ**

ವೇದಗಳ ನಂತರದ ಕಾಲದಲ್ಲಿ 8 ರೀತಿಯ ವಿವಾಹ ವ್ಯವಸ್ಥೆಗಳ ಬಗ್ಗೆ ಮಾಹಿತಿ ದೊರೆಯುತ್ತದೆ.

1. **ಅನುಲೋಮ ವಿವಾಹ ವ್ಯವಸ್ಥೆ:** ಮೇಲ್ಜಾತಿಯ ಹುಡುಗ ಕೆಳಜಾತಿಯ ಹುಡುಗಿಯನ್ನು ವಿವಾಹವಾಗುವುದಕ್ಕೆ ಅನುಲೋಮ ವಿವಾಹ ಎಂದು ಕರೆಯುತ್ತೇವೆ.
2. **ಪ್ರತಿಲೋಮ ವಿವಾಹ:** ಮೇಲ್ಜಾತಿಯ ಹುಡುತಿ ಕೆಳಜಾತಿಯ ಹುಡುಗನನ್ನು ವಿವಾಹವಾಗುವುದಕ್ಕೆ ಪ್ರತಿಲೋಮ ವಿವಾಹ ಎಂದು ಕರೆಯುತ್ತೇವೆ.

ಗೌತಮ ಬ್ರಹ್ಮ ಸೂತ್ರವು 8 ವಿಧದ ವಿವಾಹ ವ್ಯವಸ್ಥೆಯ ಕುರಿತು ಮಾಹಿತಿ ನೀಡುತ್ತದೆ.

| | | |
|---|---|---|
| 1) | ಬೃಹ್ಮ | ಏಕವರ್ಣೀಯ ಮದುವೆ |
| 2) | ದೈವ | ತಂದೆಯು ಮಗಳನ್ನು ಪುರೋಹಿತನಿಗೆ ದಕ್ಷಿಣೆಯಾಗಿ ನೀಡುತ್ತಾನೆ |
| 3) | ಅರ್ಸ | ವಧುದಕ್ಷಿಣೆಯಾಗಿ ಹಸು ಮತ್ತು ಎತ್ತನ್ನು ನೀಡಲಾಗುತ್ತದೆ. |
| 4) | ಪ್ರಜಾಪತಿ | ವಧುದಕ್ಷಿಣೆ ಮತ್ತು ವರದಕ್ಷಿಣೆರಹಿತ ವಿವಾಹ |
| 5) | ಗಂದರ್ವ | ಸ್ವಯಂವರ ವಿವಾಹ |
| 6) | ಅಸುರ | ಹಣ ನೀಡಿ ಹುಡುಗಿಯನ್ನು ಕೊಂಡುಕೊಳ್ಳುವುದು |
| 7) | ಪೈಶಾಚ | ಹುಡುಗಿ ನಿದ್ದೆಯಲ್ಲಿರುವಾಗ ಮತ್ತು ಪಾನಮತ್ತಳಾಗಿರುವಾಗ ವಶಪಡಿಸಿಕೊಳ್ಳುವುದು |
| 8) | ರಾಕ್ಷಸ | ಹುಡುಗಿಯನ್ನು ಅಪಹರಿಸುವುದು |

**ಧಾರ್ಮಿಕ ವ್ಯವಸ್ಥೆ**

ವೇದಗಳ ನಂತರದ ಕಾಲದಲ್ಲಿ ಇಂದ್ರ ಮತ್ತು ಅಗ್ನಿ ದೇವತೆಗಳು ಪ್ರಾಮುಖ್ಯತೆ ಕಳೆದುಕೊಂಡವು. ಪ್ರಜಾಪತಿ, ವಿಷ್ಣು, ರುದ್ರ ಪ್ರಮುಖ ಸ್ಥಾನವನ್ನು ಪಡೆದುಕೊಂಡವು. ಮೂರ್ತಿಪೂಜೆ ಕಂಡುಬರುತ್ತದೆ. ಜನರು ದೇವರನ್ನು ಭೌತಿಕ ಅಕಾಂಕ್ಷೆಗಳನ್ನು ಈಡೇರಿಸುವುದಕ್ಕಾಗಿ ಪೂಜಿಸುತ್ತಿದ್ದರು.

**ವೇದಗಳ ಸಾಹಿತ್ಯಗಳು**

ನಾಲ್ಕು ವೇದಗಳು, ಬ್ರಾಹ್ಮಣಗಳು, ಅರಣ್ಯಕಗಳು ಮತ್ತು ಉಪನಿಷತ್ತುಗಳನ್ನು ಶೃತಿಗಳೆಂದು ಕರೆಯಲಾಗುತ್ತಿದೆ.

**downloaded from: www.kpscvaani.com**

**ಋಗ್ವೇದ**

ಋಗ್ವೇದವು ಬೇರೆ ಬೇರೆ ದೇವತೆಗಳ ಪ್ರಾರ್ಥನೆಗಳ ಸಂಗ್ರಹವಾಗಿದೆ. ಇದರಲ್ಲಿ 1028 ಶ್ಲೋಕಗಳಿವೆ. ಇವುಗಳನ್ನು 10 ಮಂಡಲಗಳಾಗಿ ವರ್ಗೀಕರಿಸಲಾಗಿದೆ. ಋಗ್ವೇದವು ರಾಜಕೀಯ ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಯ ಬಗ್ಗೆ ಮಾಹಿತಿ ನೀಡುತ್ತದೆ. ಋಗ್ವೇದದ ಪುರುಷ ಸೂಕ್ತದಲ್ಲಿ 4 ವರ್ಣಗಳ ಬಗ್ಗೆ ಮಾಹಿತಿ ಸಿಗುತ್ತದೆ. ಇದು 10ನೇ ಮಂಡಲದಲ್ಲಿದೆ. ಗಾಯತ್ರಿ ಮಂತ್ರವನ್ನು ಋಗ್ವೇದದಿಂದ ಪಡೆಯಲಾಗಿದೆ. ಇದನ್ನು ಸೂರ್ಯದೇವತೆ ಸಾವಿತ್ರಿಗೆ ಅರ್ಪಿಸಲಾಗಿದೆ. ಋಗ್ವೇದದ ಕಾಲದಲ್ಲಿ ಆರ್ಯ ನೇತ್ರರನ್ನು ಪಾನೀಸ್ ಎಂದು ಕರೆಯಲಾಗುತ್ತಿತ್ತು. ತಾಮ್ರ ಮತ್ತು ಕಂಚಿನ ಬಗ್ಗೆ ಋಗ್ವೇದದಲ್ಲಿ ಉಲ್ಲೇಖವಿದೆ. ಋಗ್ವೇದದ ಶ್ಲೋಕಗಳನ್ನು ಹೋತ್ರಿ ಪುರೋಹಿತರು ಪಠಿಸುತ್ತಿದ್ದರು.

**ಸಾಮವೇದ**

ಸಾಮವೇದವು ಋಗ್ವೇದದ ಪದ್ಯಗಳ ಪುನರಾವರ್ತನೆಯಾಗಿದೆ. ಭಾರತೀಯ ಸಂಗೀತದ ಮೂಲ ಸಾಮವೇದವಾಗಿದೆ. ಸಾಮವೇದದಲ್ಲಿ ಇರುವ ಹಾಡುಗಳನ್ನು ಉದ್‌ಗತ್ರಿ ಪುರೋಹಿತರು ಪಠಿಸುತ್ತಾರೆ.

**ಯಜುರ್ವೇದ**

ಇದು ಯಜ್ಞ ಯಾಗಗಳ ಆಚರಣೆಯ ವಿಧಾನಗಳನ್ನು ಒಳಗೊಂಡಿದೆ. ಇದರಲ್ಲಿರುವ ಮಂತ್ರಗಳನ್ನು ತ್ಯಾಗ ಬಲಿದಾನಗಳ ಸಮಯದಲ್ಲಿ ಪಠಿಸಲಾಗುತಿತ್ತು. ಯಜುರ್ವೇದವನ್ನು 2 ವಿಧಗಳಾಗಿ ವಿಂಗಡಿಸಲಾಗಿತ್ತು. ಶುಕ್ಲ ಯಜುರ್ವೇದ ಮತ್ತು ಶ್ವೇತ ಯಜುರ್ವೇದ.

**ಅಥರ್ವಣ ವೇದ**

ಇದು ಮಾಟ ಮಂತ್ರಗಳ ಬಗ್ಗೆ ಮಾಹಿತಿ ನೀಡುತ್ತದೆ. ಭಾರತೀಯ ಔಷಧಿಗಳ ಮೂಲ ಅಥರ್ವಣ ವೇದವಾಗಿದೆ.

**ನಾಲ್ಕು ಉಪವೇದಗಳಿವೆ:**

| | |
|---|---|
| ಋಗ್ವೇದ | ಆಯುರ್ವೇದ |
| ಸಾಮವೇದ | ಗಂದರ್ವ ವೇದ |
| ಯಜುರ್ವೇದ | ಧನುರ್ವೇದ |
| ಅಥರ್ವಣ ವೇದ | ಶಿಲ್ಪ ವೇದ |

ಋಗ್ವೇದ ಯಜುರ್ವೇದ ಮತ್ತು ಸಾಮವೇದಗಳನ್ನು ತ್ರಯ ಎಂದು ಕರೆಯಲಾಗುತಿತ್ತು.

**ಬ್ರಾಹ್ಮಣಗಳು**

ಪುರೋಹಿತರ ಮಾರ್ಗದರ್ಶನಕ್ಕಾಗಿರುವ ಗದ್ಯರೂಪದಲ್ಲಿರುವ ವಿವರಣಾತ್ಮಕ ಟಿಪ್ಪಣಿಗಳು. ಬ್ರಾಹ್ಮಣಗಳು ತ್ಯಾಗ ಬಲಿದಾನಗಳ ಅರ್ಥ ಮತ್ತು ಅವುಗಳನ್ನು ಮಾಡುವ ವಿಧಿ ವಿಧಾನಗಳ ಬಗ್ಗೆ ಮಾಹಿತಿ ನೀಡುತ್ತವೆ. ಭಾರತೀಯ ಗಣಿತಶಾಸ್ತ್ರದ ಮೂಲ ಬ್ರಾಹ್ಮಣಗಳಾಗಿವೆ. ಸತ್ಪತ ಬ್ರಾಹ್ಮಣವು ಪ್ರಥಮ ಬ್ರಾಹ್ಮಣ ಸಾಹಿತ್ಯವಾಗಿದೆ. ಇದನ್ನು ಯಜ್ಞವಲ್ಕ್ಯ ರಚಿಸಿದನೆಂದು ತಿಳಿದುಬರುತ್ತದೆ. ಇದರ ಪ್ರಕಾರ, ಒಬ್ಬ ವ್ಯಕ್ತಿ ಹುಟ್ಟಿನಿಂದ ಬ್ರಾಹ್ಮಣನಾಗದೆ ಜ್ಞಾನದಿಂದ ಬ್ರಾಹ್ಮಣನಾಗುತ್ತಾನೆ. ಲೇವಾದೇವಿ ವ್ಯವಸ್ಥೆ ಬಗ್ಗೆ ಸತ್ಪತ ಬ್ರಾಹ್ಮಣದಲ್ಲಿ ಉಲೇಖವಿದೆ. ಲೇವಾದೇವಿ ಗಾರನನ್ನು ಕುಸಿದಿನ್ ಎಂದು ಕರೆಯಲಾಗುತ್ತಿತ್ತು. ಐತ್ರಿಯ ಬ್ರಾಹ್ಮಣ ರಾಜತ್ವದ ಬಗ್ಗೆ ಮಾಹಿತಿ ನೀಡುತ್ತದೆ. ಇದು ರಾಜಶ್ರೀಯ ಯಜ್ಞ ಮತ್ತು 4 ವರ್ಣಗಳ ನಡುವೆ ಕೆಲಸದ ಹಂಚಿಕೆ ಬಗ್ಗೆ ಮಾಹಿತಿ ನೀಡುತ್ತದೆ. ಗೋಪಥ ಬ್ರಾಹ್ಮಣವು ಕೊನೆಯ ಬ್ರಾಹ್ಮಣ ಸಾಹಿತ್ಯವಾಗಿದೆ.

**ಅರಣ್ಯಕಗಳು**

ಇವು ಬ್ರಾಹ್ಮಣಗಳ ಉಪಸಂಹಾರ ರೂಪವಾಗಿದೆ. ಅರಣ್ಯಕಗಳು ಅರಣ್ಯ ಗ್ರಂಥಗಳಾಗಿದ್ದು ಅರಣ್ಯಗಳಲ್ಲಿ ವಾಸಿಸುವ ಋಷಿ ಮುನಿಗಳು ರಚಿಸಿದ್ದಾರೆಂದು ತಿಳಿದುಬರುತ್ತದೆ.

**downloaded from: www.kpscvaani.com**

**ಉಪನಿಷತ್ತುಗಳು**

ಇವು ಹಿಂದೂ ತತ್ವಜ್ಞಾನದ ಪ್ರಮುಖ ಅಂಶಗಳನ್ನು ಒಳಗೊಂಡಿವೆ. ಒಟ್ಟು 108 ಉಪನಿಷತ್ತುಗಳಿವೆ.

| **ವೇದಗಳು** | **ಬ್ರಾಹ್ಮಣಗಳು** | **ಉಪನಿಷತ್ತುಗಳು** |
|---|---|---|
| ಋಗ್ವೇದ | ಐತ್ರೇಯ ಮತ್ತು ಕೌಶಿಟಿಕಿ | ಐತ್ರೇಯ ಮತ್ತು ಕೌಶಿಟಿಕಿ |
| ಸಾಮವೇದ | ತಂಡ್ಯಾ ಮತ್ತು ಜೈಮಿನಿಯಾ | ಚಂದ್ಯೋಗ್ಯ ಮತ್ತು ಕೇನಾ |
| ಯಜುರ್ವೇದ | ತೈತ್ರೀಯ ಸತ್ವತ | ತೈತ್ರೀಯ ಕಥಾ ಇಸಾ ಶ್ವೇತ ವಸ್ತರ ಬ್ರಹದರಣ್ಯಕ |
| ಅಥರ್ವವೇದ | ಗೋಪತ | ಪ್ರಶ್ನಾ ಮುಂಡಕ ಮಾಂಡುಕ್ಯ |

ಐತ್ರೀಯ ಉಪನಿಷತ್ತು ಕರ್ಮ ಸಿದ್ಧಾಂತಗಳ ಬಗ್ಗೆ ಮಾಹಿತಿ ನೀಡುತ್ತದೆ. ಪುನರ್ಜನ್ಮದ ಬಗ್ಗೆ ಕೌಶಿಟಿಕಿ ಉಪನಿಷತ್ತಿನಲ್ಲಿ ಉಲ್ಲೇಖವಿದೆ. ಅಹಂ ಬ್ರಹ್ಮಾಸ್ಮಿಯನ್ನು ಬ್ರಹದರಣ್ಯಕ ಉಪನಿಷತ್ತಿನಿಂದ ಪಡೆಯಲಾಗಿದೆ. ಚಂದೋಗ್ಯ ಉಪನಿಷತ್ತಿನಲ್ಲಿ ಕೃಷ್ಣನ ಬಗ್ಗೆ ಉಲ್ಲೇಖವಿದೆ. ಸತ್ಯ ಮೇವ ಜಯತೆಯನ್ನು ಮುಂಡಕ ಉಪನಿಷತ್ತಿನಿಂದ ಪಡೆಯಲಾಗಿದೆ. ಮಾಂಡುಕ್ಯ ಉಪನಿಷತ್ತು ಅತ್ಯಂತ ಚಿಕ್ಕ ಉಪನಿಷತ್ತಾಗಿದೆ. ಇದರಲ್ಲಿ 12 ಮಂತ್ರಗಳಿವೆ. 4 ಆಶ್ರಮಗಳ ಬಗ್ಗೆ ಮಾಹಿತಿಗಳು ಜಬಲೋಪನಿಷತ್ತಿನಲ್ಲಿದೆ. ಸ್ವರ್ಗ ಮತ್ತು ನರಕದ ಬಗ್ಗೆ ಕಥೋಪನಿಷತ್ತಿನಲ್ಲಿ ಉಲ್ಲೇಖವಿದೆ.

**ವೇದಾಂಗಗಳು**

ವೇದಗಳ ಬಗ್ಗೆ ತಿಳಿದುಕೊಳ್ಳಲು ಬಳಸುವ ಸಾಹಿತ್ಯಗಳನ್ನು ವೇದಾಂಗಗಳೆಂದು ಕರೆಯಲಾಗುತ್ತದೆ. ಒಟ್ಟು 6 ವೇದಾಂಗಗಳಿವೆ. 1) ಕಲ್ಪ ಧಾರ್ಮಿ ಆಚರಣೆಗಳು 2) ಶಿಕ್ಷಾ ಉಚ್ಚಾರಣೆ 3) ವ್ಯಾಕರಣ 4) ನಿರುಪ್ತಾ 5) ಛಂದಸ್ಸು 6) ಜ್ಯೋತಿಷ

**ದರ್ಶನಗಳು**

ಇವು ಭಾರತೀಯ ತತ್ವಜ್ಞಾನದ 6 ಮಜಲುಗಳಾಗಿವೆ:

| | | |
|---|---|---|
| 1) | ಸಂಖ್ಯಾಶಾಸ್ತ್ರ | ಕಪಿಲ |
| 2) | ಯೋಗಶಾಸ್ತ್ರ | ಪತಂಜಲಿ |
| 3) | ನ್ಯಾಯಶಾಸ್ತ್ರ | ಗೌತಮ |
| 4) | ವೈಶೇಷಿಕ ಶಾಸ್ತ್ರ | ಕನ್ನಡ |
| 5) | ಪೂರ್ವ ಮಿಮಾಂಶ | ಜೈಮಿನಿ |
| 6) | ಉತ್ತರ ಮಿಮಾಂಶ | ಭದ್ರಾಯನ |

**ರಾಜಕೀಯ ಪರಿಭಾಷೆಗಳು:**

- ಪುರೋಹಿತ – ಧಾರ್ಮಿಕ ಕರ್ಮಗಳನ್ನು ನಡೆಸಿಕೊಡುವಾತ
- ಸೇನಾನಿ – ಸೈನ್ಯದ ಮುಖ್ಯಾಧಿಕಾರಿ
- ಸೂತ – ರಥವನ್ನು ಓಡಿಸುವವನು
- ಭಾಗದುಶ್ಥ – ಕಂದಾಯ ಸಂಗ್ರಹಿಸುವನು
- ಸಂಗೃಹೇತಿ – ಕೋಶಾಧ್ಯಕ್ಷ
- ಕ್ಷತ್ರಿ – ಗೃಹನಿರ್ವಾಣೆಗೆ ಬೇಕಾದ ಸಲಕರಣೆಗಳು ಸರಂಜಾಮು, ಸಾಮಾನುಗಳನ್ನು ವ್ಯವಸ್ಥೆ ಮಾಡುವ ಅಧಿಕಾರಿ

**downloaded from: www.kpscvaani.com**

- ರತ್ನಿ – ಪುರೋಹಿತ, ಸೇನಾನಿ ಮತ್ತು ಗ್ರಾಮಿಣ ಮುಂತಾದ ಉನ್ನತ ಮಟ್ಟದ ಅಧಿಕಾರಿಗಳಿಗೆ ಉಪಯೋಗಿಸುತ್ತಿದ್ದ ಸಾಮಾನ್ಯ ಪದ.
- ಅಕ್ಷಪಾದ – ಪಗಡೆಯಾಡುತ್ತಿದ್ದಾಗ ರಾಜನ ಸಂಗಾತಿಯಾಗುತಿದ್ದವ
- ಗೋನಿಕರತ್ನ – ಯಾವುದಾದರನ್ನು ಅರಸಿ ಅಟ್ಟಿಸಿಕೊಂಡು ಹೋಗುತ್ತಿದ್ದಾಗ ಇರುತ್ತಿದ್ದ ರಾಜನ ಸಂಗಾತಿ
- ತಕ್ಷನ್ – ಬಡಗಿ ಮರದ ಕೆಲಸ ಮಾಡುವವ
- ರಥಕಾರ – ರಥಗಳನ್ನು ತಯಾರಿಸುವವ
- ಪುರಪತಿ – ಮಟ್ಟಿನ ಕೋಟೆಗಳ ಮೇಲ್ವಿಚಾರಣೆ ನೋಡಿಕೊಳ್ಳುವ ಅಧಿಕಾರಿ
- ವ್ರಜಪತಿ – ದನಗಳು ಮೇಯುವ ಜಾಗಗಳನ್ನು ಗೋವಾಳುಗಳನ್ನು ನೋಡಿಕೊಳ್ಳುತ್ತಿದ್ದ ಅಧಿಕಾರಿ
- ಉಗ್ರ – ಪೋಲಿಸ್ ಅಧಿಕಾರಿ. ಅಪರಾಧಿಗಳನ್ನು ವಿಚಾರಿಸಿಕೊಳ್ಳುತ್ತಿದ್ದ ಅಥವಾ ಅದಕ್ಕೆ ಸಂಬಂಧ ಪಟ್ಟ ಅಧಿಕಾರ
- ಜೀವಸ್ವಭಾ – ಅಪರಾಧಿಗಳನ್ನು ವಿಚಾರಿಸಿಕೊಳ್ಳುತ್ತಿದ್ದ ಅಧಿಕಾರಿಗಳು
- ಮಧ್ಯಮಾಸಿ – ವ್ಯಾಜ್ಯಗಳಲ್ಲಿ ಮಧ್ಯವರ್ತಿಯಾಗಿ ಕೆಲಸನಿರ್ವಹಿಸುತ್ತಿದ್ದ ಅಧಿಕಾರಿ
- ಪಾಲಗಲ – ಒಂದು ಕಡೆಯಿಂದ ಇನ್ನೊಂದು ಕಡೆಗೆ ಓಡಾಡಿ ಕೆಲಸ ಮಾಡಿಕೊಂಡು ಬರುತ್ತಿದ್ದ ದೂತ ಸಂದೇಶ ವಾಹಕ
- ಕ್ಲೇತ್ರಾಸದ – ಬಿತ್ತನೆಗೆ ಜನರಿಗೆ ಭೂಮಿಯನ್ನು ಹಂಚುತ್ತಿದ್ದ ಅಧಿಕಾರಿ
- ಮಹಿಷಿ – ರಾಜನ ಪ್ರಧಾನರಾಣಿ
- ದೂತ – ಸಂದೇಶ ವಾಹಕ
- ಅಧಿಕರ್ತಾ – ರಾಜನಂದ ನೇಮಕಗೊಂದ ಗ್ರಾಮಾಧಿಕಾರಿ
- ಸ್ಥಪತಿ – ಒಂದು ಪ್ರಾಂತ್ಯದ ಮುಖ್ಯಸ್ಥ
- ಗೋಪ – ರಾಜ
- ಭಾಗ/ಅಂಶ – ಯುದ್ಧದಲ್ಲಿ ಗೆದ್ದು ಬಂದಿದ್ದರಲ್ಲಿ ಬುಡಕಟ್ಟಿನ ಸಾಧಾರಣ ಸದಸ್ಯರಿಗೆ ದೊರೆಯುತ್ತಿದ್ದ ಸಾಲ
- ಬಲಿ – ರಾಜನಗೆ ಸ್ವೈಚ್ಛೆಯಿಂದ ಕೊಡುತ್ತಿದ್ದ ಕಾಣಿಕೆಗಳು
- ಗರಿಷ್ಠ – ಪದದ ಈ ಅರ್ಥ ಹಸುಗಳನ್ನು ಹುಡುಕುವವನು ಎಂದು ಈ ಪದವನ್ನು ಹಸುಗಳಿಗಾಗಿ ನಡೆಸುತ್ತಿದ್ದ ಯುದ್ಧಕ್ಕೆ ಪ್ರಯೋಗ ಮಾಡಲಾಗಿದೆ.
- ವಿಧಾತಾ – ತುಂಬಾ ಪುರಾತನವಾದ ಬುಡಕಟ್ಟಿನ ಸಭೆ
- ಗಣ – ಬುಡಕಟ್ಟಿನ ಸಭೆ
- ರಾಜನ್ – ರಾಜ ಅಥವಾ ಪ್ರಮುಖನಿಗೆ ಅನ್ಯಯವಾಗುತ್ತದೆ.
- ಸಭಾ – ಸಮಾಜದ ಮೇಲ್ವರ್ಗದ ಜನರಿಂದ ಕೂಡಿದ ಸಭೆ
- ಸಭ್ಯ – ಸಭೆಯ ಸದಸ್ಯ
- ಸಮಿತಿ – ಸಾಮಾನ್ಯ ಜನರಿಂದೊಡಗೂಡಿದ ಸಭೆ
- ವಿಷಾಹ – ಸಮಿತಿಯ ಸದಸ್ಯರು
- ಗ್ರಾಮ – ಹಳ್ಳಿ
- ಜನ – ಬುಡಕಟ್ಟು
- ಜೋಷ್ಠ – ಮುಖ್ಯಸ್ಥ
- ರಾಜಕರ್ತಿ – ಪದದ ಅರ್ಥ ರಾಜರನ್ನು ಮಾಡುವವರು ಎಂದು ಗ್ರಾಮಿಣಗಳಿಗೆ ಅನ್ವಯಿಸುತ್ತದೆ
- ಸಜಾತಾ – ಕುಲಬಾಂಧವರು
- ತ್ರಸದಪ್ಪು – ದಸ್ಸುಗಳನ್ನು ಸೋಲಿಸಿದ ಆರ್ಯರ ಪ್ರಮುಖ

**downloaded from: www.kpscvaani.com**

**ಹೊಸ ಧರ್ಮಗಳ ಉದಯ**

ಕ್ರಿ.ಪೂ. 6ನೇ ಶತಮಾನದಲ್ಲಿ ವಿಶ್ವದಲ್ಲಿ ಹಲವಾರು ಹೊಸ ಮತಗಳು ಉದಯವಾಗಿದ್ದವು. ಚೀನಾದಲ್ಲಿ ಕನ್‌ಫ್ಯೂಶಿಯಸ್, ಇರಾನ್‌ನಲ್ಲಿ ಜೊರಾಸ್ಟರ್ ಮತ್ತು ಭಾರತದಲ್ಲಿ ಬೌದ್ಧ ಮತ್ತು ಜೈನ ಧರ್ಮಗಳು ಉದಯವಾದವು. ಬ್ರಾಹ್ಮಣರ ಶ್ರೇಷ್ಠತೆಯ ವಿರುದ್ಧ ಹೋರಾಡಲು ಜೈನ ಮತ್ತು ಬೌದ್ಧ ಧರ್ಮಗಳು ಅಸ್ತಿತ್ವಕ್ಕೆ ಬಂದವು.

**ಜೈನ ಧರ್ಮ**

ಜೈನಧರ್ಮವು ಅದರ 24ನೇ ತೀರ್ಥಂಕರನಾದ ವರ್ಧಮಾನ ಮಹಾವೀರನ ನಂತರ ಪ್ರಸಿದ್ಧಿ ಪಡೆಯಿತು. ಜೈನ ಧರ್ಮಧ ಮೊದಲನೇ ತೀರ್ಥಂಕರ ವೃಷಭನಾಥ, ಜೈನಧರ್ಮದ 24 ತೀರ್ಥಂಕರುಗಳೆಂದರೆ

**ಜೈನ ತೀರ್ಥಂಕರರು**

| | | | |
|---|---|---|---|
| 1. | ಋಷಭದೇವ | 2. | ಅಜಿತನಾಥ |
| 3. | ಸಂಭವನಾಥ | 4. | ಅಭಿನಂದನ |
| 5. | ಸುಮಿತನಾಥ | 6. | ಪದ್ಮಪ್ರಭು |
| 7. | ಸುಪಾರ್ಶ್ಯನಾಥ | 8. | ಸುರಿಧಿ |
| 9. | ಚಂದ್ರಪ್ರಭು | 10. | ಶೀತಲನಾಥ |
| 11. | ಶ್ರೇಯಾಂಪನಾಥ | 12. | ವಸುಪೂಜ್ಯ |
| 13. | ವಿಮಲನಾಥ | 14. | ಅನಂತನಾಥ |
| 15. | ಧರ್ಮನಾಥ | 16. | ಶಾಂತಿನಾಥ |
| 17. | ಕುಂತುನಾಥ | 18. | ಅರನಾಥ |
| 19. | ಮಲ್ಲಿನಾಥ | 20. | ಮುನಿಸುಪುತನಾಥ |
| 21. | ನೇಮಿನಾಥ | 22. | ಅರಿಷ್ಟನೇಮಿ |
| 23. | ಪಾರ್ಶ್ವನಾಥ | 24. | ಮಹಾವೀರ |

ವರ್ಧಮಾನ ಮಹಾವೀರನು ಕ್ರಿ.ಪೂ. 540ರಲ್ಲಿ ಬಿಹಾರದ ಮುಜಾಫರಪುರ ಜಿಲ್ಲೆಯ ಕುಂದ ಗ್ರಾಮದಲ್ಲಿ ಜನಿಸಿದ. ತಂದೆ ಸಿದ್ಧಾರ್ಥ, ತಾಯಿ ತ್ರಿಶಾಲದೇವಿ, (ಇವಳು ಬಿಹಾರದ ಲಿಚವಿ ಮನೆತನಕ್ಕೆ ಸೇರಿದವಳು) ಹೆಂಡತಿ ಯಶೋಧ, ಮಗಳು ಅನೋಜ, ಅಳಿಯ ಜಮೇಲಿ (ಮಹಾವೀರನ ಅನುಯಾಯಿ).

ತನ್ನ 30ನೇ ವರ್ಷದಲ್ಲಿ ಮನೆಯನ್ನು ತ್ಯಜಿಸಿದ ವರ್ಧಮಾನ ಮಹಾವೀರನು 12 ವರ್ಷಗಳ ಕಾಲ ಅಲೆದಾಡಿ 42ನೇ ವಯಸ್ಸಿನಲ್ಲಿ ಯಜುಪಾಲಿಕ ನದಿಯ ದಂಡೆಯ ಮೇಲೆ ಜೃಂಬೀಣಿ ಗ್ರಾಮದಲ್ಲಿ ಸಾಲ್ ವೃಕ್ಷದ ಕೆಳಗಡೆ ಜ್ಞಾನೋದಯವಾಗುತ್ತದೆ. ವರ್ಧಮಾನ ಮಹಾವೀರ ಮನೆ ತ್ಯಜಿಸಲು 3 ಪ್ರಮುಖ ಕಾರಣಗಳಿವೆ: 1) ರೋಗರುಜಿದಿಂದ ನರಳುತ್ತಿರುವ ಒಬ್ಬ ವೃದ್ಧನನ್ನು ನೋಡುತ್ತಾನೆ. 2) ಶವವನ್ನು ನೋಡುತ್ತಾನೆ. 3) ಒಬ್ಬ ಧಾರ್ಮಿಕ ಭಿಕ್ಷುಕನನ್ನು ನೋಡುತ್ತಾನೆ.

**ವರ್ಧಮಾನ ಮಹಾವೀರನ ಭೋಧನೆಗಳು**

1) ವಿಶ್ವವು 2 ಅಂಶಗಳನ್ನು ಒಳಗೊಂಡಿದೆ. 1. ಜೀವ 2. ಆತ್ಮ
2) ಪೂರ್ವಜನ್ಮದ ಕರ್ಮ ಒಬ್ಬ ವ್ಯಕ್ತಿಯನ್ನು ಒಳ್ಳೆಯವನಾಗಿ ಮತ್ತು ಕೆಟ್ಟವನಾಗಿ ಮಾಡುತ್ತದೆ.
3) ಅಹಿಂಸೆ, ಸತ್ಯ, ಅಪರಿಗ್ರಹ, ಕಳ್ಳತನ ಮಾಡದೆ ಇರುವುದು ಮತ್ತು ಬ್ರಹ್ಮಚರ್ಯದ ಇತರ ಭೋಧನೆಗಳು

**downloaded from: www.kpscvaani.com**

**ಜೈನ ಧರ್ಮದ ತ್ರಿರತ್ನಗಳು**

1) ಸರಿಯಾದ ನಡತೆ 2) ಸರಿಯಾದ ನಂಬಿಕೆ ಮತ್ತು ಸರಿಯಾದ ಜ್ಞಾನ. ವರ್ಧಮಾನ ಮಹಾವೀರನಿಗೆ 11 ಜನ ಅನುಯಾಯಿಗಳಿದ್ದರು. ಅವನ ಅನುಯಾಯಿಗಳನ್ನು ಗಣಧರಗಳು ಎಂದು ಕರೆಯಲಾಗುತ್ತದೆ.

**ಜೈನ ಧರ್ಮದ ಸಮ್ಮೇಳನಗಳು**

| **ಸ್ಥಳ** | **ಅಧ್ಯಕ್ಷರು** | **ಪ್ರಾಮುಖ್ಯತೆ** |
|---|---|---|
| ಪಾಟಲೀಪುತ್ರ | ಸ್ತುಲಬಾಹು | ಶ್ವೇತಾಂಬರ ಪಂಥ ಅಸ್ತಿತ್ವಕ್ಕೆ ಬಂದಿತು. |
| ವಲ್ಲಭಿ | ದೇವವರ್ಧಿ | 12 ಅಂಗಗಳು ಮತ್ತು 12 ಉಪಾಂಗಗಳ ರಚನೆಯಾಯಿತು. |

.

ಮೊದಲನೇ ಜೈನ ಧರ್ಮದ ಸಮ್ಮೇಳನದಲ್ಲಿ ಜೈನ ಧರ್ಮವು 2 ಪಂಗಡಗಳಾಗಿ ವಿಭಜನೆಯಾಯಿತು. 1) ಶ್ವೇತಾಂಬರರು 2) ದಿಗಂಬರರು, ಶ್ವೇತಾಂಬರರು ಸ್ತುಲಬಾಹುವಿನ ಅನುಯಾಯಿಗಳಾಗಿದ್ದು ಉತ್ತರ ಭಾರತದಲ್ಲಿರುತ್ತಾರೆ. ಇವರು ಬಿಳಿ ವಸ್ತ್ರ ಧರಿಸುತ್ತಾರೆ. ದಿಗಂಬರರು ಭದ್ರಬಾಹುವಿನ ಅನುಯಾಯಿಗಳಾಗಿದ್ದು ದಕ್ಷಿಣ ಭಾರತದಲ್ಲಿರುತ್ತಾರೆ. ಭದ್ರಬಾಹು ಕಲ್ಪಸೂತ್ರ ಎಂಬ ಗ್ರಂಥ ಬರೆಯುತ್ತಾನೆ. ದಕ್ಷಿಣ ಭಾರತದಲ್ಲಿ ಜೈನ ಧರ್ಮ ಪ್ರಸಿದ್ಧಿ ಪಡೆಯಲು ಭದ್ರಬಾಹು ಕಾರಣನಾಗುತ್ತಾನೆ. ಮೌರ್ಯ ವಂಶದ ಸ್ಥಾಪಕ ಚಂದ್ರಗುಪ್ತ ಮೌರ್ಯ ತನ್ನ ಕೊನೆಯ ದಿನಗಳನ್ನು ಶ್ರವಣಬೆಳಗೊಳದಲ್ಲಿ ಜೈನ ಮುನಿ ಭದ್ರಬಾಹುವಿನೊಂದಿಗೆ ಸಲ್ಲೇಖನ ವ್ರತದೊಂದಿಗೆ ಕಳೆಯುತ್ತಾನೆ.

ಜೈನ ಧರ್ಮದ ಸಾಹಿತ್ಯಗಳನ್ನು ಪೂರ್ವಗಳೆಂದು ಕರೆಯಲಾಗುತ್ತದೆ. ಒಟ್ಟು 14 ಪೂರ್ವಗಳು 12 ಅಂಗಗಳಿವೆ. ಇವು ಜೈನ ಧರ್ಮದ ಮೊದಲನೇ ಸಮ್ಮೇಳನದಲ್ಲಿ ರಚನೆಯಾದವು. ಪ್ರಮುಖ ಅಂಗಗಳೆಂದರೆ: 1) ಆಚಾರಾಂತ ಸೂತ್ರ 2) ಮೂಲ ಸೂತ್ರ 3) ಚತಸೂತ್ರ. ಮಹಾವೀರನು ಅರ್ಧಮಾಗದಿಯಲ್ಲಿ ಭೋದಿಸುತ್ತಾನೆ. ಸಂಸ್ಕೃತವನ್ನು ಬಿಟ್ಟು ಪಾಳಿ ಭಾಷೆ ಅಳವಡಿಸಲಾಯಿತು. ಅಪಭ್ರಮಸವನ್ನು ಜೈನ ಧರ್ಮದ ಮೊದಲ ವ್ಯಾಕರಣ ಸಾಹಿತ್ಯವೆಂದು ಕರೆಯಲಾಗುತ್ತದೆ. ಜೈನ ಧರ್ಮವು ಕನ್ನಡ ಸಾಹಿತ್ಯದ ಬೆಳವಣಿಗೆಗೆ ಕಾರಣವಾಗಿದೆ.

**ಜೈನ ಧರ್ಮದ ಪ್ರಮುಖ ಶಿಲ್ಪ ಕಲೆಗಳು**

ಜೈನ ಧರ್ಮದ ತೀರ್ಥಂಕರರ ಮೂರ್ತಿಗಳು ಮತೂರದ ಕಂಕಲಿತೀರಲ್ಲಿ ಕಂಡುಬರುತ್ತವೆ. ಗಂಗರು ಜೈನ ಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದರು. 4ನೇ ರಾಚಮಲ್ಲನ ಮಂತ್ರಿ ಚಾವುಂಡರಾಯನ ಕಾಲದಲ್ಲಿ ಶ್ರವಣಬೆಳಗೊಳದ ಗೋಮಟೇಶ್ವರನ ಮೂರ್ತಿ ನಿರ್ಮಾಣವಾಗಿತ್ತು. ಇದು ವಿಶ್ವದಲ್ಲೇ ಅತಿ ಎತ್ತರವಾದ ಏಕಶಿಲಾವಿಗ್ರಹವಾಗಿದೆ. ಇದರ ಎತ್ತರ 57.8 ಅಡಿಗಳಾಗಿವೆ. ಇದರ ಮುಖ್ಯಶಿಲ್ಪಿ ಅರಿಷ್ಟನೇಮಿ, ಇದು ಶ್ರವಣಬೆಳಗೊಳದಲ್ಲಿ ವಿಂದ್ಯ ಪರ್ವತದಲ್ಲಿದೆ. ಇದು ಕ್ರಿ.ಶ. 973ರಲ್ಲಿ ನಿರ್ಮಾಣವಾಯಿತು. ಅಮೃತಶಿಲೆಯಿಂದ ನಿರ್ಮಿಸಿದ ಜೈನ ದೇವಾಲಯಗಳು ರಾಜಸ್ತಾನದ ಮೌಂಟ್ ಅಬು ಮತ್ತು ಗುಜರಾತಿನ ಗಿರ್ನಾರ ಬೆಟ್ಟಗಳಲ್ಲಿ ಕಂಡುಬರುತ್ತವೆ. ದೀಪಾವಳಿಯು ಜೈನ ಧರ್ಮದ ಹೊಸ ವರ್ಷವಾಗಿದೆ.

ಜೈನ ಧರ್ಮದ ಅನುಯಾಯಿಗಳು ತೀರ್ಥಂಕರರನ್ನು ಬೇರೆ ಬೇರೆ ಚಿಹ್ನೆಗಳ ರೂಪದಲ್ಲಿ ಪೂಜಿಸುತ್ತಿದ್ದರು.

| | |
|---|---|
| ವೃಷಭನಾಥ | ಎತ್ತು |
| ಪಾರ್ಶ್ವನಾಥ | ಹಾವು |
| ವರ್ಧಮಾನ ಮಹಾವೀರ | ಸಿಂಹ |

ಖಾರಾವೇಳನ ಹತ್ತಿಗುಂಪ ಶಾಸನವು ಜೈನ ಧರ್ಮದ ಬಗ್ಗೆ ಮಾಹಿತಿ ನೀಡುತ್ತದೆ. ಚಾಲುಕ್ಯರು ರಾಷ್ಟ್ರಕೂಟರು ಮತ್ತು ಕದಂಬರು ಜೈನ ಧರ್ಮದ ಪ್ರಚಾರಕ್ಕೆ ಕಾರಣರಾದರು.

**downloaded from: www.kpscvaani.com**

**ಬೌದ್ಧ ಧರ್ಮ**

ಬೌದ್ಧ ಧರ್ಮದ ಸ್ಥಾಪಕನಾದ ಗೌತಮ ಬುದ್ದ ಕ್ರಿ.ಪೂ. 563ರಲ್ಲಿ ಕಪಿಲ ವಸ್ತುವಿನ ಲುಂಬಿನಿ ವನದಲ್ಲಿ ಜನಿಸಿದ. ತಂದೆ ಶುದ್ದೋಧನ, ತಾಯಿ ಮಾಯಾದೇವಿ, ಹೆಂಡತಿ ಯಶೋಧರ, ಮಗ ರಾಹುಲ, ಕುದುರೆ ಕಂಟಕ, ಕುದುರೆ ಸವಾರ ಚನ್ನ, ಆನಂದ ಮತ್ತು ಉಪಾಲಿ, ಅನುಯಾಯಿಗಳು ಪ್ರಜಾಪತಿ ಗೌತಮಿ ಸಾಕುತಾಯಿ, ಆಂಬ್ರಪಾಲಿ ಎನ್ನುವ ವೇಶ್ಯೆಯು ಗೌತಮ ಬುದ್ದನನ್ನು ನೋಡಿ ಪರಿವರ್ತನೆಯಾದಳು. ಅಂಗುಲಿ ಮಾಲಾ ರಾಕ್ಷಸ ಸ್ವಭಾವದವನಾಗಿದ್ದು ಗೌತಮ ಬುದ್ಧನಿಂದ ಪರಿವರ್ತನೆಯಾದ. ಚಂದ ಗೌತಮ ಬುದ್ಧನಿಗೆ ಹಂದಿ ಮಾಂಸ ಮತ್ತು ಕೊಳೆತ ಅಣಬೆ ನೀಡಿ ಅವನ ಆರೋಗ್ಯ ಕೆಡಿಸುವಂತೆ ಮಾಡುತ್ತಾನೆ.

ಗೌತಮ ಬುದ್ಧನು ತನ್ನ 29ನೇ ವರ್ಷದಲ್ಲಿ ಮನೆ ತ್ಯಜಿಸಿದ್ದ. 6 ವರ್ಷಗಳ ಕಾಲ ಅಲೆದಾಡಿ 35ನೇ ವರ್ಷದಲ್ಲಿ ಬಿಹಾರದ ಬುದ್ಧಗಯಾದ ಭೋಧಿ ವೃಕ್ಷದ ಕೆಳಗಡೆ ನಿರಂಜನಾ ನದಿಯ ದಂಡೆಯ ಮೇಲೆ ಜ್ಞಾನೋದಯವಾಯಿತು. ಬುದ್ಧ ಎಂದರೆ 'ಜ್ಞಾನೋದಯ' ಎಂದರ್ಥ. ಬುದ್ಧನನ್ನು ಏಷಿಯಾದ ಬೆಳಕು ಎಂದು ಕರೆಯಲಾಗುತ್ತದೆ.

**ಗೌತಮ ಬುದ್ಧನ ಭೋಧನೆಗಳು**

ಜಗತ್ತು ದು:ಖದಿಂದ ಕೂಡಿದೆ.

ಆಸೆಯೇ ದು:ಖಕ್ಕೆ ಮೂಲ ಕಾರಣ.

ಆಸೆಯನ್ನು ಜಯಿಸುವುದರಿಂದ ದು:ಖವನ್ನು ಹೋಗಲಾಡಿಸಬಹುದು.

ಇದನ್ನು ಸಾಧಿಸುವುದಕ್ಕಾಗಿ ಗೌತಮ ಬುದ್ಧನು ಅಷ್ಟಾಂಗ ಮಾರ್ಗವನ್ನು ಪ್ರತಿಪಾದಿಸುತ್ತಾನೆ. ಅವುಗಳೆಂದರೆ: 1) ಸರಿಯಾದ ನಡತೆ 2) ಸರಿಯಾದ ಜೀವನಕ್ರಮ 3) ಸರಿಯಾದ ಪ್ರಯತ್ನ 4) ಸರಿಯಾದ ಮಾತು 5) ಸರಿಯಾದ ಮನಸ್ಸು 6) ಸರಿಯಾದ ಧ್ಯಾನ 7) ಸರಿಯಾದ ತಿಳಿವಳಿಕೆ 8) ಸರಿಯಾದ ಚಿಂತನೆ.

ಗೌತಮ ಬುದ್ಧನ ಭೋಧನೆಗಳನ್ನು ಆರ್ಯ ಸತ್ಯಗಳು ಎಂದು ಕರೆಯಲಾಗುತ್ತದೆ.

**ಬೌದ್ಧ ಧರ್ಮದ ಸಮ್ಮೇಳನಗಳು**

| **ಸ್ಥಳ** | **ಅಧ್ಯಕ್ಷರು** | **ವರ್ಷ** | **ಪ್ರಾಮುಖ್ಯತೆ** |
|---|---|---|---|
| ರಾಜಗ್ರಹ | ಮಹಾಕಷ್ಯಪ | 483 ಕ್ರಿ.ಪೂ. | ಇದು ಮಗಧ ವಂಶದ ಅಜಾತ ಶತ್ರುವಿನ ಕಾಲದಲ್ಲಿ ನಡೆದಿತ್ತು. ಮೊದಲನೇ ಸಮ್ಮೇಳನದಲ್ಲಿ ವಿನಯ ಪೀಠಕ ಮತ್ತು ಸುತ್ತ ಪೀಠಕಗಳು ರಚನೆಯಾಗಿದ್ದವು. |
| ವೈಶಾಲಿ | ಸಭಕಮಿ | 383 ಕ್ರಿ.ಪೂ. | ಇದು ಶಿಸುನಾಗ ವಂಶದ ಕಾಲಾಶೋಕನ ಕಾಲದಲ್ಲಿ ನಡೆದಿತ್ತು. |
| ಪಾಟಲೀ ಪುತ್ರ | ಮುಗಲಿಪುತ್ತತ್ತಿಸ | 250 ಕ್ರಿ.ಪೂ. | ಇದು ಮೌರ್ಯ ವಂಶದ ಅಶೋಕನ ಕಾಲದಲ್ಲಿ ನಡೆದಿತ್ತು. |
| ಕಾಶ್ಮೀರದ ಕುಂಡಲಿವನ | ವಸುಮಿತ್ರ | 1ನೇ ಶತಮಾನ | ಇದು ಕುಶಾನ ವಂಶದ ಕನಿಷ್ಕನ ಕಾಲದಲಿ ನಡೆದಿತ್ತು. ಬೌದ್ಧ ಧರ್ಮದ 4ನೇ ಸಮ್ಮೇಳನದಲ್ಲಿ ಬೌದ್ಧ ಧರ್ಮವು 4 ಪಂಗಡಗಳಾಗಿ ವಿಂಗಡಣೆಯಾಗಿತ್ತು. |

downloaded from: www.kpscvaani.com

**ಬೌದ್ಧ ಧರ್ಮದ ಪವಿತ್ರ ಗ್ರಂಥಗಳು**

ಬೌದ್ಧ ಧರ್ಮದ ಪವಿತ್ರ ಗ್ರಂಥಗಳನ್ನು ತ್ರೀಪಿಟಕಗಳೆಂದು ಕರೆಯುತ್ತಾರೆ. 1) ವಿನಯ ಪೀಟಕ 2) ಸುತ್ತ ಪೀಟಕ 3) ಅಭಿಧಮ ಪೀಟಕವು ಬೌದ್ಧಧರ್ಮದ 3ನೇ ಸಮ್ಮೇಳನದಲ್ಲಿ ರಚನೆಯಾಯಿತು.

**ಬುದ್ಧನ ಜೀವನದಲ್ಲಿ ನಡೆದ ಪ್ರಮುಖ ಘಟನೆಗಳು ಮತ್ತು ಅದರ ಚಿಹ್ನೆಗಳು**

| | |
|---|---|
| ಜನನ | ತಾವರೆ ಮತ್ತು ಎತ್ತು |
| ಮಹಾಪರಿತ್ಯಾಗ | ಕುದುರೆ |
| ಜ್ಞಾನೋದಯ | ಭೋಧಿವೃಕ್ಷ |
| ಮೊದಲ ಪ್ರವಚನ | ಚಕ್ರ |
| ಮಹಾಪರಿನಿರ್ವಾಹಣ | ಸ್ತೂಪ |

**ಬೌದ್ಧ ಧರ್ಮದ ತ್ರಿರತ್ನಗಳು**

ಬುದ್ಧ, ಧಮ, ಸಂಗ

4ನೇ ಬೌದ್ಧ ಧರ್ಮದ ಸಮ್ಮೇಳನದಲ್ಲಿ ಬೌದ್ಧ ಧರ್ಮವು 2 ಪಂಗಡಗಳಾಗಿ ವಿಂಗಡಣೆಯಾಗುತ್ತವೆ. ಹೀನಯಾನ ಮತ್ತು ಮಹಾಯಾನ. ಹೀನಯಾನ ಪಂಥದವರು ಬುದ್ಧನನ್ನು ಮಾನವನಂತೆ ನಂಬುತ್ತಿದ್ದರು. ಬುದ್ಧನನ್ನು ಚಿಹ್ನೆಗಳಲ್ಲಿ ಪೂಜಿಸುತ್ತಿದ್ದು ಪಾಳಿ ಭಾಷೆ ಅನುಸರಿಸುತ್ತಿದ್ದರು. ಮಹಾಯಾನ ಪಂಥದವರು ಬುದ್ಧನನ್ನು ದೇವರೆಂದು ನಂಬುತ್ತಿದ್ದರು, ಬುದ್ಧನ ಮೂರ್ತಿಗಳನ್ನು ಪೂಜಿಸುತ್ತಿದ್ದರು, ಮಹಾಯಾನ ಪಂಥದವರು ಸಂಸ್ಕೃತ ಭಾಷೆಯನ್ನು ಅಳವಡಿಸಿದರು. ಹೀನಯಾನ ಪಂಥವು ಶ್ರೀಲಂಕಾ ಮತ್ತು ಬರ್ಮಾದಲ್ಲಿ ಪ್ರಸಿದ್ಧಿ ಪಡೆಯಿತು. ಮಹಾವಸ್ತು ಹೀನಾಯನ ಪಂಥದ ಪ್ರಮುಖ ಗ್ರಂಥವಾಗಿದೆ. ಮಹಾಯಾನ ಪಂಥವು ಚೀನಾ ಮತ್ತು ಜಪಾನ್‌ನಲ್ಲಿ ಅಸ್ತಿತ್ವದಲ್ಲಿದೆ. ಕ್ರಿ.ಶ. 8ನೇ ಶತಮಾನದಲ್ಲಿ ಪಾಲರ ನೇತೃತ್ವದಲ್ಲಿ ವಜ್ರಯನ ಪಂಥವು ಅಸ್ತಿತ್ವಕ್ಕೆ ಬಂತು.

ವಜ್ರಯನ ಪಂಥದವರು ಪುನರ್ಜನ್ಮದಲ್ಲಿ ನಂಬಿಕೆ ಇಟ್ಟಿದ್ದರು. ಇದು ಸಿಕ್ಕಿಂ, ಟಿಬೇಟ್ ಮತ್ತು ಭೂತಾನ್‌ನಲ್ಲಿದೆ. ವಿಕ್ರಮಶೀಲ ವಿಶ್ವವಿದ್ಯಾನಿಲಯವು ವಜ್ರಯನ ಪಂಥದ ಪ್ರಮುಖ ಕೇಂದ್ರವಾಗಿತ್ತು. ಲಲಿತ ವಿಸ್ತಾರ ಮಹಾಯಾನ ಪಂಥದ ಪ್ರಮುಖ ಗ್ರಂಥವಾಗಿದ್ದು ಇದು ಬುದ್ದನ ಜೀವನ ಚರಿತ್ರೆಯಾಗಿದೆ. ಮಂಜೂಶ್ರೀ ಮೂಲಕಲ್ಪ ವಜ್ರಯನ ಪಂಥದ ಪ್ರಮುಖ ಗ್ರಂಥವಾಗಿದೆ. ಮಹಾಯಾನ ಪಂಥದ ಮಾಧ್ಯಮಿಕ ಪಂಥವನ್ನು ನಾಗಾರ್ಜುನ ಸ್ಥಾಪನೆ ಮಾಡಿದ. ಇವನು ಕನಿಷ್ಕನ ಸಮಕಾಲೀನ. ಇವನು ಮಾಧ್ಯಮಿಕ ಕಾರಿಕ ಎನ್ನುವ ಗ್ರಂಥ ಬರೆದ. ನಾಗಾರ್ಜುನನನ್ನು ಭಾರತದ ಐನ್‌ಸ್ಟೀನ್ ಎಂದು ಕರೆಯಲಾಗುತ್ತದೆ. ಇವನು ರಸರತ್ನಾಕರ ಮತ್ತು ಸತಶಾಸ್ತ್ರ ಎನ್ನುವ ಗ್ರಂಥ ಬರೆಯುತ್ತಾನೆ. ಬೌದ್ಧ ಧರ್ಮದ ಯೋಗಚರ ಪಂಥವನ್ನು ಮೈತ್ರೇಯನಾಥ ಸ್ಥಾಪನೆ ಮಾಡಿದ ಲಂಕಾವತಾರ ಸೂತ್ರ ಯೋಗಚಾರ ಪಂಥದ ಪ್ರಮುಖ ಗ್ರಂಥವಾಗಿದೆ.

**ಬೌದ್ಧ ಧರ್ಮದ ಅವನತಿಗೆ ಕಾರಣಗಳು**

1) ಬ್ರಾಹ್ಮಣರ ದೊರೆ ಪುಶಮಿತ್ರ ಸಂಗ ಮತ್ತು ಹೂನರ ಮಿಹಿರಕುಲ ಬೌದ್ಧ ಧರ್ಮದ ಅವನತಿಗೆ ಪ್ರಮುಖ ಕಾರಣರಾದರು.
2) ಶೈವರ ದೊರೆ ಗೌಡ ದೇಶದ ಶಶಾಂಕ ಭೋಧಿ ವೃಕ್ಷ ನಾಶಪಡಿಸುತ್ತಾನೆ.
3) ಬೌದ್ಧ ಧರ್ಮದ ಮುನಿಗಳು ಪಾಳಿಯನ್ನು ಬಿಟ್ಟು ಸಂಸ್ಕೃತ ಅಳವಡಿಸುತ್ತಾರೆ.
4) ಬೌದ್ಧ ಧರ್ಮದ ವಿಹಾರಗಳು ಭ್ರಷ್ಟಾಚಾರ ಕೇಂದ್ರಗಳಾಗಿದ್ದವು.
5) ಟರ್ಕಿಯನ್ನರ ಆಕ್ರಮಣದಿಂದ ಬೌದ್ಧ ಧರ್ಮ ಅವನತಿ ಹೊಂದಿತು.

**downloaded from: www.kpscvaani.com**

**ಮಹಾ ಜನಪದಗಳ ಕಾಲ ಕ್ರಿ.ಪೂ. 652 ಕ್ರಿ.ಪೂ. 325**

ಬೌದ್ಧ ಧರ್ಮದ ಅಂಗೂಟರ ನಿಕಾಯ ಪೂರ್ವ ಮೌರ್ಯರ ಕಾಲದಲ್ಲಿ 16 ಮಹಾ ಜನಪದಗಳ ಬಗ್ಗೆ ಮಾಹಿತಿ ನೀಡುತ್ತದೆ.

| ಮಹಾಜನಪದಗಳು | ರಾಜಧಾನಿ |
|---|---|
| ಕಾಶಿ | ವಾರಣಾಸಿ ಅಥವಾ ಬನಾರಸ |
| ಕೋಸಲ | ಸ್ರಾವಸ್ತಿ ಮೊದಲ ರಾಜಧಾನಿ ಅಯೋಧ್ಯ(ಅಜಾತ ಶತ್ರು ಕೋಸಲದ ದೊರೆ ಪ್ರಸನಜಿತನ ಸಹೋದರಿಯನ್ನು ವಿವಾಹವಾಗುತ್ತಾನೆ.) |
| ಅಂಗ | ಚಂಪಾ |
| ಮಗಧ | ರಾಜಗ್ರಹ |
| ವಜ್ಜಿ | ವೈಶಾಲಿ |
| ಮಲ್ಲ | ಮಲ್ಲ ಎರಡು ರಾಜಧಾನಿಗಳಿವೆ: 1) ಪಾವ 2) ಕುಸಿನಾರ (ಗೌತಮ ಬುದ್ಧ ಕುಸಿನಾರದಲ್ಲಿ ಮಹಾಪರಿನಿರ್ವಾಣ ಹೊಂದುತ್ತಾನೆ.) |
| ಚಡ್ಡಿ | ಸುಕ್ತಿಮತಿ |
| ವಸ್ಸ | ಕೌಸಂಬಿ (ಗೌತಮ ಬುದ್ಧನ ಕಾಲದಲ್ಲಿ ವಸ್ಸವನ್ನು ಉದಯಿನ್ ಆಳ್ವಿಕೆ ನಡೆಸುತ್ತಿದ್ದ) |
| ಕುರು | ಇಂದ್ರಪ್ರಸ್ಥ |
| ಪಾಂಚಾಲ | ಕಾಂಪಿಲ್ಯ |
| ಮತ್ಸ್ಯ | ವಿರಾಟನಗರ |
| ಸುರಸೇನ | ಮಥುರಾ |
| ಅಸ್ಮಕ | ಪೋತಾನ |
| ಗಾಂಧಾರ | ತಕ್ಷಶಿಲ |
| ಕಾಂಬೋಜ | ರಾಜಪುರ |

**ಮಗಧದ ಏಳಿಗೆ**

ಮಗಧವನ್ನು ಆಳಿದ ಮೊದಲ ರಾಜಮನೆತನ ಹಾರ್ಯಾಂಕ ಮನೆತನವಾಗಿದೆ. ಇದರ ಸ್ಥಾಪಕ ಬಿಂಬಸಾರ ಇವನು ಗೌತಮ ಬುದ್ಧನ ಸಮಕಾಲೀನ ಇವನ ರಾಜಧಾನಿ ರಾಜಗ್ರಹವಾಗಿದೆ. ಇವನ ಮೊದಲ ಹೆಂಡತಿ ಕೋಸಲದ ದೊರೆ ಪ್ರಸೇನಜಿತನ ಸಹೋದರಿ ಕೋಸಲ. ಎರಡನೇ ಹೆಂಡತಿ ಚಲ್ಲನ. ಲಿಚವಿ ದೊರೆ ಚೇತಕನ ಮಗಳು. ಮೂರನೇ ಹೆಂಡತಿ ಪಂಜಾಬಿನ ಮಾತ್ರವಂಶದ ಮಗಳು. ಬಿಂಬಸಾರನ ಕಾಲದಲ್ಲಿ ಅವಂತಿಯು ಮಗಧದ ಪ್ರಮುಖ ಶತ್ರುವಾಗಿತ್ತು. ತನ್ನ ಕೊನೆಯ ದಿನಗಳಲ್ಲಿ ಬಿಂಬಸಾರನು ಆವಂತಿಯ ಜೊತೆ ಒಳ್ಳೆಯ ಸಂಬಂಧ ಬೆಳೆಸಿದ್ದ. ಆವಂತಿಯ ದೊರೆ ಪ್ರಜೊತ್ತನ್ನು ಕಾಮಾಲೆಯಿಂದ ಬಳಲುತ್ತಿರುವಾಗ ಅವನ ಆಸ್ಥಾನಕ್ಕೆ ವೈದ್ಯ ಜೀವಕನನ್ನು ಕಳುಹಿಸಿದ್ದ.

**ಅಜಾತ ಶತ್ರು ಕ್ರಿ. ಪೂ. 492 – ಕ್ರಿ.ಪೂ. 460**

ಇವನು ತನ್ನ ತಂದೆ ಬಿಂಬಸಾರನನ್ನು ಕೊಂದು ಅಧಿಕಾರಕ್ಕೆ ಬಂದಿದ್ದ. ಇವನು ಮಿಲಿಟರಿ ಪರಾಕ್ರಮಗಳಿಂದ ತನ್ನ ಸಾಮ್ರಾಜ್ಯ ವಿಸ್ತರಿಸಿದ. ರಾಜಗ್ರಹ ಕೋಟೆಯನ್ನು ನಿರ್ಮಿಸಿ ಕೋಸಲ ಮತ್ತು ವಜ್ಜಿಯನ್ನು ವಶಪಡಿಸಿಕೊಂಡ.

**ಉದಯನ್ ಕ್ರಿ.ಪೂ. 460 ಕ್ರಿ.ಪೂ. 444**

ಇವನು ರಾಜಧಾನಿಯನ್ನು ರಾಜಗ್ರಹದಿಂದ ಪಾಟಲಿಪುತ್ರಕ್ಕೆ ವರ್ಗಾಯಿಸಿದ. ಇವನೇ ಪಾಟಲಿಪುತ್ರವನ್ನು ನಿರ್ಮಾಣ ಮಾಡುತ್ತಾನೆ. ಇವನ ಕಾಲದಲ್ಲಿ ಪಾಟಲಿಪುತ್ರವನ್ನು ಜಲದುರ್ಗವೆಂದು ಕರೆಯಲಾಗುತಿತ್ತು. ಇದು ಗಂಗಾ ಗಂಡಕ ಮತ್ತು ಸೋನ್ ನದಿಯ ದಂಡೆಯ ಮೇಲಿದೆ.

**downloaded from: www.kpscvaani.com**

**ಶಿಸುನಾಗ ವಂಶ**

ಆರ್ಯಾಂಕ ವಂಶದ ನಂತರ ಶಿಸುನಾಗ ವಂಶವು ಅಧಿಕಾರಕ್ಕೆ ಬಂದಿತು. ಶಿಸುನಾಗನು ಆರ್ಯಾಂಕ ವಂಶದಲ್ಲಿ ಸಚಿವನಾಗಿ ಕಾರ್ಯನಿರ್ವಹಿಸುತ್ತಿದ್ದ. ಇವನು ರಾಜಧಾನಿಯನ್ನು ಪಾಟಲಿಪುತ್ರದಿಂದ ವೈಶಾಲಿಗೆ ವರ್ಗಾಯಿಸಿದ. ಕಾಲಾಸೋಕ ಶಿಸುನಾಗನ ಉತ್ತರಾಧಿಕಾರಿ, 2ನೇ ಬೌದ್ಧ ಧರ್ಮದ ಸಮ್ಮೇಳನ ಶಿಸುನಾಗನ ಕಾಲದಲ್ಲಿ ವೈಶಾಲಿಯಲ್ಲಿ ನಡೆಯಿತು. ನಂದರು ಶಿಸುನಾಗರನ್ನು ಸೋಲಿಸಿ ಅಧಿಕಾರಕ್ಕೆ ಬಂದರು. ನಂದರನ್ನು ಭಾರತದ ಮೊಟ್ಟ ಮೊದಲ ಸಾಮ್ರಾಜ್ಯ ಸ್ಥಾಪಕನೆಂದು ಕರೆಯಲಾಗುತ್ತದೆ. ನಂದ ವಂಶದ ಪ್ರಸಿದ್ಧ ದೊರೆ ಮಹಾಪದ್ಮನಂದ ಇವನಿಗೆ ಎಕರತ್ ಎನ್ನುವ ಬಿರುದಿದೆ. ಚಂದ್ರಗುಪ್ತ ಮೌರ್ಯನು ನಂದ ವಂಶದ ಕೊನೆಯ ದೊರೆ. ಧನನಂದನನ್ನು ಸೋಲಿಸುವ ಮೂಲಕ ಚಂದ್ರಗುಪ್ತ ಮೌರ್ಯ, ಮೌರ್ಯ ವಂಶ ಸ್ಥಾಪನೆ ಮಾಡಿದ.

**ಮೌರ್ಯ ಸಾಮ್ರಾಜ್ಯ**

ಚಂದ್ರಗುಪ್ತ ಮೌರ್ಯ ನಂದರ ಕೊನೆಯ ದೊರೆ ಧನನಂದನನ್ನು ಸೋಲಿಸುವ ಮೂಲಕ ಮೌರ್ಯ ಸಾಮ್ರಾಜ್ಯ ಸ್ಥಾಪನೆ ಮಾಡಿದ.

**ಮೌರ್ಯ ಸಾಮ್ರಾಜ್ಯದ ಅಧ್ಯಯನದ ಮೂಲಗಳು**

**1) ಸಾಹಿತಿಕ ಮೂಲಗಳು:** ಕೌಟಿಲ್ಯನ ಅರ್ಥಶಾಸ್ತ್ರವು ಆಡಳಿತ ಮತ್ತು ರಾಜನೀತಿ ತತ್ವಕ್ಕೆ ಸಂಬಂಧಿಸಿದೆ. ಕೌಟಿಲ್ಯನ ಅರ್ಥಶಾಸ್ತ್ರ 1909ರಲ್ಲಿ ಆರ್. ಶಾಮಶಾಸ್ತ್ರಿ ಸಂಶೋಧನೆ ಮಾಡಿದರು.

**2) ಮೇಗಸ್ತನಿಸ್‌ನ ಇಂಡಿಕಾ:** ಮೇಗಸ್ತನಿಸ್ ಗ್ರೀಕರ ಸೆಲ್ಯುಕಸ್ ನಿಕೇಟರ್‌ನ ರಾಯಭಾರಿಯಾಗಿದ್ದು, ಚಂದ್ರಗುಪ್ತ ಮೌರ್ಯನ ಆಸ್ಥಾನಕ್ಕೆ ಬಂದಿದ್ದ. ಮೇಗಸ್ತನಿಸ್ ತನ್ನ ಇಂಡಿಕಾದಲ್ಲಿ ಭಾರತದಲ್ಲಿ ಗುಲಾಮಗಿರಿ ಅಸ್ತಿತ್ವದಲ್ಲಿರಲಿಲ್ಲ ಎಂದು ಮಾಹಿತಿ ನೀಡಿದ್ದರು.

3) ಪರಿಶಿಷ್ಟ ಪರ್ವನ್ ಹೇಮಚಂದ್ರ

4) ವಾಯುಪುರಾಣ ಮತ್ತು ಮಸ್ಸೆ ಪುರಾಣ

5) ವಿಶಾಖದತ್ತನ ಮುದ್ರ ರಾಕ್ಷಸ

6) ಕಲ್ಲನನ ರಾಜತರಂಗಿಣಿ (ಇದು ಕಾಶ್ಮೀರದ ಇತಿಹಾಸವಾಗಿದೆ)

7) ಕಥಾಸರಿತ ಸಾಗರ ಸೋಮದೇವ

8) ಬೃಹತ್ ಕಥಾಕೋಶ ಕ್ಷಮೇಂದ್ರ

9) ಕೌಮುದಿ ಮಹೋತ್ಸವ ವಜ್ಜಿಕಾ ಅಥವಾ ಕಿಶೋರಿಕಾ

10) ದ್ವೀಪ ವಂಶ ಮತ್ತು ಮಹಾವಂಶ ಶ್ರೀಲಂಕಾದ ಗ್ರಂಥಗಳು

11) ಜಾತಕ ಕಥೆಗಳು

**ಶಾಸನಗಳು**

ಅಶೋಕನ ಶಾಸನಗಳು ಮೌರ್ಯ ಸಾಮ್ರಾಜ್ಯದ ಬಗ್ಗೆ ಮಾಹಿತಿ ನೀಡುತ್ತವೆ. ಅಶೋಕನ ಶಾಸನಗಳು ಬ್ರಾಹ್ಮಿ ಅರೇಮಿಕ್ ಮತ್ತು ಕರೋಷ್ಠಿ ಲಿಪಿಯಲ್ಲಿವೆ. ಶಾಬಾಸಗಿರಿ ಮತ್ತು ಮನ್ಸರದಲ್ಲಿರುವ ಶಾಸನಗಳು ಕರೋಷ್ಠಿ ಲಿಪಿಯಲ್ಲಿದ್ದು, ತಕ್ಷಶೀಲ ಮತ್ತು ಕಂದಹಾರದ ಶಾಸನಗಳು ಅರೇಮಿಕ ಮತ್ತು ಗ್ರೀಕ್ ಲಿಪಿಯಲ್ಲಿವೆ. ಉಳಿದಿರುವ ಅಶೋಕನ ಶಾಸನಗಳು ಬ್ರಾಹ್ಮಿ ಲಿಪಿಯಲ್ಲಿವೆ. ಬ್ರಾಹ್ಮಿಯನ್ನು ಎಲ್ಲಾ ಭಾರತೀಯ ಲಿಪಿಗಳ ತಾಯಿ ಎಂದು ಕರೆಯಲಾಗುತ್ತದೆ.

**downloaded from: www.kpscvaani.com**

**ಮಸ್ಕಿ ಶಾಸನ**

ಇದು ಕರ್ನಾಟಕದ ರಾಯಚೂರು ಜಿಲ್ಲೆಯಲ್ಲಿದೆ. ಮಸ್ಕಿ ಗುಜ್ಜರ ನಿಟ್ಟೂರು ಮತ್ತು ಉದ್ದೆಗೊಳಂ ಶಾಸನಗಳಲ್ಲಿ ಅಶೋಕನನ್ನು ದೇವನಾಂಪ್ರಿಯ ಎಂದು ಕರೆಯಲಾಗಿದೆ.

**ಬಾಬ್ರು ಶಾಸನ**

ಬಾಬ್ರು ಶಾಸನವು ಅಶೋಕನು ಬೌದ್ಧ ಧರ್ಮದ ತ್ರೀರತ್ನಗಳ ಬಗ್ಗೆ ಇರುವ ನಂಬಿಕೆ ಬಗ್ಗೆ ತಿಳಿಸದೇ ಅಶೋಕನು ತನ್ನನ್ನು ತಾನೇ ಮಗಧದ ರಾಜನೆಂದು ಕರೆಯುತ್ತಾನೆ. ಈ ಶಾಸನದ ಪ್ರಕಾರ, 3ನೇ ಬೌದ್ಧ ಧರ್ಮದ ಸಮ್ಮೇಳನದಲ್ಲಿ ಉಪಗುಪ್ತ ಅಥವಾ ಮೊಗಲಿಪುತ್ತತ್ತೀಸ ಅಶೋಕನನ್ನು ಬೌದ್ಧ ಧರ್ಮಕ್ಕೆ ಮತಾಂತರ ಮಾಡುತ್ತಾನೆ.

**ಸನ್ನತಿ ಶಾಸನ**

ಇದು ಕರ್ನಾಟಕದ ಗುಲಬರ್ಗಾ ಜಿಲ್ಲೆಯಲ್ಲಿದೆ. ಇದು ಕರ್ನಾಟಕದಲ್ಲಿರುವ ಅಶೋಕನ ಅತಿ ದೊಡ್ಡ ಶಾಸನವಾಗಿದೆ. ಈ ಶಾಸನವು ಅಶೋಕನು ಆಂಧ್ರ ದೇಶವನ್ನು ಜಯಿಸಿದ ಕುರಿತು ಮಾಹಿತಿ ನೀಡುತ್ತದೆ.

**ದೌಲಿ ಮತ್ತು ಜೌಗಡ ಶಾಸನ**

ಇದು ಓರಿಸ್ಸಾದಲ್ಲಿದ್ದು, ಈ ಶಾಸನದಲ್ಲಿ ಎಲ್ಲರು ನನ್ನ ಮಕ್ಕಳು ಎಂಬುದಾಗಿ ತಿಳಿಸಿದ್ದಾನೆ.

**ನಾಗಾರ್ಜುನ ಗೂಹಾ ಶಾಸನ**

ಇದು ಬಿಹಾರದಲ್ಲಿದ್ದು, ಅಶೋಕ ಈ ಶಾಸನವನ್ನು ತನ್ನ ಮೊಮ್ಮಗ ದಶರಥನಿಗೆ ಅರ್ಪಿಸಿದನು.

**ಬಾರ್ಬರ ಗೂಹಾ ಶಾಸನ**

ಇದು ಬಿಹಾರದಲ್ಲಿದ್ದು, ಅಶೋಕ ಈ ಶಾಸನವನ್ನು ಅಜೀವಿಕ ಪಂಥದವರಿಗೆ ಅರ್ಪಿಸಿದ್ದಾನೆ.

**ಗಿರ್ನಾರ ಅಥವಾ ಜೂನಾಗರ ಶಾಸನ**

ಈ ಶಾಸನವನ್ನು ಶಾಕರ ದೊರೆ 1ನೇ ರುದ್ರದಾಮನ್ ರಚಿಸಿದ್ದ. ಇದು ಗುಜರಾತ್‌ನ ಗಿರ್ನಾರ್ ತಪ್ಪಲಿನಲ್ಲಿದೆ. ಇದು ಸಂಸ್ಕೃತದ ಮೊಟ್ಟ ಮೊದಲ ಶಾಸನವಾಗಿದೆ. ಈ ಶಾಸನದ ಪ್ರಕಾರ, ಚಂದ್ರಗುಪ್ತ ಮೌರ್ಯನ ಗವರ್ನರ್ ಪುಶಗುಪ್ತ ಸುದರ್ಶನ ಸರೋವರವನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ.

**ಅಶೋಕನ ಬಂಡೆಗಲ್ಲು ಶಾಸನ**

ಅಶೋಕನ 13 ಬಂಡೆಗಲ್ಲು ಶಾಸನಗಳಿವೆ, ಇವು ಪ್ರಾಕೃತಿಕ ಭಾಷೆಯಲ್ಲಿ ರಚಿಸಲಾಗಿದ್ದು, ಬ್ರಾಹ್ಮಿ ಲಿಪಿಯಲ್ಲಿವೆ.

| | |
|---|---|
| I, II | ಅಶೋಕನಿಗೆ ಮನುಷ್ಯ, ಪ್ರಾಣಿಗಳ ಬಗ್ಗೆ ಇದ್ದ ಕಳವಳದ ಬಗ್ಗೆ ಮಾಹಿತಿ ನೀಡುತ್ತದೆ. |
| III | ನೈತಿಕ ಸಂಹಿತೆಯ ಬಗ್ಗೆ ಮಾಹಿತಿ ನೀಡುತ್ತದೆ. |
| IV | ಅಶೋಕನ ಅಹಿಂಸೆ |
| V | ಬೌದ್ಧ ಧರ್ಮದ ಪ್ರಚಾರಕ್ಕಾಗಿ ಧರ್ಮಮಹಾಮಾತ್ರಗಳನ್ನು ನೇಮಕ ಮಾಡಿದ ಕುರಿತು ಮಾಹಿತಿ |
| VI | ಜನರ ಕಲ್ಯಾಣ |
| VII, VIII | ಬೌದ್ಧ ಗಯಾಕ್ಕೆ ತೀರ್ಥಯಾತ್ರೆ |
| IX | ಧಾರ್ಮಿಕ ಆಚರಣೆಗಳು |
| X XI | ಧರ್ಮದ ಕುರಿತು ಮಾಹಿತಿ ನೀಡುತ್ತದೆ. |
| XII | ಧಾರ್ಮಿಕ ಸಹಿಷ್ಣುತೆ |
| XIII | ಕಳಿಂಗ ಯುದ್ಧ |
| XIV | 13 ಶಾಸನಗಳ ಬಗ್ಗೆ ಮಾಹಿತಿ |

**downloaded from: www.kpscvaani.com**

**ವಿದೇಶಿ ಮೂಲಗಳು**

| | |
|---|---|
| ಮೆಗಸ್ಥನಿಸ್ | ಇಂಡಿಕಾ |
| ಪೆರಿಪ್ಲಸ್ ಆಫ್ ಎರಿತ್ರೀಯನ್ ಸಿ | ಅನಾಮಿಕ |
| ನ್ಯಾಚ್ಯುರಲ್ ಹಿಸ್ಟರಿ | ಪ್ಲಿನಿ |
| ನ್ಯಾಚ್ಯುರಲ್ ಜಿಯಾಗ್ರಫಿ | ಟಾಲೋಮಿ |

**ನಾಣ್ಯಗಳು**

ಮೌರ್ಯರ ನಾಣ್ಯಗಳು ಮುದ್ರೆ ಗುರುತಿನ ನಾಣ್ಯಗಳಾಗಿವೆ. ಈ ನಾಣ್ಯಗಳಲ್ಲಿ ಪಶುಪಕ್ಷಿಗಳ ಚಿತ್ರ ಕಂಡುಬರುತ್ತವೆ.

**ಮೌರ್ಯರ ರಾಜಕೀಯ ಇತಿಹಾಸ**

**ಚಂದ್ರಗುಪ್ತ ಮೌರ್ಯ**

1) ಚಂದ್ರಗುಪ್ತ ಮೌರ್ಯನ ಮೂಲದ ಬಗ್ಗೆ ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯಗಳಿವೆ. ಹೇಮಚಂದ್ರನ ಪರಿಶಿಷ್ಟ ಪರ್ವನ್ ಚಂದ್ರಗುಪ್ತ ಮೌರ್ಯನು ಒಬ್ಬ ನವಿಲು ಸಾಕುವವರ ಮಗ ಎಂಬುದಾಗಿ ತಿಳಿಸುತ್ತದೆ.
2) ಬ್ರಾಹ್ಮಣ ಮೂಲಗಳ ಪ್ರಕಾರ, ಚಂದ್ರಗುಪ್ತ ಮೌರ್ಯ ಒಬ್ಬ ಶೂದ್ರನಾಗಿದ್ದ.
3) ವಿಶಾಖದತ್ತನ ಮುದ್ರರಾಕ್ಷಸದ ಪ್ರಕಾರ, ಚಂದ್ರಗುಪ್ತನನ್ನು ಕುಲಹೀನ ಎಂದು ಕರೆಯಲಾಗುತ್ತದೆ.
4) ಬೌದ್ಧ ಧರ್ಮದ ಮೂಲದ ಪ್ರಕಾರ, ಚಂದ್ರಗುಪ್ತ ಮೌರ್ಯ ಒಬ್ಬ ಕ್ಷತ್ರೀಯನಾಗಿದ್ದ.

ನಂದರ ಕೊನೆಯ ದೊರೆ ಧನನಂದನನ್ನು ಸೋಲಿಸುವ ಮೂಲಕ ಚಂದ್ರಗುಪ್ತ ಮೌರ್ಯ ಭಾರತದಲ್ಲಿ ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದ. ಕ್ರಿ.ಪೂ. 305ರಲ್ಲಿ ಗ್ರೀಕರ ಸೆಲ್ಯುಕಸ್ ನಿಕೇಟನನ್ನು ಸೋಲಿಸುವ ಮೂಲಕ ಚಂದ್ರಗುಪ್ತ ಮೌರ್ಯ ಕಾಬೂಲ್, ಹೆರಾಟ್, ಗಾಂಧಾರ ಮತ್ತು ಬಲುಚಿಸ್ಥಾನಗಳನ್ನು ವಶಪಡಿಸಿಕೊಂಡಿದ್ದ.

ಚಂದ್ರಗುಪ್ತ ಮೌರ್ಯ ತನ್ನ ಕೊನೆಯ ದಿನಗಳಲ್ಲಿ ಜೈನ ಧರ್ಮದ ಅನುಯಾಯಿಯಾಗಿದ್ದ. ಜೈನ ಮುನಿ ಭದ್ರ ಬಾಹುವಿನೊಂದಿಗೆ ಸಲ್ಲೇಖನ ವೃತದೊಂದಿಗೆ ಕೊನೆಯ ದಿನ ಕಳೆದನೆಂದು ತಿಳಿದುಬರುತ್ತದೆ.

**ಬಿಂದುಸಾರ ಕ್ರಿ.ಪೂ. 300 – ಕ್ರಿ.ಪೂ. 273**

ಇವನನ್ನು ಅಮಿತ್ರ ಗಾತ ಎಂದು ಕರೆಯಲಾಗುತ್ತದೆ. ಅಮಿತ್ರ ಗಾತ ಎಂದರೆ ಶತ್ರುಗಳ ವಿನಾಶಕ ಎಂದರ್ಥ. ಬಿಂದುಸಾರನು ಸಿರಿಯದ ದೊರೆ ಒಂದನೇ ಆಂಟಿಯೊಕಸ್ ಜೊತೆ ಒಳ್ಳೆಯ ಸಂಬಂಧ ಬೆಳೆಸಿದ್ದ. ಬಿಂದುಸಾರನ ಆಸ್ಥಾನಕ್ಕೆ ಅವನ ರಾಯಭಾರಿ ಡೈಮಾಕಸ್ ಭೇಟಿ ನೀಡುತ್ತಾನೆ. ಬಿಂದುಸಾರ ತನ್ನ ಕೊನೆಯ ದಿನಗಳಲ್ಲಿ ಅಜೀವಿಕ ಪಂಥದ ಅನುಯಾಯಿಯಾಗಿದ್ದ. ಅಜೀವಿಕ ಪಂಥದ ಜೋತಿಷ್ಯ ಪಿಂಗಳ ವಸ್ಸ ಬಿಂದುಸಾರನ ಆಸ್ಥಾನದಲ್ಲಿದ್ದ.

**ಅಶೋಕ ಕ್ರಿ.ಪೂ. 273 ಕ್ರಿ.ಪೂ.232.**

ಬಿಂದುಸಾರನ ಕಾಲದಲ್ಲಿ ಅಶೋಕನು ತಕ್ಷಶೀಲ ಮತ್ತು ಉಜ್ಜಯನಿಯ ಗವರ್ನರ್ ಆಗಿ ಕಾರ್ಯನಿರ್ವಹಿಸುತ್ತಿದ್ದ. ಬೌದ್ಧ ಧರ್ಮದ ಮೂಲದ ಪ್ರಕಾರ, ಅಶೋಕನು ತನ್ನ 99 ಸಹೋದರರನ್ನು ಕೊಂದು ಅಧಿಕಾರಕ್ಕೆ ಬಂದಿದ್ದನೆಂದು ತಿಳಿದುಬರುತ್ತದೆ. ಕ್ರಿ.ಪೂ. 269ರಲ್ಲಿ ಅಶೋಕನ ಪಟ್ಟಾಭಿಷೇಕವಾಯಿತು. ಕ್ರಿ.ಪೂ. 261ರಲ್ಲಿ ನಡೆದ ಕಳಿಂಗ ಯುದ್ಧದ ನಂತರ ಅಶೋಕನು ದಿಗ್ವಿಜಯವನ್ನು ಬಿಟ್ಟು ಧರ್ಮ ವಿಜಯದ ಕಡೆಗೆ ಹೆಚ್ಚು ಒಲವನ್ನು ತೋರಿಸುತ್ತಾನೆ. ಅಶೋಕನ ಮರಣಾನಂತರ ಮೌರ್ಯ ಸಾಮ್ರಾಜ್ಯ 2 ಭಾಗಗಳಾಗಿ ವಿಂಗಡಣೆಯಾಯಿತು. ಪೂರ್ವ ಭಾಗವನ್ನು ದಶರಥನು ಮತ್ತು ದಕ್ಷಿಣ ಭಾಗವನ್ನು ಕುನಾಲನು ಆಳ್ವಿಕೆ ನಡೆಸಿದ.

downloaded from: www.kpscvaani.com

**ಅಶೋಕನ ಜೀವನದಲ್ಲಿ ನಡೆದ ಘಟನೆಗಳ ಕಾಲಾನುಕ್ರಮ:**

| | |
|---|---|
| ಕ್ರಿ.ಪೂ. 269 | ಅಶೋಕನ ಪಟ್ಟಾಭಿಷೇಕ |
| ಕ್ರಿ.ಪೂ. 261 | ಕಳಿಂಗ ಯುದ್ಧ |
| ಕ್ರಿ.ಪೂ. 258 | ಬೌದ್ಧ ಧರ್ಮಕ್ಕೆ ಮತಾಂತರ |
| ಕ್ರಿ.ಪೂ. 250 | 3ನೇ ಬೌದ್ಧ ಧರ್ಮದ ಸಮ್ಮೇಳನ |
| ಕ್ರಿ.ಪೂ. 248 | ಲುಂಬಿಣಿಗೆ ತೀರ್ಥಯಾತ್ರೆ |
| ಕ್ರಿ.ಪೂ. 232 | ಅಶೋಕನ ಮರಣ |

**ಅಶೋಕನ ಧರ್ಮದ ಪ್ರಮುಖ ತತ್ವಗಳು:**

1. ಆತ್ಮ ಸಂಯಮ ಇಂದ್ರಿಯಗಳ ಮೇಲಿನ ಹತೋಟಿ.
2. ಭಾವಶುದ್ಧಿ ಸದಾಲೋಚನೆಗಳು
3. ಕೃತಜ್ಞತೆ
4. ತೀವ್ರವಾದ ಭಕ್ತಿ
5. ಕರುಣೆ
6. ಶುದ್ಧವಾಗಿರುವುದು ಶುಚಿಯಾಗಿರುವದು
7. ಸತ್ಯ
8. ಶುಶ್ರೂಷೆ ಸೇವೆ
9. ದಾನ
10. ಸಂಪ್ರತಿಪತ್ತಿ ಇತರರಿಗೆ ಸಹಾಯ ಮಾಡುವುದು
11. ಅಪಿಚಿತ್ತಿ ಇತರರನ್ನು ಗೌರವಿಸುವುದು.
12. ಕಳಿಂಗದ ಧೌಲಿ ಮತ್ತು ಜಾಗಡಗಳ ಶಾಸನಗಳು ಎಲ್ಲ ಮಾನವರೂ ನನ್ನ ಮಕ್ಕಳು ಎಂಬ ಉಲ್ಲೇಖ ಹೊಂದಿದೆ.
13. ಕೊನೆಯ ಮೌರ್ಯ ಚಕ್ರವರ್ತಿ, ಬೃಹದ್ರಥ, ಪುಷ್ಪಮಿತ್ರ, ಸುಂಗನಂದ ಕೊಲ್ಲಲ್ಪಟ್ಟು ಪುಷ್ಯಮಿತ್ರಸುಂಗ, ಸುಂಗ ರಾಜವಂಶವನ್ನು ಸ್ಥಾಪಿಸಿದ,

ಮೌರ್ಯ ವಂಶದ ಕೊನೆಯ ದೊರೆ ಬೃಹದ್ರಥ್, ಅವನನ್ನು ಶುಂಗ ವಂಶದ ಪುಷ್ಯಮಿತ್ರ ಸುಂಗ ಹತ್ಯೆಗೈಯುವ ಮೂಲಕ ಮೌರ್ಯ ಸಾಮ್ರಾಜ್ಯ ಪತನವಾಗುತ್ತದೆ.

**ಮೌರ್ಯರ ಆಡಳಿತ**

ಮೌರ್ಯರ ಆಡಳಿತವು ಅತ್ಯಂತ ಕೇಂದ್ರೀಕೃತ ಆಡಳಿತವಾಗಿತ್ತು. ಆಡಳಿತಕ್ಕಾಗಿ ಸಾಮ್ರಾಜ್ಯವನ್ನು 5 ಪ್ರಾಂತ್ಯಗಳನ್ನಾಗಿ ವಿಂಗಡಿಸಲಾಗಿದೆ:

1) ಉತ್ತರಪಥ ರಾಜಧಾನಿ – ತಕ್ಷಶೀಲ
2) ಅವಂತಿ ರಾಜಧಾನಿ – ಉಜ್ಜಯನಿ
3) ದಕ್ಷಿಣಪಥ – ಸುವರ್ಣಗಿರಿ
4) ಕಳಿಂಗ – ತೊಸಳಿ
5) ಪ್ರಾಚ್ಯಾಪಥ – ಪಾಟಲಿಪುತ್ರ

ಪ್ರಾಂತೀಯ ಗೌರ್ನರ್‌ಗಳನ್ನು ಕುಮಾರಗಳೆಂದು ಕರೆಯಲಾಗುತ್ತಿತ್ತು. ಪ್ರಾಂತ್ಯಗಳನ್ನು ಜಿಲ್ಲೆಗಳನ್ನಾಗಿ ವಿಂಗಡಿಸಲಾಗಿತ್ತು. ಜಿಲ್ಲೆಯ ಮುಖ್ಯಸ್ಥರನ್ನು ಪ್ರಾದೇಶಿಕ ಎಂದು ಕರೆಯಲಾಗಿತ್ತು. ಜಿಲ್ಲೆಗಳನ್ನು ಗ್ರಾಮಗಳನ್ನಾಗಿ ವಿಂಗಡಿಸಲಾಗಿತ್ತು.

downloaded from: www.kpscvaani.com

ಗ್ರಾಮಗಳಿಗೆ ಗೋಪ ಎಂದು ಕರೆಯಲಾಗುತ್ತಿತ್ತು. ಗೋಪಗಳ ಮುಖ್ಯಸ್ಥನನ್ನು ಸ್ಥಾನೀಕ ಎಂದು ಕರೆಯಲಾಗುತ್ತಿತ್ತು. ಗ್ರಾಮವು ಅತ್ಯಂತ ಚಿಕ್ಕ ವಿಭಾಗವಾಗಿದೆ.

**ಮೌರ್ಯರ ಕಾಲದ ಪ್ರಮುಖ ಅಧಿಕಾರಿಗಳು:**

| | |
|---|---|
| ಮಹಾಮಾತ್ಯಸ | ಪ್ರಧಾನ ಮಂತ್ರಿ |
| ಅಮಾತ್ಯ | ನ್ಯಾಯಾಂಗ ಅಧಿಕಾರಿ |
| ಸಿತಾಧ್ಯಕ್ಷ | ಕೃಷಿ ಅಧಿಕಾರಿ |
| ಪನ್ಯಾ ಅಧ್ಯಕ್ಷ | ವಾಣಿಜ್ಯ ಅಧೀಕ್ಷಕ |
| ನವಾಧ್ಯಕ್ಷ | ಹಡಗುಗಳ ಅಧೀಕ್ಷಕ |
| ಆಕಾರ ಅಧ್ಯಕ್ಷ | ಗಣೀ ಅಧೀಕ್ಷ |
| ಸಮರ್ಥ | ಕಂದಾಯ ಸಂಗ್ರಹಣಗಾರ |
| ಸನ್ನಿದತ್ತ | ಮುಖ್ಯ ಖಜಾನೆ ಅಧಿಕಾರಿ |
| ಗುದಪುರುಷ | ಗೂಢಚಾರಿಗಳು |
| ರಾಜುಕಾಸ | ನ್ಯಾಯಾಂಗ ಆಡಳಿತ |

**ಮೌರ್ಯ ಸಮಾಜ**

ಮೇಗಸ್ತನೀಸ್ 7 ಜಾತೀಯ ಬಗ್ಗೆ ಮಾಹಿತಿ ನೀಡುತ್ತದೆ. ತತ್ವಜ್ಞಾನಿಗಳು, ರೈತರು, ಸೈನಿಕರು, ಗ್ರಾಮೀಣ ಮುಖ್ಯಸ್ಥರು, ಕುಶಲಕರ್ಮಿಗಳು, ಮ್ಯಾಜಿಸ್ಟ್ರೇಟ್‌ಗಳು ಮತ್ತು ಕೌನ್ಸಿಲರ್‌ಗಳು.

**ತೆರಿಗೆ**

ತೆರಿಗೆಯು ಉತ್ಪನ್ನದ 1/4 ಅಥವಾ 6/1 ಭಾಗವಾಗಿತ್ತು. ಪ್ರಮುಖ ತೆರಿಗೆಗಳೆಂದರೆ

**ಭಾಗ ಭೂ ತೆರಿಗೆ**

| | |
|---|---|
| ಪಿಂಡಾಕಾರ | ಗ್ರಾಮಗಳೀಗೆ ವಿಧಿಸಿದ ತೆರಿಗೆ |
| ಕರ | ಆಹಾರ ಮತ್ತು ಹೂದೋಟಗಳಿಗೆ ವಿಧಿಸಿದ ತೆರಿಗೆ |
| ಹಿರಣ್ಯ | ಹಣದ ರೂಪದಲ್ಲಿ ನೀಡುತ್ತಿದ್ದ ತೆರಿಗೆ |

## ಕಲೆ ಮತ್ತು ಸಂಸ್ಕೃತಿ

ಮೌರ್ಯರ ಕಾಲದಲ್ಲಿ ಶಿಲೆಗಳ ಶಿಲ್ಪ ಭಾರತೀಯ ಕಲೆಯ ಪ್ರಧಾನ ಮಾಧ್ಯಮವಾಗಿ ಬೆಳವಣಿಗೆ ಹೊಂದಿತು. ಇದರ ಉದಾಹರಣೆಯೆಂದರೆ ಅಶೋಕನ ಏಕ ಶಿಲೆಗಳ ಸ್ತಂಭಗಳು. ಒಂದೊಂದು ಕಂಬವೂ ಒಂದೇ ಶಿಲೆಯ ಕಂಬವಾಗಿದ್ದು ಇನ್ನೊಂದು ಏಕ ಶಿಲೆಯ ಪೀಠದ ಮೇಲೆ ನಲ್ಲಿಸಲ್ಪಟ್ಟಿದೆ ಕಲ್ಲುಗಳು ತುಂಬಾ ನಯವಾದ ನುಣುಪಾದ ಮೇಲ್ಮೈಯನ್ನು ಹೊಂದಿದ್ದು ಅವುಗಳ ಗಾತ್ರದ ಆಯ್ಕೆ ತುಂಬಾ ಪ್ರಮಾಣಬದ್ಧವಾಗಿ ಸುಂದರವಾಗಿರುತ್ತಿತ್ತು. ನುಣುಪು ಹೊಳೆಯುವ ನುಣುಪಾಗಿತ್ತು.

ಸಾರನಾಥ ಸ್ತಂಭದ ನಾಲ್ಕು ಶಿಲಾಸಿಂಹಗಳು, ಅದರೊಳಗಿರುವ ಪ್ರಾಣಿಗಳು ಸಣ್ಣ ಚಿತ್ರಗಳು ಅಪ್ರತಿಮ ಸೌಂದರ್ಯವನ್ನು ಪ್ರತಿನಿಧಿಸುವ ಶಕ್ತಿಶಾಲಿ ಶಿಲ್ಪವಾಗಿವೆ. ಈ ಕಾಲದಲ್ಲಿ ಉಪಯೋಗಿಸುತ್ತಿದ್ದ ಕಲ್ಲುಗಳು ಬಹುಮಟ್ಟಿಗೆ ಮಥುರಾ ಮತ್ತು ಚುನಾರ್‌ಗಳಲ್ಲಿ ದೊರೆಯುತ್ತಿದ್ದವು. ಅಶೋಕನು ಬಹು ಸಂಖ್ಯಾ ಸ್ತೂಪಗಳನ್ನು ನಿರ್ಮಿಸಿದನು. ಅವುಗಳ ಸಂಖ್ಯೆ ಸುಮಾರು 84,000 ಇರಬಹುದು ಎಂದು ಅಂದಾಜಿಸಲಾಗಿದೆ.

**downloaded from: www.kpscvaani.com**

**ಪ್ರಾಯಶ:** ಮೌರ್ಯರು ಬಿಟ್ಟು ಹೋದ ಪರಂಪರಾಣಿತ ಅತ್ಯಮೂಲ್ಯ ಸಾಂಸ್ಕೃತಿಕ ಕೊಡುಗೆಯೆಂದರೆ ಗಯಾದ ಸಮೀಪದಲ್ಲಿ ಬಾರ್‌ಬರ ಬೆಟ್ಟಗಳಲ್ಲಿ ರಚಿಸಿರುವ ಗುಹೆಗಳಲ್ಲಿ ಕಲ್ಲುಗಳನ್ನು ನಯಮಾಡುವ ಕಲೆ ಅದರ ಪರಾಕಾಷ್ಠೆಯನ್ನು ಮುಟ್ಟಿದೆ. ಇವುಗಳಲ್ಲಿ ತುಂಬಾ ಪ್ರಸಿದ್ದವಾದ ಮರದಿಂದ ನಿರ್ಮಿತವಾದಂತೆ ಕಾಣುವ ಗುಹೆಗಳೆಂದರೆ ಲೋಮಸ ಋಷಿಯ ಮತ್ತು ಸುದಾಮನ ಗುಹೆಗಳು.

ಅಶೋಕ ಮತ್ತು ಮೊಮ್ಮಗ ದಶರಥ ಬಿಹಾರದ ನಾಗರ್ಜುನ ಬೆಟ್ಟಗಳು ಕೆಲವು ಗುಹೆಗಳನ್ನು ದೇವಿಕರಿಗಾಗಿ ಸಮರ್ಪಣೆ ಮಾಡಿದರು. ಇನ್ನೊಂದು ಪ್ರಸಿದ್ದವಾದ ಕಲಾರೂಪವೆಂದರೆ ಬೇಸನಗರ ಮತ್ತು ದೋಡರ್ ಗಂಜ್‌ಗಳ ಯಕ್ಷ ಮತ್ತು ಯಕ್ಷಿನಳಿಯರು, ವಿಪುಲವಾಗಿ ದೊರೆತಿರುವ ತುಂಬಾ ಜನಪ್ರಿಯವಾಗಿದ್ದ ಕುಂಬಾರಿಕೆ ಕೃತಿ ಉತ್ತರದ ಕಪ್ಪು ಬಣ್ಣದ ನುಣುಪು ಮಾಡಿದ ಪಾತ್ರೆ ಪಡಗಗಳು ಮತ್ತು ಮಣ್ಣಿನಲ್ಲಿ ಮಾಡಿದ ಕಲಾಕೃತಿಗಳು ಈ ಕಾಲದ ಕಲಾ ಅಭಿವ್ಯಕ್ತಿಯ ಇನ್ನೊಂದು ಜನಪ್ರಿಯ ಮತ್ತು ಜಾನಪದ ಭಾಗ ಮೌರ್ಯ ನಿವೇಶನಗಳಲ್ಲಿ ಮಣ್ಣಿನ ಕಲಾ ಕೃತಿಗಳು ಬಹುವಾಗಿ ದೊರೆತಿವೆ. ಇವು ವಿವಿಧ ಗಾತ್ರಗಳಲ್ಲಿವೆ, ಮಾತೃ ಸ್ವರೂಪಿ ದೇವತೆಯ ವಿಗ್ರಹವನ್ನು ಮಣ್ಣಿನಲ್ಲಿ ರೂಪಿಸುವ ಕಲೆ ಪುರಾತನವಾಗಿದ್ದು ಚರಿತ್ರೆಯ ಪೂರ್ವಕಾಲದಿಂದಲೂ ಬಂದಿದ್ದು ಅಂಥ ಕೃತಿಗಳು ಮೌರ್ಯ ನಿವೇಶನಗಳಲ್ಲು ದೊರೆತಿವೆ.

**ಶುಂಗಾರು**

ಪುಷ್ಯಮಿತ್ರ ಶುಂಗ ಶುಂಗ ವಂಶದ ಸ್ಥಾಪಕ. ಮೌರ್ಯರ ಕೊನೆಯ ದೊರೆ ಬೃಹದ್ರತನನ್ನು ಸೋಲಿಸುವುದರ ಮೂಲಕ ಪುಷ್ಯಮಿತ್ರ ಶುಂಗನು ಶುಂಗ ವಂಶವನ್ನು ಸ್ಥಾಪನೆ ಮಾಡುತ್ತಾನೆ. ಪತಾಂಜಲಿ ಪುಷ್ಯಮಿತ್ರನ ಆಸ್ಥಾನದ ಕವಿ, ಅವನು ಮಹಾಭಾಷೆಯ ಕತ್ಯ. ಕಳಿಂಗದ ದೊರೆ ಕಾರವೇಳನು ಪುಷ್ಯಮಿತ್ರ ಶುಂಗನನ್ನು ಸೋಲಿಸುತ್ತಾನೆ. ಕಾರವೇಳನು ಜೈನ ಮುನಿ ವೃಷಭನಾಥನ ಮೂರ್ತಿಯನ್ನು ಕಳಿಂಗಕ್ಕೆ ತೆಗೆದುಕೊಂಡು ಬರುತ್ತಾನೆ. ಅಗ್ನಿಮಿತ್ರನು ಪುಷ್ಯಮಿತ್ರನ ಉತ್ತರಾಧಿಕಾರಿ. ಕಾಳಿದಾಸ ನಾಟಕ, ಮಾಳವಿಕಾಗ್ನಿ ಮಿತ್ರದ ನಾಯಕನೇ ಪುಷ್ಯಮಿತ್ರ ಶುಂಗ. ಅಗ್ನಿಮಿತ್ರನ ಉತ್ತರಾಧಿಕಾರಿ ಭಾಗವತ, ಭಾಗವತನ ಕಾಲದಲ್ಲಿ ಭಗವದ್‌ಗೀತೆ ರಚನೆಯಾಯಿತು. ಶುಂಗ ವಂಶದ ಕೊನೆಯ ದೊರೆ ದೇವಭೂತಿ. ಅವನನ್ನು ಬ್ರಾಹ್ಮಣ ಸಚಿವನಾದ ದೇವಭೂತಿಯು ಹತ್ಯೆಗೈಯುತ್ತಾನೆ.

**ಇಂಡೋಗ್ರೀಕರು**

ಇಂಡೋಗ್ರೀಕರನ್ನು ಬ್ಯಾಕ್ಟೇರಿಯನ್ಸ್ ಎಂದು ಕರೆಯಲಾಗುತ್ತದೆ. 1ನೇ ಡೆರಿಯಸ್ ಇಂಡೋಗ್ರೀಕರ ಪ್ರಥಮ ದೊರೆ. ಮ್ಯಾನಂದರ ಅಥವಾ ಮಿಲಿಂದ ಇಂಡೋಗ್ರೀಕರ ಪ್ರಸಿದ್ಧ ದೊರೆ. ಇವನನ್ನು ಬೌದ್ಧ ಧರ್ಮಕ್ಕೆ ನಾಗಸೇನಾ ಮತಾಂತರ ಮಾಡಿದ. ಬೌದ್ಧ ಧರ್ಮಕ್ಕೆ ಮತಾಂತರವಾದುದನ್ನು ಮಿಲಿಂದಪನದಲ್ಲಿ ವಿವರಿಸಲಾಗಿದೆ. ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಚಿನ್ನದ ನಾಣ್ಯಗಳನ್ನು ಜಾರಿಗೆ ತಂದ ಕೀರ್ತಿ ಇಂಡೋಗ್ರೀಕರಿಗೆ ಸಲ್ಲುತ್ತದೆ. ಇಂಡೋಗ್ರೀಕರು ಖಗೋಳ ಶಾಸ್ತ್ರವನ್ನು ಜಾರಿಗೊಳಿಸಿದ ಮೊಟ್ಟ ಮೊದಲಿಗರು.

**ಶಕರು**

ಶಕರನ್ನು ಸ್ಕಿತಿಯನ್ಸ್ ಎಂದು ಕರೆಯಲಾಗುತ್ತದೆ. ಇವರು ಇಂಡೋಗ್ರೀಕರ ಉತ್ತರಾಧಿಕಾರಿಗಳು. 1ನೇ ರುದ್ರಾಮನ್ ಇಂಡೋಗ್ರೀಕರ ಪ್ರಸಿದ್ಧ ದೊರೆ. ಇವನು ಪ್ರಸಿದ್ಧ ಗಿರ್ನಾ ಶಾಸನವನ್ನು ರಚಿಸಿದ್ದಾನೆ. ಇವನು ಮೌರ್ಯರ ಕಾಲದಲ್ಲಿ ಸುದರ್ಶನ ಸರೋವರವನ್ನು ನಿರ್ಮಿಸಿದಾನೆ.

**ಪಾರ್ಥಿಯನ್ನರು**

ಇವರ ಪ್ರಸಿದ್ಧ ದೊರೆ ಗೊಂಡೊಫರ್ನ ಇವನ ಕಾಲದಲ್ಲಿ ಸೈಂಟ್‌ತೋಮ್ ಭಾರತಕ್ಕೆ ಆಗಮಿಸಿ ಕ್ರಿಶ್ಚಿಯನ್ ಧರ್ಮ ಪ್ರಸಿದ್ಧಿಪಡಿಸಿದ.

**downloaded from: www.kpscvaani.com**

**ಕುಶಾನರು**

ಕುಶಾನರನ್ನು ಎವುಚಿಗಳೆಂದು ಕರೆಯಲಾಗುತ್ತದೆ. ಇವರು ಪಾರ್ಥಿಯನ್ನರ ಉತ್ತರಾಧಿಕಾರಿಗಳು ಕುಶಾನ ವಂಶದ ಸ್ಥಾಪಕ 1ನೇ ಕುಜಾಲಕಡಕಿಸ್. ಕನಿಷ್ಕ ಕುಶಾನರ ಪ್ರಸಿದ್ಧ ದೊರೆಯಾಗಿದ್ದು, ಕ್ರಿ.ಶ. 78ರಲ್ಲಿ ಶಕ ಯುಗವನ್ನು ಪ್ರಾರಂಭಿಸಿದ. ಕುಶಾನರ ರಾಜಧಾನಿ ಪೇಶಾವರ್. ಇವನಿಗೆ ದೇವಪುತ್ರ ಎನ್ನುವ ಬಿರುದಿದೆ. ಇವನು ಚೀನಾದ 3 ಪ್ರಾಂತ್ಯಗಳನ್ನು ವಶಪಡಿಸಿಕೊಳ್ಳುತ್ತಾನೆ. 1) ಕಾಸ್ಗರ 2) ಯಾರ್ಖಂಡ ಮತ್ತು ಖೊತಾನ್. ಇವನು ಮಹಾಯಾನ ಬೌದ್ಧ ಧರ್ಮದ ಅನುಯಾಯಿ. ಇವನ ಆಸ್ಥಾನದಲ್ಲಿ ನಾಗಾರ್ಜುನ ವಸುಮಿತ್ರ ಮತ್ತು ಅಶ್ವಘೋಷ್ ಇದ್ದರು. ಅಶ್ವಘೋಷನು ಸುಂದರ ಕಾವ್ಯವನ್ನು ಬರೆದಿದ್ದ. ಕನಿಷ್ಕನ ಸಾಮ್ರಾಜ್ಯವು ಬಿಹಾರ, ಉತ್ತರಪ್ರದೇಶ, ಮಾಳ್ವ, ರಜಪೂತಾನ, ಸೌರಾಷ್ಟ್ರ, ಪಂಜಾಬ ಮತ್ತು ಕಾಶ್ಮೀರಗಳನ್ನು ಒಳಗೊಂಡಿದೆ. 4ನೇ ಬೌದ್ಧ ಧರ್ಮದ ಸಮ್ಮೇಳನ ಕನಿಷ್ಕನ ಕಾಲದಲ್ಲಿ ಕಾಶ್ಮೀರದ ಕುಂಡಲಿ ವನದಲ್ಲಿ ನಡೆದಿತ್ತು.

ಕನಿಷ್ಕನ ಕಾಲದಲ್ಲಿ ಬೌದ್ಧ ಧರ್ಮ ಚೀನಾ, ತಿಬೇಟ್, ಮಂಗೋಲಿಯಾ, ಜಪಾನ, ಕೋರಿಯಾ ಮುಂತಾದ ಕಡೆ ಹಬ್ಬಿತ್ತು. ಬೌದ್ಧ ಧರ್ಮಕ್ಕೆ ಕನಿಷ್ಕನು ನೀಡಿದ ಕೊಡುಗೆಯಿಂದ ಅವನನ್ನು ಎರಡನೇ ಅಶೋಕ ಎಂದು ಕರೆಯಲಾಗುತ್ತದೆ. ಕಲ್ಹಣನ ರಾಜತರಂಗಿಣಿಯ ಪ್ರಕಾರ ಅಶೋಕನು ಕಾಶ್ಮೀರದಲ್ಲಿ ಕನಿಷ್ಕಪುರ ಎನ್ನುವ ಪಟ್ಟಣ ನಿರ್ಮಿಸಿದ. ಕುಶಾನರ ಕೊನೆಯ ದೊರೆ ವಾಸುದೇವ. ಇವನು ಹಿಂದೂ ಧರ್ಮವನ್ನು ಪ್ರಚಾರಪಡಿಸಿದ. ಕುಶಾನರು ಅಸಂಖ್ಯಾತ ಚಿನ್ನದ ನಾಣ್ಯಗಳನ್ನು ಬಿಡುಗಡೆ ಮಾಡಿದರು. 2ನೇ ಕಡಪಿಸ್‌ನಾ ನಾಣ್ಯಗಳಲ್ಲಿ ಶಿವ ಮತ್ತು ಎತ್ತುಗಳ ಚಿತ್ರವಿದೆ. ಕನಿಷ್ಕನ ನಾಣ್ಯಗಳಲ್ಲಿ ಗ್ರೀಕ್ ದೇವತೆ ಎಲಿಯೊಡರಸ್ ಚಿತ್ರಗಳವೆ. ಕುಶಾನ ಸಾಮ್ರಾಜ್ಯವು ರೋಮನ್ ಸಾಮ್ರಾಜ್ಯದೊಂದಿಗೆ ವ್ಯಾಪಾರ ಸಂಬಂಧ ಬೆಳೆಸಿತ್ತು. ಇವರ ಪ್ರಮುಖ ರಫ್ತುಗಳೆಂದರೆ ಸಾಂಬಾರು ಪದಾರ್ಥ ಮತ್ತು ಜವಳಿ ಉತ್ಪನ್ನಗಳು, ಪ್ರಮುಖ ಆಮದುಗಳೆಂದರೆ ಚಿನ್ನ, ಬೆಳ್ಳಿ, ತಾಮ್ರ ಇತ್ಯಾದಿ.

**ಗಾಂಧಾರ ಶೈಲಿ:** ಗಾಂಧಾರ ಶೈಲಿಯ ಶಿಲ್ಪಕಲೆ ಮತ್ತು ಇತರ ಕಲೆಗಳ ಭಾರತದ ವಾಯುವ್ಯ ಭಾಗದಲ್ಲಿ ಕ್ರಿ.ಪೂ. 1ನೇಯ ಶತಮಾನದಿಂದ ಕ್ರಿ.ಶ. 5ನೇ ಶತಮಾನದವರೆಗೆ ಉಚ್ಚಾಯ ಸ್ಥಿತಿಯಲ್ಲಿತ್ತು. ಈ ಶೈಲಿಗೆ ಆಶ್ರಯದಾತರಾಗಿದ್ದವರು ಶಕರು ಮತ್ತು ಕುಷಾನರು ಅದರಲ್ಲೂ ಕಾನಿಷ್ಕ. ಇದು ಹೆಚ್ಚು ಮಟ್ಟಿಗೆ ಮಹಾಯಾನ ಬೌದ್ಧ ಸಂಸ್ಕೃತಿ ವಿಚಾರಕ್ಕೆ ಹೊಂದಿಕೊಂಡಿದ್ದಿತ್ತು. ಅದಕ್ಕೆ ಇದಕ್ಕೆ ಗ್ರೀಕ್ ಬೌದ್ಧ ಶೈಲಿ ಎಂದು ಹೆಸರಿದೆ. ಇದರ ಅವಶೇಷಗಳು ತಕ್ಷಶಿಲಾ ಅಫಘನಸ್ತಾನ ಮತ್ತು ವಾಯುವ್ಯ ಭಾರತದಲ್ಲಿ ಕಂಡು ಬಂದಿವೆ. ಈ ಶಿಲ್ಪಗಳನ್ನು ಕಪ್ಪು ಶಿಲೆಯಲ್ಲಿ ಕಡೆಯಲಾಗಿತ್ತು. ಈ ಮೂರ್ತಿಗಳು ದಪ್ಪ ಬಟ್ಟೆಯನ್ನು ಧರಿಸಿದ ಮಡಿಕೆಗಳು ಚೆನ್ನಾಗಿ ಬಿಡಿಸಿಕೊಂಡಿರುವಂತಹ ಶಿಲಾಮೂರ್ತಿಗಳು.

ಅವಶೇಷಗಳು ಪೇಷಾವರ, ರಾವಲ್ಪಿಂಡಿ ಮತ್ತು ಕಾಬೂಲ್ ಕಣಿವೆಗಳಲ್ಲಿನ ಬೌದ್ಧ ಧರ್ಮಶಾಲೆಗಳಲ್ಲಿ ವಿಹಾರಗಳಲ್ಲಿ ವಿಹಾರಗಳಲ್ಲಿ ಕಂಡುಬಂದಿವೆ.

**ಮಥುರಾಶೈಲಿ:** ಈ ಶೈಲಿ ಉತ್ತರ ಪ್ರದೇಶದ ಮಥುರಾದಲ್ಲಿ ಕ್ರಿ.ಪೂ. 2ನೆಯ ಶತಮಾನದಿಂದ ಅಭಿವೃದ್ಧಿಗೊಂಡು ಕ್ರಿ.ಶ. ಒಂದನೆಯ ಶತಮಾನದವರೆಗೂ ಬೆಳೆಯಿತು. ಇಲ್ಲಿ ಚುಕ್ಕೆಗಳಿರುವ ಕೆಂಪುಕಲ್ಲುಗಳನ್ನು ಮೂರ್ತಿಶಿಲ್ಪಕ್ಕೆ ಉಪಯೋಗಿಸುತ್ತಿದ್ದರು. ಪದ್ಮಾಸನ ಹಾಕಿ ಬೆತ್ತಲೆಯಾಗಿ ಕುಳಿತು ಧ್ಯಾನ ಮಾಡುತ್ತಿರುವ ತೀರ್ಥಂಕರರ ಅನೇಕ ಶಿಲ್ಪಗಳು ದೊರೆತಿವೆ.

ಮೊದಮೊದಲು ನಿರ್ಮಿತವಾದ ಬುದ್ಧನ ಮತ್ತು ಬೋಧಿಸತ್ವದ ವಿಗ್ರಹಗಳು ಮೂಲಸಜ್ಜೆಗಳಿಂದ ಮೈ ತುಂಬಿಕೊಂಡಿರುವ ಧಾರ್ಮಿಕತೆ ಏನೂ ಇಲ್ಲದ ಮೂರ್ತಿ ಶಿಲ್ಪಗಳಂತೆ ಕಂದು ಬರುತ್ತವೆ. ಇದರಲ್ಲಿ ಧಾರ್ಮಿಕತೆ ಕಂಡು ಬಂದಿದ್ದು ಆನಂತರ. ಮೂರ್ತಿ ಶಿಲ್ಪಗಳ ಹಿಂದೆ ಪ್ರಭಾವಶಾಲಿಯನ್ನು ಬೆಳೆಸಿ ಅದಕ್ಕೆ ಧಾರ್ಮಿಕತೆ ಕೊಡುವ ಕಲೆಯ ಶೈಲಿ ಮಥುರಾ ಶೈಲಿಯಿಂದ ಪ್ರಾರಂಭವಾಯಿತು.

**downloaded from: www.kpscvaani.com**

ಕೆಲವು ಮೂರ್ತಿಶಿಲ್ಪಗಳಲ್ಲಿ ಶೀತ ಮತ್ತು ಎಷ್ಟು ಬಟ್ಟೆ ಬರೇ ಆಗಿ ಕಂಡುಬರುತ್ತಾರೆ. ಇನ್ನೂ ಕೆಲವು ಶಿಲ್ಪಗಳಲ್ಲಿ ಪಾರ್ವತಿ ಮತ್ತು ಲಕ್ಷ್ಮಿಯರು ಅವರೊಟ್ಟಿಗಿದ್ದಾರೆ. ಬ್ರಾಹ್ಮಣ ದೇವತೆಗಳ ಬೇರೆ ಮೂರ್ತಿ ಶಿಲ್ಪಗಳು ದೊರೆತಿವೆ. ಕಣ್ಮನಗಳನ್ನು ಸೆಳೆದು ಹಿಡಿದಿರುವ ಶಿಲ್ಪಗಳೆಂದರೆ ಯಕ್ಷಣಿ, ನಾಗಿಣಿ, ಅಪ್ಸರೆಯರು ಮುಂತಾದ ಸ್ತ್ರೀ ಮೂರ್ತಿಗಳು.

ರಾಜರ ಮೂರ್ತಿಗಳು ಕುಷಾಣ ರಾಜರ ವಿಗ್ರಹ ಶಿಲ್ಪಗಳು ಬಹುಮಟ್ಟಿಗೆ ಮಥುರೆಯ ಹತ್ತಿರವಿರುವ ಮತ್ ಹಳ್ಳಿಯಲ್ಲಿ ಕಂಡು ಬಂದಿದೆ. ಇದರಲ್ಲಿ ಒಂದು ಕಾನಿಷ್ಕನ ವಿಗ್ರಹದಲ್ಲಿ ತಲೆ ಸಿಕ್ಕಿಲ್ಲ.

**ಅಮರಾವತಿ ಶೈಲಿ:** ಗೋದಾವರಿ ಮತ್ತು ಕೃಷ್ಣಾ ನದಿಗಳು ಕೆಳಭಾಗದ ಕಣಿವೆಗಳಲ್ಲಿ ಕ್ರಿ.ಪೂ. 2ನೆ ಶತಮಾನದಿಂದ ಕ್ರಿ.ಶ. ನಾಲ್ಕನೆಯ ಶತಮಾನದ ವರೆಗೂ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಈ ಶೈಲಿಯ ಮುಖ್ಯ ಕೇಂದ್ರಗಳೆಂದರೆ ಅಮರಾವತಿ, ನಾಗಾರ್ಜುನಕೊಂಡ ಜಗ್ಗಯ ಪೇಟೆಗಳು, ಇದರಲ್ಲಿ ಬಿಳಿಯ ಅಮೃತ ಶಿಲೆಯನ್ನು ಉಪಯೋಗಿಸಲಾಗಿದೆ.

ಬೌದ್ಧ ವಿಗ್ರಹ ಶಿಲ್ಪಗಳು, ಅಮರಾವತಿಯ ಮಹಾನ್‌ಸ್ತೂಪ ಸುಣ್ಣ ಕಲ್ಲಿನಲ್ಲಿ ಸುತ್ತಲೂ ಕೆತ್ತಿದ ಬುದ್ಧನ ಜೀವನ ಘಟನೆಗಳು ಶಿಲ್ಪಗಳನ್ನು ಚಿತ್ರಣಗಳನ್ನು ಒಳಗೊಂಡಿದೆ. ಇದರ ಜತೆ ಒಂಟೊಂಟಿಯಾಗಿ ನಿಂತ ಬುದ್ಧನ ವಿಗ್ರಹ ಶಿಲ್ಪಗಳೂ ಇವೆ. ಅಮರಾವತಿಯಲ್ಲ ಧಾರ್ಮಿಕ ಅಥವಾ ಧರ್ಮ ಪ್ರಧಾನವಾದ ವಿಗ್ರಹ ಶಿಲ್ಪಗಳಿಗಿಂತ ಹೆಚ್ಚು ಧರ್ಮಕ್ಕೆ ಸಂಬಂಧಿಸದೇ ಇರುವ ಚಿತ್ರಣಗಳ ಶಿಲ್ಪಗಳೇ ಜಾಸ್ತಿ ಇವೆ.

**ಗುಪ್ತ ಸಾಮ್ರಾಜ್ಯ**

ಶ್ರೀಗುಪ್ತ ಗುಪ್ತ ಸಾಮ್ರಾಜ್ಯದ ಸ್ಥಾಪಕ. ಗುಪ್ತರ ಕಾಲವನ್ನು ಭಾರತದ ಚರಿತ್ರೆಯ ಸುವರ್ಣಯುಗವೆಂದು ಕರೆಯುತ್ತೇವೆ. ಗುಪ್ತರ ಕಾಲವನ್ನು ಭಾರತದ ಚರಿತ್ರೆಯ ಸುವರ್ಣಯುಗವೆನ್ನಲು ಪ್ರಮುಖ ಕಾರಣವೆಂದರೆ:

1) ಸಾಹಿತ್ಯ ಮತ್ತು ವಿಜ್ಞಾನಕ್ಕೆ ನೀಡಿದ ಕೊಡುಗೆಗಳು
2) ಅಸಂಖ್ಯಾತ ಚಿನ್ನದ ನಾಣ್ಯಗಳು ಗುಪ್ತರ ಕಾಲದಲ್ಲಿ ಬಿಡುಗಡೆಯಾಗಿದ್ದವು
3) ಕಲೆ ಮತ್ತು ಶಿಲ್ಪಕಲೆಗೆ ಗುಪ್ತರು ನೀಡಿದ ಕೊಡುಗೆ

**ಗುಪ್ತ ಸಾಮ್ರಾಜ್ಯದ ಅಧ್ಯಯನದ ಮೂಲಗಳು**

1) **ಶಾಸನಗಳು**

ಅಲಹಾಬಾದ ಸ್ಥಂಭ ಶಾಸನ, ಇದು ಸಮುದ್ರ ಗುಪ್ತನಿಗೆ ಸೇರಿದ ಸ್ಥಂಭ ಶಾಸನವಾಗಿದೆ. ಇದನ್ನು ರಚಿಸಿದವ ಹರಿಸೇನ. ಅಲಹಾಬಾದ ಶಾಸನ ಸಮುದ್ರಗುಪ್ತನ ಸಾಧನೆ ಮತ್ತು ಪರಾಕ್ರಮದ ಬಗ್ಗೆ ಮಾಹಿತಿ ನೀಡುತ್ತದೆ.

**2) ಇರಾನ ಸ್ಥಂಭಶಾಸನ**

ಮಧ್ಯಪ್ರದೇಶದಲ್ಲಿ ಸತಿಸಹಗಮನ ಪದ್ಧತಿಯ ಬಗ್ಗೆ ಮಾಹಿತಿ ನೀಡುವ ಮೊದಲ ಶಾಸನವಾಗಿದೆ. ನಳಂದ ಮತ್ತು ಗಯಾ ಶಾಸನಗಳು ಸಮುದ್ರಗುಪ್ತನ ಬಗ್ಗೆ ಮಾಹಿತಿ ನೀಡುತ್ತವೆ.

**3) ಮೆಹರೌಲಿ ಕಬ್ಬಿಣದ ಸ್ಥಂಭ ಶಾಸನ**

ಇದು ದೆಹಲಿಯ ಕುತುಬ್‌ಮಿನಾರದ ಹತ್ತಿರವಿದೆ. ಇದು 2ನೇ ಚಂದ್ರಗುಪ್ತನಿಗೆ ಸೇರಿದ ಶಾಸನವಾಗಿದೆ. ಇದು ಪುರಾತನ ಲೋಹ ನೈಪುಣ್ಯತೆಗೆ ಸಾಕ್ಷಿಯಾಗಿದೆ.

**4) ಉದಯಗಿರಿ ಗುಹಾ ಶಾಸನ**

ಇದು 2ನೇ ಚಂದ್ರಗುಪ್ತನಿಗೆ ಸೇರಿದ್ದು ಒರಿಸ್ಸಾದಲ್ಲಿದೆ. ಇದು 2ನೇ ಚಂದ್ರಗುಪ್ತನ ಸಾಧನೆ ಮತ್ತು ಪರಾಕ್ರಮಗಳ ಬಗ್ಗೆ ಮಾಹಿತಿ ನೀಡುತ್ತದೆ.

**downloaded from: www.kpscvaani.com**

**5) ಪವಾರಪುರ ತಾಮ್ರದ ಶಾಸನ**

ಇದು ಬುದ್ಧಗುಪ್ತನಿಗೆ ಸೇರಿದ್ದು ಪುರಾತನ ಕಾಲದ ಭೂಮಾನ್ಯ ಪದ್ಧತಿ ಬಗ್ಗೆ ಮಾಹಿತಿ ನೀಡುತ್ತದೆ.

**ಸಾಹಿತ್ಯಗಳು**

2ನೇ ಚಂದ್ರಗುಪ್ತ ಆಸ್ಥಾನದಲ್ಲಿ ನವರತ್ನಗಳು ಎನ್ನುವ ಕವಿಗಳು ಇದ್ದರು. ಕಾಳಿದಾಸ 2ನೇ ಚಂದ್ರಗುಪ್ತನ ಆಸ್ಥಾನದಲ್ಲಿದ್ದ, ಮಾಳವಿಕಾಜ್ಞಿಮಿತ್ರ, ಅಬಿಜ್ಞಾನ ಶಾಕುಂತಲಂ, ಮೇಗಧೂತಂ ಋತುಸಂಹಾರ, ಕುಮಾರ ಸಂಭವ ವಿಕ್ರಮವಂಶ ಇವು ಇವನ ಪ್ರಮುಖ ಗ್ರಂಥಗಳು.

ವಿಶಾಖದತ್ತನ ಮುದ್ರಾರಕ್ಷಸ ಮತ್ತು ದೇವಿ ಚಂದ್ರಗುಪ್ತಂ, ವಿಶಾಖದತ್ತನ ದೇವಿಚಂದ್ರಗುಪ್ತಂ, ಕಾಮಾಂದಕನ ನೀತಿಸಾರ, ಇದು ಕೌಟಿಲ್ಯನ ಅರ್ಥಶಾಸ್ತ್ರಕ್ಕೆ ಸಮಾನವಾದ ಗ್ರಂಥವಾಗಿದೆ. ಭಾಸನ ಸ್ವಪ್ನವಾಸದತ್ತ, ವರಗವೀರನ ಬೃಹಸಮಿತ ಇದು ಖಗೋಳಶಾಸ್ತ್ರದ ವಿಶ್ವಕೋಶವಾಗಿದೆ. ದಂಡಿನ ದಶಕುಮಾರ ಚರಿತ, ಆರ್ಯಭಟ್ಟನ ಆರ್ಯಭಟಿಂ ಮತ್ತು ಸೂರ್ಯ ಸಿದ್ಧಾಂತ ಬೃಹ್ಮಗುಪ್ನ ಬೃಹಸ್ಪದ ಸಿದ್ದಾಂತ ಮತ್ತು ಕಂದಕಾದ್ಯಕ, ಪಾನಿನಿಯ ಅಷ್ಟಧ್ಯಯಿ, ವಾತ್ಸಾಯನನ ಕಾಮಸೂತ್ರ

**ವಿದೇಶಿ ಮೂಲಗಳು**

2ನೇ ಚಂದ್ರಗುಪ್ತನ ಆಸ್ಥಾನಕ್ಕೆ ಫಾಯಿಯಾನ್ ಮತ್ತು ಇತ್ಸಿಂಗ್ ಚೀನಾ ದೇಶದ ರಾಯಭಾರಿಗಳು ಆಗಮಿಸಿದ್ದರು. ಬೌದ್ಧ ಧರ್ಮದ ಹಸ್ತಪ್ರತಿಗಳ ಬಗ್ಗೆ ಅಧ್ಯಯನ ನಡೆಸಲು ಫಾಯಿಯಾನ್ 2ನೇ ಚಂದ್ರಗುಪ್ತನ ಆಸ್ಥಾನಕ್ಕೆ ಭೇಟಿ ನೀಡಿದ್ದ, ಇವನು ಫಕೋಕಿ ಎನ್ನುವ ಗ್ರಂಥವನ್ನು ರಚಿಸಿದ.

**ವಿದೇಶಿ ಲೇಖಕರು:**

**ಪಾಹಿಯಾನ:**

ಈತ ಚೀನ ಯಾತ್ರಿಕ ಎರಡನೆಯ ಚಂದ್ರಗುಪ್ತನ ಆಳ್ವಿಕೆಯಲ್ಲಿ ಭಾರತದಲ್ಲಿ ಪ್ರವಾಸ ಮಾಡಿದ, ಅವನ ಪ್ರಧಾನ ಉದ್ದೇಶ ಇದ್ದುದ್ದು ಬೌದ್ಧ ಗ್ರಂಥಗಳನ್ನು ಸಂಗ್ರಹಿಸುವುದು ಮತ್ತು ಅದರ ಅಧ್ಯಯನ. ಆತ ಭಾರತದ ಧಾರ್ಮಿಕ ಪರಿಸ್ಥಿತಿಯ ಅದರಲ್ಲೂ ಬೌದ್ಧರ ಧಾರ್ಮಿಕ ಪರಿಸ್ಥಿತಿಯ ವಿವರಣೆ ಮಾಡಿದ್ದಾನೆ.

**ಕಾಸ್ಮಾಸ್:**

ಈತ ಗ್ರೀಸನ ಬೌದ್ಧ ಭಿಕ್ಷು, ಭಾರತ ಮತ್ತು ಸಿಂಹಳಗಳಿಗೆ ಭೇಟಿಕೊಟ್ಟು ಆತನ ಕೃತಿ ಕ್ರಿಶ್ಚಿಯನ ಟೋಪೋಗ್ರಫಿ.

**ಹೂಯೆನ್ಸ್ ತ್ಸಾಂಗ್:**

ಬೌದ್ಧ ಚೀನ ಪ್ರವಾಸಿ ಈತ ಹರ್ಷವರ್ಧನನ ರಾಜ್ಯಭಾರಕಾಲದಲ್ಲಿ ಭಾರತ ಪ್ರವಾಸ ಮಾಡಿದ ಹರ್ಷವರ್ಧನನ ಆಸ್ಥಾನದಲ್ಲಿ ಸ್ವಲ್ಪ ದಿನ ಇದ್ದು, ಆತನ ಪುಸ್ತಕದ ಹೆಸರು ಸಿ–ಯು–ಕಿ ಎಂದು.

**ಇತ್ಸಿಂಗ್:**

ಈತ ಚೀನಿ ಪ್ರವಾಸಿ ನಳಂದದಲ್ಲಿ ಅಧ್ಯಯನ ಮಾಡಿದ ಆತನ ಪುಸ್ತಕ ಬೌದ್ಧ ಧರ್ಮದ ವಿವರಣೆ ಭಾರತದಲ್ಲಿ ಮತ್ತು ಮಲಯದಲ್ಲಿ ಬೌದ್ಧ ಧರ್ಮದ ಸ್ಥಿತಿಗತಿಯನ್ನು ವಿವರಿಸುತ್ತದೆ.

**ಸುಲೈಮಾನ:**

9ನೆಯ ಶತಮಾನದಲ್ಲಿ ಭಾರತಕ್ಕೆ ಭೇಟಿಕೊಟ್ಟ ಅರಬ್ಬಿ ಪ್ರವಾಸಿ, ರಾಷ್ಟ್ರಕೂಟರು, ಪಾಲರು ಮತ್ತು ಪ್ರತಿಕಾರರ ವರ್ಣನೆಯಿದೆ.

**downloaded from: www.kpscvaani.com**

**ನಾಣ್ಯಗಳು**

ಮೊಟ್ಟ ಮೊದಲ ಬಾರಿಗೆ ಅಸಂಖ್ಯಾತ ಚಿನ್ನದ ನಾಣ್ಯಗಳನ್ನು ಜಾರಿಗೆ ತಂದ ಕೀರ್ತಿ ಗುಪ್ತರಿಗೆ ಸಲ್ಲುತ್ತದೆ. 1ನೇ ಚಂದ್ರಗುಪ್ತನು ತನ್ನ ರಾಣಿ ಕುಮಾರದೇವಿ ಚಿತ್ರಗಳ ನಾಣ್ಯಗಳನ್ನು ಬಿಡುಗಡೆ ಮಾಡಿದ್ದ. ಸಮುದ್ರಗುಪ್ತನ ನಾಣ್ಯಗಳಲ್ಲಿ ವೀಣೆ, ಬಿಲ್ಲುಬಾಣಗಳ ಜೊತೆ ಆಟ ಆಡುತ್ತಿರುವ ಚಿತ್ರಗಳು ಕಂಡುಬರುತ್ತವೆ. 2ನೇ ಚಂದ್ರಗುಪ್ತನು ಜಿನಾರ್ ನಾಣ್ಯವನ್ನು ಬಿಡುಗಡೆ ಮಾಡಿದ್ದ.

**ವಿಜ್ಞಾನ ಮತ್ತು ತಂತ್ರಜ್ಞಾನ**

ಶೂನ್ಯ ಮತ್ತು ದಶಮಾಂಶ ಪದ್ಧತಿಯನ್ನು ಜಾರಿಗೊಳಿಸಿದ ಕೀರ್ತಿ ಗುಪ್ತರಿಗೆ ಸಲ್ಲುತ್ತದೆ. ಆರ್ಯಭಟ ತನ್ನ ಸೂರ್ಯ ಸಿದ್ಧಾಂತದಲ್ಲಿ ಸೂರ್ಯಗ್ರಹಣ ಮತ್ತು ಚಂದ್ರಗ್ರಹಣಗಳಿಗೆ ಕಾರಣಗಳನ್ನು ತಿಳಿಸಿದ್ದ. ಆರ್ಯಭಟನ ಪ್ರಕಾರ, ಭೂಮಿಯು ತನ್ನ ಕಕ್ಷದ ಸೂತ್ತಲೂ ತಿರುಗುತ್ತದೆಂದು ಪ್ರತಿಪಾದಿಸಿದ್ದ. ಬ್ರಹ್ಮಗುಪ್ತನು ನ್ಯೂಟನ್ ಗುರುತ್ವಾಕರ್ಷಣೆಯ ಬಗ್ಗೆ ಮಾಹಿತಿ ನೀಡಿದ್ದ.

**ಗುಪ್ತರ ರಾಜಕೀಯ ಇತಿಹಾಸ**

ಶ್ರೀಗುಪ್ತ ಗುಪ್ತ ವಂಶದ ಸ್ಥಾಪಕ. ಇವನ ನಂತರ ಗಟೋತ್ಕಚ ಅಧಿಕಾರಕ್ಕೆ ಬರುತ್ತಾನೆ. ಇವರಿಗೆ ಮಹಾರಾಜಾಧಿರಾಜಾ ಎನ್ನುವ ಬಿರುದಿದೆ. ಇವನ ನಂತರ 1ನೇ ಚಂದ್ರಗುಪ್ತ ಅಧಿಕಾರಕ್ಕೆ ಬಂದ.

**1ನೇ ಚಂದ್ರಗುಪ್ತ**

ಇವನನ್ನು ಗುಪ್ತ ವಂಶದ ನಿಜವಾದ ಸ್ಥಾಪಕನೆಂದು ಕರೆಯಲಾಗುತ್ತದೆ. ತಾನು ಅಧಿಕಾರಕ್ಕೆ ಬಂದದ್ದನ್ನು ಆಚರಿಸುವ ಉದ್ದೇಶದಿಂದ ಕ್ರಿ.ಶ. 320ರಲ್ಲಿ ಗುಪ್ತ ಶಕೆ ಪ್ರಾರಂಭಿಸಿದ. 1ನೇ ಚಂದ್ರಗುಪ್ತನ ನಂತರ ಸಮುದ್ರಗುಪ್ತ ಅಧಿಕಾರಕ್ಕೆ ಬಂದ.

**ಸಮುದ್ರಗುಪ್ತ**

ಇವನು ಗುಪ್ತ ವಂಶದ ಪ್ರಸಿದ್ಧ ದೊರೆ. ವಿ.ಎಸ್.ಸ್ಮಿತ್ ಇವನನ್ನು 'ಭಾರತದ ನೆಪೋಲಿಯನ್' ಎಂದು ಕರೆದಿದ್ದರು. ಇವನಿಗೆ 100 ಕದನಗಳ ಸಿಂಹ ಎನ್ನುವ ಬಿರುದಿದೆ. ಅಲಹಾಬಾದ ಶಾಸನವು ಸಮುದ್ರಗುಪ್ತನ ಬಗ್ಗೆ ಮಾಹಿತಿ ನೀಡುತ್ತದೆ. ವೀರಸೇನಾ ಸಮುದ್ರಗುಪ್ತನ ಸೇನಾಧಿಕಾರಿ, ಹರಿಸೇನಾ ಮತ್ತು ವಸುಬಂಧು ಸಮುದ್ರಗುಪ್ತನ ಆಸ್ಥಾನ ಕವಿಗಳಾಗಿದ್ದರು. ಸಮುದ್ರಗುಪ್ತನು ದಕ್ಷಿಣ ಪಥದ 12 ಜನ ದೊರೆಗಳನ್ನು ಮತ್ತು ಆರ್ಯವೃತ್ತದ 9 ಜನ ದೊರೆಗಳನ್ನು ಸೋಲಿಸಿದನು. ಶ್ರೀಲಂಕಾದ ದೊರೆ ಮೇಘವರ್ಮನಿಗೆ ಬೌದ್ಧಗಯಾದಲ್ಲಿ ಬೌದ್ಧ ಧರ್ಮದ ವಿಹಾರವನ್ನು ನಿರ್ಮಿಸಲು ಸ್ಥಳ ನೀಡುತ್ತಾನೆ. ಸಮುದ್ರಗುಪ್ತನು ಗುಪ್ತರ ಸುವರ್ಣಯುಗಕ್ಕೆ ಭದ್ರ ಬುನಾದಿ ಹಾಕುತ್ತಾನೆ.

ಸಮುದ್ರಗುಪ್ತನ ಮರಣಾನಂತರ 2ನೇ ಚಂದ್ರಗುಪ್ತನು ಅಧಿಕಾರಕ್ಕೆ ಬಂದ. ಇವನ ಕಾಲದಲ್ಲಿ ಗುಪ್ತ ಸಾಮ್ರಾಜ್ಯ ಸುವರ್ಣಯುಗವಾಗಿ ಮಾರ್ಪಾಡಾಗುತ್ತದೆ. 2ನೇ ಚಂದ್ರಗುಪ್ತನಿಗೆ ವಿಕ್ರಮಾದಿತ್ಯ ಎನ್ನುವ ಬಿರುದಿದೆ. ವಿಶಾಖದತ್ತನ ದೇವಿಚಂದ್ರಗುಪ್ತಂ 2ನೇ ಚಂದ್ರಗುಪ್ತನ ಬಗ್ಗೆ ಮಾಹಿತಿ ನೀಡುತ್ತದೆ. 2ನೇ ಚಂದ್ರಗುಪ್ತನ ಸಹೋದರ ರಾಮಗುಪ್ತನ ಕಾಲದಲ್ಲಿ ಶಾಖರ ದೊರೆ ಬಾಸನ ಗುಪ್ತ ಸಾಮ್ರಾಜ್ಯದ ಮೇಲೆ ದಾಳಿ ನಡೆಸಿದ್ದ. 2ನೇ ಚಂದ್ರಗುಪ್ತನು ಶಾಖರ ದೊರೆ ಬಾಸನನ್ನು ಸೋಲಿಸಿ ತನ್ನ ಸಹೋದರನ ಹೆಂಡತಿ ದ್ರುವದೇವಿಯನ್ನು 2ನೇ ಚಂದ್ರಗುಪ್ತನು ವಿವಾಹವಾಗುತ್ತಾನೆ. ಫಾಯಿಯಾನ ಮತ್ತು ಇತ್ಸಿಂಗ್ 2ನೇ ಚಂದ್ರಗುಪ್ತನ ಆಸ್ಥಾನಕ್ಕೆ ಭೇಟಿ ನೀಡಿದ್ದ. 2ನೇ ಚಂದ್ರಗುಪ್ತನು ದಿನಾರ್ ಎಂಬ ಚಿನ್ನದ ನಾಣ್ಯವನ್ನು ಬಿಡುಗಡೆ ಮಾಡಿದ್ದ. 2ನೇ ಚಂದ್ರಗುಪ್ತನ ನಂತರ ಕುಮಾರಗುಪ್ತ ಅಧಿಕಾರಕ್ಕೆ ಬಂದಿದ್ದ.

**downloaded from: www.kpscvaani.com**

**ಕುಮಾರಗುಪ್ತ**

ಕುಮಾರಗುಪ್ತನು ನಳಂದ ವಿಶ್ವವಿದ್ಯಾಲಯವನ್ನು ನಿರ್ಮಿಸಿದ. ಬೌದ್ಧ ಧರ್ಮದ ಪ್ರಸಿದ್ಧ ಶಿಕ್ಷಣ ಕೇಂದ್ರ 1ನೇ ಕುಮಾರಗುಪ್ತನು ಝಾನ್ಸಿಯ ಜಿವಘರ್‌ನಲ್ಲಿ ದಶವತಾರ ದೇವಾಲಯವನ್ನು ನಿರ್ಮಾಣ ಮಾಡಿದ. 1ನೇ ಕುಮಾರಗುಪ್ತನ ನಂತರ ಸ್ಕಂದಗುಪ್ತ ಅಧಿಕಾರಕ್ಕೆ ಬರುತ್ತಾನೆ. ಗಿರ್ನಾರ್ ಅಥವಾ ಮೆಹೊಕೆಲಿ ಶಾಸನ 2ನೇ ಸ್ಕಂದ್ರಗುಪ್ತನ ಬಗ್ಗೆ ಮಾಹಿತಿ ನೀಡುತ್ತದೆ. 2ನೇ ಸ್ಕಂದಗುಪ್ತನು ಸುದರ್ಶನ ಸರೋವರವನ್ನು ಪುನ: ನಿರ್ಮಿಸಿದ. ಗುಪ್ತ ಸಾಮ್ರಾಜ್ಯವು ಹೂಣರ ದಾಳಿಯ ನಂತರ ಪತನವಾಯಿತು. ಹೂಣರ ದೊರೆಗಳಾದ ತೋರಮಾಣ ಮತ್ತು ಮಿರ್‌ಕುಲಂ ಗುಪ್ತ ಸಾಮ್ರಾಜ್ಯದ ಮೇಲೆ ದಾಳಿ ನಡೆಸಿದ್ದರು. ಗುಪ್ತರ ಕೊನೆಯ ದೊರೆ ಶ್ರೀಗುಪ್ತ.

**ಗುಪ್ತರ ಆಡಳಿತ**

ಏಕಾಧಿಪತ್ಯ ಆಡಳಿತ ವ್ಯವಸ್ಥೆ ಗುಪ್ತರ ಕಾಲದಲ್ಲಿ ಕಂಡುಬರುತ್ತಿತ್ತು. ಆಡಳಿತದಲ್ಲಿ ರಾಜನಿಗೆ ಮಂತ್ರಿ ಮಂಡಲಂ ಅಥವಾ ಮಂತ್ರಿ ಪರಿಷತ್ ಸಹಾಯ ಮಾಡುತ್ತಿತ್ತು. ಭೂಕಂದಾಯ ಉತ್ಪನ್ನದ 1/4 ಅಥವಾ 6/1 ಭಾಗವಾಗಿತ್ತು. ಭಾಗಾಕಾರ ಮತ್ತು ಉದ್ರಾಂಗ ಪ್ರಮುಖ ತೆರಿಗೆಗಳಾಗಿದ್ದವು. ಭೂಮಿಯನ್ನು ಬೇರೆ ಬೇರೆ ವಿಭಾಗಗಳಾಗಿ ವಿಂಗಡಿಸಲಾಗಿತ್ತು.

| | |
|---|---|
| ಕ್ಷೇತ್ರ | ಕೃಷಿ ಭೂಮಿ |
| ಕಿಲಾ | ಬಂಜರು ಭೂಮಿ |
| ಅಪರತ | ಅರಣ್ಯ ಭೂಮಿ |
| ಗೋಮಾಳ | |

**ಹುಲ್ಲುಗಾವಲು**

ಪಾಹರಪುರ ಶಾಸನದ ಪ್ರಕಾರ ಭೂಮಿಯು ಸಂಪೂರ್ಣವಾಗಿ ರಾಜ್ಯದ ಒಡೆತನದಲ್ಲಿತ್ತು.

**ಗುಪ್ತರ ಸಾಮಾಜಿಕ ವ್ಯವಸ್ಥೆ**

★ ಭವಿಷ್ಯ ಭಾರತಕ್ಕೆ ಸಂವಿಧಾನ ರಚಿಸಲು ಬ್ರಿಟಿಷ್ ಸರ್ಕಾರ ಈ ಸಮ್ಮೇಳನದಲ್ಲಿ ಶ್ವೇತಪತ್ರ ಹೊರಡಿಸಿತು.

★ ಇದರ ಪ್ರಕಾರ 1935ರ ಭಾರತ ಸರ್ಕಾರ ಕಾಯ್ದೆ ಜಾರಿಗೆ ಬಂದಿತು.

**ಸುಭಾಷ್ ಚಂದ್ರ ಬೋಸ್ :**

★ 1897ರಲ್ಲಿ ಇವರು ಒರಿಸ್ಸಾದಲ್ಲಿ ಜನಿಸಿದರು.
ತಂದೆ – ರಾಜ್ ಬಹದ್ದೂರ್ ಜಾನಕಿ ದಾಸ್ ಭೋಸ್
ತಾಯಿ – ಪ್ರತಿಭಾ ಭೋಸ್

★ ಇವರ ರಾಜಕೀಯ ಗುರು ದೇಶಬಂಧು ಚಿತ್ತರಂಜನ್ ದಾಸ್.

★ ಖಿಲಾಫತ್ ಮತ್ತು ಅಸಹಕಾರ ಚಳುವಳಿಯ ನಂತರ ಸುಭಾಶ್‌ಚಂದ್ರಬೋಸ್ ಅವರು ಚಿತ್ತರಂಜನ್‌ದಾಸ್ ಅವರನ್ನು ರಾಜಕೀಯ ಗುರುವಾಗಿ ಸ್ವೀಕರಿಸುತ್ತಾರೆ.

★ ಇವರು ಅರವಿಂದೋ ಘೋಷ್ ಮತ್ತು ಸ್ವಾಮಿ ವಿವೇಕಾನಂದರಿಂದ ಪ್ರೇರೇಪಿತರಾದರು.

★ ಮಹಾತ್ಮ ಗಾಂಧೀಜಿಯವರು ಸುಭಾಷ್ ಚಂದ್ರಬೋಸ್‌ರನ್ನು 'ದೇಶಭಕ್ತರಲ್ಲೆ ರಾಜಕುಮಾರ'ಎಂದು ಕರೆದರು.

★ 'ನೇತಾಜಿ' ಎಂಬ ಬಿರುದನ್ನು ಮಹಾತ್ಮ ಗಾಂಧೀಜಿಯವರು ನೀಡುತ್ತಾರೆ.

★ 'ಕ್ವಿಟ್ ಇಂಡಿಯಾ' ಚಳುವಳಿಯ ನಂತರ ಮಹಾತ್ಮ ಗಾಂಧೀಜಿಯವರಿಗೆ 1942ರಲ್ಲಿ 'ರಾಷ್ಟ್ರಪಿತ' ಎಂಬ ಬಿರುದನ್ನು ಸುಭಾಷ್ ಚಂದ್ರಬೋಸ್ ನೀಡಿದರು.

★ ಸುಭಾಷ್ ಚಂದ್ರಬೋಸ್‌ರಿಗೆ 'ದೇಶನಾಯಕ' ಎಂದು ರವೀಂದ್ರನಾಥ್ ಠಾಗೂರ್ ಕರೆಯುತ್ತಾರೆ.

★ 'ಪೂರ್ಣಸ್ವಾತಂತ್ರ್ಯ' ಎಂಬ ಘೋಷಣೆಯು ಸುಭಾಷ್ ಚಂದ್ರ ಬೋಸ್ ಅವರದು. ಇದನ್ನು 1929ರ ಲಾಹೋರ್ ಕಾಂಗ್ರೆಸ್ ಅಧಿ ವೇಶನದಲ್ಲಿ ಸಂದರ್ಭದಲ್ಲಿ ಘೋಷಿಸಲಾಗುವುದು.

★ 1938ರಲ್ಲಿ ನಡೆದ ಹರಿಪುರ ಕಾಂಗ್ರೆಸ್ ಅಧಿವೇಶನ ಅಧ್ಯಕ್ಷತೆ ವಹಿಸಿದ್ದರು.

★ 1939ರ ತ್ರಿಪುರಾ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ಸುಭಾಷ್ ಚಂದ್ರ ಬೋಸ್ ವಹಿಸಿದ್ದರು. ಆದರೆ ಗಾಂಧೀಜಿ ಮತ್ತು ಸುಭಾಷ್ ಚಂದ್ರ ಬೋಸ್‌ರ ನಡುವೆ ಭಿನ್ನಾಭಿಪ್ರಾಯವುಂಟಾಗಿ ತ್ರಿಪುರಿ ಕಾಂಗ್ರೆಸ್ ಅಧಿವೇಶನಕ್ಕೆ ರಾಜೀನಾಮೆ ನೀಡುತ್ತಾರೆ. ಸುಭಾಷ್ ಚಂದ್ರ ಬೋಸ್ ಮಹಾತ್ಮಗಾಂಧೀಜಿಯವರ ಅಭ್ಯರ್ಥಿ ಪಟ್ಟಾಭಿ ಸೀತಾರಾಮಯ್ಯನನ್ನು ಸೋಲಿಸಿ ತ್ರಿಪುರಿ ಕಾಂಗ್ರೆಸ್‌ನ ಅಧ್ಯಕ್ಷರಾಗುತ್ತಾರೆ.

★ ಸುಭಾಷ್ ಚಂದ್ರ ಬೋಸ್ ಅಧ್ಯಕ್ಷ ಪದವಿಗೆ ರಾಜೀನಾಮೆ ನೀಡಿದ ನಂತ ಡಾ|| ರಾಜೇಂದ್ರ ಪ್ರಸಾದ್ ತ್ರಿಪುರಿ ಕಾಂಗ್ರೆಸ್‌ನದ ಅಧ್ಯಕ್ಷತೆ ವಹಿಸಿದರು.

★ ಸುಭಾಷ್ ಚಂದ್ರ ಬೋಸ್ ರಾಜೀನಾಮೆ ನೀಡಿದ ನಂತರ ಫಾರ್ವರ್ಡ್ ಬ್ಲಾಕ್' ಎಂಬ ಪಕ್ಷವನ್ನು ಕಟ್ಟಿದರು. (1939 ರಲ್ಲಿ).

★ 1940 ರಲ್ಲಿ ಇವರನ್ನು ಕ್ರಾಂತಿಕಾರಿ ಚಟುವಟಿಕೆಗಳಿಗಾಗಿ ಬಂಧಿಸುತ್ತಾರೆ. ಆಗ ಅವರು ಜೈಲಿನಲ್ಲಿ ಯೋಗ ಮಾಡುವ ನೆಪದಲ್ಲಿ ತಪ್ಪಿಸಿಕೊಂಡು ಮಾಸ್ಕೋದ ಮುಖಾಂತರ ಜರ್ಮನಿಯ ಬರ್ಲಿನ್‌ಗೆ ಹೋಗುತ್ತಾರೆ. ಅಲ್ಲಿ ಹಿಟ್ಲರ್‌ನನ್ನು ಭೇಟಿಯಾಗುತ್ತಾರೆ.

★ 1938ರಲ್ಲಿ ಪ್ರಾಂತ್ಯಗಳಿಗೆ ಚುನಾವಣೆ ನಡೆದಾಗ ಸುಭಾಷ್‌ಚಂದ್ರಬೋಸ್ ಅವರ ವಿರುದ್ಧ ಪಟ್ಟಾಭಿ ಸೀತಾರಾಮಯ್ಯನವರನ್ನು ಮಹಾತ್ಮಗಾಂಧೀಜಿ ನಿಲ್ಲಿಸುತ್ತಾರೆ. ಆದರೆ ಸುಭಾಷ್‌ಚಂದ್ರಬೋಸ್ ಗೆಲ್ಲುತ್ತಾರೆ. ನಂತರ ತ್ರಿಪುರಾ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದ ನಂತರ ಅರ್ಧದಲ್ಲೇ ರಾಜೀನಾಮೆ ನೀಡುತ್ತಾರೆ. ಆಗ ಡಾ|| ರಾಜೇಂದ್ರಪ್ರಸಾದ್ ಅವರು ಅಧ್ಯಕ್ಷತೆ ವಹಿಸುತ್ತಾರೆ.

★ 1940ರಲ್ಲಿ ಕ್ರಾಂತಿಕಾರಿ ಚಟುವಟಿಕೆಗಳಿಗಾಗಿ ಬ್ರಿಟೀಷ್ ಸರ್ಕಾರ ಸುಭಾಷ್‌ಚಂದ್ರ ಬೋಸ್‌ನ್ನು ಬಂಧಿಸುತ್ತದೆ. ಅಸೌಖ್ಯದ ಕಾರಣದಿಂದ ಅವರನ್ನು ಬಿಡುಗಡೆ ಮಾಡಿ ಕಲ್ಕತ್ತಾದ ಎಲ್ಗಿನ್ ಹೌಸ್‌ಗೆ ಕಳುಹಿಸುತ್ತದೆ. ಎಲ್ಗಿನ್ ಹೌಸ್‌ಂದ ಸಿಸಿರ್ ಜೋತೆ ಪಾಕಿಸ್ತಾನದ ಪೇಷಾವರಿಗೆ ಪರಾರಿಯಾಗುತ್ತಾರೆ. ಅಲ್ಲಿಂದ ಒರ್ಲಾಂಡೋ ಮಸೂಟ ಅವರ ಪಾಸ್‌ಪೋರ್ಟ್ ಬಳಸಿ ಜರ್ಮನಿಗೆ ಪಲಾಯನ ಗೈಯುವರು. ಜರ್ಮನಿಯಲ್ಲಿ ಹಿಟ್ಲರ್‌ನ್ನು ಭೇಟಿಯಾಗಿ ಅಲ್ಲಿಯ ರೇಡಿಯೋ ಸ್ಟೇಷನ್‌ನಿಂದ ಮುಕ್ತ ಭಾರತ (Free India) ಎಂದು ಘೋಷಿಸುವರು.

★ 'ನೀವು ನನಗೆ ರಕ್ತಕೊಡಿ ನಾನು ನಿಮಗೆ ಸ್ವಾತಂತ್ರ್ಯ ಕೊಡುತ್ತೇನೆ' ಎಂಬ ಘೋಷವಾಕ್ಯವನ್ನು ಹೇಳುತ್ತಾರೆ. (Give me Blood I will freedom to you)

★ 1942ರಲ್ಲಿ ರಾಸ್ ಬಿಹಾರಿಬೋಸ್ ಜಪಾನಿನ ಟೋಕಿಯೋದಲ್ಲಿ ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್‌ನ್ನು ಸ್ಥಾಪಿಸಿದರು. ಸುಭಾಷ್ ಚಂದ್ರಬೋಸ್‌ನ್ನು ಬರ್ಲಿನ್‌ನಿಂದ ಟೋಕಿಯೋಗೆ ಆಮಂತ್ರಿಸಿ ಅವರ ಪರವಾಗಿ ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್‌ಗೆ ರಾಜೀನಾಮೆ ನೀಡುತ್ತಾರೆ. ಭಾರತ ರಾಷ್ಟ್ರೀಯ ಸೈನ್ಯವನ್ನು ಮೊದಲು ಸಂಘಟಿಸಿದವನು ಕ್ಯಾಪ್ಟನ್ ಮೋಹನ್‌ಸಿಂಗ್.
ಇವನು ಬ್ರಿಟೀಷ್ ಸೈನ್ಯದಲ್ಲಿ ಇದ್ದ ಭಾರತೀಯ ಅಧಿಕಾರಿ.

★ ಭಾರತ ರಾಷ್ಟ್ರೀಯ ಸೈನ್ಯವನ್ನು ಅಥವಾ ಅಜಾದ್ ಇನ್ ಫೌಜ್‌ನ್ನು ಸುಭಾಷ್‌ಚಂದ್ರಬೋಸ್ ಪುನರ್ ನಿರ್ಮಿಸಿದರು.

ಕನ್ನಡದ ಮೊಟ್ಟಮೊದಲ ಸಂಕಲನ ಗ್ರಂಥ ಸೂಕ್ತಿಸುಧಾರ್ಣದ.

**downloaded from: www.kpscvaani.com**

★ ಸುಭಾಷ್‌ಚಂದ್ರಬೋಸ್ ಸಿಂಗಾಪುರದಲ್ಲಿ ಮುಕ್ತಭಾರತಕ್ಕಾಗಿ ತಾತ್ಕಾಲಿಕ ಸರ್ಕಾರವನ್ನು ರಚಿಸಿದರು.

★ ಸುಭಾಷ್‌ಚಂದ್ರಬೋಸ್ ಸಿಂಗಾಪುರದಲ್ಲಿ 1944ರಲ್ಲಿ ಭಾರತೀಯ ಹಂಗಾಮಿ ಸರ್ಕಾರವನ್ನು ರಚಿಸುತ್ತಾರೆ.

★ ಭಾರತ ರಾಷ್ಟ್ರೀಯ ಸೈನ್ಯವು ಮೊದಲಿಗೆ ನಾಗಾಲ್ಯಾಂಡಿನ ಕೊಹಿಮಕ್ಕೆ ತಲುಪಿ ಅಲ್ಲಿಂದ ಮಣಿಪುರದ ಇಂಫಾಲ್ ಅನ್ನು ವಶಪಡಿಸಿಕೊಳ್ಳುತ್ತದೆ.

★ 1945ರಲ್ಲಿ ಭಾರತ ರಾಷ್ಟ್ರೀಯ ಸೈನಿಕರನ್ನು ಬ್ರಿಟೀಷ್ ಸೈನಿಕರು ವಶಪಡಿಸಿಕೊಂಡು ದೆಹಲಿಯ ಕೆಂಪುಕೋಟೆಗೆ ಕರೆ ತರುತ್ತಾರೆ. ಭಾರತೀಯ ಸೈನ್ಯದಲ್ಲಿದ್ದ ಮೂವರು ಅಧಿಕಾರಿಗಳೆಂದರೆ: ಶಾ ನವಾಜ್ ಹುಸೇನ್, ಗುರ್ಡಿತ್ ಸಿಂಗ್ ದಿಲ್ಲಾನ್, ಕ್ಯಾಪ್ಟನ್ ಲಕ್ಷ್ಮೀ ಸೆಹಗಲ್. ಇವರ ಪರವಾಗಿ ವಾದ ಮಾಡಿದ ಭಾರತೀಯ ವಕೀಲರು ಭೂಲಭಾಯ್ ದೇಸಾಯಿ ತೇಜಬಹದ್ದೂರ್ ಸಪು, ಜವಾಹರ್‌ಲಾಲ್ ನೆಹರು.

**ಕ್ರಿಪ್ಸನ ನಿಯೋಗ – ಮಾರ್ಚ್ – 1942:**

★ ಜಪಾನ್ 1941ರಲ್ಲಿ ಯು.ಎಸ್. ನೌಕಾದಳದ ಪರ್ಲ್ ಬಂದರಿನ ಮೇಲೆ ದಾಳಿ ನಡೆಸಿದೆ.

★ ರಂಗೂನನ್ನು ಜಪಾನ್ ವಶಪಡಿಸಿಕೊಂಡಾಗ ಅಮೆರಿಕಾ ಇಂಗ್ಲೆಂಡ್ ಮೇಲೆ ಒತ್ತಡವನ್ನು ತಂದಿತು. ಆಗ (ಇಂಗ್ಲೆಂಡ್) ಬ್ರಿಟಿಷ್ ಸ್ಟ್ಯಾಫರ್ಡ್ ಕ್ರಿಪ್ಸ್ ನಿಯೋಗವನ್ನು ಭಾರತಕ್ಕೆ ಕಳುಹಿಸುತ್ತಾರೆ.

★ ಚೀನಾ ಪ್ರಧಾನಿ ಚಿಯಾಂಗ್ ಕೈಷೆಕ್ ಅಮೆರಿಕಾ ಅಧ್ಯಕ್ಷ ರುಸ್‌ವೆಲ್ಟ್ ಮತ್ತು ಆಸ್ಟ್ರೇಲಿಯಾದ ವಿದೇಶಾಂಗ ಸಚಿವರ ಒತ್ತಡದಿಂದ ಕಿಪ್ಸನ ಸಂಧಾನವನ್ನು ಭಾರತಕ್ಕೆ ಕಳುಹಿಸಲಾಗುವುದು.

★ ಭಾರತ ಸ್ವಾತಂತ್ರ್ಯದ ಬಗ್ಗೆ ಚರ್ಚಿಸಲು ಕ್ರಿಪ್ಸ್‌ನ ನೇತೃತ್ವದಲ್ಲಿ ನಿಯೋಗವನ್ನು ಭಾರತಕ್ಕೆ ಕಳುಹಿಸಿತು.

**ಕ್ರಿಪ್ಸ್‌ನ ಶಿಫಾರಸ್ಸುಗಳು:**

1) ಭಾರತೀಯರಿಗೆ ದ್ವಿಮುಖ ಸರ್ಕಾರ ರಚನೆ.
2) ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶವನ್ನು ರಚಿಸುವುದು.

★ ಕ್ರಿಪ್ಸ್‌ನ ಶಿಫಾರಸ್ಸುಗಳನ್ನು 'ಮುಳುಗುತ್ತಿರುವ ಬ್ಯಾಂಕಿಗೆ ಪೋಸ್ಟ್ ಇದ್ದ ಹಾಗೆ' ಎಂದು ಗಾಂಧೀಜಿಯವರು ಹೇಳಿದ್ದಾರೆ.

★ ಮುಸ್ಲಿಂ ಲೀಗನ್ನು ಪಾಕಿಸ್ತಾನದ ಪ್ರತ್ಯೇಕ ರಾಜ್ಯ ರಚನೆಗೆ ಆಹ್ವಾನ ನೀಡಿದಂತಾಗುತ್ತದೆ.

★ ಕ್ರಿಪ್ಸ್‌ನ ಸಂಧಾನ ವಿಫಲವಾದ ನಂತರ ಆಗಸ್ಟ್ – 8,1942ರಲ್ಲಿ 'ಭಾರತ ಬಿಟ್ಟು ತೊಲಗಿ' ಚಳುವಳಿ ಆರಂಭವಾಯಿತು.

★ ಈ ಭಾರತ ಬಿಟ್ಟುತೊಲಗಿ ಚಳುವಳಿ ಆರಂಭವಾಗಲು ಕಾರಣ.

1) ಕ್ರಿಪ್ಸ್‌ನ ಸಂಧಾನ ವಿಫಲವಾಗಿದ್ದು.
2) ಜಪಾನ್ ಭಾರತವನ್ನು ಆಕ್ರಮಿಸುತ್ತದೆ ಎಂಬ ಭಯ.
3) ಬ್ರಿಟೀಷರು ಭಾರತದಲ್ಲಿ ಇದ್ದರೆ ಜಪಾನ್ ಭಾರತವನ್ನು ಆಕ್ರಮಿಸಲು ಆಮಂತ್ರಿಸಿದಂತೆ, ಒಂದು ವೇಳೆ ಭಾರತ ಬಿಟ್ಟು ಹೋದರೆ ಗಾಳದ ಬಾಯಿಂದ ಮೀನನ್ನು ಬಿಡಿಸಿದಂತೆ.

★ 'ಬ್ರಿಟೀಷರೆ ಭಾರತ ಬಿಟ್ಟುತೊಲಗಿ' ಚಳುವಳಿಗೆ ಬಾಂಬೆಯಲ್ಲಿ ನಡೆದ 1942ರ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ತೀರ್ಮಾನ ತೆಗೆದುಕೊಳ್ಳಲಾಯಿತು.

★ 1940 – 1945ರವರೆಗೆ ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ಮೌಲಾನಾ ಅಬ್ದುಲ್ ಅಜಾದ್ ವಹಿಸಿಕೊಂಡರು.

★ ಈ ಭಾರತ ಬಿಟ್ಟು ತೊಲಗಿ ಚಳುವಳಿಯ ಸಂದರ್ಭದಲ್ಲಿ ಗಾಂಧೀಜಿಯವರ ಘೋಷಣೆ 'ಮಾಡು ಇಲ್ಲವೆ ಮಡಿ' ನೀವು ಬ್ರಿಟೀಷರ ವಿರುದ್ಧ ಹೋರಾಡುತ್ತಿಲ್ಲ ಬದಲಿಗೆ ಬ್ರಿಟೀಷರ ಆಡಳಿತದ ವಿರುದ್ಧ ಹೋರಾಡಿರಿ ಎಂದು ಜನರಿಗೆ ಕರೆಕೊಡುತ್ತಾರೆ.

★ 'ಭಾರತವನ್ನು ನೀವು ದೇವರ ಕೈಯಲ್ಲಿ ಬಿಟ್ಟುಹೋಗಿ' ಎಂದು ಗಾಂಧೀಜಿ ಬ್ರಿಟೀಷರಿಗೆ ಎಚ್ಚರಿಕೆ ನೀಡಿದರು.

★ ಕರ್ನಾಟಕದಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರಿನಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಮೊದಲಿಗೆ ನಡೆಯಿತು.

★ ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಸ್ವಾತಂತ್ರ್ಯವನ್ನು ಘೋಷಿಸಿದ ಮೊದಲ ಹಳ್ಳಿ 'ಈಸೂರು'.

★ ಈ ಚಳುವಳಿಯ ಸಂದರ್ಭದಲ್ಲಿ ಹರತಾಳ, ಮುಷ್ಕರ, ಸಾರಿಗೆ ಸಂಪರ್ಕವ್ಯವಸ್ಥೆಗಳನ್ನು ನಾಶಪಡಿಸಲಾಯಿತು.

★ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅತೀ ಚಿಕ್ಕ ಮುಸ್ಲಿಂನ ಅಧ್ಯಕ್ಷ ಎಂದರೆ ಮೌಲಾನ ಅಬ್ದುಲ್ ಕಲಾಂ – 42ನೇ ವಯಸ್ಸಿನಲ್ಲಿ.

**ಕ್ವಿಟ್ ಇಂಡಿಯಾ ಚಳುವಳಿ 1942:**

**ಕಾರಣಗಳು:**

★ ಕ್ರಿಪ್ಸ್ ಸಂಧಾನ ವಿಫಲ. ಕ್ರಿಪ್ಸ್‌ನ ಪ್ರಸ್ತಾವನೆಯು ಭಾರತಕ್ಕೆ ಡೊಮಿನೆಯನ್ ಸ್ಥಾನಮಾನವನ್ನು ಘೋಷಿಸಿತ್ತು.

★ ಭಾರತೀಯರು ಪೂರ್ಣ ಸ್ವರಾಜ್ಯದ ಬೇಡಿಕೆಯನ್ನು ಮುಂದಿಟ್ಟರು.

★ ಕ್ರಿಪ್ಸ್‌ನ ಸಂಧಾನ ಮುಳುಗುತ್ತಿರುವ ಬ್ಯಾಂಕಿಗೆ ಬಾವಿ ದಿನಾಂಕದ ಚೆಕ್ ಇದ್ದ ಹಾಗೆ ಎಂದು ಘೋಷಿಸಿದರು. (Cripps Proposal is a post dated cheque on crashing bank)

★ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಮುಂಬೈನಲ್ಲಿ ಸಭೆ ಸೇರಿ ಕ್ವಿಟ್ ಇಂಡಿಯಾ ಚಳುವಳಿಗೆ ಕರೆ ಕೊಟ್ಟಿತು.

★ 9 ಆಗಸ್ಟ್ 1942ರಲ್ಲಿ ಸರೋಜಿನಿ ನಾಯ್ದು ಮತ್ತು ಮಹಾತ್ಮ ಗಾಂಧೀಜಿಯವರನ್ನು ಬಂಧಿಸಿ, ಪುನಾದ ಅಗಾಖಾನ್ ಜೈಲಿಗೆ ಕಳುಹಿಸಲಾಯಿತು.

★ ಪ್ರಮುಖ ನಾಯಕರಾದ ಜಯಪ್ರಕಾಶ್ ನಾರಾಯಣ್, ರಾಮ ಮನೋಹರ್ ಲೋಹಿಯಾ, ಅರುಣ್ ಅಸಫ್‌ಅಲಿ ಭೂಗತ ಚಟುವಟಿಕೆಗಳನ್ನು ಪ್ರಾರಂಭಿಸಿದರು.

★ ಮಹಾರಾಷ್ಟ್ರದ ಸಾತಾರಾದಲ್ಲಿ ವೈ.ಬಿ. ಚವ್ಹಾಣ್ ಮತ್ತು ನಾನಾಪಾಟೀಲ್ ಪ್ರತಿ ಸರ್ಕಾರವನ್ನು ರಚಿಸಿದರು.

ಕನ್ನಡದ ಮೊದಲ ಲಕ್ಷಣ ಗ್ರಂಥ ಕವಿರಾಜಮಾರ್ಗ.

downloaded from: www.kpscvaani.com

★ ಪಶ್ಚಿಮ ಬಂಗಾಳದ ಮಿಡ್ನಾಪುರ್‌ನಲ್ಲಿ ತಾಮ್ರಲಿಪ್ತಿ ಜತಿಯಾಸರ್ಕಾರ ಸ್ಥಾಪನೆಯಾಗುತ್ತದೆ.

★ ಬ್ರಿಟೀಷರು ಕ್ವಿಟ್‌ಇಂಡಿಯಾ ಚಳುವಳಿಯನ್ನು ದಮನಮಾಡುವುದರಲ್ಲಿ ಸಫಲರಾಗುವರು.

**ಚಕ್ರವರ್ತಿ ರಾಜಗೋಪಾಲಾಚಾರಿ ಸೂತ್ರ :**

★ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಹಿಂದೂ – ಮುಸ್ಲಿಂರ ಒಗ್ಗಟ್ಟನ್ನು ಅರಿತ ಚಕ್ರವರ್ತಿ ರಾಜಗೋಪಾಲಚಾರಿ 1944ರಲ್ಲಿ ರಾಜಿ ಸೂತ್ರವನ್ನು ರಚಿಸುವರು.

★ ಇದರ ಮುಖ್ಯ ಶಿಫಾರಸ್ಸುಗಳೆಂದರೆ :

1) ಭಾರತದಲ್ಲಿ ಮಧ್ಯಾಂತರ ಸರ್ಕಾರ ರಚನೆಯಾದರೆ ಕಾಂಗ್ರೆಸ್‌ನೊಂದಿಗೆ ಮುಸ್ಲಿಂ ಲೀಗ್ ಕೈಜೋಡಿಸುವುದು.

2) ಎರಡನೇ ಜಾಗತಿಕ ಮಹಾಯುದ್ದದ ನಂತರ ಮುಸ್ಲಿಂ ಪ್ರಾಬಲ್ಯವಿರುವ ಪ್ರದೇಶಗಳನ್ನು ಗುರುತಿಸಲು ಆಯೋಗವನ್ನು ರಚಿಸಲಾಗುವುದು.

3) ವಿಭಜನೆಯ ಸಂದರ್ಭದಲ್ಲಿ ರಕ್ಷಣೆ, ವಾಣಿಜ್ಯ ಸಾರಿಗೆ ವ್ಯವಸ್ಥೆಗಳನ್ನು ರಕ್ಷಿಸಲು ಪರಸ್ಪರ ಒಪ್ಪಂದವನ್ನು ಮಾಡಿಕೊಳ್ಳಲಾಗುವುದು.

**ಗಾಂಧಿ – ಜಿನ್ನಾ ಮಾತುಕತೆ 1944 :**

★ ಚಕ್ರವರ್ತಿ ರಾಜಗೋಪಾಲಚಾರಿ ಸೂತ್ರದ ಮೇರೆಗೆ 1944ರಲ್ಲಿ ಗಾಂಧಿ ಮತ್ತು ಜಿನ್ನಾರ ನಡುವೆ ಮಾತುಕತೆ ನಡೆಯಿತು.

★ ಪಾಕಿಸ್ತಾನ ಘೋಷಣೆಯನ್ನು ಹಿಂತೆಗೆದುಕೊಳ್ಳಲು ಮಹಾತ್ಮಗಾಂಧಿ ಜಿನ್ನಾರನ್ನು ಒತ್ತಾಯಿಸಿದರು.

★ ಪಾಕಿಸ್ತಾನ ಘೋಷಣೆಯನ್ನು ಹಿಂತೆಗೆದುಕೊಳ್ಳಲು ಜಿನ್ನಾ

**ಬ್ರಿಟೀಷ್ ಭಾರತದಲ್ಲಿ ಆಯೋಗಗಳು ಮತ್ತು ಸಮಿತಿಗಳು :**

| ವೈಸರಾಯ್ | ಸಮಿತಿಗಳು ಮತ್ತು ಆಯೋಗಗಳು | ವರ್ಷ | ಅಧ್ಯಕ್ಷರು | ಗುರಿಗಳು |
|---|---|---|---|---|
| ಲಾರ್ಡ್ ರಿಪ್ಪನ್ (1880 –84) | ಹಂಟರ್ ಆಯೋಗ | 1882 | ವಿಲಿಯಮ್ ಹಂಟರ್ | ಶಿಕ್ಷಣದ ಅಭಿವೃದ್ದಿಯ ಬಗ್ಗೆ ಅಧ್ಯಯನ |
| ಲಾರ್ಡ್ ಕರ್ಜನ್ (1899– 1905) | ಯೂನಿವರ್ಸಿಟಿ ಆಯೋಗ | 1902 | ಥಮಾಸ್ ರ್‍ಯಾಲೀಗ್ | ವಿಶ್ವವಿದ್ಯಾನಿಲಯಗಳ ಬಗ್ಗೆ ಅಧ್ಯಯನ |
| ಲಾರ್ಡ್ ಚೆಮ್ಸ್ ಫರ್ಡ್ (1916–21) | ಕಲ್ಕತ್ತಾ ವಿಶ್ವವಿದ್ಯಾನಿಲಯ ಆಯೋಗ | 1917 | ಮೈಕೆಲ್ ಸ್ಯಾಡಲರ್ | ಕಲ್ಕತ್ತಾ ವಿಶ್ವವಿದ್ಯಾನಿಲಯದ ಬಗ್ಗೆ ಅಧ್ಯಯನ |
| ಲಾರ್ಡ್ ಇರ್ವಿನ್ (1926–31) | ಭಾರತೀಯ ಸಂವಿಧಾನತ್ಮ ಆಯೋಗ | 1929 | ಫಿಲಿಪ್ ಅರ್ಥಗ್ | ಶಿಕ್ಷಣದ ಬಗ್ಗೆ ಅಧ್ಯಯನ ನಡೆಸುವುದು |
| ಲಾರ್ಡ್ ಇರ್ವಿನ್ (1926–31) | ಲಿಂಡ್‌ಸೇ ಆಯೋಗ | 1929 | ಎ. ಡಿ ಲಿಂಡ್‌ಸೇ | ಭಾರತದಲ್ಲಿ ಮಿಷನರಿ ಶಿಕ್ಷಣದ ಅಭಿವೃದ್ಧಿ |
| ಲಾರ್ಡ್‌ವಿಲಿಂಗ್‌ಟನ್ (1931–36) | ಸಪ್ರು ಆಯೋಗ | 1934 | ತೇಜ್‌ಬಹದ್ದೂರ್ ಸಪ್ರು | ನಿರುದ್ಯೋಗದ ಬಗ್ಗೆ ಅಧ್ಯಯನ ನಡೆಸುವುದು |
| ಲಾರ್ಡ್‌ವೆವೆಲ್ (1945–47) | ಸರ್‌ಜೆಂಟ್ ಯೋಜನೆ | 1944 | ಜಾನ್ಸ್ ಸಾರ್‌ಜೆಂಟ್ | ಬ್ರಿಟನ್ ಮಾದರಿಯಲ್ಲಿ ಭಾರತದಲ್ಲಿ ಶಿಕ್ಷಣದ ಅಭಿವೃದ್ಧಿ |
| ಲಾರ್ಡ್ ಲಿಟ್ಟನ್ (1876–80) | ಬರ ಆಯೋಗ | 1880 | ರಿಚರ್ಡ್ ಸ್ಟ್ರ್ಯಾಚೆ | ಬರ ಪೀಡಿತರಿಗೆ ಪರಿಹಾರ ಒದಗಿಸುವುದು |
| ಲಾರ್ಡ್ ಕರ್ಜನ್ (1899–05) | ಬರ ಆಯೋಗ | 1900 | ಅಂಥ್ಯೋನಿ ಮಾಗ್ ಡೊನಾಲ್ಡ್ | ಬರ ಪೀಡಿತರಿಗೆ ಪರಿಹಾರ ಒದಗಿಸುವುದು |
| ಲಾರ್ಡ್ ಇರ್ವಿನ್ (1926–31) | ವಿಟ್ಲೆ ಆಯೋಗ | 1929 | ಜೆ.ಹೆಚ್. ವಿಟ್ಲೆ | ಕಾರ್ಮಿಕರ ಪರಿಸ್ಥಿತಿಯನ್ನು ಅಧ್ಯಯನ ನಡೆಸುವುದು |
| ಲಾರ್ಡ್ ಅರ್ಡಿಂಚ್ (1910–15) | ನಾಗರೀಕ ಸೇವಾ ಆಯೋಗ | 1912 | ಲಾರ್ಡ್ ಇಸ್ಲಿಂಗ್‌ಟನ್ | ಶೇ. 25 ಅತ್ಯುನ್ನತ ಹುದ್ದೆಗಳನ್ನು ಭಾರತೀಯರಿಗೆ ಮೀಸಲು |
| ಲಾರ್ಡ್ ಕರ್ಜನ್ (1899–05) | ಫ್ರೇಜರ್ ಆಯೋಗ | 1902 | ಫ್ರೇಜರ್ | ಪೊಲೀಸ್ ಆಯೋಗ |
| ಲಾರ್ಡ್ ಇರ್ವಿನ್ (1926–31) | ಸೈಮನ್ ಆಯೋಗ | 1927 | ಸರ್‌ಜಾನ್ ಸೈಮನ್ | 1919ರ ಭಾರತದ ಸರ್ಕಾರದ ಕಾಯಿದೆ ಬಗ್ಗೆ ಅಧ್ಯಯನ ನಡೆಸುವುದು |
| ಲಾರ್ಡ್ ಲಿನ್‌ಲಿತ್‌ಗೋ (1936–43) | ರಾಷ್ಟ್ರೀಯ ಯೋಜನಾ ಸಮಿತಿ | 1938 | ಜವಾಹರಲಾಲ್ ನೆಹರು | ಆರ್ಥಿಕ ಯೋಜನೆಗಳನ್ನು ರೂಪಿಸುವುದು |

ಹೊಸಗನ್ನಡ ಸಾಹಿತ್ಯದ ಮೊದಲ ಪ್ರೇಮಗೀತೆಗಳ ಸಂಕಲನ ಒಲುಮೆ (ತೀ.ನಂ. ಶ್ರೀ).

downloaded from: www.kpscvaani.com

ನಿರಾಕರಿಸಿದರು. ಯಾಕೆಂದರೆ, ಹಿಂದುಗಳು ಮತ್ತು ಮುಸ್ಲಿಂಮರು ಪ್ರತ್ಯೇಕ ರಾಷ್ಟ್ರವೆಂದು ಘೋಷಿಸುವನು. (1940ರಲ್ಲಿ ನಡೆದಂತಹ ಕಾಂಗ್ರೆಸ್ ಅಧಿವೇಶನದಲ್ಲಿ ಮುಸ್ಲಿಂಮರು ಮತ್ತು ಅಲ್ಪಸಂಖ್ಯಾತರಲ್ಲಾ ಅವರೊಂದು ರಾಷ್ಟ್ರವೆಂದು ಘೋಷಿಸುವರು.

– (**ಮೌಲನಾ ಅಬ್ದುಲ್ ಕಲಾಂ ಅಜಾದ್**)

**ವೆವೆಲ್ ಯೋಜನೆ ಮತ್ತು ಸಿಮ್ಲಾ ಅಧಿವೇಶನ 1945 :**

★ ಚಕ್ರವರ್ತಿ ರಾಜಗೋಪಾಲಚಾರಿ ಸೂತ್ರದ ಮೇರೆಗೆ ಗಾಂಧಿ ಜಿನ್ನಾರ ಮಾತುಕತೆ ವಿಫಲವಾದ ನಂತರ 1945ರಲ್ಲಿ ಸರ್ವಪಕ್ಷಗಳ ಸಭೆಯನ್ನು ಲಾರ್ಡ್ ವೆವೆಲ್ಸ್ ಸಿಮ್ಲಾದಲ್ಲಿ ಕರೆದನು.

**ಇದರ ಮುಖ್ಯ ಉದ್ದೇಶ :**

★ ಭಾರತ ಸಂವಿಧಾನಾತ್ಮಕ ಬಿಕ್ಕಟ್ಟನ್ನು ಪರಿಹರಿಸುವುದು.

★ ಕಾರ್ಯಕಾರಿ ಸಮಿತಿಯನ್ನು ಸಂಪೂರ್ಣವಾಗಿ ಭಾರತೀಯರಿಗೆ ವಹಿಸುವುದು.

★ ಸದನದಲ್ಲಿ ಮುಸ್ಲಿಂ ಮತ್ತು ಹಿಂದುಗಳಿಗೆ ಸಮಾನ ಪ್ರಾತಿನಿಧ್ಯಸುವಿಕೆ.

★ ಜಿನ್ನಾರ ವ್ಯತಿರಿಕ್ತ ಮನೋಭಾವದಿಂದ ಸಿಮ್ಲಾ ಅಧಿವೇಶನವು ವಿಫಲವಾಯಿತು.

**ಕ್ಯಾಬಿನೇಟ್ ಮಿಷನ್ ಯೋಜನೆ 1946 :**

★ 1945ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದ ಸಮಾನ್ಯ ಚುನಾವಣೆಯಲ್ಲಿ ಕನ್‌ಜರ್‌ವೇಟಿವ್ ಪಕ್ಷದ ವಿನ್‌ಸ್ಟನ್ ಚರ್ಚಿಲ್‌ನ್ನು ಸೋಲಿಸಿ ಲೇಬರ್ ಪಕ್ಷದ ಕ್ಲೆಮೆಂಟ್ ಆ್ಯಟ್ಲಿ ಅಧಿಕಾರಕ್ಕೆ ಬಂದನು.

★ ಇವನು ಭಾರತೀಯರ ಪರವಾಗಿದ್ದ.

★ ಭವಿಷ್ಯದ ಭಾರತಕ್ಕೆ ಸಂವಿಧಾನದವನ್ನು ರಚಿಸುವ ದೃಷ್ಟಿಯಿಂದ ತ್ರಿ ಸದಸ್ಯ ಪೀಠವನ್ನು ಭಾರತಕ್ಕೆ ಕಳುಹಿಸುವನು.

★ ಇದರ ಸದಸ್ಯರು :

1) ಸ್ಟ್ಯಾಪರ್ಡ್ ಕ್ರಿಪ್ಸ್

2) ಪಿ.ಸಿ. ಅಲೆಗ್ಸಂಡರ್

3) ಪೆತಿಕ್ ಲಾರೆನ್ಸ್

★ ಕ್ಯಾಬಿನೇಟ್ ನಿಯೋಗದ ಶಿಫಾರಸ್ಸಿನ ಮೇರೆಗೆ 1946ರಲ್ಲಿ ಮಧ್ಯಂತರ ಸರ್ಕಾರ ರಚನೆಯ ಶಿಫಾರಸು.

★ ಭಾರತದ ಸಂವಿಧಾನವು 1946ರ ಕ್ಯಾಬಿನೆಟ್ ನಿಯೋಗದ ಶಿಫಾರಸ್ಸಿನ ಮೇರೆಗೆ ಜಾರಿಗೆಬಂತು.

★ ಕ್ಯಾಬಿನೇಟ್ ನಿಯೋಗದ ಶಿಫಾರಸ್ಸಿನ ಮೇರೆಗೆ ಸಂವಿಧಾನ ರಚನಾ ಸಮಿತಿಯ ರಚನೆ.

★ ಮಧ್ಯಂತರ ಸರ್ಕಾರದಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳು ಭಾಗವಹಿಸುತ್ತವೆ.

**ಮಧ್ಯಂತರ ಸರ್ಕಾರ 1946-47 :**

★ ಮಧ್ಯಂತರ ಸರ್ಕಾರದಲ್ಲಿ ಒಟ್ಟು 14 ಸದಸ್ಯರಿದ್ದರು.

★ ಜವಹರ್‌ಲಾಲ್ ನೆಹರು – ಉಪಾಧ್ಯಕ್ಷರು, ಕಾಮನ್‌ವೆಲ್ತ್ ಮತ್ತು ವಿದೇಶಾಂಗ ಖಾತೆ

★ ವಲ್ಲಾಭಭಾಯ್‌ಪಟೇಲ್ – ಗೃಹ, ಮಾಹಿತಿ ಮತ್ತು ಪ್ರಸಾರಾಂಗ

★ ಬಲ್‌ದೇವ್ ಸಿಂಗ್ – ರಕ್ಷಣಾ ಖಾತೆ

★ ಜಾನ್ ಮಥಾಯ್ – ಕೈಗಾರಿಕಾ ಸರಬರಾಜು

★ ಚಕ್ರವರ್ತಿ ರಾಜಗೋಪಾಲಾಚಾರಿ – ಶಿಕ್ಷಣ

★ ಸಿ.ಹೆಚ್ ಬಾಬಾ – ಗಣಿ ಮತ್ತು ಇಂಧನ

★ ರಾಜೇಂದ್ರ ಪ್ರಸಾದ್ – ಆಹಾರ ಮತ್ತು ಕೃಷಿ

★ ಅರುಣಾ ಅಸಫ್ ಅಲಿ – ರೈಲ್ವೆ

★ ಜಗಜೀವನ್ ರಾಮ್ – ಕಾರ್ಮಿಕ

★ ಲಿಯಾಕತ್ ಆಲಿಖಾನ್ – ಹಣಕಾಸು

★ ಟಿ.ಟಿ. ಚುಂದ್ರಿಗಾರ್ – ವಾಣಿಜ್ಯ

★ ಅಬ್ದುಲ್‌ರಾಬಿನಿಸ್ಥಾರ್ – ಸಾರಿಗೆ

★ ಗಜನ್‌ಫರ್‌ಆಲಿಖಾನ್ – ಆರೋಗ್ಯ

★ ಜೋಗೇಂದ್ರನಾಥ್ ಮಂಡಲ್ – ಕಾನೂನು

**ನೇರ ಕಾರ್ಯಚರಣೆಯ ದಿನ :**

★ ಮುಸ್ಲಿಂ ಲೀಗ್ ಸಂವಿಧಾನ ರಚನಾ ಸಮಿತಿಯಲ್ಲಿ ಭಾಗವಹಿಸಲು ವಿರೋಧಿಸಿತು.

★ ಆಗಸ್ಟ್ 16.1946ರಂದು ಮುಸ್ಲಿಂಲೀಗ್ ನೇರ ಕಾರ್ಯಚರಣೆ ದಿನವನ್ನಾಗಿ ಆಚರಿಸಿತು.

★ ನೇರ ಕಾರ್ಯಚರಣೆ ದಿನದಂದು ಅತೀ ಹೆಚ್ಚು ಪರಿಣಾಮ ಬೀರಿದ ಪ್ರದೇಶ – ಪಶ್ಚಿಮ ಬಂಗಾಳ.

★ ಪಶ್ಚಿಮ ಬಂಗಾಳದ ಮುಸ್ಲಿಂ ಲೀಗ್ ನಾಯಕ – ಸುಹುರ ವರ್ದಿ

★ ಆಗಸ್ಟ್ 16.1946ರಂದು ಪಶ್ಚಿಮ ಬಂಗಾಳದ್ಯಂತ ಸಾರ್ವಜನಿಕ ರಜೆಯನ್ನು ಘೋಷಿಸಲಾಯಿತು.

**ಬ್ರಿಟೀಷ್ ಭಾರತದಲ್ಲಿ ಶಿಕ್ಷಣ ಅಭಿವೃದ್ಧಿ :**

★ 1781ರಲ್ಲಿ ವಾರನ್ ಹೆಸ್ಟಿಂಗ್ಸ್ ಕಲ್ಕತ್ತಾದಲ್ಲಿ ಮದರಾಸ ಸ್ಥಾಪಿಸಿದನು.

★ 1791ರಲ್ಲಿ ಜೊನಾಥನ್ ಡಂಕನ್ ಬನಾರಸದಲ್ಲಿ ಸಂಸ್ಕೃತ ಕಾಲೇಜ್‌ನ್ನು ಸ್ಥಾಪಿಸಿದನು.

★ ಭಾರತೀಯ ಸಂಸ್ಕೃತಿ ಮತ್ತು ಭಾಷೆಗಳನ್ನು ಬೋಧಿಸಲು ಲಾರ್ಡ್ ವೆಲ್ಲೆಸ್ಲಿ 1800ರಲ್ಲಿ ಕಲ್ಕತ್ತದಲ್ಲಿ ಪೋರ್ಟ್ ವಿಲಿಯಂ ಕಾಲೇಜ್‌ನ್ನು ಸ್ಥಾಪಿಸಿದನು.

★ 1813ರ ಚಾರ್ಟರ್ ಕಾಯ್ದೆಯ ಪ್ರಕಾರ ಶಿಕ್ಷಣದ ಅಭಿವೃದ್ಧಿಗೆ 1ಲಕ್ಷರೂಗಳನ್ನು ಮೀಸಲಿಡಲಾಯಿತು.

★ 1817ರಲ್ಲಿ ಡೆವಿಡ್ ಅರೆ ಕಲ್ಕತ್ತಾದಲ್ಲಿ ಹಿಂದು ಕಾಲೇಜ್‌ನ್ನು ಸ್ಥಾಪಿಸಿದನು.

★ 1835ರಲ್ಲಿ ಇಂಗ್ಲಿಷ್‌ನ್ನು ಶಿಕ್ಷಣ ಮಾಧ್ಯಮವನ್ನಾಗಿ ಬಳಸಲು ಮೆಕಾಲೆ ಆಯೋಗದ ನೇಮಕವಾಗುತ್ತದೆ.

**ವುಡ್ಸ್ ಶಿಕ್ಷಣ ಕಾಯ್ದೆ 1854 :**

★ ಈ ಶಿಕ್ಷಣ ಕಾಯ್ದೆಯನ್ನು ಮ್ಯಾಗ್ನಾ ಕಾರ್ಥಾವೆಂದು ಕರೆಯಲಾಯಿತು.

ಹೊಸಗನ್ನಡ ಮೊದಲ ಮಹಾಕಾವ್ಯ ಶ್ರೀರಾಮಾಯಣ ದರ್ಶನಂ.

**downloaded from: www.kpscvaani.com**

★ ಇದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣಕ್ಕೆ ಒತ್ತು ನೀಡಿತ್ತು.

★ ವಾರ್ನೆಕ್ಯುಲರ್ ಪ್ರಾಥಮಿಕ ಶಾಲೆಗಳು ಮತ್ತು ಆ್ಯಂಗ್ಲೋ ವಾರ್ನೆಕ್ಯೂಲರ್ ಪ್ರೌಢಶಾಲೆಗಳ ಸ್ಥಾಪನೆಯಾದವು.

★ ವುಡ್ಸ್ ಶಿಕ್ಷಣ ಕಾಯ್ದೆಯು ಮಹಿಳಾ ಶಿಕ್ಷಣಕ್ಕೆ ಪ್ರಾಮುಖ್ಯತೆಯನ್ನು ನೀಡಿತ್ತು.

★ ಹುಡ್ಸ್ ಶಿಕ್ಷಣ ಕಾಯ್ದೆ ಜಾರಿಗೆ ಬಂದಾಗ ಬ್ರಿಟೀಷ್ ಗೌರ್ನರ್ ಲಾರ್ಡ್ ಡಾಲ್ಹೌಸಿ.

★ ಶಿಕ್ಷಕರಿಗೆ ತರಬೇತಿಯನ್ನು ನೀಡಲು ತರಬೇತಿ ಸಂಸ್ಥೆಗಳನ್ನು ವುಡ್ಸ್ ಶಿಕ್ಷಣ ಕಾಯ್ದೆಯ ಪ್ರಕಾರ ತೆರೆಯಲಾಯಿತು.

★ ಈ ಕಾಯ್ದೆಯ ಪ್ರಕಾರ ರೂರ್ ಕಿ ವಿಶ್ವವಿದ್ಯಾನಿಲಯದ ಸ್ಥಾಪನೆಯಾದವು.

★ ಹುಡ್ಸ್ ಶಿಕ್ಷಣ ಕಾಯ್ದೆಯು ತಾಂತ್ರಿಕ ಶಿಕ್ಷಣಕ್ಕೆ ಒತ್ತು ನೀಡಿತ್ತು.

★ 1857ರಲ್ಲಿ ಕಲ್ಕತ್ತಾ, ಬಾಂಬೆ, ಮದ್ರಾಸ್‌ನಲ್ಲಿ ವಿಶ್ವವಿದ್ಯಾನಿಲಯಗಳ ಸ್ಥಾಪನೆಯಾದವು.

**ಯಾವ ಶಿಕ್ಷಣ ಕಾಯ್ದೆಯನ್ನು ಶಿಕ್ಷಣದ ಮ್ಯಾಗ್ನಾಕಾರ್ಥಾವೆಂದು ಕರೆಯಲಾತ್ತದೆ.**

–ವುಡ್ಸ್ ಶಿಕ್ಷಣ ಕಾಯ್ದೆ 1854

**ಪ್ರಾಥಮಿಕ ಶಿಕ್ಷಣದಲ್ಲಿ ಇಂಗ್ಲಿಷ್‌ನ್ನು ಶಿಕ್ಷಣ ಮಾಧ್ಯಮವನ್ನಾಗಿ ಬಳಸಿದ ಶಿಕ್ಷಣ ಕಾಯ್ದೆ ಯಾವುದು ?**

– ಮೆಕಾಲೆ ಶಿಕ್ಷಣ ಕಾಯ್ದೆ.

**ಹಂಟರ್ ಆಯೋಗ 1882–83** :

★ ಭಾರತದಲ್ಲಿ ಶಿಕ್ಷಣ ನೀತಿಯನ್ನು ಪುನರ್ವಿಮರ್ಶಿಸಲು 1882ರಲ್ಲಿ ಲಾರ್ಡ್ ರಿಪ್ಪನ್ ಏಕಸದಸ್ಯ ಆಯೋಗವನ್ನು ನಿರ್ಮಿಸಿದನು.

★ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿ ಮತ್ತು ವಿಸ್ತರಣೆಗೆ ಹಂಟರ್ ಆಯೋಗವು ಪ್ರಾಮುಖ್ಯತೆಯನ್ನು ನೀಡಿತು.

★ ಪ್ರೌಢಶಿಕ್ಷಣ, ತಾಂತ್ರಿಕ ಶಿಕ್ಷಣ ಮತ್ತು ಉನ್ನತ ಶಿಕ್ಷಣಕ್ಕೆ ಹಂಟರ್ ಆಯೋಗವು ಒತ್ತು ನೀಡಿತು.

★ ಮಹಿಳಾ ಶಿಕ್ಷಣದ ಅಭಿವೃದ್ಧಿಗೆ ವಿಶೇಷ ಪ್ರಾಮುಖ್ಯತೆಯನ್ನು ನೀಡಲು ಸರ್ಕಾರಕ್ಕೆ ಶಿಫಾರಸ್ಸನ್ನು ಸಲ್ಲಿಸಿತು.

★ 1882ರಲ್ಲಿ ಪಂಜಾಬ್ ವಿಶ್ವವಿದ್ಯಾನಿಲಯದ ಸ್ಥಾಪನೆಯಾಗುತ್ತದೆ.

★ 1887ರಲ್ಲಿ ಅಲಹಾಬಾದ್ ವಿಶ್ವವಿದ್ಯಾನಿಲಯದ ಸ್ಥಾಪನೆಯಾಗುತ್ತದೆ.

**ಭಾರತೀಯ ವಿಶ್ವವಿದ್ಯಾನಿಲಯ ಕಾಯ್ದೆ 1904**:

★ 1904ರ ವಿಶ್ವವಿದ್ಯಾನಿಲಯದ ಕಾಯ್ದೆಯು ಲಾರ್ಡ್ ಕರ್ಜನ್ ಕಾಲದಲ್ಲಿ ಜಾರಿಯಾಯಿತು.

★ ಈ ಕಾಯ್ದೆಯು ಥಾಮಸ್ ರ‍್ಯಾಲೀಗ್ ಆಯೋಗದ ಶಿಫಾರಸ್ಸಿನ ಮೇರೆಗೆ ಅಸ್ತಿತ್ವಕ್ಕೆ ಬಂದಿತು.

★ ರ‍್ಯಾಲೀಗ್ ಆಯೋಗದಲ್ಲಿ ಇದ್ದ ಏಕೈಕ ಭಾರತೀಯ ಸದಸ್ಯ ಗುರುದಾಸ್ ಬ್ಯಾನರ್ಜಿ.

★ ರ‍್ಯಾಲೀಗ್ ಆಯೋಗವು ವಿಶ್ವವಿದ್ಯಾನಿಲಯ ಶಿಕ್ಷಣಕ್ಕೆ ಪ್ರಾಮುಖ್ಯತೆಯನ್ನು ನೀಡಿತ್ತು.

★ ಖಾಸಗಿ ಕಾಲೇಜು ವಿಶ್ವವಿದ್ಯಾನಿಲಯಗಳ ನಿಯಂತ್ರಣಕ್ಕೆ ಒಳಪಡುತ್ತವೆ.

**ಥಾಮಸ್ ರ‍್ಯಾಲೀಗ್ ಆಯೋಗದಲ್ಲಿ ಏಕೈಕ ಭಾರತೀಯ ಸದಸ್ಯ ಯಾರು ?**

– ಗುರುದಾಸ್ ಬ್ಯಾನರ್ಜಿ.

**ಸ್ಯಾಡ್ಲರ್ ವಿಶ್ವವಿದ್ಯಾನಿಲಯದ ಆಯೋಗ 1917 –19** :

★ ಕಲ್ಕತ್ತಾ ವಿಶ್ವವಿದ್ಯಾನಿಲಯದ ಕಾರ್ಯ ಕಲಾಪಗಳನ್ನು ವೀಕ್ಷಿಸಲು ಲಾರ್ಡ್ ಚೆಲ್ಮ್‌ಫರ್ಡ್ ಸ್ಯಾಡ್ಲರ್ ಆಯೋಗವನ್ನು ನೇಮಿಸಿದನು.

★ ಸ್ಯಾಡ್ಲರ್ ಆಯೋಗದಲ್ಲಿ ಇದ್ದ ಭಾರತೀಯ ಸದಸ್ಯರು ಅಶುಥೋಶ್ ಮುಖರ್ಜಿ ಮತ್ತು ಜಿಯಾಹುದ್ದಿನ್ ಅಮದ್.

★ ಸ್ಯಾಡ್ಲರ್ ಆಯೋಗವು ಉನ್ನತ ಶಿಕ್ಷಣದ ಅಭಿವೃದ್ಧಿಗೆ ಪ್ರಾಮುಖ್ಯತೆಯನ್ನು ನೀಡುತ್ತದೆ.

★ ಈ ಆಯೋಗವು ಮಹಿಳಾ ಶಿಕ್ಷಣಕ್ಕೆ ಒತ್ತು ನೀಡುತ್ತದೆ.

★ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯಗಳು ವಸತಿ ಸೌಲಭ್ಯವನ್ನು ನೀಡಬೇಕೆಂದು ಸರ್ಕಾರಕ್ಕೆ ಶಿಫಾರಸ್ಸನ್ನು ಸಲ್ಲಿಸಿತು.

**ಹರ್ತಗ್ ಸಮಿತಿ 1929** :

★ ಹರ್ತಗ್ ಸಮಿತಿಯು ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಪ್ರಾಮುಖ್ಯತೆಯನ್ನು ನೀಡಿತು.

★ ವಿಶ್ವವಿದ್ಯಾನಿಲಯಗಳ ವ್ಯಾವಹರ ಅಭಿವೃದ್ಧಿಗೆ ಒತ್ತು ನೀಡುತ್ತದೆ.

**ಮೂಲಭೂತ ಶಿಕ್ಷಣದ ಅಭಿವೃದ್ಧಿಗೆ ವಾರ್ದಾ ಯೋಜನೆ 1937**:

★ ಮೂಲಭೂತ ಶಿಕ್ಷಣವನ್ನು ಅಭಿವೃದ್ಧಿ ಪಡಿಸಲು ಮಹಾತ್ಮ ಗಾಂಧೀಜಿ 1937ರಲ್ಲಿ ತಮ್ಮ ಹರಿಜನ ಪತ್ರಿಕೆಯಲ್ಲಿ ಹಲವಾರು ಅಂಕಣಗಳನ್ನು ಮಾಡಿದ್ದರು.

★ ಬೇರೆ ಬೇರೆ ವಿಷಯಗಳಿಗೆ ಸಂಪೂರ್ಣವಾದಂತಹ ವಿಷಯ ಪಟ್ಟಿಯನ್ನು ಜಾಕಿರ್ ಹುಸೇನ್ ಸಮಿತಿಯು ರಚಿಸಿತ್ತು.

**ಸಾರ್ಜೆಂಟ್ ಶಿಕ್ಷಣ ಯೋಜನೆ 1944** :

★ 6ರಿಂದ 11 ಮಕ್ಕಳಿಗೆ ಸಾರ್ವತ್ರಿಕ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಲು ಪ್ರಾಥಮಿಕ ಮತ್ತು ಪ್ರೌಢಶಾಲೆಯನ್ನು ಸ್ಥಾಪಿಸಲಿಕ್ಕೆ ಒತ್ತು ನೀಡಿತ್ತು.

★ ಈ ಯೋಜನೆಯು ಶಾಲಾ ಕಾಲಾವಧಿಯನ್ನು 6 ವರ್ಷಕ್ಕೆ ನಿಗದಿಪಡಿಸಿತು.

**ರಾಧಾಕೃಷ್ಣನ್ ಆಯೋಗ 1948 – 49** :

★ ಭಾರತಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ರಚನೆಯಾದ ಮೊದಲ ಆಯೋಗ.

★ ಈ ಆಯೋಗವು ಸರ್ವಪಲ್ಲಿ ರಾಧಾಕೃಷ್ಣನ್ ನೇತೃತ್ವದಲ್ಲಿ ರಚನೆಯಾಯಿತು.

★ ವಿಶ್ವವಿದ್ಯಾನಿಲಯ ಶಿಕ್ಷಣ ಅಭಿವೃದ್ಧಿಯ ವರದಿಯನ್ನು ತಯಾರಿಸಿತು.

★ ಇದು 1949ರಲ್ಲಿ ಸರ್ಕಾರಕ್ಕೆ ಶಿಫಾರಸ್ಸನ್ನು ಸಲ್ಲಿಸಿತು. ಅವು ಯಾವುವೆಂದರೆ :

1) ಹನ್ನೆರಡು ವರ್ಷಗಳ ಪದವಿ ಪೂರ್ವ ಶಿಕ್ಷಣ
2) ಈ ಆಯೋಗದ ಮುಖ್ಯ ಉದ್ದೇಶ, ಉನ್ನತ ಶಿಕ್ಷಣವನ್ನು 3 ಹಂತಗಳಲ್ಲಿ ನೀಡುವುದು.

ಕನ್ನಡದ ಮೊಟ್ಟಮೊದಲ ಪಾಕಶಾಸ್ತ್ರ ಕಾವ್ಯ ಸೂಪಶಾಸ್ತ್ರ.

downloaded from: www.kpscvaani.com

(a) ಸಾಮಾನ್ಯ ಶಿಕ್ಷಣ

(b) ಉದಾರೀಕರಣ ಶಿಕ್ಷಣ

(c) ವೃತ್ತಿಪರ ಶಿಕ್ಷಣ

★ ವಿಶ್ವವಿದ್ಯಾನಿಲಯ ಶಿಕ್ಷಣವನ್ನು ಸಮವರ್ತಿ ಪಟ್ಟಿಯಲ್ಲಿ ಸೇರಿಸುವುದು.

★ ವಿಶ್ವವಿದ್ಯಾನಿಲಯ ಶಿಕ್ಷಕರ ವೇತನವನ್ನು ಹೆಚ್ಚಿಸುವುದು.

★ ದೇಶದಲ್ಲಿ ವಿಶ್ವವಿದ್ಯಾನಿಲಯ ಶಿಕ್ಷಣದ ಉಸ್ತುವಾರಿಯನ್ನು ನೋಡಿಕೊಳ್ಳಲು, ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗವನ್ನು ನಿರ್ಮಿಸುವುದು.

**ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗ 1953 :**

★ ರಾಧಾಕೃಷ್ಣನ್ ಆಯೋಗದ ಶಿಫಾರಸ್ಸಿನ ಮೇರೆಗೆ 1953ರಲ್ಲಿ ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗವು ರಚನೆಯಾಯಿತು.

★ 1956ರಲ್ಲಿ ಸ್ವಾಯತ್ತ ಸ್ಥಾನಮಾನವನ್ನು ಗಳಿಸಿತು.

★ ದೇಶದಲ್ಲಿ ವಿಶ್ವವಿದ್ಯಾನಿಲಯಗಳ ಉಸ್ತುವಾರಿಯನ್ನು ಈ ಆಯೋಗವು ನೋಡಿಕೊಳ್ಳುತ್ತದೆ.

**ಕೊಠಾರಿ ಆಯೋಗ 1964 –66 :**

★ 1964ರಲ್ಲಿ ಶಿಕ್ಷಣವನ್ನು ಅಭಿವೃದ್ಧಿ ಪಡಿಸಲು ಡಾ. ಡಿ.ಎಸ್. ಕೊಠಾರಿ ನೇತೃತ್ವದಲ್ಲಿ ಶಿಕ್ಷಣ ಆಯೋಗದ ರಚನೆಯಾಗುತ್ತದೆ.

★ ಈ ಆಯೋಗವು ಇಂಗ್ಲೆಂಡ್, ಅಮೇರಿಕಾ, ರಷ್ಯಾ ಮುಂತಾದ ದೇಶಗಳ ಪರಿಣಿತರನ್ನು ಒಳಗೊಂಡಿತ್ತು.

★ ಶೈಕ್ಷಣಿಕ ಸಂಶೋಧನೆಯ ಮುಖಾಂತರ ದೇಶದ ಶಿಕ್ಷಣವನ್ನು ಅಭಿವೃದ್ಧಿ ಪಡಿಸಲು ಸಾಧ್ಯವೆಂದು ಶಿಫಾರಸ್ಸನ್ನು ಸಲ್ಲಿಸಿತ್ತು.

**ಕೆಳ ಜಾತಿಯ ಚಳುವಳಿಗಳು** (Lower Caste Movements) :

**ನಾಡಾರ್ ಚಳುವಳಿ :**

★ ತಮಿಳುನಾಡಿನಲ್ಲಿ ಪ್ರಾರಂಭವಾಯಿತು. ಇದು ಸಂಸ್ಕೃತಿಕರಣಕ್ಕೆ ಒಂದು ಉದಾಹರಣೆ.

★ ಕ್ಷತ್ರಿಯರ ಸ್ಥಾನಮಾನವನ್ನು ಗಳಿಸಲು ಷಹನಾ ಎನ್ನುವ (ಹೆಂಡ ತಯಾರಿಸುವ ಅಸ್ಪೃಷ್ಯ ಜನಾಂಗವು ಚಳುವಳಿಯನ್ನು ಪ್ರಾರಂಭಿಸಿತು.

★ ಇವರು ತಮಿಳುನಾಡಿನ ತಿರುನೇಲ್‌ವೆಲ್ಲಿಯಲ್ಲಿ 1859ರಲ್ಲಿ ದೇವಾಲಯ ಪ್ರವೇಶ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದರು.

★ 1910ರಲ್ಲಿ ಶಿಕ್ಷಣ ಮತ್ತು ಸಾಮಾಜಿಕ ಕಲ್ಯಾಣಕ್ಕಾಗಿ ನಾಡಾರ್ ಮಹಾಜನ ಸಂಘವನ್ನು ಸ್ಥಾಪಿಸಿದ್ದರು.

**ಜಸ್ಟಿಸ್ ಪಕ್ಷ:**

★ ಇದರ ನಾಯಕರು ಪಿ. ತ್ಯಾಗರಾಜ ಚೆಟ್ಟಿ, ಟಿ.ಎನ್. ನಾಯರ್, ಸಿ.ಎನ್. ಮೊದಲಿಯರ್ ಈ ಚಳುವಳಿಯು 1917ರಲ್ಲಿ ಪ್ರಾರಂಭವಾಯಿತು.

★ ಈ ಪಕ್ಷವು ಬ್ರಾಹ್ಮಣರ ಶ್ರೇಷ್ಠತೆಯ ವಿರುದ್ಧ ಹೋರಾಡಲು ಪ್ರಾರಂಭವಾಗುವುದು.

★ 1937ರಲ್ಲಿ ಇ.ವಿ. ರಾಮಸ್ವಾಮಿ ನಾಯ್ಕರ್ ಜಸ್ಟಿಸ್ ಪಕ್ಷದ ಅಧ್ಯಕ್ಷರಾಗಿ ನೇಮಕಗೊಂಡರು.

**ಸೆಲ್ಫ್ ರೆಸ್‌ಪೆಕ್ಟ್ ಚಳುವಳಿ** (Self Respect Movement):

★ ಇದು 1920ರಲ್ಲಿ ಇ.ವಿ. ರಾಮಸ್ವಾಮಿ ನಾಯ್ಕರ್ ನೇತೃತ್ವದಲ್ಲಿ ಪ್ರಾರಂಭವಾಯಿತು.

★ ಇವರಿಗಿದ್ದ ಬಿರುದು ಪೆರಿಯಾರ್.

★ ಕುಡಿ ಅರಸು ಎನ್ನುವ ಪತ್ರಿಕೆಯನ್ನು ಹೊರಡಿಸಿದ್ದರು.

★ ಈ ಚಳುವಳಿಯು ಬ್ರಾಹ್ಮಣರ ಸಂಸ್ಕೃತಿಯನ್ನು ವಿರೋಧಿಸಿತು.

**ಶ್ರೀ ನಾರಾಯಣ ಧರ್ಮ ಪರಿಪಾಲನ ಸಭಾ** (Sri Narayana Dharma Paripalana Sabha) :

★ ಇದು 1854ರಲ್ಲಿ ಸ್ಥಾಪನೆಯಾಯಿತು.

★ ಇವರು ಎಜವ ಚಳುವಳಿಯ ನಾಯಕ.

★ ಇದರ ಮುಖ್ಯ ಉದ್ದೇಶ ಅಸ್ಪೃಶ್ಯ ತೆಯನ್ನು ಹೋಗಲಾಡಿಸುವುದಾಗಿತ್ತು.

★ ನಾರಾಯಣ ಗುರು ಒಂದು ಧರ್ಮ, ಒಂದು ಜಾತಿ, ಒಂದು ದೇವರು ಎನ್ನುವ ಘೋಷವಾಕ್ಯವನ್ನು ನೀಡಿದ.

**ನಾಯರ್ ಚಳುವಳಿ :**

★ ನಂಬೂದ್ರಿ ಬ್ರಾಹ್ಮಣರ ಶ್ರೇಷ್ಠತೆಯ ವಿರುದ್ಧ ಹೋರಾಡಲು 19ನೇ ಶತಮಾನದಲ್ಲಿ ಪ್ರಾರಂಭವಾಯಿತು.

★ 1891ರಲ್ಲಿ ಸಿ.ವಿ. ರಾಮನ್ ಪಿಳ್ಳೈ, ಮಳಯಾಲಿ ಮೆಮೋರಿಯಲ್ ಎಂಬ ಸಂಘಟನೆಯನ್ನು ಸ್ಥಾಪಿಸಿದರು.

★ ಇವರು ಬರೆದ ಕಾದಂಬರಿ ಮಾರ್ತಂಡ ವರ್ಮ.

**ಸತ್ಯಶೋಧಕ ಸಮಾಜ 1827 – 90 :**

★ ಪಶ್ಚಿಮ ಭಾರತದಲ್ಲಿ ಕೆಳ ಜಾತಿಯವರ ಪರವಾಗಿ ಜ್ಯೋತಿ ಬಾಪುಲೆ ಈ ಚಳುವಳಿಯನ್ನು ಪ್ರಾರಂಭಿಸಿದರು.

★ ಇವರು 1927ರಲ್ಲಿ ಪುನಾದಲ್ಲಿ ಮಾಲಿ ಜನಾಂಗದ ಸದಸ್ಯನಾಗಿ ಜನಿಸಿದ.

★ 1873ರಲ್ಲಿ ಜ್ಯೋತಿಬಾ ಪುಲೆ ಹಿಂದುಳಿದ ವರ್ಗದವರಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಲು ಸತ್ಯಶೋಧಕ್ ಸಮಾಜ ಎನ್ನುವ ಸಂಸ್ಥೆಯನ್ನು ಸ್ಥಾಪಿಸಿದರು.

★ ಇವರ ಕೃತಿಗಳು. ಧರ್ಮ ತೃತೀಯ ರತ್ನ ಇಶಾರಾ, (Warning) ಮತ್ತು ಲೈಫ್ ಆಫ್ ಶಿವಾಜಿ (Life of Shivaji).

**ಬಿ.ಆರ್. ಅಂಬೇಡ್ಕರ್ 1891–56 :**

★ ಏಪ್ರಿಲ್ 14, 1891ರಂದು ಮಹಾರ್ ಎಂಬ ಜನಾಂಗದಲ್ಲಿ ಮಧ್ಯ ಪ್ರದೇಶದ ಮೌವ್‌ನಲ್ಲಿ ಜನಿಸಿದ.

★ 1924ರಲ್ಲಿ ಅಸ್ಪೃಶ್ಯ ಪರವಾಗಿ ಹೋರಾಡಲು ಬಹಿಷ್ಕೃತ ಹಿತಕಾರಿಣಿ ಸಭಾವನ್ನು ಸ್ಥಾಪಿಸುವರು.

★ ಇವರು ಸಮತಾಸಭಾವನ್ನು ಸ್ಥಾಪಿಸಿದರು.

★ ಅಂಬೇಡ್ಕರ್‌ರವರು ಬರೆದ ಕೃತಿಗಳು. ಮೂಕನಾಯಕ್, ಜನತಾ, ಆ್ಯನಿಲೇಷನ್ ಆಫ್ ಕಾಸ್ಟ್

ಕನ್ನಡದ ಮೊದಲ ಕಾದಂಬರಿಗಾರ್ತಿ ತಿರುಮಲಾಂಬ.

downloaded from: www.kpscvaani.com

| ಭಾರತದಲ್ಲಿ ಬುಡಕಟ್ಟು ಚಳುವಳಿಗಳು | | | |
|---|---|---|---|
| **ಬುಡಕಟ್ಟು ಜನಾಂಗದ ಹೆಸರು** | **ಪರಿಣಾಮ ಬೀರಿದ ಪ್ರದೇಶ** | **ವರ್ಷ** | **ನಾಯಕರು** |
| ಚೌರ್‍ಸ್ | ನನ್‌ಭಮ್ ಮತ್ತು ಬಾರಾಭಮ್ | 1768–1832 | ----- |
| ಬಿಲ್ಸ್ | ಕಾಂದೇಶ್ | 1818–1848 | ----- |
| ಹೋಸ್ | ಸಿಂಬೂಮ್ ಮತ್ತು ಚೋಟನಾಗಪುರ್ | 1820–1832 | ----- |
| ಕೋಲ್ಸ್ | ಛೋಟಾನಾಗ್‌ಪುರ್ | 1831–1832 | ಬುದ್ದೋಭಗತ್ |
| ಕೊಯಾಸ್ | ರಂಪಾ ಪ್ರದೇಶ (ಆಂಧ್ರಪ್ರದೇಶ) | 1840–1924 | ಅಲ್ಲೂರಿ ಸೀತಾರಾಮ್ ರಾಜ್ |
| ಕೊಂಡ್ಸ್ | ಕೊಂಡಾಮಾಲ್ಸ್ (ಒರಿಸ್ಸಾ) | 1846–1914 | ಚಕ್ರದೇಸಾಯಿ |
| ಸಂತಾಲ್ಸ್ | ರಾಜಮಹಲ್ ಪರ್ವತ (ಬಿಹಾರ) | 1855–1856 | ಸಿದ್ದು ಮತ್ತು ಕನ್ನು |
| ನಾಯಕ್‌ದಾಸ್ | ಪಂಚಮಹಲ್ಸ್ ( ಗುಜರಾತ್) | 1858–1868 | ರುಪ್‌ಸಿಂಗ್ ಜೋರಿಯಾ ಭಗತ್ |
| ಕಚಾನಾಗ | ಅಸ್ಸಾಮ್ | 1882– | ಸಂಬುಧನ್ |
| ಬಿಲ್ಸ್ | ಬನ್ಸ್‌ವಾರ ಮತ್ತು ಡುಂಗಾಪುರ್ (ರಾಜಸ್ಥಾನ್) | 1913 | ಗೋವಿಂದ್ ಗುರು |
| ಖಾಸಿಸ್ | ಖಾಸಿ ಪರ್ವತ (ಅಸ್ಸಾಂ ಮತ್ತು ಮೇಘಾಲಯ) | 1829–1832 | ತೀರತ್ ಸಿಂಗ್ ಮತ್ತು ಬಾರ್ಮಾನಿಕ್ |
| ಒರನ್ಸ್ | ಚೋಟಾನಾಗ್‌ಪುರ್ | 1914–15 | ಜಾತ್ರಭಗತ್ |
| ಕುಕಿಸ್ | ಬಂಡಿಪುರ | 1917–19 | ರಾಣೀಗೈಡಿಲು |
| ಚಿಂಚುಸ್ | ನಲಮಲ್ಲ ಪರ್ವತ | 1921–22 | ಹನಮಂತು |

| ಸಾಮಾಜಿಕ ಸಂಘಟನೆಗಳು | | | |
|---|---|---|---|
| **ಸಂಘಟನೆಗಳು** | **ಸ್ಥಾಪಕರು** | **ವರ್ಷ** | **ಸ್ಥಳ** |
| ಲ್ಯಾಂಡ್ ಒಲ್ಡರ್ ಸೊಸೈಟಿ | ದ್ವಾರಕಾನಾಥ ಠಾಗೂರ್ | 1830 | ಕಲ್ಕತ್ತಾ |
| ಬ್ರಿಟೀಷ್ ಇಂಡಿಯಾ ಸೊಸೈಟಿ | ವಿಲಿಯಂ ಆಡ್ಯಾಮ್ | 1839 | ಲಂಡನ್ |
| ಬೆಂಗಾಳ್ ಬ್ರಿಟೀಷ್ ಇಂಡಿಯಾ ಸೊಸೈಟಿ | ----- | 1843 | ಕಲ್ಕತ್ತಾ |
| ಬ್ರಿಟೀಷ್ ಇಂಡಿಯಾ ಅಸೋಷಿಯೇಷನ್ | ದೇವೇಂದ್ರನಾಥ್ ಠಾಗೂರ್ | 1851 | ಕಲ್ಕತ್ತಾ |
| ಮದ್ರಾಸ್ ನೇಟಿವ್ ಅಸೋಷಿಯೇಷನ್ | ----- | 1852 | ಮದ್ರಾಸ್ |
| ಬಾಂಬೆ ಅಸೋಷಿಯೇಷನ್ | ಜಗನ್ನಾಥ್ ಶಂಕರ್ ಶೇಟ್ | 1852 | ಮುಂಬೈ |
| ಈಸ್ಟ್ ಇಂಡಿಯಾ ಅಸೋಷಿಯೇಷನ್ | ದಾದಾಬಾಯ್ ನವ್ರೋಜಿ | 1866 | ಲಂಡನ್ |
| ನ್ಯಾಷನಲ್ ಇಂಡಿಯಾ ಅಸೋಷಿಯೇಷನ್ | ಮೆರಿಕಾರ್ಪೆಂಟರ್ | 1867 | ಲಂಡನ್ |
| ಪೂನಾ ಸಾರ್ವಜನಿಕ ಸಭಾ | ಚಿಪುರ್, ಜಿ.ವಿ. ಜೋಷಿ , ಎಂ.ಜಿ. ರಾನಡೆ | 1870 | ಪೂನಾ |
| ಇಂಡಿಯನ್ ಸೊಸೈಟಿ | ಆನಂದ್ ಮೋಹನ್ ಬೋಸ್ | 1872 | ಲಂಡನ್ |
| ಇಂಡಿಯನ್ ಅಸೋಷಿಯೇಷನ್ | ಆನಂದ್ ಮೋಹನ್ ಬೋಸ್ ಮತ್ತು ಎಸ್.ಎನ್. ಬ್ಯಾನರ್ಜಿ | 1876 | ಕಲ್ಕತ್ತಾ |
| ಮದ್ರಾಸ್ ಮಹಾಜನ ಸಭಾ | ಜಿ.ಎಸ್. ಅಯ್ಯರ್, ವೀರರಾಘವಾಚಾರಿ, ಆನಂದ ಚಾರ್ಲು | 1884 | ಮದ್ರಾಸ್ |
| ಬಾಂಬೆ ಪ್ರೆಸಿಡೆನ್ಸಿ ಅಸೋಷಿಯೇಷನ್ | ಫಿರೋಷಾ ಮೆಹ್ತಾ, ಕೆ.ಟಿ. ತೆಲಾಂಗ್, ಬದುರ್‌ದ್ದೀನ್ ತ್ಯಾಬ್ಜಿ | 1885 | ಮುಂಬೈ |

ಕನ್ನಡದ ಮೊದಲ ವೀರಗಲ್ಲು ತಮಟಕಲ್ಲು.

**downloaded from: www.kpscvaani.com**

**ಬಿ.ಆರ್. ಅಂಬೇಡ್ಕರ್‌ರವರ ಜೀವನ ಚರಿತ್ರೆ** :

ಅಂಬೇಡ್ಕರ್ ಮಹಾರಾಷ್ಟ್ರದ ರತ್ನಾಗಿರಿ ಜಿಲ್ಲೆಯ ಅಂಬಿವಾಡ ಗ್ರಾಮದ ರಾಮ್‌ಜಿ ಸಕ್ಪಲ್‌ರವರ ಪುತ್ರ. 1920ರಲ್ಲಿ ಉನ್ನತ ಶಿಕ್ಷಣ ಪಡೆಯಲು ಲಂಡನ್‌ಗೆ ಪ್ರಯಾಣ ಬೆಳೆಸಿದ. 1922ರಲ್ಲಿ ಕಾನೂನು ಪದವಿ ಪಡೆದು ಭಾರತಕ್ಕೆ ಹಿಂದಿರುಗಿದ. ಅಂಬೇಡ್ಕರ್‌ರವರ ಮೊದಲ ಪತ್ನಿ ರಮಾಭಾಯಿ, ಇವರು 1935ರಲ್ಲಿನಿಧನ ಹೊಂದಿದರು. ಆನಂತರ ಸಾರಸ್ವಾತ ಬ್ರಾಹ್ಮಣ ಕುಟುಂಬಕ್ಕೆ ಸೇರಿದ ಶಾರಧಾ ಕಬೀರ್‌ನ್ನು ವಿವಾಹವಾದರು. ಇವರಿಗೆ ಸವಿತಾ ಅಂಬೇಡ್ಕರ್ ಎಂಬುದಾಗಿ ನಾಮಕರಣ ಮಾಡಲಾಡಿದ. 1951ರಲ್ಲಿ ಅಂಬೇಡ್ಕರ್ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವರು. 1950 (ಶ್ರೀಲಂಕಾ), 1954 (ಬರ್ಮಾ), 1956 (ನೇಪಾಳ),ನಲ್ಲಿ ನಡೆದ ಬೌದ್ಧಧರ್ಮ ಸಮ್ಮೇಳನದಲ್ಲಿ ಭಾಗವಹಿಸಿದರು.ಅಕ್ಟೋಬರ್ 14.1956ರಲ್ಲಿ ನಾಗ್‌ಪುರ್‌ದಲ್ಲಿ ನಡೆದ ಸಮ್ಮೇಳನದಲ್ಲಿ ತನ್ನ ಪತ್ನಿ ಬೌದ್ಧಧರ್ಮ ಸೇರಿದ 16. ಡಿಸೆಂಬರ್ 1956ರಂದು ಕೊನೆಯುಸಿರು ಎಳೆದರು. ತಮ್ಮ ಜೀವನವನ್ನು ಸಾಮಾಜಿಕ ನ್ಯಾಯ, ಸಮಾನತೆ ಅಸ್ಪೃಶ್ಯತೆಯ ಪರವಾಗಿ ಹೋರಾಡಲು ಅರ್ಪಿಸಿದ.

**ಕಲ್ಕತ್ತದಿಂದ ದೆಹಲಿಗೆ ರಾಜಧಾನಿಯು ವರ್ಗಾವಣೆಯಾದಾಗ ಭಾರತದಲ್ಲಿ ಬ್ರಿಟೀಷ್ ಗೌರ್ನರ್ ಜನರಲ್ ಯಾರು ?**

– ಲಾರ್ಡ್ ಅರ್ಡಿಂಚ್

**ಭಾರತದ ಸ್ವಾತಂತ್ರ್ಯ ಚಳುವಳಿಯ ನಾಯಕರು** :

**ಮೌಲಾನಾ ಮೊಹಮ್ಮದ್ ಆಲಿ** :

★ ಇವರು ಇಂಗ್ಲಿಷ್ ವಾರಪತ್ರಿಕೆ, ಕಾಮ್ರೆಡ್‌ನ ಸಂಪಾದಕರು.

★ ಕಿಲಾಫತ್ ಮತ್ತು ಅಸಹಕಾರ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

★ ಉರ್ದು ಪತ್ರಿಕೆ ಹಮ್‌ಧರ್ದ್ ಸಂಪಾದಕರು.

**ಸಿ.ಎಫ್. ಅಂಡ್ರಿವ್ಸ್** :

★ ಇವರಿಗೆ ಮಹಾತ್ಮ ಗಾಂಧೀಜಿ 'ದೀನ್ ಬಂಧು' ಎಂಬ ಬಿರುದನ್ನು ನೀಡಿದರು.

★ ಇವರು ಕ್ಯಾಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ತಮ್ಮ ಶಿಕ್ಷಣವನ್ನು ಪಡೆದರು.

★ ಗೋಖಲೆಯವರ ಪ್ರಭಾವಕ್ಕೊಳಗಾಗಿ ಅಸಮಾನತೆಯ ವಿರುದ್ಧ ಹೋರಾಡಲು 1913ರಲ್ಲಿ ದಕ್ಷಿಣಾ ಆಫ್ರಿಕಾಕ್ಕೆ ಹೋಗಿದ್ದರು.

**ಅರುಣಾ ಆಸಫ್ ಆಲಿ** :

★ ಇವರು ಮುಂಬೈನ ಪ್ರಸಿದ್ಧ ರಾಷ್ಟ್ರೀಯ ನಾಯಕರು.

★ ನರೇಂದ್ರ ದೇವ್, ಅಚ್ಚುತ ಪಾತ್‌ವರ್ಧನ್, ಮತ್ತು ಜಯಪ್ರಕಾಶ್ ನಾರಾಯಣ್ ಜೊತೆ ಸೇರಿ 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭೂಗತ ಚಟುವಟಿಕೆಗಳನ್ನು ಪ್ರಾರಂಭಿಸಿದ್ದರು.

★ 1997ರಲ್ಲಿ ಭಾರತ ರತ್ನವನ್ನು ಮರಣೋತ್ತರವಾಗಿ ನೀಡಲಾಯಿತು.

**ಚಂದ್ರಶೇಖರ್ ಆಜಾದ್** :

★ ಉತ್ತರ ಪ್ರದೇಶದ ಝೂನ್ಸಿಯ ಪ್ರಸಿದ್ಧ ಕ್ರಾಂತಿಕಾರಿ ನಾಯಕರು.

★ ಇವರು ಹಿಂದೂಸ್ತಾನ್ ಸೋಷಲಿಸ್ಟಿಕ್ ರಿಪಬ್ಲಿಕನ್ ಅಸೋಸಿಯೇಷನ್ ಸ್ಥಾಪಿಸಿದರು.

★ ಕಾಕೋರಿ ದುರಂತ ಮತ್ತು ಸೌಂಡರ್ಸ್ ಹತ್ತಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು.

★ 1931ರಲ್ಲಿ ಆಲಹಬಾದಿನ ಆಲ್‌ಫ್ರೆಡ್ ಪಾರ್ಕಿನಲ್ಲಿ ಪೊಲೀಸ ಎನ್‌ಕೌಂಟರ್‌ನಿಂದ ಹತ್ಯೆಯಾದರು.

**ಅಬ್ದುಲ್ ಕಲಾಂ ಅಜಾದ್** :

★ ಪ್ರಸಿದ್ದ ಗಾಂಧಿವಾದಿ.

★ 1940–46ರವರೆಗೆ ಕಾಂಗ್ರೆಸ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವರು.

★ ಇವರು ಬರೆದ ನಿಯತಕಾಲಿಕೆ ಅಲ್‌ಇಲಾಲ್.

★ ಸ್ವಾತಂತ್ರ್ಯ ಭಾರತದ ಮೊಟ್ಟಮೊದಲ ಶಿಕ್ಷಣ ಸಚಿವ.

★ ಇವರು ಬರೆದ ಪುಸ್ತಕ ಇಂಡಿಯಾ ವಿನ್ಸ್ ಫ್ರಿಡಮ್

**ಚಿತ್ರರಂಜನ್ ದಾಸ್** :

★ ಇವರು ದೇಶಬಂಧು ಎಂದು ಕರೆಯುವರು.

★ ಇವರು ಬಂಗಾಳದ ಪ್ರಸಿದ್ಧ ನಾಯಕರು.

★ 1922ರಲ್ಲಿ ಮೋತಿಲಾಲ್ ನೆಹರುರವರ ಜೊತೆ ಸೇರಿ ಸ್ವರಾಜ್ ಪಕ್ಷವನ್ನು ಸ್ಥಾಪಿಸುವರು.

★ 1922ರಲ್ಲಿ ಗಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿರುವರು.

**ರಾಮ್‌ಮನೋಹರ್ ಲಿಯಿಯಾ** :

★ 1910ರಲ್ಲಿ ಫೈಜಾಬಾದ್‌ನಲ್ಲಿ ಜನಿಸಿದರು.

★ ಬರ್ಲಿಂಗ್ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿಯನ್ನು ಮಹಾತ್ಮಗಾಂಧೀಜಿಯವರ ಚಳುವಳಿಯನ್ನು ಸೇರಿದರು.

★ ಇವರು ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷದ ಸ್ಥಾಪಕ ಸದಸ್ಯರು.

**ದೀನ ಬಂಧು ಮಿತ್ರ** :

★ ಇವರು ನೀಲ ದರ್ಪಣವನ್ನು ಬರೆದರು.

★ ತಮ್ಮ ನೀಲ ದರ್ಪಣದಲ್ಲಿ ಇಂಡಿಗೋ ಚಳುವಳಿಯನ್ನು ವಿವರಿಸಲಾಗುವುದು.

★ ಇವರು ಬರೆದ ಇತರ ಕೃತಿಗಳು :

1) ನಬೀನ್ ತಪಸ್ವಿನ್

2) ಲೀಲಾವತಿ

3) ಜಮಾಯ್ ಬಾರಿಕ್

**ಸಿ. ಶಂಕರನ್ ನಾಯರ್** :

★ 1907ರಲ್ಲಿ ಮೊಟ್ಟ ಮೊದಲ ಬಾರಿಗೆ ಮದ್ರಾಸ್‌ನ ಅಡ್ವಕೇಟ್ ಜನರಲ್ ಆಗಿ ನೇಮಕವಾಗುವರು.

★ ಜಲಿಯನ್ ವಾಲ್‌ಬಾಗ್ ಹಂತ್ಯಾಕಾಂಡದ ನಂತರ ವೈಸರಾಯ್ ಕಾರ್ಯಕಾರಿ ಸಮಿತಿಗೆ ರಾಜೀನಾಮೆ ನೀಡುವರು.

**ಇತಿಹಾಸ** ಎಂಬುದು ಗತಕಾಲದ ಘಟನೆಗಳ ಸಾಮಾಜಿಕ ದಾಖಲೆಯಾಗಿರುತ್ತದೆ. ಹಿಂದೆ ಆಗಿ ಹೋದಂತಹ ಒಟ್ಟಾರೆ ಘಟನೆಗಳನ್ನು ಕಾಲಾನುಕ್ರಮಣಿಕೆಯ ಆಧಾರದಲ್ಲಿ ವಿವರಿಸುವ ವ್ಯವಸ್ಥಿತವಾದ

ಕರ್ನಾಟಕದಲ್ಲಿ ಸ್ಥಾಪನೆಯಾದ ಮೊದಲ ವಿಶ್ವವಿದ್ಯಾಲಯ ಮೈಸೂರು ವಿ.ವಿ.

**downloaded from: www.kpscvaani.com**

**ಸೂಚನೆ: ಪ್ರಾಚೀನ ಭಾರತ ಇತಿಹಾಸ ಮತ್ತೆ ಪುನರಾವರ್ತನೆಯಾಗಿದ್ದು ಹೆಚ್ಚಿನ ಅಂಶಗಳನ್ನು ಒಳಗೊಂಡಿರುತ್ತದೆ.**

## ಮೌರ್ಯ ಸಾಮ್ರಾಜ್ಯ

**ಚಂದ್ರಗುಪ್ತ ಮೌರ್ಯ** : ಮೌರ್ಯ ಸಾಮ್ರಾಜ್ಯದ ಸ್ಥಾಪಕ ಚಂದ್ರಗುಪ್ತ ಮೌರ್ಯ. ಇವನು ತನ್ನ ಗುರುವಾದ ಚಾಣಕ್ಯ (ಕೌಟಿಲ್ಯ ಅಥವಾ ವಿಷ್ಣುಗುಪ್ತ)ನ ನೆರವಿನಿಂದ ಈ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಸಂಪ್ರದಾಯಗಳ ಪ್ರಕಾರ ಇವನು ಮಯೂರ (ನವಿಲು)ಗಳನ್ನು ಸಾಕುವ ಕುಟುಂಬದಲ್ಲಿ ಜನಿಸಿದವನಾದ್ದರಿಂದ ಮೌರ್ಯ ಎಂದು ಕರೆಯಲ್ಪಟ್ಟರು. ಆದರೆ ಬ್ರಾಹ್ಮಣ ಪುರಾಣಗಳು ನಂದರ ಆಸ್ಥಾನದಲ್ಲಿ ಮುರ ಎಂಬ ಶೂದ್ರ ಹೆಂಗಸಿಗೆ ಚಂದ್ರಗುಪ್ತನು ಜನಿಸಿದ ಕಾರಣ ಮೌರ್ಯ ಎಂದು ಕರೆಯಲಾಗುತ್ತದೆ ಎಂದು ಹೇಳಿದರೆ ಬೌದ್ಧ ಮೂಲಗಳ ಪ್ರಕಾರ ಆತನು ಮೋರಿಯ ಎಂಬ ಕ್ಷತ್ರಿಯ ಕುಲಕ್ಕೆ ಸೇರಿದವನು. ಕೆಲವು ಕೃತಿಗಳು ಅವನನ್ನು ವೃಷಲ ಅಥವ ಕುಲಹೀನ ಎಂದು ಬಣ್ಣಿಸುತ್ತವೆ. ನಂದರಿಂದ ಅಪಮಾನಕ್ಕೀಡಾಗಿದ್ದ ಚಾಣಕ್ಯ ಎಂಬ ಬ್ರಾಹ್ಮಣನ ನೆರವಿನಿಂದ ಚಂದ್ರಗುಪ್ತ ಮೌರ್ಯನು, ಕೊನೆಯ ದೊರೆಯಾದ ಧನನಂದನನ್ನು ಕೊಂದು ಕ್ರಿ.ಪೂ. 321ರಲ್ಲಿ ಮೌರ್ಯ ಸಾಮ್ರಾಜ್ಯ ನಿರ್ಮಿಸಿದ.

ಇದೇ ವೇಳೆಗೆ ವಾಯುವ್ಯ ಭಾರತದಲ್ಲಿ ಅಲೆಗ್ಸಾಂಡರನ ರಾಜ್ಯಪಾಲನಾಗಿದ್ದ ಸೆಲ್ಯುಕಸ್ ನಿಕೇಟಿನ್ ಪ್ರಬಲನಾಗುತ್ತಿದ್ದನು. ಕ್ರಿ.ಪೂ. 305ರಲ್ಲಿ ಸೆಲ್ಯುಕಸ್ ನಿಕೇಟಿನ್‌ಗಳು ಚಂದ್ರಗುಪ್ತ ಮೌರ್ಯನಿಗು ಯುದ್ಧ ಜರುಗಿ, ಸೆಲ್ಯುಕಸ್ ಪರಾಜಿತನಾದನು. ಸೆಲ್ಯುಕಸ್ 500 ಆನೆಗಳನ್ನು ಪಡೆದು ವಾಯುವ್ಯ ಭಾರತದ ಕಾಬೂಲ್, ಹೀರತ್, ಗಾಂಧಾರ ಮತ್ತು ಬಲೂಚಿಸ್ಥಾನಗಳನ್ನು ಚಂದ್ರಗುಪ್ತ ಮೌರ್ಯನಿಗೆ ನೀಡಿದನು. ಚಂದ್ರಗುಪ್ತ ಮೌರ್ಯನಿಗೆ ತನ್ನ ಮಗಳನ್ನು ನೀಡಿ ವಿವಾಹ ಮಾಡಿದುದಲ್ಲದೆ, ಮೆಗಸ್ತನೀಸ್ ಎಂಬ ರಾಯಭಾರಿಯನ್ನು ಚಂದ್ರಗುಪ್ತ ಮೌರ್ಯನ ಆಸ್ಥಾನಕ್ಕೆ ಕಳುಹಿಸಿದನು. ಅವನು ಗ್ರೀಕ್ ಭಾಷೆಯಲ್ಲಿ ಇಂಡಿಕಾ ಎಂಬ ಕೃತಿ ರಚಿಸಿದ್ದಾನೆ.

ಜೈನ ದಾಖಲೆಗಳ ಪ್ರಕಾರ ಚಂದ್ರಗುಪ್ತನು ತನ್ನ ಆಳ್ವಿಕೆಯ ಕೊನೆಯ ಭಾಗದಲ್ಲಿ ಜೈನ ಮತಕ್ಕೆ ಮತಾಂತರ ಹೊಂದಿ ಸಿಂಹಾಸನವನ್ನು ಬಿಂದುಸಾರನಿಗೆ ನೀಡಿ, ದಕ್ಷಿಣ ಭಾರತದ ಶ್ರವಣಬೆಳಗೊಳಕ್ಕೆ ಬಂದನು. ಅಲ್ಲಿ ಅವನು ಸಲ್ಲೇಖನ ವ್ರತವನ್ನಾಚರಿಸಿ ಮೃತನಾದನು.

ಬಿಂದುಸಾರ (ಕ್ರಿ.ಪೂ. 300-273) ಚಂದ್ರಗುಪ್ತನ ಮಗನಾದ ಇವನನ್ನು ಗ್ರೀಕ್ ದಾಖಲೆಗಳು 'ಅಮಿತ್ರ ಘಾತ' ಎಂದು ಕರೆದಿವೆ. ಇವನು ಪಶ್ಚಿಮದ ಹೆಲನಿಕ್ ದೊರೆಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದನು. ಸಿರಿಯಾದ ದೊರೆ 1ನೇ ಅಂಟಿಕಸ್‌ನು ಡೈಮಕಸ್ ಎಂಬ ರಾಯಭಾರಿಯನ್ನು ಇವನ ಆಸ್ಥಾನಕ್ಕೆ ಕಳುಹಿಸಿದ್ದನು.

ಒಮ್ಮೆ ಬಿಂದುಸಾರನು ಗ್ರೀಕ್ ದೊರೆಗೆ ಮದ್ಯ, ಅಂಜೂರದ ಹಣ್ಣು ಹಾಗು ಓರ್ವ ತತ್ವಜ್ಞಾನಿಯನ್ನು ಕಳುಹಿಸಲು ಕೇಳಿಕೊಂಡಿದ್ದನು. ಅಂಟಿಕಸ್‌ನು ಮದ್ಯ ಹಾಗು ಅಂಜೂರದ ಹಣ್ಣನ್ನು ಕಳುಹಿಸಿ ಗ್ರೀಕ್ ತತ್ವಜ್ಞಾನಿಗಳು ರಫ್ತು ಸರಕುಗಳಲ್ಲ ಎಂದು ಪ್ರತ್ಯುತ್ತರ ನೀಡಿದ್ದನು.

ಅಶೋಕ (ಕ್ರಿ.ಪೂ. 273-232): ಬಿಂದುಸಾರನ ಮಗನಾದ ಈತನು ಬಿಂದುಸಾರನು ಸತ್ತ 273ರಲ್ಲಿ ಅಧಿಕಾರಕ್ಕೆ ಬಂದನೆಂದು ಕೆಲವು ವಿದ್ವಾಂಸರು ವಾದಿಸಿದರು. ಮತ್ತೆ ಕೆಲವು ವಿದ್ವಾಂಸರು ಬಿಂದುಸಾರನ ಮರಣಾನಂತರ 4 ವರ್ಷಗಳ ಉತ್ತರಾಧಿಕಾರದ ಯುದ್ಧದ ಬಳಿಕ ವಿಜೇತ ಅಶೋಕನು ಪಟ್ಟಕ್ಕೆ ಬಂದನೆಂದು ಮತ್ತೆ ಕೆಲವು ಇತಿಹಾಸಕಾರರು ವಾದಿಸುತ್ತಾರೆ.

ಯುವರಾಜನಾಗಿದ್ದಾಗ ಅಶೋಕನು ತಕ್ಷಶಿಲೆ ಹಾಗು ಉಜ್ಜೈನಿಗಳ ರಾಜ್ಯಪಾಲನಾಗಿ ಕಾರ್ಯನಿರ್ವಹಿಸಿದ್ದನು. ಬೌದ್ಧ ಕೃತಿಗಳಾದ ದೀಪವಂಶ ಹಾಗೂ ಮಹಾವಂಶಗಳು ಅಶೋಕನು ತನ್ನ 99 ಸಹೋದರರನ್ನು ಕೊಂದು ಅಧಿಕಾರಕ್ಕೆ ಬಂದನೆಂದು ತಿಳಿಸುತ್ತವೆ. ಆದರೆ ಇದು ನಂಬಲಾರ್ಹವಲ್ಲ.

ಅಶೋಕನು ಕ್ರಿ.ಪೂ. 260-261ರಲ್ಲಿ ಅಂದರೆ ತನ್ನ ಆಳ್ವಿಕೆಯ 9ನೇ ವರ್ಷದಲ್ಲಿ ಕಳಿಂಗದ ಮೇಲೆ ಯುದ್ಧ ಮಾಡಿದನು. ಈ ಯುದ್ಧದಲ್ಲಿ ಅಶೋಕನು ವಿಜಯಿಯಾದನು. ಆದರೆ ಈ ಯುದ್ಧದಲ್ಲಾದ ಅಪಾರ ಸಾವು ನೋವು ರಕ್ತಪಾತದಿಂದ ಅಶೋಕನು ಮನಃ ಪರಿವರ್ತನೆ ಹೊಂದಿ ಮುಂದೆಂದೂ ಯುದ್ಧ ಮಾಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿದನು. ಉಪಗುಪ್ತ ಎಂಬ ಸನ್ಯಾಸಿಯಿಂದ ಪ್ರಭಾವಿತನಾಗಿ ಬೌದ್ಧಧರ್ಮಕ್ಕೆ ಮತಾಂತರ ಹೊಂದಿದನು. ಇವನು ಧರ್ಮಯಾತ್ರೆ ಕೈಗೊಂಡು ತನ್ನ ಆಳ್ವಿಕೆಯ 21ನೆಯ ವರ್ಷದಲ್ಲಿ ಬುದ್ಧನ ಜನ್ಮಸ್ಥಳವಾದ ಲುಂಬಿಣಿಯನ್ನು ಸಂದರ್ಶಿಸಿದನು.

ಧಮ್ಮ (ಸಾಮಾಜಿಕ ನೀತಿ ಸಂಹಿತೆ)ದ ತತ್ವಗಳನ್ನು ಪ್ರಚಾರ ಮಾಡಲು ಅಶೋಕನು ತನ್ನ ಆಳ್ವಿಕೆಯ 14ನೆಯ ವರ್ಷದಲ್ಲಿ ಧರ್ಮ ಮಹಾಮಾತ್ರ ಎಂಬ ಅಧಿಕಾರಿಗಳನ್ನು ನೇಮಿಸಲು ಆರಂಭಿಸಿದನು. ಅವನ ರಾಜ್ಯದಲ್ಲಿ ಬೇರಿ ಘೋಷ (ಯುದ್ಧ)ದ ಬದಲಿಗೆ ಧಮ್ಮ ಘೋಷ (ಶಾಂತಿ) ಮೊಳಗಲು ಆರಂಭಿಸಿತು. ಅಶೋಕನು ಧಮ್ಮ ವಿಜಯದ ಮೂಲಕ ಗ್ರೀಕ್, ತಮಿಳು ಹಾಗು ಸಿಂಹಳದ ನೆರೆ ಹೊರೆಯ ರಾಜರುಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದನು. ಇವನು ಗ್ರೀಕ್ ದೊರೆಗಳಾದ ಸಿರಿಯದ 2ನೇ ಅಂಟಿಕಸ್, ಈಜಿಪ್ಟ್‌ನ 2ನೇ ಟಾಲಮಿ ಮ್ಯಾಸಿಡೋನಿಯಾದ ಅಂಟಿಗೋನಸ್ ಕೈರೆನೆದ ಮಾಗಾಸ್ ಮತ್ತು ಎಪಿರಸ್‌ನ ಅಲೆಗ್ಸಾಂಡರ್‌ನೊಂದಿಗೆ ರಾಜತಾಂತ್ರಿಕ ಬಾಂಧವ್ಯವನ್ನು ಹೊಂದಿದ್ದನು.

downloaded from: www.kpscvaani.com

ಇವನ ಅವಧಿಯಲ್ಲಿ ಪಾಟಲೀ ಪುತ್ರದಲ್ಲಿ ಸಮಾವೇಶಗೊಂಡ 3ನೆಯ ಬೌದ್ಧಸಮ್ಮೇಳನದಲ್ಲಿ ಸಿಲೋನ್, ಬರ್ಮ, ಸುಮಾತ್ರಾ ಮುಂತಾದ ದೇಶಗಳಿಗೆ ಧರ್ಮಪ್ರಚಾರಕರನ್ನು ಕಳುಹಿಸಲು ನಿರ್ಧರಿಸಲಾಯಿತು. ಇದರಿಂದ ಆ ದೇಶಗಳಲ್ಲಿ ಬೌದ್ಧ ಧರ್ಮ ಪ್ರಚಾರವಾಯಿತು.

ಅಶೋಕನು ರಾಜ್ಯದಲ್ಲಿ ಪ್ರಾಣಿಹತ್ಯೆಯನ್ನು ನಿಷೇಧಿಸಿದನು. ಪ್ರಾಣಿಗಳಿಗಾಗಿ ಔಷಧಾಲಯಗಳು, ದಾರಿಹೋಕರ ಅನುಕೂಲಕ್ಕಾಗಿ ಅರವಂಟಿಗೆಗಳನ್ನು ಹಾಗು ಸಾಲು ಮರಗಳನ್ನು ನೆಡಿಸಿದನು. ಅಶೋಕನ ಉನ್ನತವಾದ ರಾಜತ್ವದ ಆದರ್ಶವನ್ನು ಹೊಂದಿದ್ದನು. ಅವನು ತನ್ನ ಪ್ರಜೆಗಳನ್ನು ಮಕ್ಕಳಂತೆ ಕಂಡ ಮೊದಲ ದೊರೆ ತನ್ನ ಸಂದೇಶಗಳನ್ನು ಪ್ರಚುರಗೊಳಿಸಲು ದೇಶದ ಎಲ್ಲ ಭಾಗಗಳಲ್ಲಿ ಶಿಲಾಶಾಸನಗಳನ್ನು ಹೊರಡಿಸಿದ. ಭಾರತದಲ್ಲಿ ಶಾಸನಗಳನ್ನು ಹೊರಡಿಸಿದ ಮೊದಲ ದೊರೆ ಈತ. ಭಾರತದಲ್ಲಿ ಈತನ ಶಾಸನಗಳು ಪ್ರಾಕೃತ ಭಾಷೆ ಹಾಗು ಬ್ರಾಹ್ಮಿ ಲಿಪಿಯಲ್ಲಿದ್ದರೆ, ವಾಯುವ್ಯ ಭಾರತದಲ್ಲಿ(ಕಾಂದಹಾರ್ ಶಹಭಾಜಗಿರಿ) ಅರಾಮಿಕ ಹಾಗು ಗ್ರೀಕ್ ಭಾಷೆಗಳಲ್ಲಿವೆ ಹಾಗೂ ಖರೋಷ್ಠಿ ಲಿಪಿ ಬಳಸಲ್ಪಟ್ಟಿವೆ.

**ಅಶೋಕನ ಧರ್ಮ** : 'ಧರ್ಮ' ಎಂಬುದು ಸಂಸ್ಕೃತ ಧರ್ಮದ ಪ್ರಾಕೃತ ರೂಪ. ಅಶೋಕ ಪ್ರಚಾರ ಮಾಡಿದ ಧರ್ಮ ಬೌದ್ಧಧರ್ಮವಲ್ಲ, ಬದಲಿಗೆ ಅದು ಸಮಾಜದಲ್ಲಿನ ಬಣೀಯ ಸಂಘರ್ಷಗಳನ್ನು ನಿವಾರಿಸಿ ಸಮಾಜದಲ್ಲಿ ಏಕತೆ ಹಾಗು ಶಾಂತಿಯನ್ನು ಮೂಡಿಸಲು ರೂಪಿಸಿದ ಸಾಮಾಜಿಕ ಕಟ್ಟಳೆಗಳಾಗಿವೆ.

**ಮೌರ್ಯರ ಆಡಳಿತ** : ಕೌಟಿಲ್ಯ/ ಚಾಣುಕ್ಯನು ಬರೆದಿರುವ 'ಅರ್ಥಶಾಸ್ತ್ರ' ಕೃತಿಯು ಮೌರ್ಯರ ಆಡಳಿತದ ಬಗ್ಗೆ ಮಾಹಿತಿ ನೀಡುತ್ತದೆ. ಕೌಟಿಲ್ಯನು 18 ತೀರ್ಥಗಳೆಂಬ ಇಲಾಖೆಗಳನ್ನು 27 ಅಧ್ಯಕ್ಷರೆಂಬ ಅಧಿಕಾರ ಪಟ್ಟಿಯನ್ನು ನೀಡುತ್ತಾನೆ.

**ತೆರಿಗೆಗಳು** : 'ಭಾಗ'ವು ಭೂಕಂದಾಯವಾಗಿದ್ದು ರಾಜ್ಯದ ಪ್ರಮುಖ ಆದಾಯವಾಗಿತ್ತು. 'ಪಿಂಡಕರ'ವನ್ನು ಹಳ್ಳಿಗಳ ಗುಂಪುಗಳ ಮೇಲೆ ವಿಧಿಸಲಾಗುತ್ತಿತ್ತು. ಹಣ್ಣು ಹಾಗು ಹೂವಿನ ತೋಟಗಳ ಮೇಲೆ 'ಕರ' ಎಂಬ ತೆರಿಗೆಯನ್ನು ವಿಧಿಸಲಾಗುತ್ತಿತ್ತು. ವಿಶೇಷವಾದ ಬೆಳೆಗಳಲ್ಲಿ ಬೆಳೆದ ಪಾಲನ್ನು ಸಂಗ್ರಹಿಸಲಾಗುತ್ತಿತ್ತು. ಇದನ್ನು 'ಹಿರಣ್ಯ' ಎಂದು ಕರೆಯಲಾಗುತ್ತಿತ್ತು. ರಾಜಧಾನಿಯಲ್ಲಿ ವಾಸಿಸುತ್ತಿದ್ದ ಕುಶಲ ಕರ್ಮಿಗಳ ಸಂಘಟನೆಯಾದ 'ಶ್ರೇಣಿ'ಗಳೂ ತೆರಿಗೆಯನ್ನು ನೀಡಬೇಕಾಗಿತ್ತು. ವಿವಿಧ ರೀತಿಯ ತೆರಿಗೆಗಳು ಹಾಗು ಸರ್ಕಾರ ನಿಯಂತ್ರಿಸುತ್ತಿದ್ದ ಅಪಾರ ಆರ್ಥಿಕ ವ್ಯವಹಾರಗಳಿಂದ ಬರುತ್ತಿದ್ದ ಆದಾಯವು ರಾಜ್ಯದ ಆರ್ಥಿಕತೆಯ ಬೆನ್ನೆಲಾಬಾಗಿತ್ತು.

**ಸಂಸ್ಕೃತಿ ಮತ್ತು ಸಮಾಜ** : ಸಮಾಜವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಗಗಳಲ್ಲಿ ವಿಭಜಿತವಾಗಿತ್ತು. ಇಂಡಿಕಾದ ಕರ್ತೃ ಮೆಗಾಸ್ಥನೀಸ್ ಏಳು ಜಾತಿಗಳ ಪ್ರಸ್ತಾಪ ಮಾಡುತ್ತಾನೆ. ಅವುಗಳೆಂದರೆ, ತತ್ವಜ್ಞಾನಿಗಳು, ರೈತರು, ಸೈನಿಕರು, ಕುರುಬರು, ಕುಶಲ ಕರ್ಮಿಗಳು, ನ್ಯಾಯಾಧೀಶರು ಮತ್ತು ಅಸ್ಥಾನಿಕರು. ಆದರೆ ವಾಸ್ತವದಲ್ಲಿ ಇವು ಜಾತಿಗಳಾಗಿರದೆ ವೃತ್ತಿ ಗುಂಪುಗಳಾಗಿದ್ದವು. ಇತಿಹಾಸದಲ್ಲಿ ಮೊದಲ ಬಾರಿಗೆ ಬಂಜರು ಭೂಮಿಯನ್ನು ಕೃಷಿಗೆ ಒಳಪಡಿಸಲು, ಅಂತಹ ಭೂಮಿಯ ಒಡೆತನವನ್ನು ಶೂದ್ರರಿಗೆ ನೀಡಲಾಯಿತು. ಆದರೆ ಬಹುತೇಕ ಶೂದ್ರರು ಕೃಷಿ ಕಾರ್ಮಿಕರು ಹಾಗು ಕುಶಲ ಕರ್ಮಿಗಳಾಗಿದ್ದು, ಶ್ರೇಣಿಕೃತ ಸಮಾಜದ ಕೆಳಸ್ಥರದಲ್ಲಿದ್ದರು.

ಈ ಅವಧಿಯಲ್ಲಿ ಅಜೀವಕ ಪಂಥವೂ ಪ್ರಬಲವಾಗಿದ್ದು ಅಶೋಕನು ಮತ್ತು ಅವನ ಮೊಮ್ಮಗ ದಶರಥ ಬಿಹಾರದ ನಾಗಾರ್ಜುನ ಬೆಟ್ಟದಲ್ಲಿ ಆಜೀವಕರಿಗೆ ಗುಹೆಗಳನ್ನು ನಿರ್ಮಿಸಿಕೊಟ್ಟಿದ್ದರು.

**ಮೌರ್ಯರ ಕಲೆ** : ಮೌರ್ಯರ ಕಾಲದಲ್ಲಿ ಶಿಲೆ ಕಲೆಯ ಮಾಧ್ಯಮವಾಗಿ ಬಳಕೆಗೆ ಬಂದಿತು. ಮೌರ್ಯ ಕಲೆಯ ಉತ್ತಮ ಉದಾಹರಣೆಗಳೆಂದರೆ ಅಶೋಕನ ಬೃಹತ್ ಶಿಲಾ ಸ್ತಂಭಗಳು ಪ್ರತಿಯೊಂದು ಬೃಹತ್ ಸ್ತಂಭವೂ ಒಂದೇ ಹೆಬ್ಬಂಡೆಯಿಂದ ತಯಾರಾದುದು. ಸೊಗಸಾದ ಸಿಂಹಾ ಅಥವಾ ಗೂಳಿಯ ಪ್ರತಿಮೆಗಳನ್ನು ಕಡೆದು ಆ ಬಂಡೆಗಳ ಮೇಲ್ಭಾಗದಲ್ಲಿ ಸ್ತಂಭಾಗ್ರವಾಗಿ ಜೋಡಿಸಲಾಗಿದೆ. ಇವು ಉಜ್ಜಿ ಮೆರಗು ನೀಡಲ್ಪಟಿವೆ. ಸಾರಾನಾಥ ಸ್ತಂಭದ ನಾಲ್ಕು ಸಿಂಹಗಳು ಹಾಗು ಇತರ ಸಣ್ಣ ಪ್ರಾಣಿಗಳು ಕಲಾ ಸೌಂದರ್ಯದ ಸ್ಮಾರಕಗಳಾಗಿವೆ. ಈ ಸ್ತಂಭ ಹಾಗು ಸ್ತಂಭಾಗ್ರಗಳಿಗೆ ಮಥುರಾ ಹಾಗು ಚುನಾರ್‌ನ ಗಣಿಗಳಿಂದ ಕಲ್ಲನ್ನು ಬಳಸಲಾಗಿದೆ. ದೇಶದ ಎಲ್ಲೆಡೆಯಿಂದ ಸ್ತಂಬಗಳ ಏಕರೂಪತೆ ಅವು ಒಂದೇ ಪ್ರದೇಶದ ಶಿಲ್ಪಿಗಳಿಂದ ರಚಿತವಾಗಿರುವುದನ್ನು ತೋರಿಸುತ್ತವೆ. ಅಶೋಕನು ದೇಶದಾದ್ಯಂತ 84,000 ಸ್ತೂಪಗಳನ್ನು ರಚಿಸಿರುವುದಾಗಿ ಹೇಳಲಾಗಿದೆ. ಅದರಲ್ಲಿ ಸಾಂಚಿಯ ಸ್ತೂಪ ಪ್ರಮುಖವಾದುದು.

ಮೌರ್ಯರು ಗಯದ ಬಳಿಯ ಬಾರಾಬಾರ್ ಬೆಟ್ಟಗಳಲ್ಲಿ ಕೊರೆಸಿರುವ ಗುಹೆಗಳಲ್ಲಿ ಮರದ ಕೆತ್ತನೆಯ ತಂತ್ರವನ್ನು ಬಳಸಲಾಗಿದೆ. ಸುದಾಮ ಗುಹೆ ಹಾಗು ಲೋಮಷ ಋಷಿಯ ಗುಹೆಗಳು ಇಲ್ಲಿನ ಪ್ರಮುಖ ಗುಹೆಗಳು.

**ಮೌರ್ಯ ಸಾಮ್ರಾಜ್ಯದ ಪತನಕ್ಕೆ ಕಾರಣಗಳು :**

ಮೌರ್ಯ ಸಾಮ್ರಾಜ್ಯದ ಕೊನೆಯ ದೊರೆಯಾದ ಬೃಹದ್ರಥ ಮೌರ್ಯನನ್ನು ಅವನ ಸೇನಾಧಿಪತಿಯಾದ ಪುಷ್ಯಮಿತ್ರ ಶುಂಗನು ಕ್ರಿ.ಪೂ. 180ರಲ್ಲಿ ಕೊಂದು ಅಧಿಕಾರಕ್ಕೆ ಬಂದನು. ಮೌರ್ಯ ಸಾಮ್ರಾಜ್ಯ ಪತನಕ್ಕೆ ಇತಿಹಾಸಕಾರರು ವಿವಿಧ ಕಾರಣಗಳನ್ನು ಗುರ್ತಿಸಿದ್ದಾರೆ ಅವುಗಳೆಂದರೆ,

1. ಹರಪ್ರಸಾದ ಶಾಸ್ತ್ರಿಯವರ ಪ್ರಕಾರ ಅಶೋಕನ ಬೌದ್ಧಧರ್ಮ ಒಲವಿನಿಂದ ಕೃದ್ಧರಾದ ಬ್ರಾಹ್ಮಣರ ಪ್ರತಿಕ್ರಿಯೆ ಪತನಕ್ಕೆ ಕಾರಣವಾಗಿದೆ.

downloaded from: www.kpscvaani.com

2. ಘೋಷಾಲ್‌ರವರ ಪ್ರಕಾರ ಅಶೋಕನ ಕಾಲದಲಿ ಬೌದ್ಧ ಧರ್ಮದ ಪ್ರಚಾರದಿಂದ ಬ್ರಾಹ್ಮಣೀಯ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆ ಅಸ್ತವ್ಯಸ್ತವಾಯಿತು. ಇದು ಕ್ರಮೇಣ ಮೌರ್ಯರ ಪತನಕ್ಕೆ ಕಾರಣವಾಯಿತು.

3. ಡಿ.ಡಿ. ಕೋಸಂಬಿಯವರ ಪ್ರಕಾರ ಆರ್ಥಿಕ ಒತ್ತಡಗಳು ಸಾಮ್ರಾಜ್ಯದ ಕುಸಿತಕ್ಕೆ ಕಾರಣವಾಯಿತು.

4. ರೋಮಿಲಾ ಥಾಪರ್‌ರವರ ಪ್ರಕಾರ ಕೇಂದ್ರೀಕೃತ ಆಡಳಿತ ವ್ಯವಸ್ಥೆ ಹಾಗು ದುರ್ಬಲ ರಾಜರನ್ನೊಳಗೊಂಡ ಆಡಳಿತ ವ್ಯವಸ್ಥೆಯ ಮೌರ್ಯ ಸಾಮ್ರಾಜ್ಯ ಕಣ್ಮರೆಯಾಗಲು ಕಾರಣವಾಗಿದೆ.

**ಸಂಘಂ ಯುಗ :**

ಸಂಘಂ ಎಂಬುದು ಸಾಹಿತಿಗಲ ಮತ್ತು ದಾರ್ಶನಿಕರ ಸಂಘಟನೆಯಾಗಿದ್ದು ಮಧುರೈ ಅದರ ಕೇಂದ್ರವಾಗಿತ್ತು. ಈ ಸಂಘಟನೆಗೆ ಪಾಂಡ್ಯರು, ಚೋಳರು ಮತ್ತು ಚೇರರು ರಾಜಾಶ್ರಯವನ್ನು ನೀಡಿದ್ದರು. ತಮಿಳು ಸಾಹಿತ್ಯ ಬೆಳವಣಿಗೆಯ ಪ್ರಾರಂಭದ ಕಾಲವೇ ಸಂಘಂ ಯುಗ. ಇದರಲ್ಲಿ ಮೂರು ಸಂಘಂಗಳು ಕಾಲಾನುಕ್ರಮಣಿಕೆಯಲ್ಲಿ ಅಸ್ತಿತ್ವದಲ್ಲಿದ್ದು ಈ ಮೂರು ಸಂಘಂಗಳು ಒಟ್ಟು 9990 ವರ್ಷಗಳಲ್ಲಿ ಅಸ್ತಿತ್ವದಲ್ಲಿದ್ದವು. ಇದರಲ್ಲಿ 8598 ಕವಿಗಳು ಇದ್ದು 197 ಪಾಂಡ್ಯ ಅರಸರು ಪೋಷಿಸಿದರು.

ಉತ್ಖನನದಲ್ಲಿ ತಿಳಿದು ಬರುವಂತೆ ತಮಿಳು ಸಂಘಂ ಕಾಲ ಕ್ರಿ.ಪೂ. 3ನೇ ಶತಮಾನದಿಂದ ಕ್ರಿ.ಶ. 3ನೇ ಶತಮಾನಗಳ ನಡುವಿನದು ಎಂದು ತೀರ್ಮಾನಿಸಬಹುದು. ತಮಿಳು ಸಾಹಿತ್ಯದ ಮೊದಲ ಲಿಪಿ ಬ್ರಾಹ್ಮಿಲಿಪಿ. ಮುಂದೆ ಪ್ರಾಚೀನ ಯುಗದ ಕೊನೆಯಲ್ಲಿ ಅವರು ಹೊಸಲಿಪಿಯಾದ ಗ್ರಂಥಲಿಪಿಯನ್ನು ಬಳಸಲಾರಂಭಿಸಿದರು. ಕ್ರಿ.ಶ. 1 ಮತ್ತು 2ನೇ ಶತಮಾನದಲ್ಲಿ ಟಾಲಮಿ, ಪ್ಲಿನಿ, ಸ್ಟ್ರಾಬೋ ಮತ್ತು ಪೆರಿಪ್ಲಸ್‌ನ ಅನಾಮಧೇಯ ಕರ್ತೃಗಳು ಮುಂತಾದ ಗ್ರೀಕ್ ಹಾಗೂ ರೋಮನ್‌ರ ಬರವಣಿಗೆಗಳಲ್ಲಿ ಸಂಘ ಸಾಹಿತ್ಯದ ಅಂಶಗಳು ಕಾಲ ನಿರ್ಧಾರದಲ್ಲಿ ನೆರವಾಗಿವೆ.

**ಸಂಘಂ ಸಾಹಿತ್ಯ :**

ತಮಿಳು ಸಾಹಿತ್ಯ ಚಟುವಟಿಕೆಗಳ ಸಂಸ್ಥೆಯೇ ಸಂಘಂ.

* ತೊಲ್ಕಾಪಿಯಂ – ವ್ಯಾಕರಣ ಗ್ರಂಥ ತೊಲ್ಕಾಪಿಯರ್‌ನಿಂದ ರಚನೆ.
* ತಿರುಕ್ಕುರಲ್ – ತಿರುವಳ್ಳವರ್‌ನಿಂದ ರಚನೆ. ಇದನ್ನು ದಕ್ಷಿಣದ ವೇದ ಅಥವಾ ಐದನೇ ವೇದ ಎನ್ನುತ್ತಾರೆ.
* ಶಿಲಪ್ಪದಿಗಾರಂ – ಸಾಹಿತ್ಯಕವಾಗಿ ಇದನ್ನು ಅನರ್ಘ್ಯರತ್ನ ಎನ್ನಲಾಗುತ್ತದೆ. ಬರೆದವರು ಇಳಂಗೋ ಅಡಿಗಳ್
* ಮಣಿಮೇಖಲೈ – ಸತ್ತೈಸತಾನರ್‌ನಿಂದ ರಚನೆ. ತಮಿಳು ಕಾವ್ಯದ ತಿರುತ್ತಕ್ಕದೇವರ್‌ನಿಂದ ರಚಿತವಾದುದು.
* ಅಗತ್ತಿಯಮ್ – ಅಗತ್ತಿಯಾರ್ ಮುನಿಯಿಂದ ರಚಿತವಾದುದು.
* ಪಟ್ಟುಪಾಟ್ಟು (ಹತ್ತು ಕವಿತೆಗಳು)
* ಎಟ್ಟುತೊಗೈ (ಎಂಟು ಕವಿತಾ ಸಂಗ್ರಹಗಳು)
* ಸಂಘಕಾಲವನ್ನು ಸುವರ್ಣಯುಗ ಅಥವಾ ಅಗಸ್ತ್ಯಯುಗ ಎನ್ನಲಾಗುತ್ತದೆ.

**ಸಂಘಂ ಯುಗದ ರಾಜಕೀಯ ವ್ಯವಸ್ಥೆ :**

- ರಾಜನೇ ಆಡಳಿತ ಕೇಂದ್ರಬಿಂದು, ಈತನನ್ನು ಕೊ.ಮನ್ನಮ್, ವೆಂದಾನ್, ಕೊರ್‌ರವನ್ ಅಥವಾ ಇರೈವನ್ ಎಂದೂ ಕರೆಯಲಾಗುತ್ತಿತ್ತು.
- ರಾಜಪ್ರಭುತ್ವ ಸರ್ಕಾರದ ಸಾಮಾನ್ಯ ಮಾದರಿಯಾಗಿತ್ತು.
- ಅವೈ ಗ್ರಾಮಸಭೆಯಾಗಿದ್ದಿತು.

**ರಾಜಲಾಂಛನಗಳು ಮತ್ತು ರಾಜಧಾನಿಗಳು ಹಾಗೂ ಪ್ರಮುಖ ಬಂದರು**

1.ಪಾಂಡ್ಯರು – ಕಾರ್ಪ್ (ಮೀನು)–ಮಧುರೈ–ಕೋರಕೆ,–ಶಲಿಯೂರ್

2.ಚೋಳರು – ಹುಲಿ – ಉರೈಯೂರ್ – ಪ್ರಹಾರ್ (ಕಾವೇರಿ ಪಟ್ಟಣಂ)

3.ಚೇರ – ಧನುಸ್ಸು – ತಿರುವಂಜಿಪಟ್ಟಣ – ಮುಜ್ರಿಸ್, ತೊಂಡಿ, ಬಂದಾರ್

**ಸಂಘಂ ಯುಗದ ಮೂರು ರಾಜವಂಶಗಳು**

**ಪಾಂಡ್ಯರು – ಮೀನು ರಾಜಲಾಂಛನ**

⇐ಮೆಗಸ್ತಾನೀಸ್ ಮತ್ತು ಕೌಟಿಲ್ಯನ ಅರ್ಥಶಾಸ್ತ್ರ ಕೃತಿಗಳಿಂದ ಉಲ್ಲೇಖ. ಮತ್ತು ರತ್ನಗಳಿಗೆ ಪ್ರಸಿದ್ಧಿ

⇐ತಿರ್ನೆಲ್‌ವೆಲ್ಲಿ ಪ್ರಾಂತ್ಯದವರೆಗೆ ರಾಜ್ಯವಿಸ್ತಾರ (ದಕ್ಷಿಣ ತಮಿಳುನಾಡು)

ವೆಂಗೈ ರಾಜಧಾನಿ – (ಹಿಂದೆ ಇದು ತೀನ್ ಮಧುರೈ ಮತ್ತು ಕಾಪಟಪುರಂ ಎನ್ನಲಾಗುತ್ತಿದ್ದು ವೈಗೈ ನದಿ ದಂಡೆಯಲ್ಲಿದೆ)

⇐ನೆಡುಂಜಳಿಯನ್ ಪ್ರಸಿದ್ಧ ದೊರೆ

⇐ಮಾಂಗುಡಿ ಮರುದನ್‌ನ 'ಮಧುರೈಕ್ಕಂಜಿ' ಈತನ ವಿವರಣೆ ನೀಡುತ್ತದೆ.

**ಅಧಿಕಾರಿಗಳು**

| | |
|---|---|
| ಅಮ್ಮೆಚಾರ್ – ಮಂತ್ರಿಗಳು | ಪುರೋಹಿತರ್ – ಪುರೋಹಿತ |
| ಸೇನಾಪತೀಯಾರ್ – ಸೇನಾಪತಿ | ದೂತರಂ – ದೂತ |
| ಒರ್ರರ್ – ಗೂಢಾಚಾರ | ರಾಜ್ಯದ ವಿಂಗಡಣೆ |
| ಮಂಡಲಂ (ಪ್ರಾಂತ್ಯ) ನಾಡು | ಉರ್ (ನಗರ) |
| ಸಿರೂರ್ (ಸಣ್ಣಹಳ್ಳಿ) | ಪೆರೂರ್ (ದೊಡ್ಡಹಳ್ಳಿ) |

downloaded from: www.kpscvaani.com

| | |
|---|---|
| ಮಾನ್ರಂ (ಸ್ಥಳೀಯ ಸಂಸ್ಥೆ) | ಪಟ್ಟಿನಮ್ - ಕರಾವಳಿ ಪಟ್ಟಣ |
| ಪುಹಾರ್ - ಬಂದರು ಪ್ರದೇಶ | ಚೆರಿ - ಉಪನಗರ |
| ಸಂಘಂ ಪರಿಕಲ್ಪನೆಗಳು | |
| ಕಾರೈ - ಭೂತೆರಿಗೆ | ಇರೈ-ಸಾಮಂತರು ಮತ್ತು ಯುದ್ಧದ ತೆರಿಗೆ |
| ಉಲ್ಲು - ಸುಂಕಗಳು | ಇರವು - ಬಲವಂತದ ಕಾಣಿಕೆ |
| ವೆರಿಯಮ್ -ಇಳುವರಿ ತೆರಿಗೆ | ವೆರಿಯರ್ -ತೆರಿಗೆ ಸಂಗ್ರಹಕ |
| ಅವೈ - ಗ್ರಾಮಸಭೆ | ನಗರ - ದೇವಾಲಯ |
| ಎನಾಡಿ -ಸೈನ್ಯದಂಡು | ವಳ್ಳಾಸ್ - ಶ್ರೀಮಂತ ರೈತರು |
| ಅರಸರ್-ಆಡಳಿತ ವರ್ಗ | ಓರ್ರ್ವ - ಗೂಢಾಚಾರರು |
| ವೇದರ್ಸ್ -ಬೇಟೆಗಾರರು | ಪೆರುಂದರಂ- ಉನ್ನತ ಅಧಿಕಾರಿಗಳು |
| ಸಿರುತ್ತರಮ್ -ಕೆಳ ಅಧಿಕಾರಿಗಳು | ಅವನಮ್ -ಮಾರುಕಟ್ಟೆ ಸ್ಥಳ |
| ಎರಿಪಟ್ಟಿ - ಕೆರೆ | ಮರಖ್ವಾದಿ -ಯುದ್ಧವರ್ಗ |
| ಕುರುವರ್ - ಗುಡ್ಡಗಾಡು ಪಂಗಡ | ವೆರಲಿಸ್ - ನರ್ತಕಿ |
| ಕಮಾರಮ್ - ಕ್ಷಪಣೆ | ಕಲವು - ಪವಿತ್ರ ವಿವಾಹ |
| ಉಮಾನರ್ - ಉಪ್ಪುತಯಾರಕ | ಕೊರ್ರವೈ - ಜಯದ ದೇವತೆ |
| ಕದುರೈ ಕೊಡವಳ್ - ಅರಣ್ಯ ದೇವತೆ | - - - |

- ತಲಾಮ್ ಲಿಂಗನಮ್ ಕದನದಲ್ಲಿ ಚೇರರು ಮತ್ತು ಚೋಳರನ್ನು ಸೋಲಿಸಿದನು.
- ರೋಮ್ ಸಾಮ್ರಾಜ್ಯದೊಂದಿಗೆ ವ್ಯಾಪಾರ ಮತ್ತು ರೋಮ್
- ಸಾಮ್ರಾಟರಾದ ಅಗಸ್ಟಸ್ ಮತ್ತು ಟ್ರೋಜನ್‌ರೊಂದಿಗೆ ರಾಯಭಾರ ಸಂಬಂಧವಿದ್ದಿತು.
- ರಾಮಾಯಣ ಮತ್ತು ಮಹಾಭಾರತದಲ್ಲಿ ಪಾಂಡ್ಯ ದೊರೆಗಳ ಉಲ್ಲೇಖವಿದೆ.

**ಚೋಳರು - ಹುಲಿ ರಾಜ ಲಾಂಛನ**

- ತೊಂಡೈಮಂಡಳಂ ಚೋಳ ಮಂಡಲಂ ಎಂದು ಪ್ರಸಿದ್ಧಿ.
- ಉತ್ತರ ತಮಿಳುನಾಡು ಮತ್ತು ದಕ್ಷಿಣ ಆಂಧ್ರ ಪ್ರದೇಶದಲ್ಲಿ ರಾಜ್ಯವಿಸ್ತಾರ
- ಉರೈಯೂರ್ ರಾಜಧಾನಿ ನಂತರ ಪುಹರ್ (ಕಾವೇರಿ ಪಟ್ಟಣಂ)ಗೆ ಬದಲಾವಣೆ. ಹತ್ತಿ ವ್ಯಾಪಾರಕ್ಕೆ ಪ್ರಸಿದ್ಧಿ.
- ಎಲರ್ (ಕ್ರಿ.ಪೂ. 2ನೇ ಶತಮಾನ) ಎಂಬುವವನು ಚೋಳರ ಮೊದಲ ದೊರೆ.
- ಕಾವೇರಿನದಿಗೆ 160 ಕಿ.ಮೀಗಳಷ್ಟು ದೊಡ್ಡದಾದ ಏರಿಯನ್ನು ನಿರ್ಮಿಸಿದನು.
- ಪುಹಾರ್ / ಕಾವೇರಿಪಟ್ಟಣಂ ಪಟ್ಟಣದ ನಿರ್ಮಾತೃ
- ವೆನ್ನಿ ಕದನದಲ್ಲಿ 11 ರಾಜರನ್ನು ಸೋಲಿಸಿದನು.
- ಈತನ ಸಾಧನೆಗಳನ್ನು ಪತ್ತಿನಪ್ಪಲೈ ಗ್ರಂಥವು ತಿಳಿಸುತ್ತದೆ.
- ಚೋಳರ ಕೊನೆಯ ದೊರೆ ನೆಡುಂಚೆಲನ್
- ಸೆಂಗಣ್ಣನ್ ಎಂಬುವವನು ಏಳು ಶಿವ ದೇವಾಲಯಗಳನ್ನು ನಿರ್ಮಿಸಿದನು.

**ಚೇರರು - ಧನಸ್ಸು ರಾಜಲಾಂಛನ**

- ಕೇರಳ ಮತ್ತು ತಮಿಳು ಪ್ರಾಂತ್ಯದಲ್ಲಿ ರಾಜ್ಯವಿಸ್ತರಣೆ
- ವಂಜಿ / ಕರೂರ್/ ತಿರುವಂಜಿ ಪಟ್ಟಣಂ ರಾಜಧಾನಿ. ಇದು ಪೆರಿಯಾರ್ ನದಿದಂಡೆಯಲ್ಲಿದೆ.
- ಮುಜ್ರಸಂ ಮತ್ತು ತೊಂಡಿ ಪ್ರಮುಖ ಬಂದರುಗಳು.
- ಮೊದಲ ಪ್ರಸಿದ್ಧ ದೊರೆ ಉದಿಯೆಂಜರಲ್ (ಕ್ರಿ.ಶ. 130) ಈತನಿಗೆ
- ವನವರಂಬನ್ ಮತ್ತು ಪೆರುಂಜರನ್ ಉದಿಯನ್ ಎಂಬ ಬಿರುದುಗಳಿದ್ದವು.
- ದೊಡ್ಡ ಪಾಕಶಾಲೆಯನ್ನು ಹೊಂದಿದ್ದು ಪ್ರಜೆಗಳಿಗೆ ಊಟ ಹಾಕಿಸುತ್ತಿದ್ದನು.
- ಸೆಂಗುತ್ತವನ್ ಅತ್ಯಂತ ಪ್ರಸಿದ್ಧ ಚೇರ ದೊರೆ. ಇವನು ಕೆಂಪು ಚೇರ ಎಂದೇ ಪ್ರಸಿದ್ಧಿ ಹೊಂದಿದ್ದನು.
- ಕನ್ನಗಿ ದೇವಾಲಯವನ್ನು ನಿರ್ಮಿಸಿದ ಇವನು ಕನ್ನಗಿ ದೇವತೆಯ ವಿಗ್ರಹ
- ನಿರ್ಮಿಸುವುದಕ್ಕಾಗಿ ಹಿಮಾಲಯ ಪರ್ವತದಿಂದ ಕಲ್ಲನ್ನು ತರಿಸಿದ್ದನು.

**ಸಂಘಂಯುಗದ ಇನ್ನಿತರ ಪ್ರಮುಖ ಸಂಗತಿಗಳು**

ತಮಿಳು ಸಾಹಿತ್ಯದ ಪಿತಾಮಹಾ ಅಗಸ್ತ್ಯಮುನಿ

ಸಂಘಂಯುಗವು ಪ್ರಾಚೀನ ಭಾರತದಲ್ಲಿ ಮೌರ್ಯೋತ್ತರ ಮತ್ತು ಗುಪ್ತ ಪೂರ್ವ ಕಾಲವನ್ನು ಜೋಡಿಸುತ್ತದೆ.

ತಿರುಕ್ಕುರಳ್ (ತಿರುವಳ್ಳುವರ್) 5ನೇ ವೇದ ಎಂದು ಪ್ರಸಿದ್ಧಿ ಪಡೆದಿದೆ ಹಾಗೂ ತಮಿಳುನಾಡಿನ ಬೈಬಲ್ ಆಗಿದೆ.

ಸಂಘಂ ರಾಜರೊಂದಿಗೆ ರೋಮನ್ ವ್ಯಾಪಾರ ಸಂಬಂಧವು ಮುಜ್ರಿಸ್‌ನಲ್ಲಿ ಅಗಸ್ಟ್‌ನ ದೇವಾಲಯ ನಿರ್ಮಾಣಕ್ಕೆ ಕಾರಣವಾಗಿತ್ತು.

downloaded from: www.kpscvaani.com

ದಕ್ಷಿಣದ ಆಗಿನ ಕಾಲದ ರಾಜ ಸಂಸ್ಥಾನಗಳ ಬಗ್ಗೆ ಮೆಗಸ್ತನೀಸ್‌ನ ಇಂಡಿಕಾ ತಿಳಿಸುತ್ತದೆ.

ಉರೈಯೂರ್ ಮತ್ತು ರತ್ನಗಳು ಹಾಗೂ ಮಸ್ಲಿನ್ ಉತ್ಪನ್ನಗಳಿಗೆ ಪ್ರಸಿದ್ಧಿ ಪಡೆದಿತ್ತು.

ಭಾರತದ ಮೆಣಸನ್ನು ಯವನಪ್ರಿಯ ಎಂಬುದಾಗಿ ಬಳಸಲಾರಂಭಿಸಿದ್ದು ಈ ಕಾಲದಲ್ಲೇ.

ಆಗಸ್ಟಸ್ ಮತ್ತು ಟೆಬಿರಿಯಸ್‌ನ ಗುರುತುಗಳುಳ್ಳ ರೋಮನ್ ನಾಣ್ಯಗಳು ಭಾರತದಲ್ಲಿ ದೊರೆತಿವೆ.

ಮಸ್ಲಿನ್, ಮುತ್ತುರತ್ನಗಳು ಮತ್ತು ಸಾಂಬಾರು ಪದಾರ್ಥಗಳು ರೋಮನ್ ಸಾಮ್ರಾಜ್ಯಕ್ಕೆ ಸರಬರಾಜು ಆಗುತ್ತಿದ್ದ ಭಾರತೀಯ ರಫ್ತುಗಳು.

ಪೂರ್ವದ ತಮಿಳು ಸಾಹಿತ್ಯ ಬ್ರಾಹ್ಮೀ ಲಿಪಿಯನ್ನು ಬಳಸುತ್ತಿದ್ದು ಮುಂದೆ ಹೊಸದಾದ ಲಿಪಿ ಗ್ರಂಥ ಲಿಪಿಯನ್ನು ಬಳಸಲಾರಂಭಿಸಿದರು.

ಅಶೋಕನ ಎರಡನೇ ಮತ್ತು ಹದಿಮೂರನೇ ಬಂಡೆ ಶಾಸನಗಳು ಈ ಕಾಲದ ಮಾಹಿತಿಯನ್ನು ನೀಡುತ್ತವೆ.

**ದಕ್ಷಿಣ ಭಾರತದ ರಾಜವಂಶಗಳು**

ಶಾತವಾಹನರು

ಶಾತವಾಹನರು ರಾಜ ವಂಶದ ಸ್ಥಾಪಕ ಸಿಮುಖ. ಇವರನ್ನು ಆಂಧ್ರ ಭೃತ್ಯರೆಂದೂ ಕರೆಯಲಾಗುತ್ತದೆ. ಇವರ ರಾಜಧಾನಿ ಪೈಥಾನ್ ಅಥವಾ ಪ್ರತಿಷ್ಠಾನ. ಇವರು ಕಣ್ವ, ರಾಜವಂಶವನ್ನು ಸೋಲಿಸಿ ಅಧಿಕಾರ ಸ್ಥಾಪನೆ ಮಾಡಿದರು.

ಇವರು ಬ್ರಾಹ್ಮಣರು, ಬ್ರಾಹ್ಮಣರಿಗೆ, ಧಾರ್ಮಿಕ ಸಂಸ್ಥೆಗಳಿಗೆ ಭೂದಾನ ನೀಡಿದ ಮೊದಲ ರಾಜವಂಶ ಶಾತವಾಹನರು. ಈ ವಂಶದ ಶ್ರೇಷ್ಠ ದೊರೆ ಗೌತಮಿಪುತ್ರ ಶಾತಕರ್ಣಿ. ಇವನು ಶಕರ ನಹಪಾನನನ್ನು ಸೋಲಿಸಿದ್ದನು. ಇವನ ತಾಯಿ ಗೌತಮಿ ಬಾಲಶ್ರೀ ಹೊರಡಿಸಿರುವ ನಾಸಿಕ್ ಶಾಸನ ಇವನನ್ನು 'ತ್ರೈ ಸಮುದ್ರ ತೋಯ ಪಿತವಾಹನ' (3 ಸಮುದ್ರಗಳ ನೀರನ್ನು ಕುಡಿದ ಕುದುರೆಯನ್ನು ವಾಹನವಾಗಿ ಹೊಂದಿರುವವನು) ಹಾಗು 'ಶಕಯವನ' ಪಹ್ಲದ ಸಂಹಾರಿ' ಎಂದು ಬಣ್ಣಿಸಿದೆ.

**ಚೋಳ, ಚೇರ ಹಾಗು ಪಾಂಡ್ಯರು**

ಈ ಮೂರು ರಾಜಮನೆತನಗಳ ಬಗೆಗಿನ ಇತಿಹಾಸಕ್ಕೆ ತಮಿಳು ಸಂಘ ಕೃತಿಗಳು ನೆರವಾಗುತ್ತವೆ. ಈ ಮೂರು ರಾಜ ಮನೆತನಗಳು ತಮಿಳು ನಾಡಿನಲ್ಲಿ ಕ್ರಿಸ್ತಶಕದ ಆರಂಭದಲ್ಲಿ ಆಳ್ವಿಕೆ ಮಾಡುತ್ತಿದ್ದವು. ಚೋಳರು ಉತ್ತರ ತಮಿಳು ನಾಡಿನ ಕಾವೇರಿ ಮುಖಜ ಭೂಮಿಯಲ್ಲಿ, ಪಾಂಡ್ಯರು ದಕ್ಷಿಣ ತಮಿಳು ನಾಡಿನ ವೈಗೈ ದಂಡೆಯಲ್ಲಿ, ಚೇರರು ಇಂದಿನ ಕೇರಳದಲ್ಲಿ ರಾಜ್ಯಭಾರ ಮಾಡುತ್ತಿದ್ದರು. ಚೋಳರಿಗೆ ಉರಯೂರು, ಪಾಂಡ್ಯರಿಗೆ ಮಧುರೈ ಹಾಗು ಚೇರರಿಗೆ ಮುಜ್ರಿಸ್ ರಾಜಧಾನಿಗಳಾಗಿದ್ದವು. ಈ ಮೂರೂ ರಾಜ ಮನೆತನಗಳು ನಿರಂತರವಾಗಿ ಕದನದಲ್ಲಿ ತೊಡಗಿದ್ದವು. ಆದರೆ ಕ್ರಮೇಣ ಚೋಳರ ಪ್ರಾಬಲ್ಯ ಬೆಳೆಯಿತು. ಚೋಳರು ಅಪಾರವಾದ ನೌಕಾಬಲವನ್ನು ಹೊಂದಿದ್ದು ಸಿಲೋನನ್ನು ಕೆಲಕಾಲ ತಮ್ಮ ಹಿಡಿತದಲ್ಲಿಟ್ಟು ಕೊಂಡಿದ್ದರು. ಈ ಅವಧಿಯಲ್ಲಿ ಈ ಮೂರು ಸಾಮ್ರಾಜ್ಯಗಳು ರೋಮ್‌ನೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿದ್ದವು. ಪುಹಾರ್ (ಚೋಳ), ಕೊರಕ್ಕೆ (ಪಾಂಡ್ಯ), ಮುಜ್ರಿಸ್ (ಚೇರ) ಪ್ರಮುಖ ಬಂದರುಗಳಾಗಿದ್ದವು. ಶಿಲಪ್ಪಾದಿಕಾರಂ ಮತ್ತು ಮಣಿಮೇಖಲೈ ಸಂಘಂ ಯುಗದ ಪ್ರಮುಖ ತಮಿಳು ಮಹಾಕಾವ್ಯಗಳು.

## ಗುಪ್ತ ಸಾಮ್ರಾಜ್ಯ

ಗುಪ್ತರ ಕಾಲದಲ್ಲಿ ಕಲೆ, ವಾಸ್ತುಶಿಲ್ಪ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಸಾಧಿಸಿದ ಸಾಧನೆಗಳಿಂದ ಆ ಕಾಲವನ್ನು ಭಾರತದ ಇತಿಹಾಸದ ಅಭಿಜಾತಯುಗ (Classical Age) ಎಂದು ಕರೆಯುತ್ತೇವೆ. ಗುಪ್ತ ಸಾಮ್ರಾಜ್ಯವು ಕುಶಾನ ಸಾಮ್ರಾಜ್ಯದ ಪಳೆಯುಳಿಕೆಗಳ ಮೇಲೆ ಪ್ರವರ್ಧಮಾನಕ್ಕೆ ಬಂದಿತು. ಇವರು ವಿಶಾಲ ಸಾಮ್ರಾಜ್ಯ ಸ್ಥಾಪನೆ ಮಾಡಲು ಹಲವಾರು ಅಂಶಗಳು ಇವರಿಗೆ ನೆರವಾದವು. ಅವುಗಳೆಂದರೆ ದಕ್ಷಿಣ ಬಿಹಾರ ಹಾಗೂ ಮಧ್ಯಭಾರತದ ಕಬ್ಬಿಣದ ಗಣಿಗಳು ಇವರ ನಿಯಂತ್ರಣದಲ್ಲಿದ್ದುದು, ಗಂಗಾ ಬಯಲಿನ ಫಲವತ್ತಾದ ಭೂಮಿ ಹಾಗೂ ಬೈಜಾಂಟಿಯನ್ ಸಾಮ್ರಾಜ್ಯದೊಂದಿಗಿನ ವ್ಯಾಪಾರ ಮಾರ್ಗವಾದ ರೇಷ್ಮೆ ಹೆದ್ದಾರಿ (Silk Route) ಇವರ ನಿಯಂತ್ರಣದಲ್ಲಿದ್ದು ಅಪಾರ ಆದಾಯ ತರುತ್ತಿದ್ದುವು.

ಕ್ರಿ.ಶ. 275ರ ವೇಳೆಗೆ ಈ ಸಾಮ್ರಾಜ್ಯ ಉದಯವಾಯಿತು.ಈ ಸಾಮ್ರಾಜ್ಯ ಮೂಲತಃ ಮಧ್ಯ ಗಂಗಾ ಬಯಲು, ಪ್ರಯಾಗ (ಇಂದಿನ ಅಲಹಾಬಾದ್) ಮತ್ತು ಮಗಧ (ಬಿಹಾರ ಪ್ರದೇಶಗಳನ್ನು ಒಳಗೊಂಡಿತ್ತು. ಶ್ರೀಗುಪ್ತ ಈ ವಂಶದ ಸ್ಥಾಪಕ. ಈತ ವೈಶ್ಯ ಕುಲಕ್ಕೆ ಸೇರಿದವನು. ಇವನು ಸಾಮಂತ ರಾಜನಾಗಿದ್ದನು.

**ಗುಪ್ತ ಸಂತತಿ**

ಚಂದ್ರಗುಪ್ತ – 1– ಕ್ರಿ. ಶ. 320 – 335

ಸಮುದ್ರ ಗುಪ್ತ – ಕ್ರಿ.ಶ. 335 – 375

ರಾಮಗುಪ್ತ – ಕ್ರಿ.ಶ. 375– 380

ಚಂದ್ರಗುಪ್ತ ವಿಕ್ರಮಾದಿತ್ಯ – ಕ್ರಿ.ಶ. 380 – 413

ಕುಮಾರಗುಪ್ತ ಮಹೇಂದ್ರಾಗುಪ್ತ – ಕ್ರಿ.ಶ. 415–455

ಸ್ಕಂದ ಗುಪ್ತ – ಕ್ರಿ.ಶ. 455 – 467

**downloaded from: www.kpscvaani.com**

**ನಂತರದ ಗುಪ್ತರು** : ಪುರುಗುಪ್ತ, ನರಸಿಂಹ ಗುಪ್ತ ಬಾಲಾದಿತ್ಯ, ಕುಮಾರ ಗುಪ್ತ - 2, ಬುದ್ಧಗುಪ್ತ ಭಾನುಗುಪ್ತ, ಹರ್ಷಗುಪ್ತ, ದಾಮೋದರ ಗುಪ್ತ ಮಹಾಸೇನ ಗುಪ್ತ.

**ಒಂದನೆ ಚಂದ್ರಗುಪ್ತ(ಕ್ರಿ.ಶ. 319-335)** : ಈ ವಂಶದ ಮೊದಲ ಪ್ರಮುಖ ದೊರೆ ಒಂದನೆ ಚಂದ್ರಗುಪ್ತ, ಇವನು ಲಿಚ್ಛವಿ ರಾಜಕುಮಾರಿ ಕುಮಾರದೇವಿಯನ್ನು ವಿವಾಹವಾಗುವ ಮೂಲಕ ತನ್ನ ವಂಶದ ಘನತೆಯನ್ನು ಹೆಚ್ಚಿಸಿಕೊಂಡನು. ಇವನು ಅಧಿಕಾರಕ್ಕೆ ಬಂದುದರ ನೆನಪಿಗಾಗಿ ಕ್ರಿ.ಶ. 319ರಲ್ಲಿ ಗುಪ್ತ ಶಕೆಯನ್ನು ಆರಂಭಿಸಿದನು.

**ಸಮುದ್ರ ಗುಪ್ತ(ಕ್ರಿ.ಶ. 335-380)** : ಇವನನ್ನು ಲಿಚ್ಛವಿದೌಹಿತ್ರ ಹಾಗು ಕವಿರಾಜ ಎಂದೂ ಕರೆಯಲಾಗುತ್ತದೆ. ಇವನ ಆಸ್ಥಾನ ಕವಿ ಹರಿಸೇನ ರಚಿಸಿರುವ ಅಲಹಾಬಾದ್ ಶಾಸನವು ಇವನ ಬಗ್ಗೆ ನಿಖರವಾದ ಮಾಹಿತಿಯನ್ನು ನೀಡುತ್ತದೆ.

**ದಿಗ್ವಿಜಯಗಳು** : ಸಮುದ್ರಗುಪ್ತ ಪ್ರಾಚೀನ ಭಾರತದ ಇತಿಹಾಸದಲ್ಲಿ ತನ್ನ ದಿಗ್ವಿಜಯಗಳಿಂದ ವಿಖ್ಯಾತನಾಗಿದ್ದಾನೆ. ಇವನು ಗಂಗ -ಯಮುನ ದೋಆಬ್, ಪೂರ್ವ ಹಿಮಾಲಯ ರಾಜ್ಯಗಳು, ವಿಂಧ್ಯ ಪರ್ವತದ ಆಟವಿಕ ರಾಜ್ಯಗಳನ್ನು ತನ್ನ ಸಾಮ್ರಾಜ್ಯದ ಎಲ್ಲೆಯೊಳಗೆ ತಂದನು. ನಂತರ ದಕ್ಷಿಣದ 12 ರಾಜರನ್ನು ಸೋಲಿಸಿ ಅವರಿಂದ ಕಪ್ಪ ಪಡೆದನು. ನಂತರ ಅಫ್ಘಾನಿಸ್ತಾನದಲ್ಲಿ ಆಳುತ್ತಿದ್ದ ಶಕರು ಹಾಗು ಕುಶಾನರನ್ನು ಮಣಿಸಿದನು. ಚೀನಾದ ದಾಖಲೆಯೊಂದರ ಪ್ರಕಾರ ಶ್ರೀಲಂಕದ ದೊರೆಯಾದ ಮೇಘವರ್ಮನು ಗಯದಲ್ಲಿ ಒಂದು ಬೌದ್ಧ ದೇವಾಲಯವನ್ನು ನಿರ್ಮಿಸಲು ಸಮುದ್ರಗುಪ್ತನ ಅನುಮತಿ ಕೇಳಿದ್ದನು. ಅಲಹಾಬಾದ್ ಶಾಸನದ ಪ್ರಕಾರ ಅವನು ನೂರು ಸಮರಗಳ ಸರದಾರ, ಎಂದೂ ಸೋಲನ್ನು ಅರಿಯದವನು. ವಿ.ಎ. ಸ್ಮಿತ್ ಎಂಬ ಇತಿಹಾಸಕಾರರು ಸಮುದ್ರಗುಪ್ತನನ್ನು 'ಭಾರತದ ನೆಪೋಲಿಯನ್' ಎಂದು ಕರೆದಿದ್ದಾರೆ.

**ಎರಡನೆ ಚಂದ್ರಗುಪ್ತ(ಕ್ರಿ.ಶ. 380-412)** : ಇವನು 'ವಿಕ್ರಮಾದಿತ್ಯ' ಎಂಬ ಬಿರುದಿನೊಂದಿಗೆ ಭಾರತದ ಇತಿಹಾಸದಲ್ಲಿ ಹೆಸರಾಗಿದ್ದಾನೆ. ಇವನು ತನ್ನ ಮಗಳು ಪ್ರಭಾವತಿಯನ್ನು ಮಧ್ಯ ಭಾರತದಲ್ಲಿ ಆಳುತ್ತಿದ್ದ ಬ್ರಾಹ್ಮಣ ಜಾತಿಯ ವಾಕಟಕ ಅರಸ ಎರಡನೇ ರುದ್ರಸಿಂಹನಿಗೆ ಕೊಟ್ಟು ಮದುವೆ ಮಾಡಿದನು. ಈ ರಾಜ ಸತ್ತು ಅವನ ಚಿಕ್ಕ ವಯಸ್ಸಿನ ಮಗ ರಾಜನಾದನು. ಹೀಗಾಗಿ ಪ್ರಭಾವತಿಯೇ ಸ್ವತಃ ರಾಜ್ಯವಾಳುತ್ತಿದ್ದಳು.

ಎರಡನೇ ಚಂದ್ರಗುಪ್ತನು ಗುಜರಾತ್‌ನ ಶಕರ ಮೂರನೇ ರುದ್ರಸಿಂಹನನ್ನು ಸೋಲಿಸಿ ಆ ಪ್ರದೇಶಗಳನ್ನು ವಶಪಡಿಸಿಕೊಂಡನು. ನಂತರ ಉಜ್ಜಯಿನಿ ಅವನ ಎರಡನೆ ರಾಜಧಾನಿಯಾಯಿತು. ಚೀನಿ ಯಾತ್ರಿಕನಾದ ಫಾಹಿಯಾನ (399-414)ನು ಈ ಸಮಯದಲ್ಲಿ ಭಾರತವನ್ನು ಸಂದರ್ಶಿಸಿದ್ದನು. ಎರಡನೇ ಚಂದ್ರಗುಪ್ತನ ಸಾಧನೆಗಳನ್ನು ದೆಹಲಿಯ ಕುತುಬ್ ಮಿನಾರ್ ಬಳಿ ಇರುವ ಮಹರೋಲಿ ಕಬ್ಬಿಣ ಸ್ತಂಭ ಶಾಸನವು ವಿವರಿಸುತ್ತದೆ. ಎರಡನೇ ಚಂದ್ರಗುಪ್ತನ ನಂತರ ಅಧಿಕಾರಕ್ಕೆ ಬಂದ ಪ್ರಮುಖ ದೊರೆಗಳೆಂದರೆ ಕುಮಾರ ಗುಪ್ತ (ಕ್ರಿ.ಶ. 415-454).

**ಫಾಹಿಯಾನ್** :

ಚೀನಾದಿಂದ ಭಾರತಕ್ಕೆ ಬಂದ ಪ್ರಸಿದ್ಧ ಯಾತ್ರಿಕ ಫಾಹಿಯಾನ್ ಬೌದ್ಧ ಧರ್ಮ ತತ್ವಗಳ ಅಧ್ಯಯನಕ್ಕೆ (ಕ್ರಿ.ಶ. 400-411) ಭಾರತಕ್ಕೆ ಬಂದಿದ್ದು ತಾಮ್ರ ಲಿಪ್ತಿ ಮಥುರಾ, ಕನೂಜ್, ಕೌಸಂಬಿ, ಕಾಶಿ, ಕಪಿಲವಸ್ತು, ಕುಶೀನಾರ, ವೈಶಾಲಿ, ನಳಂದಾ ಮುಂತಾದ ಸ್ಥಳಗಳನ್ನು ಸಂದರ್ಶಿಸಿದ್ದನು. ಈತನ ಪ್ರಸಿದ್ಧ ಕೃತಿ ಫೋ-ಕೋ- ಕಿಯಲ್ಲಿ ಉಜ್ಜಯಿನಿ. ತಕ್ಷಶಿಲೆ, ಪಾಟಲೀಪುತ್ರ, ವಲ್ಲಭಿ ಮತ್ತು ನಳಂದಾಗಳು ಪ್ರಸಿದ್ಧ ವಿಶ್ವವಿದ್ಯಾಲಯಗಳಾಗಿದ್ದವೆಂದು ತಿಳಿಸಿದ್ದಾನೆ. ಈತ ಭಾರತಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಗುಪ್ತ ದೊರೆ 2ನೇ ಚಂದ್ರಗುಪ್ತ ಆಳ್ವಿಕೆ ಮಾಡುತ್ತಿದ್ದನು. ಜನರು ನೀತಿವಂತರು, ಪ್ರಾಮಾಣಿಕರು ಹಾಗೂ ಉದಾರಿಗಳು, ಧಾರ್ಮಿಕ ಆಚರಣೆಗೆ ವಿಶೇಷ ಪ್ರಾತಿನಿಧ್ಯ ನೀಡಿದ್ದರೆಂಬುದಾಗಿ ತಿಳಿಸಿದ್ದು ಇಲ್ಲಿನ ಜನರ ಅತಿಥಿ ಸತ್ಕಾರದ ಬಗ್ಗೆ ಮೆಚ್ಚುಗೆ ಸೂಚಿಸಿದ್ದಾನೆ.

ಸ್ಕಂದ ಗುಪ್ತ (ಕ್ರಿ.ಶ. 455-67): ಗುಪ್ತ ಸಾಮ್ರಾಟರು 6ನೇ ಶತಮಾನದವರೆಗೂ ಆಳ್ವಿಕೆ ನಡೆಸಿದರು. 5ನೇ ಶತಮಾನದ ಮಧ್ಯದ ವೇಳೆಗೆ ಅವರ ಮಹತ್ವ ಕಡಿಮೆಯಾಗಿ ಪ್ರಾದೇಶಿಕ ರಾಜರ ಸ್ಥಾನಕ್ಕೆ ಇಳಿದರು. ಗುಪ್ತ ಸಾಮ್ರಾಜ್ಯದ ಇಳಿಮುಖಕ್ಕೆ ಕಾರಣಗಳೆಂದರೆ, ಮಧ್ಯ ಏಷಿಯಾದ ಹೂಣರ ತೋರಮಾನ ಮತ್ತು ಮಿಹಿರ್ಕುಲರ ನಾಯಕತ್ವದಲ್ಲಿ ಭಾರತದ ಮೇಲೆ ದಾಳಿ ಮಾಡಿದುದು. ಊಳಿಗಮಾನ್ಯ ಪದ್ಧತಿ ಪ್ರಬಲವಾಗಿ ಕೇಂದ್ರೀಕೃತ ಆಡಳಿತ ವ್ಯವಸ್ಥೆ ಕುಸಿಯಿತು. ಹಾಗೆಯೇ ರೋಮನ್ ಸಾಮ್ರಾಜ್ಯ ಪತನ ಹೊಂದಿದುದರಿಂದ ಆ ಸಾಮ್ರಾಜ್ಯದೊಂದಿಗಿನ ವ್ಯಾಪಾರದಿಂದ ಬರುತ್ತಿದ್ದ ಆದಾಯ ತಪ್ಪಿದುದು, ಆರ್ಥಿಕ ಸಂಕಷ್ಟಗಳು, ದುರ್ಬಲ ಉತ್ತರಾಧಿಕಾರಿಗಳು ಮುಂತಾದ ಅಂಶಗಳು.

| **ಕರ್ತೃ** | **ಕೃತಿ** |
|---|---|
| ಭಾಸ | ಸ್ವಪ್ನವಾಸವದತ್ತಂ |
| ಶೂದ್ರಕ | ಮೃಚ್ಛಕಟಿಕ |
| ಅಮರಕೋಶ | ಅಮರಸಿಂಹ |
| ಈಶ್ವರ ಕೃಷ್ಣ | ಸಂಖ್ಯಾಕಾರಿಕ |
| ವಾತ್ಸಾಯನ | ಕಾಮಸೂತ್ರ |
| ನಾರಾಯಣ ಪಂಡಿತ | ಹಿತೋಪದೇಶ |

downloaded from: www.kpscvaani.com

| | |
|---|---|
| ಭಟ್ಟಿನ್ | ರಾವಣವಧ |
| ಭಾರವಿ | ಕಿರಾತುರ್ಜುನ ವಿಜಯ |
| ದಂಡಿನ್ | ದಶಕುಮಾರ ಚರಿತ |
| ಆರ್ಯಭಟ | ಆರ್ಯಭಟೀಯಂ, ಸೂರ್ಯ ಸಿದ್ಧಾಂತ |
| ವಿಶಾಖದತ್ತ | ಮುದ್ರಾ ರಾಕ್ಷಸ, ದೇವೀಚಂದ್ರ ಗುಪ್ತಂ |
| ಇಂದ್ರಭೂತಿ | ಜ್ಞಾನಸಿದ್ಧಿ |
| ವರಾಹಮಿಹಿರ | ಪಂಚಸಿದ್ಧಾಂತಿಕ, ಬೃಹತ್ ಸಂಹಿತಾ |
| ಬ್ರಹ್ಮಗುಪ್ತ | ಬ್ರಹ್ಮಸ್ಫುಟ ಸಿದ್ಧಾಂತ |

**ಆಡಳಿತ**

ರಾಜತ್ವ ನಿರಂಕುಶವಾಗಿತ್ತು. ಆದರೆ ಜೇಷ್ಠತ್ವದ ಉತ್ತರಾಧಿಕಾರ ತತ್ವ ಕಟ್ಟುನಿಟ್ಟಾಗಿ ಆಚರಣೆಯಲ್ಲಿರಲಿಲ್ಲ. ಖಾಯಂ ಸೇನೆಯಲ್ಲಿ ಇಲ್ಲಿಯವರೆಗೆ ಮಹತ್ವ ಪಡೆದಿದ್ದ ರಥದಳ ತನ್ನ ಸ್ಥಾನವನ್ನು ಕಳೆದುಕೊಂಡಿತು. ಆ ಸ್ಥಾನವನ್ನು ಅಶ್ವದಳ ಆಕ್ರಮಿಸಿತು. ಭೂಕಂದಾಯವು ಉತ್ಪನ್ನದ 1/4ರಿಂದ 1/6 ಭಾಗ ಇತ್ತು. ಮಧ್ಯಭಾರತ ಹಾಗು ಪಶ್ಚಿಮ ಭಾರತದಲ್ಲಿ ಸರ್ಕಾರಕ್ಕೆ ಪ್ರಜೆಗಳು 'ವಿಷ್ಟಿ' ಎಂಬ ಕಡ್ಡಾಯ ಉಚಿತ ಸೇವೆಯನ್ನು ಸಲ್ಲಿಸಬೇಕಾಗಿತ್ತು. ಆದರೆ ಅಧಿಕಾರಶಾಹಿ ಮೌರ್ಯರ ಕಾಲದಷ್ಟು ವಿಸ್ತೃತವಾಗಿ ಇರಲಿಲ್ಲ. ಗುಪ್ತರು ವೈಶ್ಯರಾದುದರಿಂದ, ನೇಮಕಾತಿ ಮೇಲ್ವರ್ಣಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಕುಮಾರಾಮಾತ್ಯರು ಪ್ರಮುಖವಾದ ಅಧಿಕಾರಿಗಳಾಗಿದ್ದು, ಅವರಿಗೆ ನಗದಿನ ರೂಪದಲ್ಲಿ ವೇತನ ನೀಡಲಾಗುತ್ತಿತ್ತು. ಸಾಮ್ರಾಜ್ಯವು ಭುಕ್ತಿಗಳಾಗಿ ವಿಭಜಿತವಾಗಿತ್ತು. ಭುಕ್ತಿಗಳು, ವಿಷಯ (ಜಿಲ್ಲೆ) ಗಳಾಗಿ ವಿಭಜಿತವಾಗಿದ್ದವು. ವಿಷಯಪತಿ ವಿಷಯದ ಮುಖ್ಯಸ್ಥನಾಗಿದ್ದನು.

**ಇತರ ಬೆಳವಣಿಗೆಗಳು** :

ಈ ಅವಧಿಯಲ್ಲಿ ಜಾತಿಗಳು ಮತ್ತಷ್ಟು ಕವಲೊಡೆದು ಉಪಜಾತಿಗಳ ಸಂಖ್ಯೆ ಅಧಿಕವಾದವು. ಅಸ್ಪೃಶ್ಯರ (ಚಾಂಡಾಲರ) ಸಂಖ್ಯೆ ಹೆಚ್ಚಿತು. ಇದಕ್ಕೆ ಕಾರಣ ಅಂತರ್ವರ್ಣಗಳ ವಿವಾಹಗಳು. ಆದರೆ ಈ ಅವಧಿಯಲ್ಲಿ ಶೂದ್ರರ ಸ್ಥಾನ ಹಾಗು ಮಹಿಳೆಯರ ಸ್ಥಾನ ಇಳಿಮುಖವಾಯಿತು.

ಇಲ್ಲಿಯವರೆಗೆ ರಾಜಾಶ್ರಯ ಪಡೆದಿದ್ದ ಬೌದ್ಧಧರ್ಮ ರಾಜಾಶ್ರಯ ಕಳೆದುಕೊಂಡಿತು. ಗುಪ್ತರು ನೀಡಿದ ಪ್ರೋತ್ಸಾಹದಿಂದ ಹಿಂದೂ ಧರ್ಮದ ಪುನರುತ್ಥಾನ ಪ್ರಕ್ರಿಯೆ ಈ ಕಾಲದಲ್ಲಿ ಮೊದಲಾಯಿತು.

